ಶುಕ್ರವಾರ, ಡಿಸೆಂಬರ್ 31, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 362 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ನಟ 'ದೂದ್‌ಪೇಢಾ' ದಿಗಂತ್ ವರ್ಷಾಂತ್ಯದಲ್ಲಿ ತಮ್ಮ ಜನ್ಮದಿನ ಆಚರಿಸಿಕೊಂಡು, ಹೊಸ ವರ್ಷದ ಹೊಸ್ತಿಲಲ್ಲಿ 'ಹುಟ್ಟುಹಬ್ಬದ ಶುಭಾಶಯಗಳು' ಎಂದಿದ್ದಾರೆ



ಆಳ-ಅಗಲ
ಮತಪತ್ರಕ್ಕೆ ಆಧಾರ್: ಮಾಹಿತಿ ಕಳವಿಗೆ ಹೆದ್ದಾರಿ
'ಹಳ್ಳಿಗೆ ಹೋಗಿ ಸಮಸ್ಯೆ ಬಗೆಹರಿಸಿ' 8
ರಾಜ್ಯದಲ್ಲಿ ಕೋವಿಡ್ ಮತ್ತಷ್ಟು ಹೆಚ್ಚಳ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,794 ▼	17,203 ▼	₹49,300 (ಬೆಂಗಳೂರು) ▼	₹63,000 (ಬೆಂಗಳೂರು) ▼	74.42 ▲

ಜೆಡಿಎಸ್ ಹಿಂದಿಕ್ಕಿದ ಪಕ್ಷೇತರರು • ಖಾತೆ ತೆರೆದ ಆಮ್ ಆದ್ಮಿ ಪಕ್ಷ

ಕಾಂಗ್ರೆಸ್ ಮುನ್ನಡೆ; ಬಿಜೆಪಿ ಹಿನ್ನಡೆ

ಸುದ್ದಿ ವಿಶ್ಲೇಷಣೆ

• ವೈ.ಗ. ಜಗದೀಶ್

'ಕಮಲ'ದ ಭದ್ರನೆಲೆ ಎಂದು ಬಿಜೆಪಿಯವರೇ ಭಾವಿಸುವ ನಗರ ಪ್ರದೇಶಗಳಲ್ಲಿ ರಾಜ್ಯದ ಆಡಳಿತಾರೂಢ ಪಕ್ಷ ತುಸು ಹಿನ್ನಡೆ ಅನುಭವಿಸಿದ್ದರೆ, ವಿರೋಧ ಪಕ್ಷ ಕಾಂಗ್ರೆಸ್ ಅಲ್ಪ ಮುನ್ನಡೆ ಸಾಧಿಸಿದೆ. ಕೆಲವು ಕಡೆಗಳಲ್ಲಿ ಜೆಡಿಎಸ್ ಸಾಧನೆ ತೋರಿದ್ದರೂ ಒಟ್ಟಾರೆ ಫಲಿತಾಂಶ ದಳಪತಿಗಳ ಮಹತ್ವಾಕಾಂಕ್ಷೆಯನ್ನು ಕುಗ್ಗಿಸಿದೆ.

ವಿಧಾನಸಭೆಯ ಎರಡು ಉಪಚುನಾವಣೆ, ವಿಧಾನಪರಿಷತ್ತಿನ 25 ಕ್ಷೇತ್ರಗಳ ಚುನಾವಣೆ ಬಳಿಕ ಇದೇ 27ರಂದು ನಡೆದ 58 ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಫಲಿತಾಂಶ ಗುರುವಾರ (ಡಿ.30) ಪ್ರಕಟವಾಗಿದ್ದು, ಅದರ ಒಟ್ಟಾರೆ ನೋಟವಿದು. ಈ ಬಾರಿಯ ವಿಶೇಷವೆಂದರೆ ದೆಹಲಿಯಲ್ಲಿ ಅಧಿಕಾರ ನಡೆಸುತ್ತಿರುವ ಆಮ್ ಆದ್ಮಿ ಪಕ್ಷ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಒಂದು ಸ್ಥಾನದಲ್ಲಿ ಗೆದ್ದಿದ್ದು, ಕರ್ನಾಟಕದಲ್ಲಿ ಖಾತೆ ತೆರೆದಿದೆ.

ಬಸವರಾಜ ಬೊಮ್ಮಾಯಿ ಅವರು ಅಧಿಕಾರದ ಚುಕ್ಕಾಣಿ ಹಿಡಿದ ಬಳಿಕ ನಡೆದ ಮೂರನೇ ಚುನಾವಣೆಯಲ್ಲೂ ಬಿಜೆಪಿಗೆ ನಿರೀಕ್ಷಿತ ಗೆಲುವು ದಕ್ಕಿಲ್ಲ.



ಯಾದಗಿರಿ ಜಿಲ್ಲೆಯ ಕಕ್ಕೇರಾ ಪುರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಗಳಿಸಿದ ಬಳಿಕ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು
ಪ್ರಜಾವಾಣಿ ಚಿತ್ರ/ಮಹಾಂತೇಶ ಹೊಗರಿ

ಸ್ಥಳೀಯಸಂಸ್ಥೆ	ಒಟ್ಟು ವಾರ್ಡು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಜನತಾಪಕ್ಷ	ಎಎಪಿ	ಎಐಎಂಐಎಂ	ಎಸ್‌ಡಿಪಿಐ	ಪಕ್ಷೇತರ
ನಗರಸಭೆ (5)	166	62	66	12	0	1	0	1	24
ಪುರಸಭೆ (19)	441	202	176	21	1	0	0	3	38
ಪಟ್ಟಣ ಪಂಚಾಯಿತಿ (34)	577	237	191	12	0	0	2	2	133
ಒಟ್ಟು	1184	501	433	45	1	1	2	6	195

ವಿಧಾನಸಭೆಯ ಐದು ವರ್ಷದ ಅವಧಿಯೊಳಗೆ ನಡೆಯುವ ಚುನಾವಣೆಗಳಲ್ಲಿ ಆಡಳಿತಾರೂಢ ಪಕ್ಷವೇ ಹೆಚ್ಚಿನ ಸ್ಥಾನ ಗೆದ್ದುಕೊಳ್ಳುವುದು ಪರಿಪಾಟ. ಕೆಲವೊಮ್ಮೆ ಇದಕ್ಕೆ ತದ್ವಿರುದ್ಧವಾದ ಫಲಿತಾಂಶಗಳು ಬಂದಿದ್ದುಂಟು. ಹಾಗಂತ ನಗರ ಪ್ರದೇಶಗಳಲ್ಲಿ ಬಿಜೆಪಿ ತೀರಾ ಕುಸಿದುಬಿದ್ದಿದೆ ಎಂದೂ ಹೇಳಲಿಕ್ಕಾಗದು. ಏಕೆಂದರೆ, ಐದು ನಗರಸಭೆಗಳಿಗೆ ನಡೆದ ಚುನಾವಣೆಯಲ್ಲಿ ಮೂರರಲ್ಲಿ ಬಿಜೆಪಿ ಅಧಿಕಾರ ಹಿಡಿಯುವ ಶಕ್ತಿ ಪಡೆದಿದೆ. ಎರಡರಲ್ಲಿ ಅತಂತ್ರ ಪರಿಸ್ಥಿತಿ ಎದುರಾಗಿದೆ.

ಒಟ್ಟಾರೆ ನಗರ ಸ್ಥಳೀಯ ಸಂಸ್ಥೆಗಳ ಫಲಿತಾಂಶದ ಒಳಹೊರಗನ್ನು ಅವಲೋಕಿಸಿದರೆ ಬಿಜೆಪಿ ಪ್ರಬಲವಾಗಿದ್ದ ಕಡೆಗಳಲ್ಲಿ, ಸಚಿವರು ಪ್ರತಿನಿಧಿಸುವ ವಿಧಾನಸಭೆ ಕ್ಷೇತ್ರಗಳಲ್ಲಿ ಕಮಲಧಾರಿಗಳು ಎಡವಿದ್ದಾರೆ. ಅಲ್ಲೆಲ್ಲ ಕಾಂಗ್ರೆಸ್ ಅಥವಾ ಪಕ್ಷೇತರರೇ ಮೇಲುಗೈ ಸಾಧಿಸಿ ಗೆಲುವನ್ನು ತಮ್ಮದಾಗಿಸಿಕೊಂಡಿದ್ದಾರೆ. ಇತ್ತೀಚೆಗೆ ನಡೆದ ಮೂರು ಚುನಾವಣೆಗಳನ್ನು ದೃಷ್ಟಾಂತದಲ್ಲಿಟ್ಟು ಒಟ್ಟಂದದಲ್ಲಿ ನೋಡಿದರೆ ರಾಜ್ಯದಲ್ಲಿ ಬಿಜೆಪಿಗೆ ಹಿನ್ನಡೆಯ ಪರ್ವ ಶುರುವಾದ ಲಕ್ಷಣಗಳು ಗೋಚರಿಸುತ್ತವೆ. ಹಾಗೆಂದ ಮಾತ್ರಕ್ಕೆ, ಬೊಮ್ಮಾಯಿ ನೇತೃತ್ವದ ಅಲ್ಪಕಾಲದ ಆಡಳಿತದ ವೈಖರಿಯನ್ನು ಒರೆಗಚ್ಚಿ ಮತದಾರರು ನೀಡಿದ ಜನಾದೇಶ ಎಂದೂ ಈ ಫಲಿತಾಂಶವನ್ನು ಪರಿಭಾವಿಸಲಾಗದು. ಬಿಜೆಪಿಗಿಂತ ಕಾಂಗ್ರೆಸ್ ಉತ್ತಮ ಸಾಧನೆ ಮಾಡಿದೆ ಎಂದು ಮೇಲ್ನೋಟಕ್ಕೆ ತೋರಿದರೂ ಆ ಪಕ್ಷದ ನಾಯಕರು ಎದೆಯುಬ್ಬಿಸಿ ಬೀಗುವ ತೀರ್ಪನ್ನು ಜನ ನೀಡಿಲ್ಲ. ಆದರೆ, ರಾಜ್ಯದಲ್ಲಿ ಕಾಂಗ್ರೆಸ್‌ಗೆ ಚೇತೋಹಾರಿ ವಾತಾವರಣ ತೆರೆದುಕೊಳ್ಳುತ್ತಿರುವುದರ ಸೂಚನೆಗಳು ಕಾಣಸಿಗುತ್ತವೆ.

> ಈ ಹಿಂದೆ ಅಲ್ಪಸಂಖ್ಯಾತರು ಹೆಚ್ಚಿರುವ ಕಡೆಗಳಲ್ಲಿ ಬಿಜೆಪಿಗೆ ಹೆಚ್ಚಿನ ಯಶಸ್ಸು ಸಿಗುತ್ತಿರಲಿಲ್ಲ. ಈ ಬಾರಿ ಗದಗ– ಬೆಟಗೇರಿ ಸೇರಿ ಹಲವು ಕಡೆ ನಾವು ದೊಡ್ಡ ಯಶಸ್ಸು ಕಂಡಿದ್ದೇವೆ
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

> ರಾಜ್ಯದಲ್ಲಿ ಬಿಜೆಪಿಯ ವಿರುದ್ಧ ಜನಾಭಿಪ್ರಾಯ ಇದೆ ಎಂಬುದು ಈ ಫಲಿತಾಂಶದಿಂದ ಸ್ಪಷ್ಟವಾಗಿದ್ದು, ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಬೇಕು ಎಂದು ಜನ ಭಾವಿಸಿರುವುದು ಕಾಣುತ್ತದೆ
> **ಸಿದ್ದರಾಮಯ್ಯ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

> ವಿಜಯಪುರ, ರಾಯಚೂರು, ಶಿರಾ, ಚಿಕ್ಕಮಗಳೂರು ಮತ್ತಿತರೆ ಕಡೆ ನಮ್ಮವರು ಗೆದ್ದಿದ್ದಾರೆ. ಶಿರಾದಲ್ಲಿ ಜೆಡಿಎಸ್ ಮುಳುಗಿತು ಎಂದವರಿಗೆ ಅಲ್ಲಿಯ ಜನ ಉತ್ತರ ನೀಡಿದ್ದಾರೆ
> **ಎಚ್.ಡಿ. ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

7ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಪ್ರಿಯ ಓದುಗರೆ,

'ಪ್ರಜಾವಾಣಿ' ಹೊಸ ವರ್ಷಕ್ಕೆ ಆಕರ್ಷಕ ಕ್ಯಾಲೆಂಡರ್ ಅನ್ನು ಜ.1ರ ಸಂಚಿಕೆ ಜೊತೆಗೆ ಕೊಡಲಾಗುವುದು.

ನಿಮ್ಮ ಪ್ರತಿಯನ್ನು ಕಾಯ್ದಿರಿಸಿ

–ಸಂ

ಕೋವಿಡ್: 10 ಸಾವಿರದ ಗಡಿ ದಾಟಿದ ದೈನಂದಿನ ಪ್ರಕರಣ

ಕರ್ನಾಟಕ ಸೇರಿ 8 ರಾಜ್ಯಗಳಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಪ್ರಕರಣಗಳಲ್ಲಿ ಎರಡು ವಾರಗಳಿಂದ ದಿಢೀರ್ ಏರಿಕೆ ಕಂಡುಬಂದಿರುವ 8 ರಾಜ್ಯಗಳಿಗೆ ಕೇಂದ್ರ ಸರ್ಕಾರ ಗುರುವಾರ ಎಚ್ಚರಿಕೆ ನೀಡಿದೆ. ಬೆಂಗಳೂರು ನಗರ ಸೇರಿ 15 ಜಿಲ್ಲೆಗಳಲ್ಲಿ ಹೆಚ್ಚು ಸೋಂಕು ಪ್ರಕರಣಗಳು ಪತ್ತೆಯಾಗುತ್ತಿವೆ. ದೇಶದಲ್ಲಿ 33 ದಿನಗಳ ಬಳಿಕ ಒಟ್ಟು ಕೋವಿಡ್ ಪ್ರಕರಣ ಸಂಖ್ಯೆ 10 ಸಾವಿರದ ಗಡಿ ದಾಟಿದೆ.



ಪ್ರಕರಣ ಅಧಿಕವಾಗಿರುವ ಎಂಟು ರಾಜ್ಯಗಳಲ್ಲಿ ಕಂಟೈನ್‌ಮೆಂಟ್ ವಲಯ ರಚಿಸುವುದು, ಆಸ್ಪತ್ರೆಗಳನ್ನು ಸನ್ನದ್ಧಗೊಳಿಸುವುದು ಮತ್ತು ಕೋವಿಡ್ ಪತ್ತೆ ಪರೀಕ್ಷೆಗಳ ಪ್ರಮಾಣವನ್ನು ಹೆಚ್ಚಿಸುವಂತೆ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಸೂಚಿಸಿದ್ದಾರೆ.

ದೇಶದಲ್ಲಿ ನಿತ್ಯ ಸರಿಸುಮಾರು 8 ಸಾವಿರ ಸೋಂಕಿತರು ಪತ್ತೆಯಾಗುತ್ತಿದ್ದರು. ಆದರೆ ಡಿಸೆಂಬರ್ 26ರ ಬಳಿಕ ಈ ಪ್ರಮಾಣ 10 ಸಾವಿರದ ಸನಿಹಕ್ಕೆ ತಲುಪಿದೆ ಎಂದು ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್ ಹೇಳಿದ್ದಾರೆ. ಬುಧವಾರ ಒಂಬತ್ತು ಸಾವಿರ ಇದ್ದ ಪ್ರಕರಣಗಳ ಸಂಖ್ಯೆ 24 ಗಂಟೆಯಲ್ಲಿ 13 ಸಾವಿರಕ್ಕೆ ಏರಿಕೆ ಕಂಡಿವೆ.

ಎರಡು ವಾರಗಳ ಅವಧಿಯಲ್ಲಿ, ದೆಹಲಿಯಲ್ಲಿ ಪ್ರಕರಣಗಳ ಸಂಖ್ಯೆ ಐದು ಪಟ್ಟು ಹೆಚ್ಚಳವಾಗಿದೆ. ಗುಜರಾತಿನಲ್ಲಿ ಆರು ಪಟ್ಟು ಅಧಿಕವಾಗಿದೆ. ಮೆಟ್ರೊ ನಗರಗಳ ಪೈಕಿ ಕೋಲ್ಕತ್ತದಲ್ಲಿ ದುಪ್ಪಟ್ಟು ಸೋಂಕಿತರು ಕಂಡು ಬರುತ್ತಿದ್ದಾರೆ.

ಎಲ್ಲೆಲ್ಲಿ ಹೆಚ್ಚು ಸೋಂಕಿತರು?

- **ಕರ್ನಾಟಕ:** ಬೆಂಗಳೂರು ನಗರ
- **ಮಹಾರಾಷ್ಟ್ರ:** ಠಾಣೆ, ಪುಣೆ, ಮುಂಬೈ, ಮುಂಬೈ ಉಪನಗರ, ನಾಗ್ಪುರ
- **ಗುಜರಾತ್:** ಅಹಮದಾಬಾದ್, ರಾಜ್‌ಕೋಟ್ ಮತ್ತು ಸೂರತ್
- **ಹರಿಯಾಣ:** ಗುರುಗ್ರಾಮ
- **ಜಾರ್ಖಂಡ್:** ರಾಂಚಿ
- **ತಮಿಳುನಾಡು:** ಚೆನ್ನೈ
- **ಪಶ್ಚಿಮ ಬಂಗಾಳ:** ಕೋಲ್ಕತ್ತ
- ದೆಹಲಿ

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯು ವಿವಿಧ ಪ್ರಕಾರದ ಸಾಹಿತ್ಯ ಕೃತಿಗಳಿಗೆ ನೀಡುವ ಪ್ರಶಸ್ತಿಗಳನ್ನು ಗುರುವಾರ ಘೋಷಿಸಿದ್ದು, ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಕೃತಿಯು ಈ ವರ್ಷದ ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದೆ. 8

ಬೊಮ್ಮಾಯಿ ಸಂಧಾನ: ಬಂದ್ ವಾಪಸ್

ಬೆಂಗಳೂರು: ವಿವಿಧ ಕನ್ನಡ ಪರ ಸಂಘಟನೆಗಳ ಜತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಡೆಸಿದ ಸಂಧಾನ ಯಶಸ್ವಿಯಾಗಿದ್ದು, ಶುಕ್ರವಾರ (ಡಿ.31) ನಡೆಯಬೇಕಿದ್ದ 'ಕರ್ನಾಟಕ ಬಂದ್' ಅನ್ನು ಹಿಂದಕ್ಕೆ ಪಡೆಯಲಾಗಿದೆ.

ಕನ್ನಡ ಚಳವಳಿ ಪಕ್ಷದ ವಾಟಾಳ್ ನಾಗರಾಜ್, ಕನ್ನಡ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ, ನಿರ್ಮಾಪಕ ಸಾ.ರಾ. ಗೋವಿಂದು ಮತ್ತು ಇತರರ ಜತೆ ಬೊಮ್ಮಾಯಿ ಗುರುವಾರ ಸಂಜೆ ಮಾತುಕತೆ ನಡೆಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ನಮ್ಮ ಸರ್ಕಾರ ಕನ್ನಡ ಮತ್ತು ಕರ್ನಾಟಕದ ಹಿತರಕ್ಷಣೆಗೆ ಬದ್ಧವಾಗಿದೆ. ಎಂಇಎಸ್ ನಿಷೇಧಿಸುವುದು ಸೇರಿ ಹಲವು ವಿಚಾರಗಳನ್ನು ಕನ್ನಡ ಚಳವಳಿಗಾರರಿಗೆ ಮನದಟ್ಟು ಮಾಡಿದ್ದೇನೆ. ಬಂದ್ ಹಿಂದಕ್ಕೆ ಪಡೆದಿದ್ದಾರೆ' ಎಂದರು.

'ಮುಖ್ಯಮಂತ್ರಿಯವರು ಕನ್ನಡ ಹೋರಾಟಗಾರರಿಗೆ ಗೌರವ ಕೊಟ್ಟು ಕರೆಸಿ ಮಾತನಾಡಿದ್ದಾರೆ. ಅವರು ನಾಡಿನ ಹಿತಕ್ಕೆ ಬದ್ಧರಾಗಿದ್ದಾರೆ. ಆದ್ದರಿಂದ ಬಂದ್ ಕೈಬಿಟ್ಟಿದ್ದು, ಕೇವಲ ಪ್ರತಿಭಟನೆ ನಡೆಸುತ್ತೇವೆ' ಎಂದು ವಾಟಾಳ್ ನಾಗರಾಜ್ ಹೇಳಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



'ಸ್ವರಾನುಭೂತಿ–2022': ಪೋಸ್ಟರ್ ಬಿಡುಗಡೆ ಇಂದು

ಮೈಸೂರು: ಜಿಲ್ಲೆಯ ಸರಗೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯ 'ಸ್ವರಾನುಭೂತಿ–2022' ಸಂಗೀತ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಬೆಂಗಳೂರಿನಲ್ಲಿ ಶುಕ್ರವಾರ (ಡಿ.31) ನಡೆಯಲಿದೆ.

ಜಯನಗರ 4ನೇ ಬ್ಲಾಕ್‌ನ 11ನೇ ಮುಖ್ಯರಸ್ತೆಯ 31ನೇ ಅಡ್ಡರಸ್ತೆಯ ಯುವಕ ಸಂಘದಲ್ಲಿ ಸಂಜೆ 6.30ಕ್ಕೆ ನಡೆಯಲಿದ್ದು, ಸಚಿವ ವಿ.ಸುನಿಲ್ ಕುಮಾರ್ ಹಾಗೂ ಸಂಸ್ಥೆಯ ಸಿಇಒ ಡಾ.ಜಿ.ಎಸ್.ಕುಮಾರ್ ಪಾಲ್ಗೊಳ್ಳಲಿದ್ದಾರೆ. ಗಾಯಕ ರಾಜೇಶ್ ಕೃಷ್ಣನ್ 2022ರ ಮಾರ್ಚ್ 5ರಂದು ಬೆಂಗಳೂರಿನ ಕೋರಮಂಗಲದಲ್ಲಿ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

'ಸಂಸ್ಥೆಯು 2015ರಿಂದ 'ಸ್ವರಾನುಭೂತಿ' ಆಯೋಜಿಸುತ್ತಿದೆ. ಸಂಸ್ಥೆ ಆಶ್ರಯದಲ್ಲಿ ಉಪಶಮನ ಆರೈಕೆ ಕೇಂದ್ರ ನಡೆಸಲಾಗುತ್ತಿದ್ದು, ಕ್ಯಾನ್ಸರ್ ರೋಗಿಗಳ ಉಚಿತ ಚಿಕಿತ್ಸೆಗೆ ದೇಣಿಗೆ ಸಂಗ್ರಹಿಸಲು ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ' ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಶಸ್ತಿ ಪ್ರದಾನ ● ಮಲ್ಲೇಪುರಂ ಜಿ. ವೆಂಕಟೇಶ್ ಅಭಿಮತ

'ಪೂರ್ವಗ್ರಹಗಳಿಂದ ಮುಕ್ತರಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರಸ್ವತ ಲೋಕದ ಭಿನ್ನಾಭಿಪ್ರಾಯಗಳು ಕನ್ನಡ ಸಾಹಿತ್ಯ ಸಂವರ್ಧನೆಗೆ ಅಡ್ಡಿಯಾಗಿವೆ. ಕನ್ನಡ ಸಾರಸ್ವತ ಲೋಕ ಶ್ರೀಮಂತವಾಗಬೇಕಾದರೆ ಸಾಹಿತಿಗಳು ಪೂರ್ವಗ್ರಹಗಳಿಂದ ಮುಕ್ತರಾಗಬೇಕು. ಮುಕ್ತ ಚಿಂತನೆಯತ್ತ ಚಿತ್ತ ಹರಿಸಬೇಕು' ಎಂದು ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2020ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿ ಹಾಗೂ ಕನ್ನಡ ಪುಸ್ತಕ ಸೊಗಸು ಬಹುಮಾನವನ್ನು ಪ್ರದಾನ ಮಾಡಿ ಅವರು ಮಾತನಾಡಿದರು.

'ಕನ್ನಡ ಸಾಹಿತ್ಯದ ವಿದ್ವತ್ತಿನ ವೃಕ್ಷಗಳಲ್ಲಿ ಎಂ.ಎಂ. ಕಲಬುರ್ಗಿ, ಟಿ.ವಿ. ವೆಂಕಟಾಚಲಶಾಸ್ತ್ರಿ ಹಾಗೂ ಡಾ.ಎಂ. ಚಿದಾನಂದ ಮೂರ್ತಿ, ಸತ್ಯಕಾಮ ಅವರಂಥವರು ಪ್ರಮುಖ ಶಾಖೆಗಳಾಗಿದ್ದಾರೆ' ಎಂದರು.

'ಎಂ.ಎಂ.ಕಲಬುರ್ಗಿ ಅವರ ಜೊತೆ ನಾನು ಆತ್ಮೀಯವಾಗಿದ್ದೆ. ಅವರು ಅನಗತ್ಯವಾಗಿ ಮೈಮೇಲೆ ವಿವಾದ ಎಳೆದುಕೊಳ್ಳುತ್ತಿದ್ದರು. ಅವರಿಗೆ ನನ್ನ ಮೇಲೆ ವಿಶೇಷ ಪ್ರೀತಿಯಿತ್ತು. ಹಿಂದೊಮ್ಮೆ ಧಾರವಾಡ ಪೇಡಾ ತಿನ್ನುತ್ತ ಅವರಿಗೆ ಒಂದೂವರೆ ಗಂಟೆ ಬೈದಿದ್ದೆ. ಸಂಕಟಗಳಿಂದ ಬಿಡಿಸಿಕೊಳ್ಳುವುದರಲ್ಲಿಯೇ ಅವರ ಶ್ರಮ ಹೋಗುತ್ತಿತ್ತು' ಎಂದು ಕಲಬುರ್ಗಿ ಅವರ ಜೊತೆಗಿನ ಒಡನಾಟ ಸ್ಮರಿಸಿಕೊಂಡರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, 'ಪ್ರಾಧಿಕಾರವು ಹೊಸ ಲೇಖಕರ ಕೃತಿ ಪ್ರಕಟಣೆ ಹಾಗೂ ಸಗಟು ಖರೀದಿಯಂತಹ ಯೋಜನೆಗಳ ಮೂಲಕ ಪುಸ್ತಕೋದ್ಯಮಕ್ಕೆ ಪೂರಕವಾಗಿ ಕೆಲಸ ಮಾಡುತ್ತಿದೆ. ಸಮಗ್ರ ಸಾಹಿತ್ಯವನ್ನು 'ಅಭಿಜಾತ ಸಾಹಿತ್ಯ ಕನ್ನಡ ಕಲ್ಯಾಣ' ಯೋಜನೆಯಡಿ ಡಿಜಿಟಲೀಕರಣ ಮಾಡುತ್ತಿರುವುದು ಉತ್ತಮ ಕಾರ್ಯ' ಎಂದು ಶ್ಲಾಘಿಸಿದರು.

ಪ್ರಶಸ್ತಿ ಪುರಸ್ಕೃತರಾದ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ, 'ಕುವೆಂಪು ಅವರ ಶಿಷ್ಯನಾದ ನಾನು ಕನ್ನಡದ ಕಾಯಕ ಮಾಡಿದ್ದೇನೆ. ಪ್ರಕಾಶಕರು, ಪುಸ್ತಕದ ವಿನ್ಯಾಸಗಾರರಿಗೆ ಗೌರವ ನೀಡುವ ಸರ್ಕಾರಿ ಸಂಸ್ಥೆ ದೇಶದ ಬೇರೆಡೆಗೆ ನೋಡಲು ಸಾಧ್ಯವಿಲ್ಲ. ಕಲಬುರ್ಗಿ ಅವರು ಒಳ್ಳೆಯ ಸ್ನೇಹಿತರಾಗಿದ್ದರು' ಎಂದರು. ಸಾಹಿತ್ಯ ಪ್ರಕಾಶನದ ಮುಖ್ಯಸ್ಥ ಎಂ.ಎ.ಸುಬ್ರಹ್ಮಣ್ಯ, 'ನಮ್ಮ ಪ್ರಕಾಶನ ಸಂಸ್ಥೆಗೆ 36 ವರ್ಷಗಳಾಗಿವೆ. ಜೇಬಿನಲ್ಲಿ ಹಣವಿಲ್ಲದಾಗ ಈ ಸಾಹಸಕ್ಕೆ ಕೈ ಹಾಕಿದ್ದೆ. 800 ಪುಸ್ತಕಗಳನ್ನು ಈವರೆಗೆ ಪ್ರಕಟಿಸಿದ್ದೇವೆ' ಎಂದರು.



ಕನ್ನಡ ಪುಸ್ತಕ ಪ್ರಾಧಿಕಾರದ 2020ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು (ಎಡದಿಂದ) ಸೌಮ್ಯಾ ಸುಧೀಂದ್ರ, ಎಂ.ಎ. ಸುಬ್ರಹ್ಮಣ್ಯ, ಟಿ.ವಿ. ವೆಂಕಟಾಚಲಶಾಸ್ತ್ರಿ ಹಾಗೂ ಸೈಯದ್ ಇಸಾಕ್ ಅವರಿಗೆ ಪ್ರದಾನ ಮಾಡಲಾಯಿತು. ಪ್ರಾಧಿಕಾರದ ಸೌಭಾಗ್ಯ, ಎಸ್ ರಂಗಪ್ಪ, ಮಲ್ಲೇಪುರಂ ಜಿ. ವೆಂಕಟೇಶ್, ಪ್ರಾಧಿಕಾರದ ಅಧ್ಯಕ್ಷ ನಂದೀಶ್ ಹಂಚೆ, ಪ್ರಾಧಿಕಾರದ ಸದಸ್ಯರಾದ ಪ್ರಕಾಶ್ ಕಂಬತ್ತಳ್ಳಿ ಹಾಗೂ ಅಶೋಕ್ ರಾಯ್ಕರ್ ಇದ್ದಾರೆ –ಪ್ರಜಾವಾಣಿ ಚಿತ್ರ

ವಾರ್ಷಿಕ ಪ್ರಶಸ್ತಿಗಳ ಪ್ರದಾನ

ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನದ ಮುಖ್ಯಸ್ಥ ಎಂ.ಎ.ಸುಬ್ರಹ್ಮಣ್ಯ ಅವರು 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' ಸ್ವೀಕರಿಸಿದರು. ಈ ಪ್ರಶಸ್ತಿ ₹ 1 ಲಕ್ಷ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ವಿದ್ವಾಂಸ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರಿಗೆ 'ಡಾ.ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ' (₹ 75 ಸಾವಿರ ನಗದು), ಮೈಸೂರಿನ ಸೈಯದ್ ಇಸಾಕ್ ಅವರಿಗೆ 'ಡಾ.ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ' (₹ 50 ಸಾವಿರ ನಗದು) ಹಾಗೂ ದಿವಂಗತ ಡಾ. ಸುಧೀಂದ್ರ ಹಾಲ್ದೊಡ್ಡೇರಿ ಅವರ ಪರವಾಗಿ ಪತ್ನಿ ಸೌಮ್ಯಾ ಅವರಿಗೆ 'ಡಾ. ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿ' (₹ 25 ಸಾವಿರ ನಗದು) ಪ್ರದಾನ ಮಾಡಲಾಯಿತು.

ಶ್ರೀ ಭವತಾರಿಣಿ ಪ್ರಕಾಶನ ಪ್ರಕಟಿಸಿದ 'ಕದಂಬರು-ಸಮಗ್ರ ಅವಲೋಕನ' ಕೃತಿಗೆ ಎಸ್. ಗುರುಮೂರ್ತಿ ಅವರು 'ಪುಸ್ತಕ ಸೊಗಸು ಮೊದಲನೇ ಬಹುಮಾನ', ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಪ್ರತಿಷ್ಠಾನ ಪ್ರಕಟಿಸಿದ 'ಸಾರ್ಥಕ ಬದುಕು' ಕೃತಿಗೆ ಶೇಖರಗೌಡ ಪಾಟೀಲ ಅವರು ಪುಸ್ತಕ ಸೊಗಸು ಎರಡನೇ ಬಹುಮಾನ, ತಲ್ಲೂರ್ಸ್ ಫ್ಯಾಮಿಲಿ ಟ್ರಸ್ಟ್ ಪ್ರಕಟಿಸಿದ 'ಕಲಾಸಂಚಯ' ಕೃತಿಗೆ ನಿತ್ಯಾನಂದ ಶೆಟ್ಟಿ ಅವರು ಪುಸ್ತಕ ಸೊಗಸು ಮೂರನೇ ಬಹುಮಾನ ಸ್ವೀಕರಿಸಿದರು.

'ಬಯಲೊಳಗೆ ಬಯಲಾಗಿ' ಕೃತಿಗೆ ಹಾದಿಮನಿ ಟಿ.ಎಫ್. ಅವರು 'ಮುಖಪುಟ ಚಿತ್ರ ವಿನ್ಯಾಸ ಬಹುಮಾನ', 'ಹೆಣ್ಣೊಳನೋಟ' ಕೃತಿಗೆ ಸುಧಾಕರ ದರ್ಬೆ ಅವರಿಗೆ 'ಮುಖಪುಟ ಚಿತ್ರಕಲೆ ಬಹುಮಾನ', ರೀಗಲ್ ಪ್ರಿಂಟ್ ಸರ್ವೀಸ್ ಹೊರತಂದ 'ರಂಗ ಕೈರಳಿ' ಕೃತಿಗೆ ವೆಂಕಟೇಶ್ ಎಂ. ಅವರಿಗೆ 'ಪುಸ್ತಕ ಮುದ್ರಣ ಸೊಗಸು' ಬಹುಮಾನ ಪ್ರದಾನ ಮಾಡಲಾಯಿತು.

ಪ್ರಾಧಿಕಾರದ ಪ್ರಕಟಣೆಗಳು ಬಿಡುಗಡೆ

ಸಮಾರಂಭದಲ್ಲಿ ವೀರಣ್ಣ ರಾಜೂರ ಅವರ ಪ್ರಧಾನ ಸಂಪಾದಕತ್ವದ 'ಸಮಗ್ರ ವಚನ ಸಂಪುಟಗಳು' (15 ಸಂಪುಟಗಳು), ವೀಣಾ ಬನ್ನಂಜೆ ಅವರ ಸಂಪಾದಕತ್ವದ 'ಸತ್ಯಕಾಮರ ಸಮಗ್ರ ಸಾಹಿತ್ಯ ಸಂಪುಟಗಳು' (8 ಸಂಪುಟಗಳು), ಶ್ರೀನಿವಾಸ ಹಾವನೂರ ಅವರ 'ಹೊಸಗನ್ನಡದ ಅರುಣೋದಯ', ಪ್ರೊ.ಎಂ.ಎಸ್. ಶೇಖರ್ ಅವರ 'ಸೋಸಲೆ ಸಿದ್ಧಪ್ಪ ಅವರ ಸಮಗ್ರ ಸಾಹಿತ್ಯ ಸಂಪುಟ' ಹಾಗೂ ಜಯರಾಮ ಅಡಿಗ ಅವರ 'ಗೋಪಾಲಕೃಷ್ಣ ಅಡಿಗ ವೈಚಾರಿಕ ಲೇಖನ ವಾಚಿಕೆ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮಕ್ಕಳ ಪುಸ್ತಕ ಪ್ರಕಟಣೆಗೆ ಪ್ರಸ್ತಾವನೆ ಆಹ್ವಾನ

ಬೆಂಗಳೂರು: ಮ್ಯಾಕ್ಸ್ ಮ್ಯುಲ್ಲರ್ ಭವನ, ನವಕರ್ನಾಟಕ ಪ್ರಕಾಶನದ ಜಂಟಿ ಸಹಯೋಗದಲ್ಲಿ ನಗರದ ಗ್ಯೋಥೆ ಇನ್‌ಸ್ಟಿಟ್ಯೂಟ್ 'ಕಿಂಡರ್ ಕಥಾ' ಕಾರ್ಯಕ್ರಮದಡಿ ಕನ್ನಡದಲ್ಲಿ ಮಕ್ಕಳ ಪುಸ್ತಕಗಳನ್ನು ಪ್ರಕಟಿಸಲಿದೆ. ಇದಕ್ಕಾಗಿ ಲೇಖಕರು ಹಾಗೂ ಚಿತ್ರಕಾರರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

ಈ ಕಾರ್ಯಕ್ರಮದಡಿ ನವ ಕರ್ನಾಟಕ ಪ್ರಕಾಶನ 8ರಿಂದ 12 ವರ್ಷದೊಳಗಿನ ಮಕ್ಕಳಿಗಾಗಿ 10 ಸಚಿತ್ರ ಪುಸ್ತಕಗಳನ್ನು ಹಾಗೂ 12ರಿಂದ 16 ವರ್ಷಗಳೊಳಗಿನ ಮಕ್ಕಳಿಗಾಗಿ 10 ಕಥಾಪುಸ್ತಕಗಳನ್ನು ಪ್ರಕಟಿಸಲಿದೆ. ಸಾಮಾಜಿಕ ಸಮಸ್ಯೆ, ಮಕ್ಕಳ ಹಕ್ಕುಗಳು, ವೈವಿಧ್ಯ ಮತ್ತು ಒಳಗೊಳ್ಳುವಿಕೆ, ಶೋಷಿತರ ದನಿ, ಕೃಷಿ, ಪರಿಸರ, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ, ಆರೋಗ್ಯ ಹಾಗೂ ಕರ್ನಾಟಕದ ವೈಶಿಷ್ಟ್ಯ ಕುರಿತ ಕೃತಿಗಳಿಗೆ ಆದ್ಯತೆ.

ಆಸಕ್ತರು ಬರೆಯಲಿರುವ ಪುಸ್ತಕದ ಸಾರಾಂಶ, ಹೆಸರು, ವಿಷಯ ಹಾಗೂ ತಮ್ಮ ಸಂಕ್ಷಿಪ್ತ ಪರಿಚಯದೊಂದಿಗೆ ಪ್ರಸ್ತಾವನೆ ಸಲ್ಲಿಸಬಹುದು. ಪ್ರಸ್ತಾವನೆ ಸಲ್ಲಿಸಲು 2022ರ ಜನವರಿ 31 ಕೊನೆಯ ದಿನ. ಹೆಚ್ಚಿನ ವಿವರಗಳಿಗೆ ಸಂಪರ್ಕ: www.goethe.de/bangalore

ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ನಗರದ ಕೆ.ಆರ್.ಪುರದಲ್ಲಿ ಮುರುಘರಾಜೇಂದ್ರ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ ನಡೆಸುತ್ತಿರುವ ಸಿದ್ದರಾಮಣ್ಣನವರ್ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ನಗರದ ಯಾವುದೇ ಪ್ರೌಢಶಾಲೆ, ಕಾಲೇಜುಗಳಲ್ಲಿ ಎಸ್ಸೆಸ್ಸೆಲ್ಸಿ, ಪಿ.ಯು.ಸಿ, ಐಟಿಐ, ಡಿಪ್ಲೊಮಾ, ಪದವಿ, ಡಿ.ಇಡಿ ಕೋರ್ಸ್, ಬಿ.ಇಡಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅಥವಾ ದೀರ್ಘಾವಧಿ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ಟ್ರಸ್ಟ್ ಅಧ್ಯಕ್ಷರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿಳಾಸ: ಸಿದ್ದರಾಮಣ್ಣನವರ್ ವಿದ್ಯಾರ್ಥಿನಿಲಯ, ಬಸವನಪುರ ಮುಖ್ಯರಸ್ತೆ, ಗಾಯತ್ರಿ ದೇವಸ್ಥಾನದ ಹತ್ತಿರ, ಕೃಷ್ಣರಾಜಪುರ, ಬೆಂಗಳೂರು– 560003. ಸಂಪರ್ಕ: 9845286329/ 9845607181

ನಗರದಲ್ಲಿ ಇಂದು

ಹೊಸ ವಿದ್ಯಾರ್ಥಿಗಳಿಗೆ ಸ್ವಾಗತ: ಮುಖ್ಯ ಅತಿಥಿ; ಪ್ರೊ.ಎಚ್.ಪಿ. ಖಿಂಚಾ, ಗೌರವ ಅತಿಥಿ; ಅರವಿಂದ್ ಬಿ. ಜತ್ತಿ, ಉಪಸ್ಥಿತಿ; ಎಂ.ಆರ್. ಜಯರಾಮ್, ಆಯೋಜನೆ ಹಾಗೂ ಸ್ಥಳ; ಎಂ.ಎಸ್. ರಾಮಯ್ಯ ತಾಂತ್ರಿಕ ವಿದ್ಯಾಲಯ, ಎಂ.ಎಸ್.ಆರ್. ನಗರ, ಬೆಳಿಗ್ಗೆ 11

ಕುವೆಂಪು-ಕನ್ನಡದ ಕಂಪು, ರಾಷ್ಟ್ರಕವಿಯ ಜನ್ಮ ದಿನಾಚರಣೆಯ ಅಂಗವಾಗಿ ವಿಶೇಷ ಕಾರ್ಯಕ್ರಮ: ಭಾಷಣಕಾರರು; ಮಾಹಿರ್ ಮನ್ಸೂರಿ, ರಂಗಸ್ವಾಮಿ, ಅಕ್ಬರ್ ಅಲಿ ಉಡುಪಿ, ಆಯೋಜನೆ; ಸಂವೇದನಾ, ಆರ್. ಟಿ. ನಗರ ಕಲಾ ಸಾಹಿತ್ಯ ವೇದಿಕೆ, ಸ್ಥಳ; ಕುವೆಂಪು ಪಾರ್ಕ್, 11ನೇ ಅಡ್ಡ ರಸ್ತೆ, 2ನೇ ಬ್ಲಾಕ್, ಆರ್.ಟಿ. ನಗರ, ಸಂಜೆ 4.30

ರಂಗ ಹಬ್ಬ ನಾಟಕ ಪ್ರದರ್ಶನ: 'ಮುಖ್ಯಮಂತ್ರಿ', ಮುಖ್ಯ ಪಾತ್ರದಲ್ಲಿ: 'ಮುಖ್ಯಮಂತ್ರಿ' ಚಂದ್ರು, ಆಯೋಜನೆ: ಕಲಾ ಗಂಗೋತ್ರಿ, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 7.30

ಕ್ಲಾಸಿಫೈಡ್ಸ್ WEEKEND CORNER

ಪಿಎಚ್.ಡಿ ಪ್ರದಾನ



ಬಾಪು ಶಿಕ್ಷಣ ಮಹಾವಿದ್ಯಾಲಯ, ತ್ರಿವೇಣಿ ರಸ್ತೆ, ಯಶವಂತಪುರ, ಬೆಂಗಳೂರು–560022 ಇಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಯುತ ಮಹಾಂತ ಗೌಡ ರವರು ಮಂಡಿಸಿದ "ಕರ್ನಾಟಕ ಪ್ರಾದೇಶಿಕ ಅಸಮತೋಲನ: ಹೈದರಾಬಾದ್– ಕರ್ನಾಟಕ ಪ್ರದೇಶದ ಕುರಿತು ಒಂದು ಅಧ್ಯಯನ" ಎಂಬ ಪಿಎಚ್.ಡಿ ಪ್ರೌಢ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿಯನ್ನು ನೀಡಿದೆ.

ಇವರಿಗೆ ಬೆಂಗಳೂರು ವಿಶ್ವವಿದ್ಯಾಲಯ, ರಾಜ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರು ಮತ್ತು ಕಲಾ ನಿಕಾಯದ ನಿವೃತ್ತ ಮುಖ್ಯಸ್ಥರಾಗಿದ್ದ ಪ್ರೊ. ಎಮ್.ಜೆ.ವಿನೋದ್‌ರವರು ಮಾರ್ಗದರ್ಶಕರಾಗಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

PUBLIC NOTICE

Notice is hereby given to the general public that my client is negotiating to purchase all that lands described in the Schedule hereunder from its present owners specified in the Schedule hereunder, who are representing that they are the sole and absolute owner/s of the Schedule property and other than themselves no other person/s have any right, title, interest or charge over the Schedule property.

Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/ lodge his/her/their/ objection's with relevant documentary proof to the undersigned at the address given below within TEN DAYS from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the lands specified in the schedule hereunder and my client will proceed to complete the Sale transaction.

SCHEDULE

1. All that piece and parcel of the lands described hereunder situated at Raghunathapura Village, Kasaba Hobli, Doddaballapur Taluk, Bangalore

Sl No	Survey No	Extent	Owner/s Name
1	105/2 (Old 105)	1-10 Acres	Mr. L. Jithendra Jain S/o.H. Lal Chand
2	110/1	2-11 Acres	Mr. Venkateshappa S/o.Chinnappa.,
3	111	2-24 Acres	Mr. L. Jithendra Jain S/o.H. Lal Chand
4	112/1 (Old 112)	0-37 Guntas	Mr.E. Muniraju S/o late Mr. Erappa
5	113/1	1-00 Acre	Mr. C. Nagaraju S/o Mr. Chokkappa
6	113/2	1-00 Acre	Mr. C. Nagaraju S/o Mr. Chokkappa
7	113/3	1-33 Acres	Mr. H. G. Prakash S/o B.H.Gopalaswamy
8	118/1 (old 118)	1-00 Acre	Mr. L. Jithendra Jain S/o.H. Lal Chand
9	118/2 (old 118)	0-20 guntas	Mr.Y. Venkataram S/o.late Yallappa
10	118/3 (old 118)	0-20 guntas	Mr.Y. Venkataram S/o.late Yallappa
11	118/4 (old 118)	1-20 Acres	Mr.E. Muniraju S/o late Mr. Erappa.
12	119	3-12 Acres	Mrs. S. Aparajitha W/o. Mr. S. Suresh
13	122/1	1-09 Acres	Mr. H. G. Prakash S/o.B.H.Gopalaswamy.
14	128	3-13 Acres	Mr. Vinod Kumar.K. S/o.Late Mr. Kantilal.
15	129	2:00 Acres	Mr. S. Suresh S/o.Mr. S.Malleswara Rao
16	129	2:23 Acres	Mr. T. K. Sudhindra S/o.T.V.Krishnamurthy
17	130/1	1-20 Acres	Mr.Y. Venkataram S/o.late Yallappa

2. All that piece and parcel of the lands described hereunder situated at Shivapura Village, Kasaba Hobli, Doddaballapur Taluk, Bangalore Rural District.

Sl No	Survey No	Extent	Owner/s Name
1	215	1-28 Acres	Mr. B.R. Manjunatha S/o Mr. Ramaiah
2	216	1-28 Acres	Mr. B.R. Manjunatha S/o Mr. Ramaiah

A. NAGARAJA,
Advocate,
No. 6, KHB Buildings,
II Block, 13th Cross,
Indiranagar II Stage,
Bangalore - 560 038.
Ph: 9448067511.

Bangalore
Dated: 30.12.2021.

ಫಾರಂ ನಂ. ಐಎನ್‌ಸಿ–26

ಪ್ರಾದೇಶಿಕ ನಿರ್ದೇಶಕರು,
ಆಗ್ನೇಯ ವಲಯ,
ಹೈದರಾಬಾದ್, ತೆಲಂಗಾಣ

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13 ಮತ್ತು ಕಂಪನಿಗಳ (ಇನ್‌ಕಾರ್ಪೊರೇಶನ್) ನಿಯಮಗಳು, 2014ರ ನಿಯಮ 30ರ ಉಪ ನಿಯಮ (5)ರ ಕ್ಲಾಜ್ (ಎ) ವಿಷಯದಲ್ಲಿ

ಮತ್ತು

ಮೆ. ವಿವಾನೆಟ್ ಸೊಲ್ಯೂಷನ್ ಪ್ರೈವೇಟ್ ಲಿಮಿಟೆಡ್, ನೋಂದಾಯಿತ ಕಚೇರಿ ವಿಳಾಸ ನಂ. 1003, ಶೋಭ ಡ್ಯಾಫೊಡಿಲ್, 2ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಸೋಮಸುಂದರ ಪಾಳ್ಯ, ಬೆಂಗಳೂರು–560102, ಕರ್ನಾಟಕ, ಭಾರತ. .... ಅರ್ಜಿದಾರರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಸದರಿ ಕಂಪನಿಯು "ಕರ್ನಾಟಕ ರಾಜ್ಯದ ನಂ. 1003, ಶೋಭ ಡ್ಯಾಫೊಡಿಲ್, 2ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಸೋಮಸುಂದರ ಪಾಳ್ಯ, ಬೆಂಗಳೂರು – 560102 ವಿಳಾಸದಲ್ಲಿ ಸ್ಥಿತಗೊಂಡಿರುವ ತನ್ನ ನೋಂದಾಯಿತ ಕಚೇರಿಯನ್ನು ಕೇರಳ ರಾಜ್ಯದ "ಬಿಲ್ಡಿಂಗ್ ನಂ. 16/322, 1ನೇ ಮಹಡಿ, ಹಮೀದ್ ಎಸ್ಟೇಟ್, ಅಶೋಕ–ಪುರಂ, ಪೆರುಂಬವೂರ್ ರಸ್ತೆ, ಅಲುವಾ, ಎರ್ನಾಕುಲಂ ಜಿಲ್ಲೆ, ಕೇರಳ–683101" ವಿಳಾಸಕ್ಕೆ ಬದಲಾಯಿಸುವುದಕ್ಕೆ ಸಂಬಂಧಿಸಿದಂತೆ, ಕಂಪನಿಯು ಗುರುವಾರ, ಡಿಸೆಂಬರ್ 30, 2021 ರಂದು ಏರ್ಪಡಿಸಿದ್ದ ತನ್ನ ಅಸಾಧಾರಣ ಮಹಾಸಭೆಯಲ್ಲಿ ಕೈಗೊಂಡ ವಿಶೇಷ ನಿರ್ಣಯಕ್ಕೆ ಸಂಬಂಧಿಸಿದಂತೆ ರೂಪಿಸಿದ್ದ ವಿಳಾಸ ಬದಲಾವಣೆಯ ಮೆಮೊರಾಂಡಮ್ ಆಫ್ ಅಸೋಸಿಯೇಷನ್ ಅನ್ನು ಇತ್ಯರ್ಥ ಪಡಿಸುವಂತೆ ಕೋರಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13 ಅಡಿಯಲ್ಲಿ ಕೇಂದ್ರ ಸರ್ಕಾರದ ಹಕ್ಕು ಹೊಂದಿರುವ ಪ್ರಾದೇಶಿಕ ನಿರ್ದೇಶಕರಿಗೆ ಅರ್ಜಿ ಸಲ್ಲಿಸಲು ಉದ್ದೇಶಿಸಿರುತ್ತದೆ.

ಸದರಿ ಕಂಪನಿಯ ನೋಂದಾಯಿತ ಕಚೇರಿ ವಿಳಾಸ ಬದಲಾವಣೆಯ ಪ್ರಸ್ತಾವನೆಯಿಂದಾಗಿ ಯಾವುದೆ ವ್ಯಕ್ತಿಯ ಹಿತಾಸಕ್ತಿಗೆ ಧಕ್ಕೆ ಆಗುವಂತಿದ್ದಲ್ಲಿ, ಅಂತಹವರು ತಮ್ಮ ಆಕ್ಷೇಪಣೆಗಳನ್ನು ಹಿತಾಸಕ್ತಿಯ ಸ್ವರೂಪ ಮತ್ತು ವಿರೋಧದ ಹಿನ್ನಲೆಗಳನ್ನು ನಮೂದಿಸಿರುವ ಅಫಿಡವಿಟ್ ಸಮೇತ ಎಂಸಿಎ–21 ಪೋರ್ಟಲ್ (www.mca.gov.in) ಮೂಲಕವಾಗಲಿ ಅಥವಾ ಹೂಡಿಕೆದಾರರ ದೂರುಗಳ ನಮೂನೆಯನ್ನು ಭರ್ತಿ ಮಾಡುವ ಮೂಲಕವಾಗಲಿ ಅಥವಾ ಕರಡು ಪ್ರತಿಗಳನ್ನು ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೊಳೆ, ತಟ್ಟಿನರಂ ಗ್ರಾಮ, ಹಯಾತ್ ನಗರ ಮಂಡಲ, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್–500058 ವಿಳಾಸಕ್ಕೆ ತಲುಪುವಂತೆ ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ರವಾನಿಸುವುದು ಮತ್ತು ಒಂದು ಪ್ರತಿಯನ್ನು ಕೆಳಕಂಡ ಅರ್ಜಿದಾರ ಕಂಪನಿಯ ನೋಂದಾಯಿತ ಕಚೇರಿ ವಿಳಾಸಕ್ಕೂ ರವಾನಿಸುವುದು.

1003, ಶೋಭ ಡ್ಯಾಫೊಡಿಲ್, 2ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಸೋಮಸುಂದರ ಪಾಳ್ಯ, ಬೆಂಗಳೂರು–560102

ಅರ್ಜಿದಾರರ ಪರವಾಗಿ
ವಿವಾನೆಟ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್

ಸಹಿ/–
ಥಾಮಸ್ ವರ್ಗೀಸ್
ನಿರ್ದೇಶಕರು
ಡಿಐಎನ್: 02823950

ದಿನಾಂಕ: 30.12.2021
ಸ್ಥಳ: ಬೆಂಗಳೂರು

RENTAL PROPERTIES

Accommodation Available

Flats

HEBBAL DASARAHALLI, MARUTHI LAYOUT, Near Manyata : 2BHK Flat RN FORTHOUSE for Rent: 9980959845/ 8884720720

JAYANAGAR 4TH 'T' Block Beautiful 3 Bedroom Flat For Immediate Occupation, Carpark. Contact: 'OWNER'- 9880202470

REAL ESTATE BUYING

Commerical

Hosur Road

WANTED VGP plot & farm land in HOSUR.Tamilnadu.If you have any VGP plot, other Residential plot in HOSUR.Interested in selling ct 9365816356

REAL ESTATE SELLING

Agricultural Land

Nelamangala

AGRICULTURE FERTILE land 30- 50 lacs per acre Nelemangala -kunigal road 56 kms 8310414614, 9945080017

Commercial Building

Nandini Layout

SALE COMMERCIAL Building with locking Rent: 1.50 lac PM 5% + PA, BDA, 30×40, G+4 Floor. N/E Good Interior & Exterior. Owener- 7483498845.

Flat

Rajarajeshwari Nagar

3BHK FLATS, 75L, Opposite Gopalan Arcade, Metro Station. OC + CC, Canara Bank Approved: 9611374397

BUSINESS

Business Offers

General

Business to Business

Business

ZENITH LOANS available @4% yearly interest Business Project Takeover Property Mortgage NPA 8447587173 Agents Welcome

Finance

INVESTMENT NEEDED on land which is on Sale Owner ready to Share 25 percent on INVESTED AMOUNT with in Short period as PROFIT. Contact 7676770503/ 9741019028

Financial Services

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

JOB OPPORTUNITIES

Hospital & Medical Jobs

WANTED NURSES- Diploma in Nursing/ BSc in Nursing Patient Counselor/ Computer Operators- Degree/ PUC for GEF Eye Hospital, Hoskote, Bangalore Rural. Contact: 080- 29700230/ 9844789046

Teachers/ Professors

WANTED FACULTY for Economics, History, Polity, Geography, Ethics, Mathematics and Aptitude for IAS Coaching Classes at Chandra Layout. Contact: 9980883950

Wanted

WANTED FEMALE Office Assistant Qualification any Degree, Good Communication Skills: Kannada, English, Hindi, in around Rajajinagar Contact: 23384085/ 9108458798

EDUCATIONAL

Coaching Classes

THE CORPORATE ACCOUNTANT is an academy managed by professionals for training aspiring accountants to gain experience before seeking job. We offer 100% practical training using computers. Require experienced/retired TUTORS well versed in TALLY & statutory compliance filing online.Attractive salary.Contact 9880173407

Admission

ONE SITTING: LL.B, B.TECH, M.TECH, DIPLOMA, MBA, MCA, M.Sc, BBA, BCA, B.Sc, B.Com, B.PHARM, GNM, MLT, PU, SSLC. Asha Institute, Bangalore. Ph: 9448460103/ 7093438248.

PERSONAL

Lost

DOCUMENT LOST

I, **PRABHA KARVE,** Proprietor of Deepa Industries, Bangalore. have LOST Name of Document / Article : Possession Certificate of property bearing Identification No. M-4, KIADB Industrial area Bommasandra, Hosur Road. FIR No.0124893/2021 while Transit. **Finders please Contact: 98860 10861**

Change of Name

I, NO. 14600483W Rank Ex HAV. Until EME Name DEVANAND. S. S/o. Late. Selvaraj R/a Near #1, Air Shift Champion Reefs, KGF-563117, KGF Taluk, Kolar District. Declare That My Daughter's Correct Name is JENET JOYCE. D. and Correct DOB is 14.11.2003 But in My Army Records Her Name Wrongly Entered as JEENNET JOYSE and DOB: 14.11.2003 vide Affidavit Dated: 29.12.2021 Before Notary Thangaraj. S. K.G.F.

I, ULLESHKUMAR GADGE @ ULLESHKUMAR S/o. Vaijinath Gadge R/a #19-1-440, 5th cross, Channabasava, Shivnagar South, Bidar, declare that ULLESHKUMAR GADGE and ULLESHKUMAR one and the same person i.e. Myself only, Henceforth, known as ULLESHKUMAR GADGE vide Affidavit Dated: 29.12.2021 before Notary Baswaraj, Bidar.

WE, ABHISHEK Goel and Shruti Goel, R/a No. 109, Samhita Serenity, Outer Ring Road, Doddanakkundi, Bengaluru- 560037, have changed our minor daughter's name from AADYA GOEL to DHRITI GOEL, vide affidavit dated 30.12.2021 before Notary Sivakumara M.N., Bangalore. Henceforth she will be known as DHRITI GOEL only.

WE, DURAISWAMY NARAYANAN and PADMASHREE DURAISWAMY Both are R/a #935, 3rd 'E' Block, 3rd Main Road, Rajajinagar 2nd Stage, Bangalore- 560010 Have Changed Our Son's Name From SUJAY KARTHIK to KARTHIK. D.P. vide Affidavit Dated: 30.12.2021 Sworn Before Notary Vanajakshi. R. Bengaluru.

I, VIRUPAMMA residing No.68, IPS Road, 10th Cross, Muneshwara Layout, Attur, Yelahanka Newtown, Bangalore-560064 have changed my name to VIRUPAMMA KALPALATA GOPASETTY vide affidavit dated 30/12/2021 sworn before notary H. Sridhar Rao, Bangalore.

I, SHETTY ASHWINI KUSUMAKAR resident of #C081, Assetz Marq, Kannamangala, Whitefield, Bangalore-560067 have changed my name to ASHWINI SHETTY affidavit dated 29.12.2021 before Notary Veena.J, Bangalore-67

REKHA W/O 14849131M- L/Nk/SS- VEERAPPAN R R/a Vellalapuram, Sinnappampatti, Salem, TN changed name from REKHA to REKHA V notary KV Mani, Bangalore.

I, SURAMPUDI KRISHNA RAO have changed my name to KRISHNA RAO S V G vide affidavit dated: 30/12/2021 Before Notary C.Srinivas Bangalore.

ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ನೋಂ. ಕಚೇರಿ: 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಜಿನೆಸ್ ಪಾರ್ಕ್, ಗಣಪತರಾವ್ ಕದಂ ಮಾರ್ಗ, ಲೋವರ್ ಪರೇಲ್, ಮುಂಬೈ–400013. ಸಿಐಎನ್ ನಂ. U67190MH2008PLC187552.
ಶಾಖಾ ಕಚೇರಿ 2ನೇ ಮಹಡಿ, ಪ್ರೆಸ್ಟಿಜ್ ಕ್ರೋನಿಕ್ ನಂ.62, ರಿಚ್ಮಂಡ್ ರೋಡ್, ಬೆಂಗಳೂರು–560025

ಸ್ವಾಧೀನತಾ ಪ್ರಕಟಣೆ

(ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು, 2002ರ ನಿಯಮ 8(1)ರೊಂದಿಗೆ ಅನುಬಂಧ 4 ಓದಿಕೊಂಡ ಪ್ರಕಾರ)

ಅದಾಗ್ಯೂ, ಈ ಕೆಳಗೆ ಸಹಿ ಹಾಕಿರುವ ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌ನ, ಅಧಿಕೃತ ಅಧಿಕಾರಿಯು ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002ರ ಅಡಿಯಲ್ಲಿನ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರೊಂದಿಗೆ ಸೆಕ್ಷನ್ 13(2) ಅನ್ನು ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ, ಸಾಲಗಾರರಾದ/ಜಾಮೀನುದಾರರಾದ **1) ಚಲಪತಿ ರಾವ್** ಜಿ ಬಿನ್ ಗುನ್ನಾಳ ಯರ್ರಯ್ಯ, ನಂ.81, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ಟೆಂಪಲ್ ಹತ್ತಿರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು–560090 (ಕರ್ನಾಟಕ) **ಮತ್ತು ಇನ್ನೊಂದು ವಿಳಾಸ:** ಮ.ನಂ.07, ಪಿಐಡಿ ನಂ.012, ಡಬ್ಲ್ಯು0405 2, ಖಾತಾ ನಂ.129/7, ಸರ್ವೆ ನಂ.16, ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ನಗರ (ಕರ್ನಾಟಕ) **2) ರಕ್ಷಾ ಕ್ರಿಯೇಶನ್ಸ್ ಪ್ರತಿನಿಧಿಸುವವರು ಶ್ರೀ ಚಲಪತಿ ರಾವ್** ಜಿ ನಂ.81, ಅಬ್ಬಿಗೆರೆ ಮುಖ್ಯರಸ್ತೆ, ಅಬ್ಬಿಗೆರೆ ಕಾಲೋನಿ, 2ನೇ ಮಹಡಿ, ನೀಲಮ್ಮ ಯರ್ರಯ್ಯ ಬಿಲ್ಡಿಂಗ್, ಬೆಂಗಳೂರು–560090 (ಕರ್ನಾಟಕ) **3) ನರೇಶ್ ಕುಮಾರ್** ಬಿನ್ ಗುನ್ನಾಳ ಯರ್ರಯ್ಯ ನಂ.75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ಟೆಂಪಲ್ ಹತ್ತಿರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು–560090 **ಮತ್ತು ಇನ್ನೊಂದು ವಿಳಾಸ:** ಮ.ನಂ.07, ಪಿಐಡಿ ನಂ. 012, ಡಬ್ಲ್ಯು0405 2, ಖಾತಾ ನಂ. 129/7, ಸರ್ವೆ ನಂ.16, ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ನಗರ–560090 (ಕರ್ನಾಟಕ) **4) ಶ್ರೀಮತಿ. ಕುಮಾರಿ** ಕೋಂ. ಚಲಪತಿ ರಾವ್ ಜಿ, ನಂ.75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ಟೆಂಪಲ್ ಹತ್ತಿರ, ಚಿಕ್ಕಬಾಣಾವರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು–560090 **ಮತ್ತು ಇನ್ನೊಂದು ವಿಳಾಸ:** ಮ.ನಂ.07, ಪಿಐಡಿ ನಂ.012, ಡಬ್ಲ್ಯು0405 2, ಖಾತಾ ನಂ.129/7, ಸರ್ವೆ ನಂ.16, ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ನಗರ–560090 (ಕರ್ನಾಟಕ) **5) ರಘು ಯರ್ರಯ್ಯ,** ಬಿನ್ ಗುನ್ನಾಳ ಯರ್ರಯ್ಯ, ನಂ.75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ಟೆಂಪಲ್ ಹತ್ತಿರ, ಚಿಕ್ಕಬಾಣಾವರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು–560090 **ಮತ್ತು ಇನ್ನೊಂದು ವಿಳಾಸ:** ಮ.ನಂ.07, ಪಿಐಡಿ ನಂ. 012, ಡಬ್ಲ್ಯು0405 2, ಖಾತಾ ನಂ.129/7, ಸರ್ವೆ ನಂ.16, ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು, ಬೆಂಗಳೂರು ನಗರ–560090 (ಕರ್ನಾಟಕ) **6) ಶ್ರೀಮತಿ. ದೇವಿಕಾ ಜಿ ಆರ್** ನಂ.75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ಟೆಂಪಲ್ ಹತ್ತಿರ, ಚಿಕ್ಕಬಾಣಾವರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು–560090 **7) ಶ್ರೀಮತಿ. ಕನ್ನಿಕಾ ಚಾಡಾ** ನಂ.75, 6ನೇ ಅಡ್ಡರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ಮರಿಯಮ್ಮ ಟೆಂಪಲ್ ಹತ್ತಿರ, ಚಿಕ್ಕಬಾಣಾವರ, ಅಬ್ಬಿಗೆರೆ ಕಾಲೋನಿ, ಬೆಂಗಳೂರು–560090 **ಇವರುಗಳಿಗೆ 21ನೇ ಮೇ, 2021 ರಂದು ಡಿಮಾಂಡ್ ನೋಟಿಸ್** ಹೊರಡಿಸಿದ್ದು, ಸದರಿ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿರುವ **ರೂ. 59,65,172/– (ರೂಪಾಯಿ ಐವತ್ತೊಂಬತ್ತು ಲಕ್ಷ ಅರವತ್ತೈದು ಸಾವಿರದ ಒಂದು ನೂರ ಎಪ್ಪತ್ತೆರಡು ಮಾತ್ರ)** ಹಾಗೂ ಅನ್ವಯಿಕ ಬಡ್ಡಿ, ಜುಲ್ಮಾನೆ ಬಡ್ಡಿ, ಶುಲ್ಕ ಇತ್ಯಾದಿಗಳನ್ನು, ಸದರಿ ನೋಟಿಸ್ ದಿನಾಂಕದಿಂದ 60 ದಿನಗಳೊಳಗೆ ಮರುಪಾವತಿಸಬೇಕೆಂದು ಕರೆ ನೀಡಿದ್ದರು.

ಅದಾಗ್ಯೂ, ಸಾಲಗಾರರು ಬಾಕಿಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ತಿಳಿಸುವುದು ಏನೆಂದರೆ, ಮಾನ್ಯ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ನ್ಯಾಯಾಧೀಶರು, ಬೆಂಗಳೂರು ಇವರ ಆದೇಶದ ಪ್ರಕಾರ (ರೆಫ್ ಸಿ.ಮಿಸ್.ನಂ.3960/2021) ಕೋರ್ಟ್ ನಿಯೋಜಿಸಿದ ಅಡ್ವೊಕೇಟ್ ಕಮಿಷನರ್‌ರವರು ಸದರಿ ಕಾಯ್ದೆಯ ಸೆಕ್ಷನ್ 13(4) ಅನ್ನು ಸದರಿ ನಿಯಮಗಳ ನಿಯಮ 9 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಹಕ್ಕುಗಳನ್ನು ಚಲಾಯಿಸುವ ಮೂಲಕ, ಇಲ್ಲಿ ಕೆಳಗೆ ವಿವರಿಸಲಾಗಿರುವ ಷೆಡ್ಯೂಲ್ ಸ್ವತ್ತನ್ನು **30ನೇ ಡಿಸೆಂಬರ್, 2021** ರಂದು ತಮ್ಮ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ ಮತ್ತು ಈ ಕೆಳಗೆ ಸಹಿ ಹಾಕಿರುವವರಿಗೆ ವರ್ಗಾಯಿಸಿರುತ್ತಾರೆ.


ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ಈ ಮೂಲಕ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ಸದರಿ ಸ್ವಾಧೀನ ಸ್ವತ್ತಿನೊಂದಿಗೆ ಯಾವುದೇ ವ್ಯವಹಾರ ಮಾಡತಕ್ಕದ್ದಲ್ಲ. ಅದಾಗ್ಯೂ ವ್ಯವಹರಿಸಿದ್ದಲ್ಲಿ ಅಂತಹ ವಹಿವಾಟು ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್‌ಗೆ ಸಂದಾಯ ಆಗಬೇಕಿರುವ **ರೂ. 59,65,172/– (ರೂಪಾಯಿ ಐವತ್ತೊಂಬತ್ತು ಲಕ್ಷ ಅರವತ್ತೈದು ಸಾವಿರದ ಒಂದು ನೂರ ಎಪ್ಪತ್ತೆರಡು ಮಾತ್ರ)** ಹಾಗೂ **ಮೇ 21, 2021** ರಿಂದ ಅನ್ವಯಿಕ ಬಡ್ಡಿ, ಜುಲ್ಮಾನೆ ಬಡ್ಡಿ, ಖರ್ಚು, ವೆಚ್ಚ ಇತ್ಯಾದಿಗಳ ನಿಬಂಧನೆಗೆ ಒಳಪಡುತ್ತದೆ.

ಷೆಡ್ಯೂಲ್–ಎ ಪ್ರಾಪರ್ಟಿ: ಅಬ್ಬಿಗೆರೆ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯೊಳಗೆ ಸ್ಥಿತಗೊಂಡಿರುವ ಸೈಟ್ ನಂ.07, ಖಾತಾ ನಂ.129/07 ಹೊಂದಿರುವ ವಸತಿಯೋಗ್ಯ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಶ್ರೀನಿವಾಸುಲು ರವರ ಸೈಟ್; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ರಸ್ತೆ; ದಕ್ಷಿಣಕ್ಕೆ: ಶ್ರೀಮತಿ. ಗಂಗಮ್ಮನವರ ಸ್ವತ್ತು. ವಿಸ್ತೀರ್ಣ: ಪೂರ್ವ–ಪಶ್ಚಿಮ 40 ಅಡಿ ಮತ್ತು ಉತ್ತರ–ದಕ್ಷಿಣ 30 ಅಡಿ; ಜಿಎಫ್+ಎಫ್‌ಎಫ್+ಎಸ್‌ಎಫ್ ಸೇರಿದಂತೆ ಒಟ್ಟಾರೆ 1200 ಚ.ಅ.

(ಅಧಿಕೃತ ಅಧಿಕಾರಿ)
ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್
ದೂರವಾಣಿ ಸಂಖ್ಯೆಗಳು: 9030001897/9866577659

ಸ್ಥಳ: ಬೆಂಗಳೂರು
ದಿನಾಂಕ: 31–12–2021

13ನೇ ವಾರ್ಷಿಕ ಚಿರಸ್ಮರಣೆ



ಶ್ರೀ ಕೆ ಬಿ ಜಯರಾಮ ರೆಡ್ಡಿ

(ಸ್ಥಾಪಕರು: ಜೆ.ಆರ್ ಗ್ರೂಪ್ ಆಫ್ ಕಂಪನೀಸ್)

Date of Birth: 23-03-1943 Date of Expired: 31-12-2008

ನೀವು ನಮ್ಮನ್ನಗಲಿ ಇಂದಿಗೆ 13 ವರ್ಷವಾಯಿತು, ನಿಮ್ಮ ನೆನಪು ನಮ್ಮಲ್ಲಿ ಶಾಶ್ವತವಾಗಿದೆ, ನಿಮ್ಮ ಆಶೀರ್ವಾದವು ನಮ್ಮ ಜೀವನದ ದಾರಿದೀಪವಾಗಿದೆ. ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತಾ ಸದಾ ಸ್ಮರಿಸುವ

ಧರ್ಮಪತ್ನಿ: ಶ್ರೀಮತಿ ರತ್ನಮ್ಮ,
ಡಾ|| ಕೆ ಜೆ ಪುರುಷೋತ್ತಮ ಮತ್ತು ಕುಟುಂಬದವರು,
ಡಾ|| ಕೆ ಜೆ ಚಂದ್ರಶೇಖರ್ ಮತ್ತು ಕುಟುಂಬದವರು,
ದಿ. ಡಾ|| ಎಸ್ ಆರ್ ನಾಗರಾಜ್ ಕುಟುಂಬದವರು,
ಬಂಧುಗಳು ಮತ್ತು ಸ್ನೇಹಿತರು

ಕರ್ನಾಟಕ ಸರ್ಕಾರ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಖಾದಿ ಗ್ರಾಮೋದ್ಯೋಗ ವಿಭಾಗ, ಉಪನಿರ್ದೇಶಕರು (ಖಾಗ್ರಾ) ರವರ ಕಛೇರಿ, ಮೊದಲನೇ ಮಹಡಿ, KSTID ಅಗಾರ್ಮೆಂಟ್ ತರಬೇತಿ ಕಟ್ಟಡ ಬಾಂಬೆ ರೇಯನ್ ಫ್ಯಾಕ್ಟರಿ ಬಳಿ, KIADB APPAREAL PARK, ದೊಡ್ಡಬಳ್ಳಾಪುರ–561203, ದೂ.ಸಂಖ್ಯೆ: 080–23347008, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂಖ್ಯೆ: ಉನಿ(ಖಾಗ್ರಾ)/ಬೆಂಗ್ರಾಜಿಪಂ/ಹೊ.ಯಂ/2021–22 ದಿನಾಂಕ: 28.12.2021

ಟೆಂಡರ್ ಪ್ರಕಟಣೆ

2021–22ನೇ ಸಾಲಿನಲ್ಲಿ ಯಂತ್ರಚಾಲಿತ ಹೊಲಿಗೆ ಯಂತ್ರಗಳನ್ನು ವಿತರಿಸುವ ಸಲುವಾಗಿ ಸರಬರಾಜು ಮಾಡುವ ನೊಂದಾಯಿತ ಅರ್ಹ ಮತ್ತು ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ Government of Karnataka e-procurement portal webiste http://eproc.karnataka.gov.in ಮುಖಾಂತರ Download ಮಾಡಿಕೊಳ್ಳಬಹುದಾಗಿದೆ. Online ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12–01–2022 ಸಂಜೆ 4 ಗಂಟೆಯವರೆಗೆ. ಹೆಚ್ಚಿನ ವಿವರಗಳನ್ನು ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/–
ಉಪನಿರ್ದೇಶಕರು (ಖಾಗ್ರಾ)
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕೋವಿಡ್–19

ಕಟ್ಟಡ ಕುಸಿತ, ಬೆಂಕಿ ಅವಘಡಗಳಿಗೆ ಸಾಕ್ಷಿಯಾದ 2021 • ರಾಜಕಾರಣದಲ್ಲಿ ಸದ್ದು ಮಾಡಿದ ಸಿ.ಡಿ ಪ್ರಕರಣ

ಗತ ವರ್ಷ: ಡ್ರಗ್ಸ್ ಮಾಫಿಯಾ, ಬಿಟ್ ಕಾಯಿನ್ ಸದ್ದು

2021 ಹಿನ್ನೋಟ

ಬೆಂಗಳೂರು: ಮಾದಕ ದ್ರವ್ಯ ಮಾರಾಟ ಜಾಲದಲ್ಲಿ ಸಿನಿಮಾ ತಾರೆಯ ಕೈವಾಡ, ಅಂತರರಾಷ್ಟ್ರೀಯ ಮಟ್ಟದ ಹ್ಯಾಕಿಂಗ್ ಜಾಲದ ಪತ್ತೆ, ಬಿಟ್ ಕಾಯಿನ್ ಹಗರಣ... ಹೀಗೆ ಹತ್ತು ಹಲವು ಮಹತ್ತರ ಬೆಳವಣಿಗೆಗಳ ಮೂಲಕ ರಾಜ್ಯದ ರಾಜಧಾನಿಯ 'ಅಪರಾಧ ಜಗತ್ತು' 2021ರ ಉದ್ದಕ್ಕೂ ಸದಾ ಸುದ್ದಿಯಲ್ಲಿತ್ತು.

ಈ ವರ್ಷದಲ್ಲಿ ನಗರದಲ್ಲಿ ನಡೆದ ಪ್ರಮುಖ ಅಪರಾಧ ಚಟುವಟಿಕೆಗಳು, ದುರಂತಗಳ ಹಿನ್ನೋಟ ಇಲ್ಲಿದೆ.

ಜನವರಿ

- ವಸಂತನಗರದಲ್ಲಿರುವ ಐಪಿಎಸ್ ಅಧಿಕಾರಿಗಳ ವಸತಿಸಮುಚ್ಚಯದಲ್ಲಿ ಜನವರಿ ತಿಂಗಳಲ್ಲಿ ಭಾರಿ ಬೆಂಕಿ ಅವಘಡ ಸಂಭವಿಸಿತ್ತು.
- ನೂರಾರು ಕೋಟಿ ರೂಪಾಯಿ ವಂಚನೆ ಪ್ರಕರಣದಲ್ಲಿ ಬಂಧಿಸಲ್ಪಟ್ಟ ಆರೋಪಿ ಯುವರಾಜ್‌ನಿಂದ ಹಣ ಪಡೆದ ಆರೋಪದಡಿ ಸಿಸಿಬಿ ಪೊಲೀಸರಿಂದ ನಟಿ ರಾಧಿಕಾ ಕುಮಾರಸ್ವಾಮಿ ಅವರ ವಿಚಾರಣೆ.
- 'ಹ್ಯಾಕಿಂಗ್ ಮೂಲಕ ದತ್ತಾಂಶ ಕದ್ದು ಅಕ್ರಮಕ್ಕೆ ಬಳಸಿಕೊಂಡಿದ್ದ ಹಾಗೂ ಕೆಲವರನ್ನು ಬ್ಲ್ಯಾಕ್‌ಮೇಲ್ ಮಾಡಿ ಗಳಿಸಿದ್ದ ₹ 9 ಕೋಟಿ ಮೌಲ್ಯದ 31 ಬಿಟ್ ಕಾಯಿನ್‌ಗಳನ್ನು ಆರೋಪಿ ಶ್ರೀಕೃಷ್ಣನಿಂದ ಸಿಸಿಬಿ ಪೊಲೀಸರು ಜಪ್ತಿ ಮಾಡಿದ್ದರು.
- ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದಡಿ ಬಂಧಿಸಲಾಗಿದ್ದ ರಾಜಕಾರಣಿಯೊಬ್ಬರ ಪುತ್ರ ಆದಿತ್ಯ ಆಳ್ವ ಕಸ್ಟಡಿಗೆ ಅವಧಿ ಮುಗಿದಿದ್ದರಿಂದ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.
- ರಾಷ್ಟ್ರೀಯ ಮಾದಕ ವಸ್ತು ನಿಗ್ರಹ ದಳದ (ಎನ್‌ಸಿಬಿ) ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ₹ 20 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ ಮಾಡಿದ್ದರು.
- ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮುಖಂಡರ ಹೆಸರು ಹೇಳಿಕೊಂಡು ಸಾರ್ವಜನಿಕರಿಂದ ಕೋಟ್ಯಂತರ ರೂಪಾಯಿ ಪಡೆದು ವಂಚಿಸಿದ್ದ ಪ್ರಕರಣದ ಆರೋಪಿ ಆರ್. ಯುವರಾಜ್‌ಗೆ ಸೇರಿದ್ದ ಸುಮಾರು ₹ 70 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ನ್ಯಾಯಾಲಯ ಮಧ್ಯಂತರ ಆದೇಶ.

ಫೆಬ್ರುವರಿ

- ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಹಾಗೂ ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆಗಳ ವ್ಯಾಪ್ತಿಗಳಲ್ಲಿ ನಡೆದಿದ್ದ ಗಲಭೆ ಪ್ರಕರಣದ ತನಿಖೆ ನಡೆಸುತ್ತಿದ್ದ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳಿಂದ 247 ಆರೋಪಿಗಳ ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆ.
- ಡ್ರಗ್ಸ್ ಅಕ್ರಮ ಸಾಗಣೆ ಹಾಗೂ ಮಾರಾಟ ಪ್ರಕರಣದ ತನಿಖೆ ನಡೆಸಿದ ಮಾದಕ ವಸ್ತು ನಿಗ್ರಹ ಘಟಕದ (ಎನ್‌ಸಿಬಿ) ಅಧಿಕಾರಿಗಳಿಂದ ಕನ್ನಡದ 'ಬಿಗ್‌ಬಾಸ್' ರಿಯಾಲಿಟಿ ಶೋ ಸ್ಪರ್ಧಿ ಆಡಂ ಪಾಷಾ ಸೇರಿದಂತೆ 10 ಮಂದಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ.



ನಗರದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಕಮಲಾನಗರದ ಶಂಕರ್‌ನಾಗ್ ಬಸ್ ನಿಲ್ದಾಣದ ಹಿಂಭಾಗ ಕಟ್ಟಡ ಕುಸಿದಿರುವುದು –ಪ್ರಜಾವಾಣಿ ಸಂಗ್ರಹ ಚಿತ್ರ

ಮಾರ್ಚ್

- ಅಂತರರಾಷ್ಟ್ರೀಯ ಡ್ರಗ್ಸ್ ಜಾಲ ಪ್ರಕರಣ ಸಂಬಂಧ ನಟಿಯರಾದ ರಾಗಿಣಿ ದ್ವಿವೇದಿ, ಸಂಜನಾ ಗರ್ಲಾನಿ ಸೇರಿದಂತೆ 25 ಮಂದಿ ವಿರುದ್ಧ ಸಿಸಿಬಿ ಪೊಲೀಸರಿಂದ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆ.



ರಾಗಿಣಿ ದ್ವಿವೇದಿ

- ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ್ದ ಪೂರ್ವ ವಿಭಾಗದ ಪೊಲೀಸರು, ₹4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದರು. ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ 'ಬಿಗ್‌ಬಾಸ್' ರಿಯಾಲಿಟಿ ಶೋ ಸ್ಪರ್ಧಿಯಾಗಿದ್ದ ಮಸ್ತಾನ್ ಚಂದ್ರ ಮನೆ ಮೇಲೆ ದಾಳಿ ನಡೆಸಿ ಅವರನ್ನು ವಶಕ್ಕೆ ಪಡೆದಿದ್ದರು.
- ಸಿ.ಡಿ ಪ್ರಕರಣ ಸಂಬಂಧ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ದೂರು. ಸದಾಶಿವನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಜವಾಬ್ದಾರಿ ವಿಶೇಷ ತನಿಖಾ ತಂಡಕ್ಕೆ ವರ್ಗಾವಣೆ.
- 'ಕೆಲಸದ ಆಮಿಷವೊಡ್ಡಿ ಯುವತಿ ಮೇಲೆ ಅತ್ಯಾಚಾರ ಎಸಗಿದ' ಆರೋಪದಡಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಎಫ್‌ಐಆರ್ ದಾಖಲು.

ಮೇ

- ₹ 360 ಕೋಟಿ ಸಾಲ ಆಮಿಷ; 'ಚಿನ್ನದ ಮನುಷ್ಯ' ಎ. ಹರಿ ನಾಡರ್ ಅಲಿಯಾಸ್ ಹರಿ ಗೋಪಾಲಕೃಷ್ಣ ನಾಡರ್ ಬಂಧನ.

ಜೂನ್

- ಮಾಜಿ ಕಾರ್ಪೊರೇಟರ್ ಬಿಜೆಪಿಯ ಆರ್. ರೇಖಾ ಕದಿರೇಶ್ (43) ಹತ್ಯೆ.

ಜುಲೈ

- ಯೆಸ್ ಬ್ಯಾಂಕ್‌ನಿಂದ ₹ 712 ಕೋಟಿ ಸಾಲ ಪಡೆದು ವಂಚಿಸಿರುವ ಆರೋಪದಡಿ ನಗರದ ನಿತೇಶ್ ಸಮೂಹ ಸಂಸ್ಥೆಗಳ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್.

ಆಗಸ್ಟ್

- ನಿವೇಶನ ಮಾರಾಟ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ವಂಚಿಸಿ ಪರಾರಿಯಾಗಿದ್ದ 'ಬೃಂದಾವನ ಪ್ರಾಪರ್ಟಿಸ್' ಕಂಪನಿ ನಿರ್ದೇಶಕ ದಿನೇಶ್ ಎಸ್. ಗೌಡ ಬಂಧನ.
- ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಎಂ. ಸತೀಶ್ ರೆಡ್ಡಿ ಅವರ ಮನೆ ಅಂಗಳಕ್ಕೆ ನುಗ್ಗಿದ್ದ ದುಷ್ಕರ್ಮಿಗಳು. ಎರಡು ಕಾರುಗಳಿಗೆ ಬೆಂಕಿ ಹಚ್ಚಿ ಪರಾರಿ.
- ಅಂತರರಾಷ್ಟ್ರೀಯ ಡ್ರಗ್ಸ್ ಜಾಲ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ನಟಿಯರಾದ ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ ಹಾಗೂ ಇತರರು ಮಾದಕ ವಸ್ತು ಸೇವಿಸಿದ್ದ ಸಂಗತಿ 'ಕೂದಲು ಮಾದರಿ' ಪರೀಕ್ಷೆಯಿಂದ ದೃಢ.
- ಮಾಗಡಿ ರಸ್ತೆಯ ಗೋಪಾಲಪುರ ಬಳಿಯ 'ಎಂ.ಎಂ. ಫುಡ್ಸ್ ಪ್ರೊಡಕ್ಟ್' ಕಾರ್ಖಾನೆಯಲ್ಲಿ ಬಾಯ್ಲರ್ ಸ್ಫೋಟದಿಂದ ನಾಲ್ವರು ಕಾರ್ಮಿಕರ ಸಾವು.

ಸೆಪ್ಟೆಂಬರ್

- ಕೋರಮಂಗಲದಲ್ಲಿ ನಡೆದಿದ್ದ ಅಪಘಾತದಲ್ಲಿ ಹೊಸೂರು ಕ್ಷೇತ್ರದ ಡಿಎಂಕೆ ಶಾಸಕ ವೈ.ಪ್ರಕಾಶ್ ಅವರ ಮಗ ಸೇರಿ ಏಳು ಮಂದಿ ಸ್ಥಳದಲ್ಲೇ ದುರ್ಮರಣ.
- ಬ್ಯಾಡರಹಳ್ಳಿ ಬಳಿಯ ತಿಗಳರಪಾಳ್ಯದ ಮನೆಯಲ್ಲಿ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಶರಣು. ಅದೇ ಮನೆಯಲ್ಲೇ ಒಂಬತ್ತು ತಿಂಗಳ ಕೂಸಿನ ಮೃತದೇಹ ಪತ್ತೆ.
- ಬೊಮ್ಮನಹಳ್ಳಿಯ ದೇವರಚಿಕ್ಕನಹಳ್ಳಿ ಆಶ್ರಿತ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ತಾಯಿ–ಮಗಳ ಸಾವು.
- ಚಾಮರಾಜಪೇಟೆ ಸೀತಾಪತಿ ಅಗ್ರಹಾರದ 4ನೇ ಅಡ್ಡರಸ್ತೆಯಲ್ಲಿರುವ ಗೋದಾಮಿನಲ್ಲಿ ಭಾರಿ ಸ್ಫೋಟ. ಇಬ್ಬರ ದಾರುಣ ಸಾವು.

ಅಕ್ಟೋಬರ್

- ಕಸ್ತೂರಿನಗರದ ಡಾಕ್ಟರ್ಸ್ ಬಡಾವಣೆಯಲ್ಲಿ ನಿರ್ಮಿಸಿದ್ದ ನಾಲ್ಕು ಅಂತಸ್ತಿನ ಕಟ್ಟಡ ಕುಸಿತ.
- ಮಳೆಯ ಅಬ್ಬರದಿಂದಾಗಿ ಕಮರ್ಷಿಯಲ್ ಸ್ಟ್ರೀಟ್ ಮುಖ್ಯರಸ್ತೆಯಲ್ಲಿದ್ದ 100 ವರ್ಷ ಹಳೇ ಕಟ್ಟಡ ಕುಸಿತ

ನವೆಂಬರ್

- ಹೋಟೆಲೊಂದರ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದ ಆರೋಪದಡಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಬಂಧನ.
- ನಟಿ ಶ್ರುತಿ ಹರಿಹರನ್ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ನಟ ಅರ್ಜುನ್ ಸರ್ಜಾ ವಿರುದ್ಧ ದಾಖಲಾಗಿದ್ದ ಪ್ರಕರಣ ಸಂಬಂಧ ಕಬ್ಬನ್ ಪಾರ್ಕ್ ಪೊಲೀಸರಿಂದ ನ್ಯಾಯಾಲಯಕ್ಕೆ 'ಬಿ–ರಿಪೋರ್ಟ್' ಸಲ್ಲಿಕೆ.


ಡಿಸೆಂಬರ್

- ಅಪಹರಣ ಪ್ರಕರಣದ ವಿಚಾರಣೆ ನೆಪದಲ್ಲಿ ತೌಸಿಫ್ ಎಂಬುವರನ್ನು ಠಾಣೆಗೆ ಕರೆತಂದು ಥಳಿಸಿ, ಗಡ್ಡ ಕತ್ತರಿಸಿದ್ದ ಆರೋಪ: ಬ್ಯಾಟರಾಯನಪುರ ಪಿಎಸ್ಐ ಅಮಾನತು.
- *ಸ್ಯಾಂಕಿ ರಸ್ತೆಯ ಭಾಷ್ಯಂ ವೃತ್ತದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಮಸಿ ಬಳಿದಿದ್ದ ಕಿಡಿಗೇಡಿಗಳ ಬಂಧನ.

ಸಾಂಸ್ಕೃತಿಕ ಕ್ಷೇತ್ರ: ದಿಗ್ಗಜರ ಕಣ್ಮರೆ

ಬೆಂಗಳೂರು: ಕವಿಗಳು, ವಿದ್ವಾಂಸರು, ಸಾಹಿತಿಗಳು ಸೇರಿದಂತೆ ನಾಡಿನ ಸಾಂಸ್ಕೃತಿಕ ಲೋಕದ ಅನೇಕ ದಿಗ್ಗಜರು 2021ರಲ್ಲಿ ಇಹಯಾತ್ರೆ ಮುಗಿಸಿದರು. ಕಣ್ಮರೆಯಾದ ಚಿತ್ರರಂಗದ ಕಣ್ಮಣಿಗಳಿಗಾಗಿ ನಾಡಿನಾದ್ಯಂತ ಜನ ಕಂಬನಿ ಮಿಡಿದರು. ಇಬ್ಬರು ಶತಾಯುಷಿ ಸಾಧಕರ ಅಗಲುವಿಕೆಯ ಅನಾಥ ಭಾವವೂ ಈ ವರ್ಷ ಕಾಡಿತು.

- ಕನ್ನಡದ ಜನಪ್ರಿಯ ಕವಿಗಳಲ್ಲಿ ಒಬ್ಬರಾದ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ (84) ಮಾ.6ರಂದು ನಿಧನರಾದರು. ಕನ್ನಡ ಸಾಹಿತ್ಯ ಲೋಕದಲ್ಲಿ 'ಎನ್ಎಸ್ಎಲ್' ಎಂದೇ ಮನೆಮಾತಾಗಿದ್ದರು. ಕಾವ್ಯ, ಸಾಹಿತ್ಯ ವಿಮರ್ಶೆ, ಅನುವಾದ, ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಸಿದ್ದಾರೆ. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಕೃತಿ ರಚಿಸಿದ್ದಾರೆ.
- ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿದ್ದ ಪ್ರೊ.ಎಂ.ಎ. ಹೆಗಡೆ (73) ಅವರು ಏ.18ರಂದು ನಿಧನರಾದರು. ಅವರಿಗೆ ಏ.12ರಂದು ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಯಕ್ಷಗಾನದಲ್ಲಿ ವೇಷಧಾರಿ, ತಾಳಮದ್ದಲೆಯ ಅರ್ಥಧಾರಿ, ಸಂಶೋಧಕ, ವಿಮರ್ಶಕ ಮತ್ತು ಪ್ರಸಂಗಕರ್ತರಾಗಿ ಕೆಲಸ ಮಾಡಿದ್ದರು.
- ನಿಘಂಟು ತಜ್ಞರೆಂದೇ ಪ್ರಸಿದ್ಧಿ ಹೊಂದಿದ್ದ ಖ್ಯಾತ ಭಾಷಾ ತಜ್ಞ ಪ್ರೊ.ಜಿ. ವೆಂಕಟಸುಬ್ಬಯ್ಯ (108) ಅವರು ಏ.19ರಂದು ನಿಧನರಾದರು. ಕನ್ನಡ ಭಾಷೆ ಅಥವಾ ಪದಗಳ ಅರ್ಥವಿವರಣೆಗೆ ಹಾಗೂ ಭಾಷೆಗೆ ಸಂಬಂಧಿಸಿದ ಗೊಂದಲಗಳ ನಿವಾರಣೆಗೆ ಇಂದಿಗೂ ಅವರು ರಚಿಸಿದ ಕೃತಿಗಳನ್ನೇ ಆಧಾರವಾಗಿ ಬಳಸಲಾಗುತ್ತಿದೆ.
- ಕವಿ ಜರಗನಹಳ್ಳಿ ಶಿವಶಂಕರ್ (72) ಅವರು ಮೇ 5ರಂದು ಹೃದಯಾಘಾತದಿಂದ ನಿಧನರಾದರು.
- ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿ (103) ಅವರು ಹೃದಯಾಘಾತದಿಂದ ಮೇ 26ರಂದು ನಿಧನರಾದರು. ರಾಜ್ಯದ ಹಿತಕ್ಕೆ ಮಾರಕವಾಗುವ ಯೋಜನೆಗಳು, ನೀತಿಗಳನ್ನು ನಿಷ್ಠುರ, ನಿರ್ದುಷ್ಟವಾಗಿ ಯಾರ ಹಂಗಿಗೂ ಒಳಗಾಗದಂತೆ ಟೀಕಿಸುತ್ತಿದ್ದ ಅವರು, ತಮ್ಮ ಪ್ರತಿಭಟನೆಯ ಮೂಲಕ ಸರ್ಕಾರವನ್ನು ಜಾಗೃತಗೊಳಿಸುತ್ತಿದ್ದರು.
- ಸಾಹಿತಿ, ಕವಿ ಡಾ. ಸಿದ್ದಲಿಂಗಯ್ಯ ಅವರು (67) ಜೂ.11ರಂದು ಹೃದಯಾಘಾತದಿಂದ ನಿಧನರಾದರು. ಅವರ ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಕಥನಗಳು ಸಂಚಲನ ಸೃಷ್ಟಿಸಿದ್ದವು.
- ಬಹುಭಾಷಾ ವಿದ್ವಾಂಸ ಕೆ.ಎಸ್. ನಾರಾಯಣಾಚಾರ್ಯ (89) ಅವರು ನ.26ರಂದು ನಿಧನರಾದರು. ಕನ್ನಡ, ಇಂಗ್ಲಿಷ್, ಸಂಸ್ಕೃತ ಹಾಗೂ ತಮಿಳು ಭಾಷೆಯಲ್ಲಿ 'ರಾಮಾಯಣ'ದ ಬಗ್ಗೆ ಉಪನ್ಯಾಸ ನೀಡುತ್ತಿದ್ದ ಅವರು, 'ರಾಮಾಯಣಾಚಾರ್ಯರು' ಎಂದೇ ಜನಜನಿತರಾಗಿದ್ದರು.



ಪ್ರೊ.ಕೆ.ಎಸ್. ನಾರಾಯಣಾಚಾರ್ಯ




ಎಚ್.ಎಸ್. ದೊರೆಸ್ವಾಮಿ



ಪ್ರೊ.ಜಿ.ವೆಂಕಟಸುಬ್ಬಯ್ಯ



ಸಿದ್ದಲಿಂಗಯ್ಯ



ಶಿವರಾಂ



ಲಕ್ಷ್ಮೀನಾರಾಯಣ ಭಟ್ಟ



ಜಯಂತಿ

ಚಲನಚಿತ್ರ ಕ್ಷೇತ್ರದ ಪ್ರಮುಖರು

- ನಟಿ ಪ್ರತಿಮಾ ದೇವಿ (88) ಏಪ್ರಿಲ್‌ನಲ್ಲಿ ನಿಧನರಾದರು.
- ನಟ ಶಂಖನಾದ ಅರವಿಂದ (70), ನಿರ್ದೇಶಕ ಅಭಿರಾಮ್ (34), ಚಲನಚಿತ್ರ ಸಾಹಿತಿ ಶ್ರೀರಂಗ (86) ಅವರು ಮೇ ತಿಂಗಳಲ್ಲಿ ನಿಧನರಾದರು.
- ಪೋಷಕ ನಟ ಸುರೇಶಚಂದ್ರ (69) ಅವರು ಜೂ.11ರಂದು ನಿಧನರಾದರು.
- ರಸ್ತೆ ಅಪಘಾತದಲ್ಲಿ ನಟ ಸಂಚಾರಿ ವಿಜಯ್ (42) ಅವರು ಜೂ.15ಕ್ಕೆ ನಿಧನರಾದರು. ಅವರು ಅಂಗಾಂಗಗಳನ್ನು ದಾನ ಮಾಡಿದ್ದರು.



ಸಂಚಾರಿ ವಿಜಯ್

- ಪಾರ್ಶ್ವವಾಯು ಪೀಡಿತರಾಗಿದ್ದ ಪೋಷಕ ನಟ ಬಿ. ಜಯಾ (76) ಅವರು ಜೂನ್ ತಿಂಗಳಲ್ಲಿ ನಿಧನರಾದರು
- 'ಅಭಿನಯ ಶಾರದೆ' ಎಂದೇ ಜನಪ್ರಿಯರಾಗಿದ್ದ ನಟಿ ಜಯಂತಿ (76) ಅವರು ಜುಲೈ 26ರಂದು ನಿಧನರಾದರು. ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸಿದ್ದರು. ಸುಮಾರು 500 ಚಿತ್ರಗಳಲ್ಲಿ ನಟಿಸಿದ್ದಾರೆ.
- ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲಿದ್ದ ಸತ್ಯಜಿತ್ (72) ಅವರು ಅ.10ರಂದು ನಿಧನರಾದರು. ವಯೋಸಹಜ ಅನಾರೋಗ್ಯದ ಸಮಸ್ಯೆಗಳ ಜೊತೆ 2016ರಲ್ಲಿ ಗ್ಯಾಂಗ್ರಿನ್‌ಗೆ ತುತ್ತಾಗಿ, ಒಂದು ಕಾಲನ್ನು ಅವರು ಕಳೆದುಕೊಂಡಿದ್ದರು.
- ಹೃದಯ ಸ್ತಂಭನದಿಂದ ನಟ ಪುನೀತ್ ರಾಜ್‌ಕುಮಾರ್ (46) ಅವರು ಅ.29ರಂದು ನಿಧನರಾದರು. ಅವರು 29 ಚಿತ್ರಗಳಲ್ಲಿ ನಾಯಕ ನಟನಾಗಿ ನಟಿಸಿದ್ದರು. ಅವರ ಕಣ್ಣುಗಳನ್ನು ದಾನವಾಗಿ ಪಡೆದಿದ್ದ ನಾರಾಯಣ ನೇತ್ರಾಲಯ, ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ನಾಲ್ವರಿಗೆ ದೃಷ್ಟಿ ನೀಡಿದೆ.



ಪುನೀತ್ ರಾಜ್‌ಕುಮಾರ್

- ಮನೆಯಲ್ಲಿ ಬಿದ್ದು, ಮಿದುಳಿಗೆ ತೀವ್ರ ಗಾಯಮಾಡಿಕೊಂಡಿದ್ದ ನಟ ಶಿವರಾಂ (83) ಅವರು ಡಿ.4ಕ್ಕೆ ನಿಧನರಾದರು. ಆರು ದಶಕ ಸಿನಿಮಾ ರಂಗದಲ್ಲಿ ಬಣ್ಣ ಹಚ್ಚಿದ್ದ ಅವರು ಶಿವರಾಮಣ್ಣ ಎಂದೇ ಖ್ಯಾತಿ ಪಡೆದಿದ್ದರು.
- ನಿರ್ದೇಶಕ ಕೆ.ವಿ. ರಾಜು (67) ಅವರು ಡಿಸೆಂಬರ್‌ನಲ್ಲಿ ನಿಧನರಾದರು. ಬೆಳ್ಳಿ ಕಾಲುಂಗುರ, ಯುದ್ಧಕಾಂಡ ಸೇರಿದಂತೆ 50ಕ್ಕೂ ಅಧಿಕ ಚಿತ್ರಗಳನ್ನು ನಿರ್ದೇಶಿಸಿದ್ದರು.

ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರಿಂದ ರಾಜಭವನ ಮುತ್ತಿಗೆಗೆ ಯತ್ನ

ಎಂಇಎಸ್, ಶಿವಸೇನಾ ನಿಷೇಧಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಹಾಗೂ ಶಿವಸೇನಾವನ್ನು ರಾಜ್ಯದಲ್ಲಿ ನಿಷೇಧಿಸಬೇಕು' ಎಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣ ಗೌಡ ಬಣದ ಕಾರ್ಯಕರ್ತರು ನಗರದಲ್ಲಿ ಗುರುವಾರ ಭಾರಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪುರಭವನದ ಎದುರು ಸೇರಿದ್ದ ನೂರಾರು ಕಾರ್ಯಕರ್ತರು, 'ಮಹಾರಾಷ್ಟ್ರ ಸರ್ಕಾರದ ಗುಲಾಮ ಸಂಘಟನೆ ಎಂಇಎಸ್‌ಗೆ ಧಿಕ್ಕಾರ', 'ಸಂವಿಧಾನ ವಿರೋಧಿ ಎಂಇಎಸ್‌ಗೆ ಧಿಕ್ಕಾರ', 'ಒಕ್ಕೂಟ ವ್ಯವಸ್ಥೆಯ ವಿರೋಧಿ ಶಿವಸೇನಾಗೆ ಧಿಕ್ಕಾರ', 'ಎಂಇಎಸ್ ವಿಚಾರದಲ್ಲಿ ಮೌನ ಧೋರಣೆ ತಳೆದಿರುವ ಬೆಳಗಾವಿಯ ರಾಜಕಾರಣಿಗಳಿಗೆ ಧಿಕ್ಕಾರ', 'ಬೆಳಗಾವಿ ನಮ್ಮದು' ಎಂಬ ಘೋಷಣೆಗಳನ್ನು ಕೂಗಿದರು. ಮೆರವಣಿಗೆ ಸಾಗಿದ ಮಾರ್ಗದಲ್ಲಿ ಕನ್ನಡ ಧ್ವಜಗಳು ರಾರಾಜಿಸಿದವು.

ಪ್ರತಿಭಟನಾಕಾರರ ಬಂಧನ: ರ್‍ಯಾಲಿಯು ಮೈಸೂರು ಬ್ಯಾಂಕ್ ವೃತ್ತ ಪ್ರವೇಶಿಸುತ್ತಿದ್ದಂತೆ ಪ್ರತಿಭಟನಾಕಾರರನ್ನು ಪೊಲೀಸ್ ಸಿಬ್ಬಂದಿ ತಡೆದರು. ಈ ವೇಳೆ ಸಿಬ್ಬಂದಿ ಹಾಗೂ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ತಳ್ಳಾಟ–ನೂಕಾಟವೂ ಏರ್ಪಟ್ಟಿತ್ತು. ಮುನ್ನೆಚ್ಚರಿಕೆಯ ದೃಷ್ಟಿಯಿಂದ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿದರು.

'ಶಿವಸೇನಾ ಮತ್ತು ಎಂಇಎಸ್ ನಿಷೇಧಿಸಬೇಕೆಂಬ ಒತ್ತಾಯ ಎರಡು ದಶಕಗಳಿಂದಲೂ ಕೇಳಿ ಬರುತ್ತಿದೆ. ಈ ವಿಚಾರದಲ್ಲಿ ನಮ್ಮ ಸಂಘಟನೆಯು ಎಲ್ಲಾ ಸರ್ಕಾರಗಳ ಮೇಲೆ ಹಲವು ಬಾರಿ ಒತ್ತಡವನ್ನೂ ಹೇರಿದೆ. ಹೀಗಿದ್ದರೂ ಬೆಳಗಾವಿಯಲ್ಲಿ ನೆಲೆಸಿರುವ ಕಿಡಿಗೇಡಿಗಳನ್ನು ಓಲೈಸುವ ಸಲುವಾಗಿ ಸರ್ಕಾರಗಳು ನಮ್ಮ ಹೋರಾಟಕ್ಕೆ ಮನ್ನಣೆ ನೀಡಿರಲಿಲ್ಲ. ಹೀಗಾಗಿ ಶಿವಸೇನಾ ಹಾಗೂ ಎಂಇಎಸ್, ಕರ್ನಾಟಕದಲ್ಲಿ ಗಟ್ಟಿಯಾಗಿ ಬೇರೂರಲು ಸಾಧ್ಯವಾಯಿತು' ಎಂದು ಕರವೇ ರಾಜ್ಯ ಘಟಕದ ಅಧ್ಯಕ್ಷ ನಾರಾಯಣ ಗೌಡ ಕಿಡಿಕಾರಿದರು.

'ಎಂಇಎಸ್ ಹಾಗೂ ಶಿವಸೇನಾ ಸಂಘಟನೆಗಳಿಗೆ ಸೇರಿದ ಕಿಡಿಗೇಡಿಗಳು ಕನ್ನಡದ ಭಾವುಟವನ್ನು ಸುಟ್ಟು ಹಾಕಿದ್ದಾರೆ. ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಧ್ವಂಸಗೊಳಿಸಿದ್ದಾರೆ. ಬಸವಣ್ಣನವರ ಭಾವಚಿತ್ರಕ್ಕೆ ಮಸಿ ಬಳಿದಿದ್ದಾರೆ. ಮತ ಬ್ಯಾಂಕ್‌ಗಾಗಿ ಅವರನ್ನು ಓಲೈಸುವುದನ್ನು ಬಿಟ್ಟು ಈಗಲಾದರೂ ಕಠಿಣ ಕ್ರಮ ಕೈಗೊಳ್ಳಬೇಕು. ಎಂಇಎಸ್ ನಿಷೇಧದ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರದ ಮೇಲೆ ಒತ್ತಡ ಹೇರಬೇಕು' ಎಂದು ಆಗ್ರಹಿಸಿದರು.

ಪೊಲೀಸ್ ಬಿಗಿ ಬಂದೋಬಸ್ತ್: ಪ್ರತಿಭಟನೆಯ ವೇಳೆ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ರ್‍ಯಾಲಿ ಸಾಗುವ ಹಾದಿಯ ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು.

ಕೇಂದ್ರ ವಿಭಾಗದ ಡಿಸಿಪಿ ಅನುಚೇತ್ ನೇತೃತ್ವದಲ್ಲಿ 2,000ಕ್ಕೂ ಅಧಿಕ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಮೂರಕ್ಕೂ ಹೆಚ್ಚು ಕೆಎಸ್‌ಆರ್‌ಪಿ ತುಕಡಿಯನ್ನೂ ಭದ್ರತೆಗೆ ಹಾಕಲಾಗಿತ್ತು.



ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣ ಗೌಡ ಬಣ) ಕಾರ್ಯಕರ್ತರು ನಗರದಲ್ಲಿ ಗುರುವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು –ಪ್ರಜಾವಾಣಿ ಚಿತ್ರ

---

7 ಆರೋಪಿಗಳನ್ನು ಬಂಧಿಸಿದ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು

ಅರ್ಚನಾ ರೆಡ್ಡಿ ಕೊಲೆ: ಮಗಳೇ ಆರೋಪಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೆಲ ದಿನಗಳ ಹಿಂದೆ ನಡೆದಿದ್ದ ಅರ್ಚನಾ ರೆಡ್ಡಿ ಕೊಲೆ ಪ್ರಕರಣ ಬೇಧಿಸಿರುವ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು, ಮೃತ ಮಹಿಳೆಯ ಪುತ್ರಿ ಯುವಿಕಾ ರೆಡ್ಡಿ, ಎರಡನೇ ಪತಿ ನವೀನ್ ಕುಮಾರ್, ಆಕೆಯ ಸಹಚರ ಸಂತೋಷ್ ಸೇರಿ 7 ಮಂದಿಯನ್ನು ಬಂಧಿಸಿದ್ದಾರೆ.

'ಬಿ.ಕಾಂ. ವ್ಯಾಸಂಗ ಮಾಡುತ್ತಿದ್ದ 21 ವರ್ಷದ ಯುವಿಕಾ, ನವೀನ್ ಜೊತೆ ಸೇರಿ ತನ್ನ ತಾಯಿಯ ಹತ್ಯೆಗೆ ಸಂಚು ರೂಪಿಸಿದ್ದಳು. ಅರ್ಚನಾ ಹೆಸರಿನಲ್ಲಿ ನೂರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿಯಿತ್ತು. ಅದನ್ನು ಕಬಳಿಸಿ ವಿಲಾಸಿ ಬದುಕು ನಡೆಸಲು ನಿರ್ಧರಿಸಿದ್ದ ಆರೋಪಿಗಳು, ಕೊಲೆಗೆ ನಿರ್ಧರಿಸಿದ್ದರು. ಘಟನಾ ಸ್ಥಳದ ಸುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಗಳ ಆಧಾರದಲ್ಲಿ ಎಲ್ಲರನ್ನೂ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಇಬ್ಬರೊಂದಿಗೆ ಸಂಸಾರ: 'ಮೃತ ಅರ್ಚನಾ, ಅರವಿಂದ್ ಎಂಬುವರ ಜೊತೆ ಮದುವೆಯಾಗಿ, 10 ವರ್ಷಗಳು ಸಂಸಾರ ನಡೆಸಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದರು. ಮೊದಲ ಪತಿಯಿಂದ ವಿಚ್ಛೇದನ ಪಡೆದಿದ್ದ ಅವರಿಗೆ ₹15 ಕೋಟಿ ಜೀವನಾಂಶವೂ ಸಿಕ್ಕಿತ್ತು. ಬಳಿಕ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ಅವರಿಗೆ ಸಿದ್ದಿಕ್ ಎಂಬಾತನ ಪರಿಚಯವಾಗಿತ್ತು. ಎರಡೇ ವರ್ಷಕ್ಕೆ ಆತನೊಂದಿಗಿನ ಸಂಬಂಧವೂ ಮುರಿದುಬಿದ್ದಿತ್ತು. ಬಳಿಕ ಜಿಮ್ ತರಬೇತುದಾರನಾಗಿದ್ದ ನವೀನ್ ಜೊತೆ ಸಖ್ಯ ಬೆಳೆದಿತ್ತು. ಅರ್ಚನಾ ಆಸ್ತಿ ಮೇಲೆ ಕಣ್ಣಿಟ್ಟಿದ್ದ ನವೀನ್ ಆಕೆಯನ್ನು ವಿವಾಹವಾಗಲು ತೀರ್ಮಾನಿಸಿದ್ದ' ಎಂದು ಪೊಲೀಸರು ಮಾಹಿತಿ ನೀಡಿದರು.

'ಮಗಳು ಯುವಿಕಾ ಜೊತೆ ನವೀನ್ ಸಲುಗೆ ಬೆಳೆಸಿದ್ದ ವಿಚಾರ ಅರ್ಚನಾಗೆ ಗೊತ್ತಾಗಿತ್ತು. ಈ ವಿಚಾರವಾಗಿ ಇಬ್ಬರ ನಡುವೆ ಜಗಳ ನಡೆದಿತ್ತು. ಯುವಿಕಾ ಜೊತೆ ನವೀನ್ ಸುತ್ತಾಟ ಕೂಡ ಶುರುಮಾಡಿದ್ದ. ಇಬ್ಬರನ್ನೂ ಕರೆಸಿ ಎಚ್ಚರಿಕೆ ನೀಡಿದ್ದರು. ಹೀಗಿದ್ದರೂ ನವೀನ್, ಯುವಿಕಾ ಜೊತೆ ಸುತ್ತಾಡುವುದನ್ನು ನಿಲ್ಲಿಸಿರಲಿಲ್ಲ. ಹೀಗಾಗಿ ಅರ್ಚನಾ, ಆತನ ವಿರುದ್ಧ ಜಿಗಣಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆತನನ್ನು ಠಾಣೆಗೆ ಕರೆಸಿದ್ದ ಪೊಲೀಸರು ಎಚ್ಚರಿಕೆ ನೀಡಿ ಕಳುಹಿಸಿದ್ದರು. ಬಳಿಕ ಆತ ಯುವಿಕಾಳನ್ನು ಕರೆದುಕೊಂಡು ಪರಾರಿಯಾಗಿದ್ದ. ಇದರಿಂದ ಸಿಟ್ಟಿಗೆದ್ದಿದ್ದ ಅರ್ಚನಾ, ಯುವಿಕಾಳ ಬ್ಯಾಂಕ್ ಖಾತೆಗಳನ್ನೆಲ್ಲಾ ಬಂದ್ ಮಾಡಿಸಿದ್ದರು. ಇದರಿಂದ ಕೆರಳಿದ್ದ ಆರೋಪಿಗಳು ಅರ್ಚನಾ ಹತ್ಯೆಗೆ ಸಂಚು ರೂಪಿಸಿದ್ದರು' ಎಂದು ಮಾಹಿತಿ ನೀಡಿದರು.

'ಅಕ್ಕನ ಜೊತೆ ನವೀನ್ ಸಲುಗೆ ಹೊಂದಿದ್ದ. ಇದನ್ನು ಅಮ್ಮ ಪ್ರಶ್ನಿಸಿದ್ದರು. ಹೀಗಾಗಿ ಅವರೆಲ್ಲಾ ಸೇರಿ ಕೊಲೆ ಮಾಡಿದ್ದಾರೆ ಎಂದು ಅರ್ಚನಾ ಅವರ ಪುತ್ರ ಎಲೆಕ್ಟ್ರಾನಿಕ್ ಸಿಟಿ ಠಾಣೆಯಲ್ಲಿ ದೂರು ದಾಖಲಿಸಿದ್ದ. ಅರ್ಚನಾ ಹೆಸರಿನಲ್ಲಿ ಜಿಗಣಿಯಲ್ಲೊಂದು ಐಷಾರಾಮಿ ಮನೆ, ನಿವೇಶನಗಳು, ಚನ್ನಪಟ್ಟಣದಲ್ಲಿ ಹತ್ತಾರು ಎಕರೆ ಆಸ್ತಿ, ಎಚ್‌ಎಸ್‌ಆರ್ ಬಡಾವಣೆಯಲ್ಲಿ ನಿವೇಶನ, ಬೆಳ್ಳಂದೂರಿನಲ್ಲಿ ಐಷಾರಾಮಿ ಮನೆ ಇತ್ತು. ಅವುಗಳ ಮೇಲೆ ಆರೋಪಿಗಳ ಕಣ್ಣು ಬಿದ್ದಿತ್ತು' ಎಂದು ಹೇಳಿದರು.

ಪೊಲೀಸರ ಕಾರ್ಯನಿರ್ವಹಣಾ ಮಾರ್ಗಸೂಚಿಗಳ ಬಿಡುಗಡೆ

'ಪೊಲೀಸ್ ವ್ಯವಸ್ಥೆ ಸದೃಢತೆಗೆ ಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಸದೃಢಗೊಳಿಸಲು ಸರ್ಕಾರ ಬದ್ಧವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುಗಮ, ಸುರಕ್ಷಿತ ಸಂಚಾರಕ್ಕಾಗಿ ಬೆಂಗಳೂರು ಸಂಚಾರ ಪೊಲೀಸ್ ಜಾರಿಗೆ ತಂದಿರುವ ತಂತ್ರಜ್ಞಾನ ಆಧಾರಿತ ಸೌಲಭ್ಯಗಳು ಮತ್ತು ಸಂಚಾರ ಬೀಟ್ ವ್ಯವಸ್ಥೆ, ಸಂಚಾರ ಪೊಲೀಸರ ಕಾರ್ಯನಿರ್ವಹಣಾ ಮಾರ್ಗಸೂಚಿಗಳನ್ನು ಗುರುವಾರ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

'ವಾಹನದಟ್ಟಣೆ ಇರುವ ರಸ್ತೆಗಳಲ್ಲಿ ಸಂಚಾರ ಸುಗಮಗೊಳಿಸುವ ಉದ್ದೇಶದಿಂದ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲು ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಜೊತೆಗೆ ಅಪರಾಧ ಕೃತ್ಯಗಳು ನಡೆಯದಂತೆ ನಿಗಾ ವಹಿಸುವ ಜೊತೆಗೆ, ಅಪರಾಧಗಳು ನಡೆದರೆ ಆರೋಪಿಗಳನ್ನು ಶೀಘ್ರ ಪತ್ತೆ ಹಚ್ಚಲು ಸಾಧ್ಯವಾಗುವಂತೆ ಕೃತಕ ಬುದ್ಧಿಮತ್ತೆಯ ಸಾಧನಗಳನ್ನು ಅಳವಡಿಸಲಾಗುತ್ತದೆ' ಎಂದರು.



ಕಾರ್ಯಕ್ರಮದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಸಂಚಾರಿ ಸ್ಪಂದನ' ಕೈಪಿಡಿಯನ್ನು ಸಂಚಾರ ವಿಭಾಗದ ಪೊಲೀಸರಿಗೆ ನೀಡಿದರು. ವಿಧಾನ ಪರಿಷತ್ ಸದಸ್ಯ ರಮೇಶ್ ಗೌಡ, ಶಾಸಕ ಸುರೇಶ್ ಕುಮಾರ್, ಡಿಜಿ ಮತ್ತು ಐಜಿಪಿ ಪ್ರವೀಣ್ ಸೂದ್ ಇದ್ದರು –ಪ್ರಜಾವಾಣಿ ಚಿತ್ರ

'ಯಾವ ರಸ್ತೆಯಲ್ಲಿ ಹೆಚ್ಚು ವಾಹನ ದಟ್ಟಣೆ ಇರುತ್ತದೆಯೋ ಆ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಮೊದಲು ಅವಕಾಶ ನೀಡಲು ತಂತ್ರಜ್ಞಾನ ಆಧಾರಿತ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ' ಎಂದರು.

ಪೊಲೀಸರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದ ಮುಖ್ಯಮಂತ್ರಿ, 'ಪೊಲೀಸರ ಶೇ 99ರಷ್ಟು ಒಳ್ಳೆಯ ಕೆಲಸವನ್ನು ನಾವು ಗುರುತಿಸಬೇಕು. ಸರ್ಕಾರ ಮತ್ತು ಸಮಾಜ ಸಂಪೂರ್ಣ ಈ ಸಮುದಾಯಕ್ಕೆ ಗೌರವ ಕೊಡಬೇಕು' ಎಂದರು.

'ಪೊಲೀಸ್ ವಸತಿ ಯೋಜನೆ– 2020 ಅನ್ನು ಈಗ ಆರಂಭಿಸಿದ್ದೇವೆ. ಪೊಲೀಸರಿಗೆ 10,475 ಮನೆ ಕಟ್ಟಲು ಉದ್ದೇಶಿಸಿದ್ದು, ಮೊದಲ ಹಂತ ಪೂರ್ಣಗೊಂಡಿದೆ. ಎರಡನೇ ಹಂತಕ್ಕೆ ಶೀಘ್ರ ಅನುಮೋದನೆ ನೀಡಲಿದ್ದೇವೆ. ಅಲ್ಲದೆ, ಮುಂದಿನ ವರ್ಷ ಅಂತ್ಯಕ್ಕೆ 16 ಸಾವಿರ ಪೊಲೀಸ್ ಹುದ್ದೆಗಳಿಗೆ ನೇಮಕಾತಿ ಮಾಡಲಾಗುವುದು' ಎಂದು ಹೇಳಿದರು.

ಮಗಳನ್ನು ಹುಡುಕಿಕೊಡಿ: ಟ್ವಿಟರ್‌ನಲ್ಲಿ ಪೋಷಕರ ಮನವಿ

ಬೆಂಗಳೂರು: 'ಅರೆ ಪ್ರಜ್ಞಾವಸ್ಥೆಯಲ್ಲಿ ಆತ್ಮಗಳ ಜೊತೆ ಮಾತನಾಡುತ್ತೇವೆ ಎಂದು ಹೇಳಿಕೊಳ್ಳುವ ಪಂಥದೆಡೆ ಆಕರ್ಷಿತಳಾಗಿದ್ದಾಳೆ' ಎನ್ನಲಾಗಿದ್ದ ಬಾಲಕಿಯೊಬ್ಬಳು ಮನೆಯಿಂದ ನಾಪತ್ತೆಯಾಗಿದ್ದು, ಹುಡುಕಿಕೊಡುವಂತೆ ಆಕೆಯ ಪೋಷಕರು ಟ್ವಿಟರ್‌ನಲ್ಲಿ ಮನವಿ ಮಾಡಿದ್ದಾರೆ.

ಸುಬ್ರಹ್ಮಣ್ಯನಗರದಲ್ಲಿ ಪೋಷಕರೊಂದಿಗೆ ವಾಸವಿದ್ದ 17 ವರ್ಷದ ಅನುಷ್ಕಾ, ಅಕ್ಟೋಬರ್ 31ರಂದು ಮನೆಯಿಂದ ಕಾಣೆಯಾಗಿದ್ದಳು. ಈ ಸಂಬಂಧ ಪೋಷಕರು ಪೊಲೀಸರಿಗೆ ದೂರು ನೀಡಿದ್ದರು. ಒಬ್ಬಳೇ ಮಗಳು ಮನೆಬಿಟ್ಟು ಹೋಗಿ ಎರಡು ತಿಂಗಳಾಗಿದ್ದು, ಸುಳಿವು ಸಿಕ್ಕಿಲ್ಲ. ಅಸಹಾಯಕರಾಗಿರುವ ಪೋಷಕರು ಈಗ ಟ್ವಿಟರ್‌ನಲ್ಲಿ ಮನವಿ ಮಾಡಿದ್ದಾರೆ.

'ಎರಡು ಜೊತೆ ಬಟ್ಟೆ, ₹2,500 ನಗದಿನೊಂದಿಗೆ ಹೋಗಿದ್ದ ಮಗಳು ಇನ್ನೂ ಪತ್ತೆಯಾಗಿಲ್ಲ. ಆಕೆ ನಮ್ಮನ್ನು ತುಂಬಾ ಪ್ರೀತಿಸುತ್ತಿದ್ದಳು. ಎಲ್ಲೇ ಇದ್ದರೂ ಮನೆಗೆ ಮರಳುತ್ತಾಳೆ' ಎಂದು ಅನುಷ್ಕಾ ಅವರ ತಾಯಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. 'ಆಕೆಯ ವರ್ತನೆಯಲ್ಲಿ ಬದಲಾವಣೆಯಾಗಿತ್ತು. ಕೊಠಡಿಯಲ್ಲಿ ಏಕಾಂತದಲ್ಲೇ ಇರಲು ಬಯಸುತ್ತಿದ್ದಳು. ನಮ್ಮ ಜೊತೆ ಏನನ್ನೂ ಹಂಚಿಕೊಳ್ಳುತ್ತಿರಲಿಲ್ಲ. ಗಾಬರಿಗೊಂಡು ಈ ವರ್ಷದ ಸೆಪ್ಟೆಂಬರ್‌ನಲ್ಲಿ ಮನೋವೈದ್ಯರ ಬಳಿ ಕರೆದೊಯ್ದಿದ್ದೆವು' ಎಂದು ಅನುಷ್ಕಾ ಅವರ ತಂದೆ ಅಭಿಷೇಕ್ ತಿಳಿಸಿದ್ದಾರೆ.

ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣಳಾಗಿದ್ದ ಆಕೆ, ಅಧ್ಯಾತ್ಮದತ್ತ ಆಕರ್ಷಿತಳಾಗಿದ್ದಳು. ಅದಕ್ಕೆ ಸಂಬಂಧಿಸಿದ ವಿಡಿಯೊಗಳನ್ನೇ ಹೆಚ್ಚಾಗಿ ವೀಕ್ಷಿಸುತ್ತಿದ್ದಳು ಎಂದು ಹೇಳಲಾಗಿದೆ.

'ಬಾಲಕಿ ಸುಬ್ರಹ್ಮಣ್ಯನಗರದಿಂದ ಆಟೊ ಹಿಡಿದು ಹೊರಮಾವು ಬಳಿ ಹೋಗಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅಲ್ಲಿಂದ ಆಕೆ ಎಲ್ಲಿ ಹೋಗಿದ್ದಾಳೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ನ.1ರಂದು ಪೋಷಕರು ದೂರು ನೀಡಿದ್ದರು. ತನಿಖೆ ನಡೆಸುತ್ತಿದ್ದೇವೆ' ಎಂದು ಬೆಂಗಳೂರು ಉತ್ತರ ವಿಭಾಗದ ಡಿಸಿಪಿ ವಿನಾಯಕ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

ದಟ್ಟಮಂಜಿನಿಂದ ಸರಣಿ ಅಪಘಾತ

ಬೆಂಗಳೂರು: ದಟ್ಟ ಮಂಜು ಕವಿದಿದ್ದರಿಂದ ತುಮಕೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಟಿ.ಬೇಗೂರು ಕ್ರಾಸ್ ಬಳಿ ಮುಂಜಾವಿನಲ್ಲಿ ಬಸ್, ಸರಕು ಸಾಗಣೆ ವಾಹನ ಹಾಗೂ ಕಾರುಗಳ ನಡುವೆ ಸರಣಿ ಅಪಘಾತ ಸಂಭವಿಸಿದ್ದು, 12 ಮಂದಿ ಗಾಯಗೊಂಡಿದ್ದಾರೆ. ಒಂಬತ್ತು ವಾಹನಗಳು ಜಖಂಗೊಂಡಿವೆ.

'ಮಂಜು ಕವಿದಿದ್ದರಿಂದ ಎದುರಿನ ವಾಹನ ಸ್ಪಷ್ಟವಾಗಿ ಗೋಚರಿಸಿರಲಿಲ್ಲ. ತುಮಕೂರಿನಿಂದ ನಗರಕ್ಕೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಚಾಲಕ ದಿಢೀರ್ ಬ್ರೇಕ್ ಹಾಕಿದ್ದರು. ಹಿಂದಿನಿಂದ ವೇಗವಾಗಿ ಬಂದ ಲಾರಿ ಬಸ್‌ಗೆ ಡಿಕ್ಕಿ ಹೊಡೆದಿತ್ತು. ಲಾರಿಯ ಹಿಂದೆ ಬರುತ್ತಿದ್ದ ಖಾಸಗಿ ಬಸ್, ಕಾರು, ತರಕಾರಿ ತುಂಬಿದ್ದ ಲಾರಿ ಸೇರಿದಂತೆ ಒಂಬತ್ತು ವಾಹನಗಳ ನಡುವೆ ಸರಣಿ ಡಿಕ್ಕಿ ಏರ್ಪಟ್ಟಿತ್ತು' ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಡಿಕ್ಕಿಯ ರಭಸಕ್ಕೆ ಲಾರಿ ಹಾಗೂ ಇತರ ವಾಹನಗಳು ರಸ್ತೆ ವಿಭಜಕದ ಮೇಲೇರಿದ್ದವು. ಕೆಲ ವಾಹನಗಳು ರಸ್ತೆಗೆ ಅಡ್ಡಲಾಗಿ ನಿಂತಿದ್ದವು. ಹೀಗಾಗಿ ಸಂಚಾರ ದಟ್ಟಣೆ ಉಂಟಾಗಿತ್ತು. ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಇದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಗೋವಾದಿಂದ ಬೆಂಗಳೂರಿಗೆ ಬರುತ್ತಿದ್ದ ಖಾಸಗಿ ಬಸ್ ಚಾಲಕನ ಕಾಲಿನ ಮೂಳೆ ಮುರಿದಿದೆ. ಅದೇ ಬಸ್‌ನಲ್ಲಿದ್ದ ಬಿಹಾರ, ಕಾರವಾರ ಹಾಗೂ ಯಲ್ಲಾಪುರ ಮೂಲದ ಪ್ರಯಾಣಿಕರಿಗೆ ಗಾಯಗಳಾಗಿವೆ. ಎಲ್ಲರನ್ನೂ ನೆಲಮಂಗಲ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಲಾಗಿದೆ. ಬಳಿಕ ಕೆಲವರು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ' ಎಂದರು. 'ನುಜ್ಜುಗುಜ್ಜಾಗಿದ್ದ ವಾಹನಗಳನ್ನು ಕ್ರೇನ್‌ನಿಂದ ಬೇರ್ಪಡಿಸಲಾಗಿದೆ. ವಿವಿಧೆಡೆಯಿಂದ ನಗರಕ್ಕೆ ಬರುತ್ತಿದ್ದ ವಾಹನಗಳು ಕಿ.ಮೀ.ನಷ್ಟು ದೂರ ಸಾಲುಗಟ್ಟಿ ನಿಂತಿದ್ದವು. ದಟ್ಟಣೆ ನಿಯಂತ್ರಿಸಲು ಹೆದ್ದಾರಿಯ ಬಲಭಾಗದ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗಿತ್ತು' ಎಂದರು.

ಪ್ರಯಾಣಿಕರ ಪರದಾಟ: 'ವಾಹನ ದಟ್ಟಣೆ ನಿಯಂತ್ರಿಸಲು ನೆಲಮಂಗಲದ ಸಂಚಾರ ಪೊಲೀಸರು ಹರಸಾಹಸ ಪಟ್ಟರು. ಪ್ರಯಾಣಿಕರರಿಗೂ ಸಮಸ್ಯೆಯಾಯಿತು. ಬೆಳಿಗ್ಗೆ 11 ಗಂಟೆ ಸುಮಾರಿಗೆ ಸಂಚಾರ ಸಹಜ ಸ್ಥಿತಿಗೆ ಮರಳಿತು' ಎಂದರು.

ಪಿಎಸ್‌ಐಗೆ ಚಾಕು ಇರಿತ, ಪರಾರಿ

ಬೆಂಗಳೂರು: ಆರೋಪಿಯೊಬ್ಬ ತನ್ನನ್ನು ಬಂಧಿಸಲು ಬಂದಿದ್ದ ಪೊಲೀಸ್ ಸಿಬ್ಬಂದಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ. ಈ ಸಂಬಂಧ ಸಂಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಯಶವಂತಪುರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ವಿನೋದ್ ರಾಥೋಡ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಳ್ಳತನ ಪ್ರಕರಣವೊಂದರಲ್ಲಿ ಪೊಲೀಸರಿಗೆ ಬೇಕಿದ್ದ ಆರೋಪಿಯು ನಮ್ಮ ಠಾಣೆ ವ್ಯಾಪ್ತಿಯ ಭೂಪಸಂದ್ರ–ಹೆಬ್ಬಾಳ ರಸ್ತೆಯಲ್ಲಿರುವ ತೋಟದ ಮನೆಯ ಬಳಿ ಇರುವ ಕುರಿತು ವಿನೋದ್ ಅವರಿಗೆ ಮಾಹಿತಿ ಲಭಿಸಿತ್ತು. ಹೀಗಾಗಿ ಸಿಬ್ಬಂದಿಯೊಂದಿಗೆ ರಾತ್ರಿ 11 ಗಂಟೆ ಸುಮಾರಿಗೆ ಸ್ಥಳಕ್ಕೆ ಹೋಗಿದ್ದರು. ಈ ವೇಳೆ ಪರಾರಿಯಾಗಲು ಯತ್ನಿಸಿದ ಆರೋಪಿ, ಅವರ ಭುಜಕ್ಕೆ ಚುಚ್ಚಿ ಅಲ್ಲಿಂದ ಪಾರಾರಿಯಾದ' ಎಂದು ಅವರು ಹೇಳಿದ್ದಾರೆ.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ
ನಂ.ಪಂರಾಇಂವಿ/ಹಾವೇರಿ/ಪಿಬಿ–2/ಟೆಂಡರ್/2021–22/4281 ದಿನಾಂಕ : 28–12–2021

(ಟೆಂಡರ ಪ್ರಕಟಣೆ 1ನೇ ಕರೆ)
(E.GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

5054 ವಿಶೇಷ ಅಭಿವೃದ್ಧಿ ಅನುದಾನ ಲೆಕ್ಕ ಶೀರ್ಷಿಕೆಗಳಡಿ ಮಂಜೂರುಗೊಂಡ ಬ್ಯಾಡಗಿ ತಾಲೂಕಿನ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ.
1) ಬ್ಯಾಡಗಿ ತಾಲೂಕಿನ ಬುಡಪನಹಳ್ಳಿ–ದೇವರಗುಡ್ಡ ರಸ್ತೆ ಸುಧಾರಣೆ (INDENT-87567)
2) ಬ್ಯಾಡಗಿ ತಾಲೂಕಿನ ಕಾಗಿನೆಲೆ–ಬೆನಕನಹಳ್ಳಿ ರಸ್ತೆ ಸುಧಾರಣೆ (INDENT- 87569)
3) ಬ್ಯಾಡಗಿ ತಾಲೂಕಿನ ಬೀರನಕೊಪ್ಪ–ಸೂಡಂಬಿ ರಸ್ತೆ ಸುಧಾರಣೆ (INDENT-87564)
(1) ಟೆಂಡರ್ ಫಾರಂಗಳನ್ನು ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಪಡೆದುಕೊಳ್ಳಬಹುದಾದ ದಿನಾಂಕ : **28–12–2021.** (2) ಖಾಲಿ ಟೆಂಡರ್ ಫಾರಂಗಳಿಗಾಗಿ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **12–01–2022**ರ 16:00:00 ಗಂಟೆಯವರೆಗೆ (3) ಇ–ಪ್ರಾಕೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) : **13–01–2022,** 17:00:00 ಗಂಟೆಗೆ (4) ಇ–ಪ್ರಾಕೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) : **15–01–2022,** 11:00:00 ಗಂಟೆಗೆ

ಟೆಂಡರ್ ನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-Gok ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್ ಫಾರಂನಲ್ಲಿ **www.eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಯಲ್ಲಿ ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾಸಾಸಂಇ/ಹಾವೇರಿ/ಎಂ.ಸಿ.ಎ/339/2021–22 ಪಂ.ರಾ.ಇಂ. ವಿಭಾಗ, ಹಾವೇರಿ

ಕ–ರೈಡ್ K RIDE
ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: ಕ–ರೈಡ್, ಸಂಪರ್ಕ ಸೌಧ, 1ನೇ ಮಹಡಿ, ಓರಿಯನ್ ಮಾಲ್ ಎದುರು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010
ಟೆಲಿಫ್ಯಾಕ್ಸ್: 080–22370581/2: ಇ–ಮೇಲ್: dgm@kride.in
CIN: U60100KA2000PLC028171
ಸಂ: ಕೆ–ರೈಡ್/ಆಡಳಿತ/ನಿರ್ದೇಶಕರು(ಪಿ&ಪಿ)/2021 ದಿ: 31.12.2021

ಹುದ್ದೆಯ ಸಂಖ್ಯೆ : 105/2021

ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಸಹಭಾಗಿತ್ವದ ಕಂಪನಿಯಾದ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ (ಕೆ–ರೈಡ್) ಇವರು **ಬೆಂಗಳೂರು ಉಪನಗರ ರೈಲು ಯೋಜನೆ ಮತ್ತು ರೈಲು ದ್ವಿಪಥೀಕರಣ ಯೋಜನೆಗಳನ್ನು** ಕೈಗೊಂಡಿದ್ದು ನಿಯೋಜನೆ ಮೇರೆಗೆ

ನಿರ್ದೇಶಕರು (ಪ್ರಾಜೆಕ್ಟ್ ಮತ್ತು ಪ್ಲಾನಿಂಗ್)

18 ವರ್ಷಗಳ ಗ್ರೂಪ್ 'ಎ' ಒಳಗೊಂಡಂತೆ ಎನ್‌ಎಲ್/ಜೆಸಿ/ಡಿಎಲ್/ಮೆಟ್ರೋ ಯೋಜನೆ ನಿರ್ಮಾಣ ಕಾರ್ಯದಲ್ಲಿ 5 ವರ್ಷಗಳ ಅನುಭವ ಹೊಂದಿರುವ ಐಆರ್‌ಎಸ್‌ಇ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **03.02.2022.** ಹುದ್ದೆಗೆ ಸಂಬಂಧಿಸಿದ ಅಗತ್ಯ ಅರ್ಹತಾ ವಿವರಗಳು, ಆನ್‌ಲೈನ್ ಅರ್ಜಿ ಹಾಗೂ ಇತರೆ ಹೆಚ್ಚಿನ ಮಾಹಿತಿಗಾಗಿ ಕ–ರೈಡ್ ವೆಬ್‌ಸೈಟ್: **www.kride.in** ಅಥವಾ ರೈಲ್ವೆ ವೆಬ್‌ಸೈಟ್: **www.indianrailways.gov.in** ಗೆ ಭೇಟಿ ನೀಡಿ.

ವಾಸಾಸಂಇ/ಉನಿ.ನ/2589/ಎಂಸಿಎ/2021–22 ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕ–ರೈಡ್

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಚಿತ್ರದುರ್ಗ.
ಸಂ: ಕಾ.ಸಾ.ಚಿ/ಪಿ.ಬಿ–1/ಅ.ಟೆಂಡರ್ ಅವಧಿ ವಿಸ್ತರಣೆ/2021–22/1636
ದಿನಾಂಕ: 27.01.2022

ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ

ಉಲ್ಲೇಖ:1) ಸಂ: ಕಾ.ಸಾ.ಚಿ/ಪಿ.ಬಿ–1/ಟೆಂಡರ್ ಪ್ರಕಟಣೆ–ಐಎಫ್‌ಟಿ–08/2021–22/1212 ದಿನಾಂಕ: 24.09.2021

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 3 & 4 ನಿಬಂಧನೆಗಳಿಗೊಳಪಟ್ಟಂತೆ ಐ.ಎಫ್.ಟಿ.–08ರಲ್ಲಿ ಕರೆಯಲಾದ 05 ಕಾಮಗಾರಿಗಳ ಪೈಕಿ ಯಾವುದೇ ಕಾಮಗಾರಿಯನ್ನು ತಾಂತ್ರಿಕ ಕಾರಣಗಳಿಂದ ಇ–ಪೋರ್ಟಲ್‌ನಲ್ಲಿ ಪ್ರಚುರಪಡಿಸಲಾಗಿರುವುದಿಲ್ಲ. ಆದ್ದರಿಂದ ಐ.ಎಫ್.ಟಿ.–08ರಲ್ಲಿ ಕರೆಯಲಾದ 05 ಕಾಮಗಾರಿಗಳ ಪ್ರಚುರವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 03.01.2022ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 12.01.2022ರ ಸಾಯಂಕಾಲ 05:30ರ ವರೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 13.01.2022ರ ಸಾಯಂಕಾಲ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 14.01.2022ರ ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 17.01.2022ರ ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227ರಿಂದ ಪಡೆಯಬಹುದು.

RO No. 691: DIPR/CTA/MCA/2021-22 ಸಹಿ/– ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in
ಸಂಖ್ಯೆ: ಕರಾಮಾನಿಮಂ/97/ಹಿಪಅ/ಗಣಿ/ಪಸಾಸ/2021–22/5059 ದಿನಾಂಕ: 30.12.2021

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ. ಶ್ರೀ ಸಿಮೆಂಟ್ ಲಿಮಿಟೆಡ್ ರವರ **ಕೊಡ್ಲಾ ಸುಣ್ಣದಕಲ್ಲು ಗಣಿ** ಇವರು ಎಂ. ಎಲ್. ಸಂಖ್ಯೆ. **2673 ಮತ್ತು 2674, ಕೊಡ್ಲಾ ಮತ್ತು ಬೆನಕನಹಳ್ಳಿ ಗ್ರಾಮ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ**ಯಲ್ಲಿ 517.61 ಹೆಕ್ಟೇರ್ ಪ್ರದೇಶದಲ್ಲಿ ಸುಣ್ಣದಕಲ್ಲು ಗಣಿಗಾರಿಕೆಯ ಸಾಮರ್ಥ್ಯವನ್ನು 3.8 ಮಿಲಿಯನ್ ಟಿ.ಪಿ.ಎ.ಯಿಂದ 12.5 ಮಿಲಿಯನ್ ಟಿ.ಪಿ.ಎ.ಗೆ ಹೆಚ್ಚಿಸಲು, 0.1455 ಮಿಲಿಯನ್ ಟಿ.ಪಿ.ಎ. ಸಾಮರ್ಥ್ಯದ ಮಣ್ಣಿನ ಮೇಲುಭಾಗ, 1.1257 ಮಿಲಿಯನ್ ಟಿ.ಪಿ.ಎ. ಸಾಮರ್ಥ್ಯದ ಅತಿ ಹೊರೆ (ಒಟ್ಟು ಉತ್ಖನನ: 13.7712 ಮಿಲಿಯನ್ ಟಿ.ಪಿ.ಎ.) ಮತ್ತು ಹಾಲಿ ಇರುವ 1,200 ಟಿ.ಪಿ.ಹೆಚ್. ಸಾಮರ್ಥ್ಯದ ಒಂದು ಕ್ರಷರ್ ಮತ್ತು ವೊಬ್ಲರ್‌ನೊಂದಿಗೆ 1,200 ಟಿ.ಪಿ.ಹೆಚ್. ಸಾಮರ್ಥ್ಯದ ಕ್ರಷರ್ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ಕೇಂದ್ರ ಅರಣ್ಯ ಪರಿಸರ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ: F. No. J-11015/24/2021-IA.II(M) ದಿನಾಂಕ: 19.07.2021 ಮತ್ತು ದಿನಾಂಕ: 11.10.2021ರಂದು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕಳಕಂಡಂತಿವೆ:

1.	**ಕಂಪನಿಯ ಹೆಸರು ಮತ್ತು ವಿಳಾಸ: ಮೆ. ಶ್ರೀ ಸಿಮೆಂಟ್ ಲಿಮಿಟೆಡ್ (ಘಟಕ: ಕರ್ನಾಟಕ ಸಿಮೆಂಟ್ ಪ್ರೋಜೆಕ್ಟ್)** ಅಂ. ಕ. ಸಂಖ್ಯೆ: 01, ಕೊಡ್ಲಾ ಮತ್ತು ಬೆನಕನಹಳ್ಳಿ ಗ್ರಾಮ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ – 585 222
2.	**ಉದ್ದೇಶಿತ ಯೋಜನೆಯ ಸ್ಥಳ: ಮೆ. ಶ್ರೀ ಸಿಮೆಂಟ್ ಲಿಮಿಟೆಡ್ ರವರ ಕೊಡ್ಲಾ ಲೈಮ್–ಸ್ಟೋನ್ ಮೈನ್ ಗಣಿಗುತ್ತಿಗೆ ಸಂಖ್ಯೆ: 2673 ಮತ್ತು 2674, ಕೊಡ್ಲಾ ಮತ್ತು ಬೆನಕನಹಳ್ಳಿ ಗ್ರಾಮ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ**
3.	**ಉದ್ದೇಶಿಸಿದ ಯೋಜನೆಯ ಕಾರ್ಯ ಚಟುವಟಿಕೆ:** ಸುಣ್ಣದಕಲ್ಲು ಗಣಿಗಾರಿಕೆಯ ಸಾಮರ್ಥ್ಯವನ್ನು 3.8 ಮಿಲಿಯನ್ ಟಿ.ಪಿ.ಎ.ಯಿಂದ 12.5 ಮಿಲಿಯನ್ ಟಿ.ಪಿ.ಎ.ಗೆ ಹೆಚ್ಚಿಸಲು, 0.1455 ಮಿಲಿಯನ್ ಟಿ.ಪಿ.ಎ. ಸಾಮರ್ಥ್ಯದ ಮಣ್ಣಿನ ಮೇಲುಭಾಗ, 1.1257 ಮಿಲಿಯನ್ ಟಿ.ಪಿ.ಎ. ಸಾಮರ್ಥ್ಯದ ಅತಿ ಹೊರೆ (ಒಟ್ಟು ಉತ್ಖನನ: 13.7712 ಮಿಲಿಯನ್ ಟಿ.ಪಿ.ಎ.) ಮತ್ತು ಹಾಲಿ ಇರುವ 1,200 ಟಿ.ಪಿ.ಹೆಚ್. ಸಾಮರ್ಥ್ಯದ ಒಂದು ಕ್ರಷರ್ ಮತ್ತು ವೊಬ್ಲರ್‌ನೊಂದಿಗೆ 1,200 ಟಿ.ಪಿ.ಹೆಚ್. ಸಾಮರ್ಥ್ಯದ ಕ್ರಷರ್ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.
4.	**ಮಾಲಿನ್ಯ ನಿಯಂತ್ರಣ ಕ್ರಮಗಳು:** ಗಣಿ ಕಛೇರಿಯಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸೆಪ್ಟಿಕ್ ಟ್ಯಾಂಕ್‌ಗಳ ಮೂಲಕ ನೆನೆಸುವ ಹಳ್ಳಗಳಿಗೆ ಕಳುಹಿಸಲಾಗುತ್ತದೆ. ಮಣ್ಣಿನ ಸವೆತವನ್ನು ತಪ್ಪಿಸಲು ಮತ್ತು ಗಣಿ ಹೊಂಡಕ್ಕೆ ಮೇಲ್ಮೈಹರಿವು ಪ್ರವೇಶಿಸುವುದನ್ನು ತಡೆಯಲು ತಾತ್ಕಾಲಿಕ ಡಂಪ್‌ಗಳ ತುದಿಯಲ್ಲಿ ನೀರಿನ ರಂಧ್ರಗಳನ್ನು ಹೊಂದಿರುವ ಗೋಡೆಯೊಂದಿಗೆ ದಂಡೆ ಚರಂಡಿಗಳನ್ನು ನಿರ್ಮಿಸಲಾಗುವುದು. ಗಣಿ ಹೊಂಡಗಳಿಗೆ ನೇರವಾಗಿ ಬೀಳುವ ಮಳೆ ನೀರನ್ನು ಸಂಗ್ರಹಿಸಿ ತೋಟಕ್ಕೆ ಮತ್ತು ಧೂಳು ನಿಗ್ರಹಕ್ಕೆ ಬಳಸಲಾಗುತ್ತದೆ. ನಿಯಂತ್ರಿತ ಸ್ಫೋಟವನ್ನು ಅಳವಡಿಸಲಾಗುವುದು ಮತ್ತು ಸ್ಫೋಟಕ ಶಕ್ತಿಯ ಗರಿಷ್ಠ ಬಳಕೆಯು ವಾಯು ಮಾಲಿನ್ಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಧೂಳು ಗಾಳಿಯಿಂದ ಹರಡದಂತೆ ತಡೆಯಲು ಮತ್ತು ಲೋಡಿಂಗ್ ಮತ್ತು ಅನ್‌ಲೋಡಿಂಗ್ ಪ್ರದೇಶಗಳನ್ನು ನೀರಿನಿಂದ ಸಿಂಪಡಿಸಲಾಗುವುದು. ಗುತ್ತಿಗೆ ಪ್ರದೇಶದ ಸುತ್ತಲೂ ಮತ್ತು ಇತರೆ ಪ್ರದೇಶಗಳಲ್ಲಿ ದಟ್ಟವಾದ ಹಸಿರುಪಟ್ಟಿಯನ್ನು ಅಭಿವೃದ್ಧಿಪಡಿಸಲಾಗುವುದು.
5.	**ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ಯೋಜನಾ ಸ್ಥಳದ ಹತ್ತಿರ, ಉದ್ಯಮಕ್ಕೆ ಬೈಪಾಸ್ ರಸ್ತೆ, ಕೊಡ್ಲಾದಿಂದ ಬೆನಕನಹಳ್ಳಿ ರಸ್ತೆಯ ಪಕ್ಕದಲ್ಲಿ, ಕೊಡ್ಲಾ ಗ್ರಾಮದ ಹತ್ತಿರ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ. ದಿನಾಂಕ: 01.02.2022(ಮಂಗಳವಾರ)ರಂದು ಮಧ್ಯಾಹ್ನ 01:00 ಗಂಟೆಗೆ**
6.	**ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ಕಲಬುರಗಿ ಜಿಲ್ಲೆ, ಕಲಬುರಗಿ (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಕಲಬುರಗಿ (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕಲಬುರಗಿ (ಈ) ಪಟ್ಟಣ ಪುರಸಭೆ, ಸೇಡಂ (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಕೊಡ್ಲಾ ಮತ್ತು ಬೆನಕನಹಳ್ಳಿ (ಊ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಲಬುರಗಿ (ಋ) ಕೇಂದ್ರ ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034 (ೠ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ / ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: www.kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ

ಚಲನಚಿತ್ರೋತ್ಸವ: ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದ 13ನೇ ಆವೃತ್ತಿಯು ಫೆಬ್ರುವರಿಯಲ್ಲಿ ನಡೆಯಲಿದ್ದು, ಸ್ಪರ್ಧಾತ್ಮಕ ವಿಭಾಗಕ್ಕೆ ಚಲನಚಿತ್ರಗಳನ್ನು ಸಲ್ಲಿಸುವ ಕಡೆಯ ದಿನಾಂಕವನ್ನು 2022ರ ಜ.8ರವರೆಗೆ ವಿಸ್ತರಿಸಲಾಗಿದೆ.

'ಏಷಿಯನ್, ಭಾರತೀಯ ಹಾಗೂ ಕನ್ನಡದ ಎಲ್ಲ ಉಪಭಾಷಾ ಚಲನಚಿತ್ರಗಳೂ ಸೇರಿದಂತೆ ಕನ್ನಡ ಸಿನಿಮಾಗಳು ಸ್ಪರ್ಧಾತ್ಮಕ ವಿಭಾಗದಲ್ಲಿರುತ್ತವೆ. ಪ್ರಶಸ್ತಿ ವಿಜೇತ ಚಲನಚಿತ್ರಗಳಿಗೆ ನಗದು, ಸ್ಮರಣ ಫಲಕ ಹಾಗೂ ಪ್ರಮಾಣಪತ್ರ ನೀಡಲಾಗುತ್ತದೆ. 2021ರ ಜ.1ರಿಂದ 2021ರ ಡಿ.31ರವರೆಗೆ ಸೆನ್ಸಾರ್ ಆದ ಸಿನಿಮಾಗಳನ್ನು ಪರಿಗಣಿಸಲಾಗುವುದು' ಎಂದು ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ತಿಳಿಸಿದ್ದಾರೆ. ಚಲನಚಿತ್ರಗಳನ್ನು ಸಲ್ಲಿಸಲು ಅನುಸರಿಸಬೇಕಾದ ನಿಯಮಾವಳಿ ಹಾಗೂ ಮಾರ್ಗಸೂಚಿಗಳನ್ನು www.biffes.orgನಿಂದ ಪಡೆಯಬಹುದು.

120 ನ್ಯಾಯಮೂರ್ತಿಗಳ ನೇಮಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕಕ್ಕೆ 6 ಸೇರಿದಂತೆ ವಿವಿಧ ಹೈಕೋರ್ಟ್‌ಗಳಿಗೆ 120 ನ್ಯಾಯಮೂರ್ತಿಗಳನ್ನು ನೇಮಕ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರದ ನ್ಯಾಯಾಂಗ ಇಲಾಖೆ ಗುರುವಾರ ಹೇಳಿದೆ.

ಕರ್ನಾಟಕಕ್ಕೆ 20 ಸೇರಿದಂತೆ ವಿವಿಧ ಹೈಕೋರ್ಟ್‌ಗಳಿಗೆ 63 ಹೆಚ್ಚುವರಿ ನ್ಯಾಯಮೂರ್ತಿಗಳನ್ನೂ ನೇಮಕ ಮಾಡಲಾಗಿದೆ ಎಂದೂ ಹೇಳಿದೆ.

'ವಾಲ್ಮೀಕಿ ಸ್ವಾಮೀಜಿ ವಿರುದ್ಧದ ಆರೋಪ ನಿರಾಧಾರ'

ಪ್ರಜಾವಾಣಿ ವಾರ್ತೆ



ಹರಪನಹಳ್ಳಿ: 'ವಾಲ್ಮೀಕಿ ಜಾತ್ರೆಯ ಲೆಕ್ಕಪತ್ರ ಸಂಬಂಧ ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರ ಬಗ್ಗೆ ಮಾಡುತ್ತಿರುವ ಆರೋಪಗಳು ನಿರಾಧಾರ' ಎಂದು ಮಹರ್ಷಿ ವಾಲ್ಮೀಕಿ ಎಸ್‌ಟಿ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಎಸ್.ವಿ.ರಾಮಚಂದ್ರ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಲ್ಲವನ್ನೂ ಪರಿಶೀಲಿಸಿಯೇ ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರನ್ನು ವಾಲ್ಮೀಕಿ ಪೀಠಾಧ್ಯಕ್ಷರನ್ನಾಗಿ ಮಾಡಲಾಗಿದೆ. ಅವರ ಬಗ್ಗೆ ಕೇಳಿಬರುತ್ತಿರುವ ಆರೋಪ ಸತ್ಯಕ್ಕೆ ದೂರ. ವಾಲ್ಮೀಕಿ ಜಾತ್ರೆ ಯಶಸ್ವಿಯಾಗಿ ನಡೆಯುತ್ತದೆ. ಎಲ್ಲಿಯೂ ಗೊಂದಲವಿಲ್ಲ. ನಮ್ಮವರೇ ಕೆಲವರು ಮಾಡುತ್ತಿರುವ ಆರೋಪಗಳಿಗೆ ಯಾರೂ ಕಿವಿಗೊಡಬಾರದು' ಎಂದು ಮನವಿ ಮಾಡಿದರು.

'ಬಸವರಾಜ ಬೊಮ್ಮಾಯಿ ಪೂರ್ಣಾವಧಿ ಮುಖ್ಯಮಂತ್ರಿಯಾಗಿರುತ್ತಾರೆ. ಯಡಿಯೂರಪ್ಪ ಅವರ ಜೊತೆ ಸಾಮೂಹಿಕ ನಾಯಕತ್ವದಲ್ಲಿ ಮುಂದಿನ ಚುನಾವಣೆ ಎದುರಿಸಲಿದ್ದೇವೆ' ಎಂದು ಹೇಳಿದರು.

ಸೂರ್ಯ ನಮಸ್ಕಾರ ಮತೀಯ ನಿರ್ಧಾರ: ಕ್ಯಾಂಪಸ್ ಫ್ರಂಟ್

ಬೆಂಗಳೂರು: 'ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ಸೂರ್ಯ ನಮಸ್ಕಾರ ಕಡ್ಡಾಯಗೊಳಿಸಿ ಸರ್ಕಾರ ಹೊರಡಿಸಿರುವ ಆದೇಶವನ್ನು ಹಿಂಪಡೆಯಬೇಕು' ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ರಾಜ್ಯ ಘಟಕ ಆಗ್ರಹಿಸಿದೆ.

'ಶಾಲಾ ಕಾಲೇಜುಗಳಲ್ಲಿ ಮೂಲಸೌಕರ್ಯ ಕೊರತೆ ನಿವಾರಿಸಲು ಸರ್ಕಾರಕ್ಕೆ ಆಸಕ್ತಿ ಇಲ್ಲ. ಅದರ ಬದಲು, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹೆಸರಿನಲ್ಲಿ ಶೈಕ್ಷಣಿಕ ವಲಯದಲ್ಲಿ ಸೂರ್ಯ ನಮಸ್ಕಾರದಂಥ ಮತೀಯ ಕಾರ್ಯಸೂಚಿ ಹೇರಲು ಮುಂದಾಗಿರುವುದು ಶಿಕ್ಷಣವನ್ನು ಕೇಸರೀಕರಣಗೊಳಿಸುವ ಹುನ್ನಾರ. ಸಂವಿಧಾನದ ಮೇಲೆ ಭರವಸೆ ಇಟ್ಟಿರುವ ಎಲ್ಲರೂ ಇದನ್ನು ವಿರೋಧಿಸಬೇಕು' ಎಂದು ಘಟಕದ ಅಧ್ಯಕ್ಷ ಅಥಾವುಲ್ಲ ಪುಂಜಾಲಕಟ್ಟೆ ಮನವಿ ಮಾಡಿದ್ದಾರೆ.

ರಾಜ್ಯದ ಎಲ್ಲ ಪದವಿ ಪೂರ್ವ ಕಾಲೇಜುಗಳಲ್ಲಿ 2022ರ ಜ.1ರಿಂದ ಫೆ. 7ರವರೆಗೆ ಸೂರ್ಯ ನಮಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಎಲ್ಲ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಸುತ್ತೋಲೆಯಲ್ಲಿ ಸೂಚನೆ ನೀಡಲಾಗಿದೆ.

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ
ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ಸ್ವಾಯತ್ತ ಸಂಸ್ಥೆ
(ಉನ್ನತ ವೈದ್ಯಕೀಯ ವಿಜ್ಞಾನಗಳ ಸ್ನಾತಕೋತ್ತರ ಸಂಸ್ಥೆ)
ಸಹಕಾರ ಸಂಘಗಳ ನೋಂದಾಯಿತ ನೋಂದಣಿ ಸಂಖ್ಯೆ 132/85–86 ಅಡಿಯಲ್ಲಿ ಗುರುತಿಸಲ್ಪಟ್ಟಿದೆ
ದಕ್ಷಿಣ ಆಸ್ಪತ್ರೆ ಸಂಕೀರ್ಣ, ಧರ್ಮಾರಾಂ ಕಾಲೇಜು ಅಂಚೆ, ಬೆಂಗಳೂರು–560029.
ಇ–ಮೇಲ್: ihealthchild@yahoo.in, ವೆಬ್‌ಸೈಟ್: www.igich.org
ಐಎಫ್‌ಟಿ ಸಂ.: ಐಜಿಐಸಿಹೆಚ್/ಎಡಿಎಂಎನ್/ಟೆಂಡರ್/2/2021–ಎಡಿಎಂಎನ್–ಐಜಿಐಸಿಹೆಚ್/290 ದಿನಾಂಕ: 30.12.2021

ಟೆಂಡರ್ ಆಹ್ವಾನ ಪ್ರಕಟಣೆ
(ಜಿಟಿಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://www.eproc.karnataka.gov.in ಮುಖಾಂತರ)
ನಿರ್ದೇಶಕರು, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು–560 029, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗೆ ನಮೂದಿಸಿರುವ ಉಪಕರಣಗಳ ಸರಬರಾಜಿಗಾಗಿ ಜಿಟಿಕೆ ಇ–ಪ್ರೊಕ್ಯೂರ್‌ಮೆಂಟ್ **www.eproc.karnataka.gov.in** ಮೂಲಕ ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ.	ಉಪಕರಣಗಳ ವಿವರ	ಪ್ರಮಾಣ	ಇಎಂಡಿ (ರೂ.ಗಳಲ್ಲಿ)
	PICU		
1	High End Color Doppler Ultrasound System	01	40,000/-
2	Portable Colour Doppler Ultrasound Echo Unit	01	20,000/-
	RADIOLOGY		
1	High End Color Doppler Ultrasound System	01	40,000/-
2	32 Slice CT Scanner with Buyback Scheme of Existing 16 Slice CT Scan	01	2,50,000/-

ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ. ಟೆಂಡರ್ ದಾಖಲೆಗಳನ್ನು **ದಿನಾಂಕ: 30.12.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ದಾಖಲಾತಿಯ ಡೌನ್‌ಲೋಡ್ ಮಾಡುವ ಕೊನೆಯ ದಿನಾಂಕ: **29.01.2022ರ ಮಧ್ಯಾಹ್ನ 12.00 ಗಂಟೆಯವರೆಗೆ.** ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29.01.2022ರ ಮಧ್ಯಾಹ್ನ 3.00 ಗಂಟೆಯವರೆಗೆ.** ಪೂರ್ವಭಾವಿ ಸಭೆ (ವಿಚಾರಣೆ ಮತ್ತು ಸ್ಪಷ್ಟೀಕರಣ): **14.01.2022ರ ಬೆಳಿಗ್ಗೆ 11.00 ಗಂಟೆಗೆ.** ಪೂರ್ವಭಾವಿ ಸಭೆ ಸ್ಥಳ: **ನಿರ್ದೇಶಕರ ಕಚೇರಿ, ಐಜಿಐಸಿಹೆಚ್, ಬೆಂಗಳೂರು.** ಟೆಂಡರ್ ಲಕೋಟೆ–1ನ್ನು ತೆರೆಯುವ ದಿನಾಂಕ: **31.01.2022ರ ಮಧ್ಯಾಹ್ನ 3.00 ಗಂಟೆ.** ಹೆಚ್ಚಿನ ಮಾಹಿತಿಗಾಗಿ ಜಿಟಿಕೆಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://eproc.karanataka.gov.in.in** ಅಥವಾ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ ನಂ. **080–25501216, 080–25501227** ಸಂಪರ್ಕಿಸಿ.

ಸಹಿ/– ನಿರ್ದೇಶಕರು
ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ
DIPR/DDU/BCPL/2596/2021-22

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭಾರತ ಸರ್ಕಾರ, ಬಾಹ್ಯಾಕಾಶ, ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ಮುಖ್ಯ ನಿಯಂತ್ರಣ ಸೌಲಭ್ಯ
ಪಿ.ಬಿ.ನಂ. 66, ಹಾಸನ–573210, ಭಾರತ. ದೂರವಾಣಿ : 08172–273343 ಫ್ಯಾಕ್: 08172–273341

ಸಂಕ್ಷಿಪ್ತ ಇ–ಟೆಂಡರ್ ಆಹ್ವಾನದ ಸೂಚನೆ
1.ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಆನ್‌ಲೈನ್ ಮೂಲಕ ಐಟಂ ರೇಟ್ ಇ–ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಎನ್‌ಐಟಿ ಸಂಖ್ಯೆ	ಕೆಲಸದ ಹೆಸರು	ಅಂದಾಜು ಮೊತ್ತ (ರೂ.)	ಕೆಲಸ ಮುಗಿಸಲು ಕಾಲಾವಧಿ
MCF/CMG/H/eTN-18/2021-22 Dtd. 30.12.2021	ಎಂ.ಸಿ.ಎಫ್. ಹಾಸನದ ಆವರಣದಲ್ಲಿ ಗಸ್ತುತಿರುಗಲು ರಸ್ತೆಯ ನಿರ್ಮಾಣ.	103,35,302/-	06 ತಿಂಗಳು
MCF/CMG/H/eTN-19/2021-22 Dtd. 30.12.2021	ಹಾಸನದ ಎಂ.ಸಿ.ಎಫ್.ನ ಮುಂಬಾಗದಲ್ಲಿ ರಾಜ್ಯ ಹೆದ್ದಾರಿಗೆ ಅಡ್ಡಲಾಗಿ ನಿರ್ಮಿಸಿರುವ ಬಾಕ್ಸ್ ಟ್ರೆಂಚ್‌ಗಳ ವಿಸ್ತರಣೆ	9,69,444/-	04 ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ: 31.12.2021ರ 10.00 ಗಂಟೆಯಿಂದ 14.01.2022ರ 23.59 ಗಂಟೆವರೆಗೆ			
ಬಿಡ್ ಸ್ಪಷ್ಟನೆ ಪಡೆಯುವ ಅವಧಿ : 31.12.2021ರ 10.01 ಗಂಟೆಯಿಂದ 15.01.2022ರ 23.59 ಗಂಟೆವರೆಗೆ			
ಬಿಡ್ ಸ್ಪಷ್ಟನೆಗೆ ಉತ್ತರ ನೀಡುವ ಕಡೇ ದಿನಾಂಕ ಮತ್ತು ಸಮಯ: 19.01.2022ರ 17.30 ಗಂಟೆವರೆಗೆ			
ಟೆಂಡರ್‌ಗಳನ್ನು ಸ್ವೀಕರಿಸುವ ಕಡೇ ದಿನಾಂಕ ಮತ್ತು ಸಮಯ: 21.01.2022ರ 23.59 ಗಂಟೆವರೆಗೆ			
ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 24.01.2022 ರಂದು 11.30 ಗಂಟೆಯ ನಂತರ			

2. ಆಸಕ್ತ ಟೆಂಡರುದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) ನೋಡಬಹುದು. ಇದನ್ನು ವೆಬ್‌ಸೈಟ್: **www.isro.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಫಾರಂಗಳನ್ನು ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ **www.tenderwizard.com/ISRO** ಇಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಎಲ್ಲಾ ತಿದ್ದುಪಡಿ, ಸಮಯ ವಿಸ್ತರಣೆ, ಸ್ಪಷ್ಟೀಕರಣ ಇತ್ಯಾದಿಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ...

ವಿಭಾಗ ಮುಖ್ಯಸ್ಥ, ಸಿಎಂಜಿ–ಎಂಸಿಎಫ್

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383, website: www.kiadb.in
ನಂ. ಐಎಡಿಬಿ/ಇಇನ್‌ಜಿಜೆ/ಇಟಿಎನ್‌ಡಿ–ಇಪಿ–30/12686/2021–22 ದಿನಾಂಕ: 29.12.2021

ಟೆಂಡರ್ ಆಹ್ವಾನ ಪ್ರಕಟಣೆ
(ಜಿಟಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿ/ಕೆ.ಸಿ.ಇ.ಐ (ಸಿವಿಲ್/ವಿದ್ಯುತ್) ದರ್ಜೆ–4 ಮತ್ತು ಮೇಲಿನ ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಏಕ–ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ವರ್ಗ
1	2	3
1	ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಸಂಡಾ ಕೈಗಾರಿಕಾ ಪ್ರದೇಶದಲ್ಲಿರುವ ರಸ್ತೆ, ಚರಂಡಿ, ಪಾದಚಾರಿ ಮಾರ್ಗವನ್ನು ನಿರ್ವಹಣೆ ಮಾಡುವ ಕಾಮಗಾರಿ.	ಇತರೆ
2	ಧಾರವಾಡ ಜಿಲ್ಲೆ ರಾಯಪುರ ಕೈಗಾರಿಕಾ ಪ್ರದೇಶದ ರಸ್ತೆ ಗುಂಡಿಗಳನ್ನು ಮುಚ್ಚುವುದು, ಜಂಗಲ್ ಕ್ಲಿಯರನ್ಸ್ ಮತ್ತು ಕೆಟ್ಟ ರಸ್ತೆಗಳನ್ನು ಬಲಗೊಳಿಸುವ ಕಾಮಗಾರಿ	ಪ.ಜಾ
3	ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಹಾರೋಹಳ್ಳಿ 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಸಂಖ್ಯೆ: 278–ಪಿ ಹತ್ತಿರ ಸಿ.ಸಿ.ಚರಂಡಿ ನಿರ್ಮಾಣ ಮಾಡುವ ಕಾಮಗಾರಿ	ಇತರೆ
4	ಧಾರವಾಡ ಜಿಲ್ಲೆ ಗಾಮನಗಟ್ಟಿ 1ನೇ ಮತ್ತು 2ನೇ ಹಂತ ಕೈಗಾರಿಕಾ ಪ್ರದೇಶ ಹಾಗೂ ವಸತಿ ಬಡಾವಣೆಯ ಮುಖ್ಯ ಸಂಪರ್ಕ ರಸ್ತೆಗೆ ಬೀದಿ ದೀಪಗಳನ್ನು ಹಾಗೂ ಸಂಬಂಧಪಟ್ಟ ವಿದ್ಯುತ್ ಕಾಮಗಾರಿಗಳನ್ನು ಒದಗಿಸುವ ಕಾಮಗಾರಿ	ಪ.ಜಾ
5	ದಕ್ಷಿಣ ಕನ್ನಡ ಜಿಲ್ಲೆ, ಐಟಿ–ಎಸ್.ಇ.ಝಡ್, ನಾನ್ ಐಟಿ–ಎಸ್.ಇ.ಝಡ್, ಬೈಕಂಪಾಡಿ ಮತ್ತು ಕಾರ್ನಾಡ್ ಕೈಗಾರಿಕಾ ಪ್ರದೇಶಗಳಲ್ಲಿ ಬೀದಿ ದೀಪಗಳ ರಿಪೇರಿ, ಕಾರ್ಯಾಚರಣೆ ಮತ್ತು ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	ಪ.ಪಂ
6	ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ಅಪೆರೆಲ್ ಪಾರ್ಕ್ 1ನೇ, 2ನೇ ಹಂತ, ಕೈಗಾರಿಕಾ ಪ್ರದೇಶಗಳಲ್ಲಿ ಬೀದಿ ದೀಪಗಳ ರಿಪೇರಿ, ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	ಇತರೆ

ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

- ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 27.01.2022 ಸಂಜೆ 4.00 ಗಂಟೆಯವರೆಗೆ.

ಸಹಿ/–
DIPR/DDU/Zen/R.O:2580/2021-22 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು–6 ರವರ ಕಛೇರಿ, ಘನ ತ್ಯಾಜ್ಯ ನಿರ್ವಹಣೆ, ಎನ್.ಆರ್. ಚೌಕ, ಬೆಂಗಳೂರು–560 002.
ಸಂಖ್ಯೆ:ಬೃಬೆಂಮಪಾ/ಕಾಪಾಅ–6/ಘತ್ಯಾನಿ/ಟೆಂಡರ್/06/2021–22 ದಿನಾಂಕ: 30–12–2021

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು–6, ಘನ ತ್ಯಾಜ್ಯ ನಿರ್ವಹಣೆ, ಬೃಬೆಂಮಪಾ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1)	ವಾರ್ಡ್ 160ರ ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರದ ಹೊಸಕೆರೆಹಳ್ಳಿ ಕೆರೆ ಮತ್ತು ಕೆಂಚೇನಹಳ್ಳಿ ಕೆರೆಯ ಘನ ತ್ಯಾಜ್ಯ ಸೋರಿಕೆ ಹಾಗೂ ಯುಜಿಡಿ ತ್ಯಾಜ್ಯ ನೀರಿನ ತಿರುಗುಸುವಿಕೆ ಮತ್ತು ಸಮಗ್ರ ಅಭಿವೃದ್ಧಿ ಕಾಮಗಾರಿಗಳು.	972.11
2)	ಮಲ್ಲತ್ತಹಳ್ಳಿ ಕೆರೆಗೆ ಹರಿಯುವ ಘನ ತ್ಯಾಜ್ಯ ಸೋರಿಕೆ / ಕೊಳಚೆ ನೀರನ್ನು ಎಸ್‌ಡಬ್ಲ್ಯೂಡಿ ಡ್ರೈನ್‌ನ ನಿರ್ಮಾಣದಿಂದ ತಿರುಗುಸುವುದು ಮತ್ತು ಸಮಗ್ರ ಅಭಿವೃದ್ಧಿ ಕಾಮಗಾರಿಗಳು.	1913.00
3)	ವಾರ್ಡ್ 129ರ ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರದ ಶ್ರೀಗಂಧಕಾವಲ್ ಕೆರೆಯ ಘನ ತ್ಯಾಜ್ಯ ಸೋರಿಕೆ ಹಾಗೂ ಯುಜಿಡಿ ತ್ಯಾಜ್ಯ ನೀರಿನ ತಿರುಗುಸುವಿಕೆ ಮತ್ತು ಸಮಗ್ರ ಅಭಿವೃದ್ಧಿ ಕಾಮಗಾರಿಗಳು.	1956.43

ಇಎಂಡಿ ರೂ ಲಕ್ಷಗಳಲ್ಲಿ : ಇಎಂಡಿ ಘೋಷಣೆ ಪತ್ರ ಅನುಬಂಧದ ಪ್ರಕಾರ. ಟೆಂಡರ್‌ನ ಕಾರ್ಯಸೂಚಿ: 1) ವಿನಂತಿ ದಾಖಲೆಗಳ ಪ್ರಸ್ತಾವನೆಯ ದಿನಾಂಕ: **03–01–2022** ರಿಂದ ದೊರೆಯುತ್ತವೆ. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **17–01–2022.** 3) ಪೂರ್ವ ಬಿಡ್ ಸಭೆ ದಿನಾಂಕ: **18–01–2022 ರಂದು ಸಂಜೆ 3:30 ಗಂಟೆಯೊಳಗೆ.** 4) ಭರ್ತಿಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **29–01–2022 ರಂದು ಸಂಜೆ 4:30 ಗಂಟೆಯವರೆಗೆ. 5)** ತಾಂತ್ರಿಕ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ: **31–01–2022ರ ಸಂಜೆ 4:00 ಗಂಟೆಗೆ. 6)** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–6, ಘನ ತ್ಯಾಜ್ಯ ನಿರ್ವಹಣೆ, ಬೃಬೆಂಮಪಾ.

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ನಂ.ಪಂರಾ.ಇಂ.ವಿ/ಬಿಜಿಕೆ/ಪಿಬಿ–1/5054/ಟೆಂಡರ/2021–22/4551
ದಿನಾಂಕ:29.12.2021

ಅಲ್ಪಾವಧಿ ಇ–ಪ್ರೋಕ್ಯೂರಮೆಂಟ್ ಟೆಂಡರ ಅವಧಿ ವಿಸ್ತರಣೆ ಅಧಿಸೂಚನೆ (ದ್ವಿ ಲಕೋಟೆ).

ವಿಷಯ: 2021–22ನೇ ಸಾಲಿನ ಮಾನ್ಯ 5054–ರಡಿ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ತೇರದಾಳ ವಿಧಾನಸಬಾ ಕ್ಷೇತ್ರದ ಪ್ಯಾಕೇಜ್ ಇಂಡೆಂಟ್ ನಂ: PACKAGE-II/TERDAL/5-WORKSINDENT87334 & PACKAGE-III/TERDAL/5-WORKSINDENT87335 ಕಾಮಗಾರಿಯ ಟೆಂಡರ್ ಅವಧಿ ವಿಸ್ತರಣೆ ಕುರಿತು.

ಉಲ್ಲೇಖ:ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:ಕಾನಿ ಇಂ /ಪಂರಾಇಂವಿ/ಬಿಜಿಕೆ/ಪಿಬಿ–1/ಟೆಂಡರ್/2021–22/4469,ದಿನಾಂಕ: 21.12.2021.

ಮೇಲ್ಕಾಣಿಸಿದ ವಿಷಯು ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2021–22ನೇ ಸಾಲಿನ ಮಾನ್ಯ 5054–ರಡಿ ಮುಖ್ಯ ಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳು ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ತೇರದಾಳ ವಿಧಾನಸಬಾ ಕ್ಷೇತ್ರದ ಪ್ಯಾಕೇಜ್ ಇಂಡೆಂಟ್ ನಂ: PACKAGE-II/ TERDAL/5-WORKS INDENT87334 & PACKAGE-III/ TERDAL/ 5-WORKSINDENT87335 ಕಾಮಗಾರಿಯ ಟೆಂಡರ್ ಅವಧಿ ವಿಸ್ತರಣೆಯನ್ನು ಈ ಕೆಳಗಿನಂತೆ ಮಾಡಲಾಗಿದೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:30.12.2021ರ ಸಾಯಂಕಾಲ 17.30 ಗಂಟೆಯ ಬದಲಾಗಿ ದಿನಾಂಕ:06.01.2022, ಸಾಯಂಕಾಲ 17.30 ಗಂಟೆಗೆ.

ಪ್ರೀ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ: 27.12.2021 ರಂದು ಮುಂಜಾನೆ 11.00 ಗಂಟೆಯ ಬದಲಾಗಿ 04.01.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ:01.01.2022 ರಂದು ಮುಂಜಾನೆ 11.00 ಗಂಟೆಯ ಬದಲಾಗಿ 09.01.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು.

ಷರತ್ತುಗಳು:– ಮೇಲಿನ ಬದಲಾವಣೆ ಹೊರತುಪಡಿಸಿ, ಬೇರೆ ಯಾವುದೇ ಬದಲಾವಣೆಗಳಿರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ http://www.eprocurment.karnataka.gov.inಯಲ್ಲಿ ಲಾಗ್ ಆನ್ ಮಾಡಿ ನೋಡಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ
DIPR/BGK/RO-NO-441/MCA/2021-22

ಕರ್ನಾಟಕ ಸರಕಾರ
(ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿ.ಬಿ.1/ಟೆಂಡರ/2021–22/3284 ದಿನಾಂಕ : 29–12–2021

ಇ–ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ
Standard Bid Document KW- 1 [ಏಕಲಕೋಟೆ ಪದ್ಧತಿ]

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-1ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ 10 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. **ಲೆಕ್ಕ ಶೀರ್ಷಿಕೆ: 2019–20ನೇ ಸಾಲಿನ ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆ ಅಡಿ** ಪಂ.ರಾಜ್.ಇಂ.ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್, https://eproc.karnataka.gov.in ಮುಖಾಂತರ ಭಾಗವಹಿಸಬಹುದು. ವಿವರ ಈ ಕೆಳಗಿನಂತಿದೆ.

ಅ. ನಂ.	ಕಾಮಗಾರಿಯ ಹೆಸರು / ವರ್ಕ ಇಂಡೆಂಟ್	ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ಇ–ಪೋರ್ಟಲ್ ಮುಖಾಂತರ)	ಕಾಮಗಾರಿ ಅವಧಿ (ಮಳೆ–ಗಾಲ ಸೇರಿ)	ಗುತ್ತಿಗೆದಾರರ ದರ್ಜೆ
1	FIXING OF SOLAR POLE FROM FILTER UNIT TO TIPPANNA KRISHNAPPA PAWAR HOME IN NAGAVI TANDA OF GADAG TALUK [RESERVE TO SC]UNDER 2019-20 PMAGY **WORK_INDENT87111**	**688124.03**	0.00 EMD Declaration	3 ತಿಂಗಳು	Valid PWD contractor can participate KW-1
2	FIXING OF SOLAR POLE INFRONT OF TEMPLES IN NAGAVI TANDA OF GADAG TALUK UNDER 2019-20 PMAGY **WORK_INDENT87112**	**515508.2**	0.00 EMD Declaration	3 ತಿಂಗಳು	Valid PWD contractor can participate KW-1
3	FIXING OF SOLAR POLE FROM BELADADI MAIN ROAD TO DEVAPPA. LACHCHAPPA. GUDIMANI @ NAGAVI TANDA IN GADAG TALUK OF GADAG DIST. UNDER 2019-20 PMAGY **WORK_INDENT87113**	**515508.2**	0.00 EMD Declaration	3 ತಿಂಗಳು	Valid PWD contractor can participate KW-1
4	HEIGHTNING OF BIG DRAIN FROM BELADADI MAIN ROAD TO DEVAPPA LACHCHAPPA GUDIMANI'S HOUSE AT NAGAVI TANDA IN GADAG TALUK OF GADAG DIST. UNDER 2019-20 PMAGY **WORK_INDENT87114**	**490896.95**	0.00 EMD Declaration	3 ತಿಂಗಳು	Valid PWD contractor can participate KW-1
5	CONSTRUCTION OF ANGANAWADI CENTRE NO.41 NEW BUILDING @ PANDURANGAPUR TANDA IN GADAG TALUK OF GADAG DIST. UNDER 2019-20 PMAGY **WORK_INDENT87115**	**801327.43**	0.00 EMD Declaration	3 ತಿಂಗಳು	Valid PWD contractor can participate KW-1
6	FIXING OF SOLAR POLE AND LED AT SHRI LAKKAMMA TEMPLE AND SHRI KANKAALIKA TEMPLE IN BRAHNANDAPURA SANNA TANDA OF GADAG TALUK UNDER 2019-20 PMAGY **WORK_INDENT87116**	**688124.03**	0.00 EMD Declaration	3 ತಿಂಗಳು	Valid PWD contractor can participate KW-1
7	FIXING OF SOLAR POLE IN WARD NO.2 (1) NANDAKUMAR.K. HOSAMANI HOME TO PULAKESHI MALAGIMANI HOME AND (2) GANESH. SHEKHAPPA. HOSAMANI HOME TO MOTILAL MALAGIMANI HOME IN BRAHMANANDAPUR VILLAGE OF GADAG TALUK UNDER 2019-20 PMAGY **WORK_INDENT87117**	**573389.63**	0.00 EMD Declaration	3 ತಿಂಗಳು	Valid PWD contractor can participate KW-1
8	CONSTRUCTION OF ANGANAWADI NEW BUILDING @ WARD NO.1 IN SURJAPUR VILLAGE OF GAJENDRAGAD TALUK OF GADAG DIST. [RESERVE TO ST]UNDER PMAGY **WORK_INDENT87542**	**1292547.12**	0.00 EMD Declaration	3 ತಿಂಗಳು	Valid PWD contractor can participate KW-1
9	Construction of HPS School room @ Surjapur village in Gajendragad taluk of Gadag Dist. under 2019-20 PMAGY **WORK_INDENT87545**	**1040990.35**	0.00 EMD Declaration	3 ತಿಂಗಳು	Valid PWD contractor can participate KW-1
10	IMPROVEMENTS TO MATHA ROAD IN MAHALINGAPUR VILLAGE OF GADAG TALUKA GADAG DIST. **WORK_INDENT85185/CALL-2**	**892445.01**	0.00 EMD Declaration	3 ತಿಂಗಳು	Valid PWD contractor can participate KW-1

ಇ–ಪ್ರೊಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: **30–12–2021 ರಿಂದ 07–01–2022 ರಂದು** 16.00 ಗಂಟೆಗೆ ಗಂಟೆಯವರೆಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ **:10–01–2022** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ವಾಸಾಸಂಇ/ಗದಗ/ಎಂ.ಸಿ.ಎ/427/2021–22 ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ

ಸಂಚಾರ ನಿಯಮಗಳ ಉಲ್ಲಂಘನೆ • ಕರಡು ಮಸೂದೆ ರೂಪಿಸಿದ ಡಲ್ಟ್

₹ 2 ಲಕ್ಷದವರೆಗೆ ದಂಡ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾನಗರಗಳ ಸಾರಿಗೆ ವ್ಯವಸ್ಥೆಯಲ್ಲಿ ಪಾದಚಾರಿಗಳಿಗೆ ಹಾಗೂ ಸೈಕಲ್‌ನಂತಹ ಮೋಟಾರುರಹಿತ ಸಾರಿಗೆ ಬಳಕೆಗೆ ಪ್ರಾಧಾನ್ಯತೆ ಕಲ್ಪಿಸುವ ಉದ್ದೇಶದಿಂದ ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್‌) ಸಿದ್ಧಪಡಿಸಿರುವ ಕರಡು ಮಸೂದೆಯಲ್ಲಿ (ಆ್ಯಕ್ಟಿವ್ ಮೊಬಿಲಿಟಿ ಬಿಲ್‌) ನಿಯಮ ಉಲ್ಲಂಘನೆ ಮಾಡುವವರಿಗೆ ₹ 2 ಲಕ್ಷದವರೆಗೆ ದಂಡ ವಿಧಿಸುವ ಪ್ರಸ್ತಾವವೂ ಇದೆ.

'ಪ್ರಸ್ತಾವಿತ ಕಾಯ್ದೆಯನ್ನು ಅಥವಾ ಇದರಡಿ ರೂಪಗೊಳ್ಳುವ ನಿಯಮಗಳನ್ನು ಹಾಗೂ ನಗರ ಸ್ಥಳೀಯ ಸಂಸ್ಥೆಗಳು, ರಾಜ್ಯ ಮಟ್ಟದ ಏಜೆನ್ಸಿ ಅಥವಾ ಸರ್ಕಾರ ಸೂಚಿಸುವ ಪ್ರಾಧಿಕಾರಗಳು ಈ ಕಾಯ್ದೆಯನುಸಾರ ಹೊರಡಿಸುವ ಆದೇಶಗಳನ್ನು ಮತ್ತು ನಿರ್ದೇಶನಗಳನ್ನು ಪಾಲಿಸುವಲ್ಲಿ ಯಾವುದೇ ವ್ಯಕ್ತಿ ವಿಫಲವಾದರೆ ಅವರಿಗೆ ಮೊದಲ ಸಲದ ಉಲ್ಲಂಘನೆಗೆ ₹ 1 ಲಕ್ಷ ರೂಪಾಯಿವರೆಗೆ ದಂಡ ವಿಧಿಸಬಹುದು. ಎರಡನೇ ಸಲ ಅಥವಾ ಅದಕ್ಕಿಂತ ಹೆಚ್ಚು ಸಲ ಉಲ್ಲಂಘನೆ ಮಾಡಿದರೆ ₹ 2 ಲಕ್ಷದವರೆಗೂ ದಂಡ ವಿಧಿಸಬಹುದು. ಆ ಬಳಿಕವೂ ಉಲ್ಲಂಘನೆ ಮುಂದುವರಿದರೆ ದಿನವೊಂದಕ್ಕೆ ₹ 5 ಸಾವಿರದಂತೆ ದಂಡ ವಿಧಿಸಬಹುದು' ಎಂದು ಈ ಕರಡು ಮಸೂದೆಯ ಸೆಕ್ಷನ್ 50ರಲ್ಲಿ ವಿವರಿಸಲಾಗಿದೆ.

'ನಿಯಮ ಉಲ್ಲಂಘನೆಯು ಯಾವುದೇ ಕಂಪನಿಯಿಂದ ಆಗಿದ್ದರೆ, ಆ ಕಂಪನಿಯ ನಿರ್ವಹಣೆಯ ಉಸ್ತುವಾರಿ ಹೊತ್ತ ಪ್ರತಿಯೊಬ್ಬ ವ್ಯಕ್ತಿಯೂ ಅದಕ್ಕೆ ಹೊಣೆಗಾರರಾಗುತ್ತಾರೆ. ಈ ತಪ್ಪಿಗೆ ಸಂಸ್ಥೆಯನ್ನೂ ಹೊಣೆಯನ್ನಾಗಿಸಿ ಸೆಕ್ಷನ್ 50ರ ಅನ್ವಯ ಕ್ರಮ ಕೈಗೊಳ್ಳಬಹುದು' ಎಂದು ಮಸೂದೆಯ ಸೆಕ್ಷನ್ 51 (1) ರಲ್ಲಿ ಉಲ್ಲೇಖಿಸಲಾಗಿದೆ.

ಉಲ್ಲಂಘನೆಗಳ ಬಗ್ಗೆ ಸರ್ಕಾರ ಅಧಿಸೂಚನೆ ಹೊರಡಿಸುವ ನಿಯೋಜಿಸುವ ಪ್ರಾಧಿಕಾರ ಕ್ರಮಕೈಗೊಳ್ಳಬೇಕು. ನಿಗದಿತ ದಂಡವನ್ನು ತಪ್ಪಿತಸ್ಥರಿಂದ ವಸೂಲಿ ಮಾಡಬೇಕು ಎಂದು ಕರಡು ಮಸೂದೆಯಲ್ಲಿ ಹೇಳಲಾಗಿದೆ. ಆದರೆ, ಈ ಪ್ರಾಧಿಕಾರ ಯಾವುದು ಎಂದು ನಿರ್ದಿಷ್ಟಪಡಿಸಿಲ್ಲ. ಈ ವಿಚಾರದಲ್ಲಿ ಇನ್ನಷ್ಟು ಸ್ಪಷ್ಟತೆಯ ಅಗತ್ಯ ಇದೆ ಎನ್ನುತ್ತಾರೆ ಸಾರಿಗೆ ತಜ್ಞರು.

'ಸರ್ಕಾರಿ ಸಂಸ್ಥೆಯ ಮುಖ್ಯಸ್ಥರ ವಿರುದ್ಧವೂ ಕ್ರಮ'

ಯಾವುದಾದರೂ ನಗರ ಸ್ಥಳೀಯ ಸಂಸ್ಥೆ, ಸಂಚಾರ ನಿರ್ವಹಣೆಯ ಹೊಣೆ ಹೊತ್ತ ಏಜೆನ್ಸಿ, ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಯಾವುದೇ ಇಲಾಖೆ ಅಥವಾ ಏಜೆನ್ಸಿ ಈ ಕಾಯ್ದೆ ಉಲ್ಲಂಘಿಸಿರುವುದು ಅಥವಾ ತಪ್ಪೆಸಗಿರುವುದು ದೃಢಪಟ್ಟರೆ ಅಂತಹ ಸಂಸ್ಥೆಗಳ ಅತವಾ ಏಜೆನ್ಸಿಯ ಮುಖ್ಯಸ್ಥರ ವಿರುದ್ಧ ಕ್ರಮಕೈಗೊಳ್ಳಬಹುದು. 'ತನ್ನ ಗಮನಕ್ಕೆ ಬಾರದೆಯೇ ಉಲ್ಲಂಘನೆ ನಡೆದಿದೆ' ಎಂಬುದನ್ನು ಅಥವಾ ಉಲ್ಲಂಘನೆ ತಪ್ಪಿಸಲು ತನ್ನಿಂದಾದ ಎಲ್ಲ ಪ್ರಯತ್ನಗಳನ್ನು ಮಾಡಿರುವುದನ್ನು ಮುಖ್ಯಸ್ಥ ಸಾಬೀತುಪಡಿಸಿದರೆ ಆತನ ವಿರುದ್ಧ ಕ್ರಮ ಕೈಗೊಳ್ಳುವಂತಿಲ್ಲ.

ಸಂಸ್ಥೆ ಅಥವಾ ಇಲಾಖೆಯ ಮುಖ್ಯಸ್ಥನಲ್ಲದ ಇತರ ವ್ಯಕ್ತಿಗಳು ನಿಯಮ ಉಲ್ಲಂಘನೆ ಮಾಡಿದ್ದರೆ, ಅವರನ್ನೇ ತಪ್ಪಿತಸ್ಥರು ಎಂದು ಪರಿಗಣಿಸಿ ಕ್ರಮ ಕೈಗೊಳ್ಳಬಹುದು.

'ಕಾಯ್ದೆ ಜಾರಿ ಹೊಣೆ ನಗರ ಸ್ಥಳೀಯ ಸಂಸ್ಥೆಗೆ'

ಈ ಮಸೂದೆಯು ಕಾಯ್ದೆಯಾದ ಬಳಿಕ ಅದರ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಹೊಣೆಯನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಸಂಚಾರ ನಿರ್ವಹಣಾ ಏಜೆನ್ಸಿಗಳಿಗೆ ವಹಿಸಲಾಗಿದೆ. ಈ ಸಂಸ್ಥೆಗಳು ವಿಶೇಷ ತಂಡಗಳನ್ನು ನಿಯೋಜಿಸಬೇಕು. ಅದರ ಅಧಿಕಾರಿಗಳು ನಿಯಮಿತ ತಪಾಸಣೆಗಳನ್ನು ನಡೆಸುವ ಮೂಲಕ ನಿಯಮ ಪಾಲನೆ ಆಗುವಂತೆ ನೋಡಿಕೊಳ್ಳಬೇಕು. ಕಾಯ್ದೆಯಲ್ಲಿರುವ ಅಂಶಗಳ ಜಾರಿಗೆ ತಂತ್ರಜ್ಞಾನ ಬಳಕೆಗೆ ಹಾಗೂ ಸ್ವಯಂಸೇವಕರ ಬಳಕೆಗೂ ಮಸೂದೆಯಲ್ಲೇ ಅವಕಾಶ ಕಲ್ಪಿಸಲಾಗಿದೆ.

ರಾತ್ರಿ ಕರ್ಫ್ಯೂನಿಂದ ಹೊಸ ವರ್ಷ ಆಚರಣೆಗೆ ತೊಂದರೆ

ಹೊರವಲಯದ ರೆಸಾರ್ಟ್‌ಗಳತ್ತ ಮುಗಿಬಿದ್ದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾತ್ರಿ ಕರ್ಫ್ಯೂ ಕಾರಣದಿಂದ ನಗರದಲ್ಲಿ ಹೊಸ ವರ್ಷಾಚರಣೆಗೆ ಸಾಧ್ಯವಾಗುವುದಿಲ್ಲ ಎಂಬುದನ್ನು ಅರಿತಿರುವ ನಗರದ ಜನರು ಈಗ ಹೊರ ವಲಯದ ರೆಸಾರ್ಟ್‌ಗಳಿಗೆ ಮುಗಿಬಿದ್ದಿದ್ದಾರೆ. ಪಾರ್ಟಿ ಮುಗಿಸಿ ಮನೆಗೆ ಹಿಂದಿರುಗದೇ ಅಲ್ಲಿಯೇ ಉಳಿದುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದ್ದರಿಂದ ಎರಡು ತಿಂಗಳ ಹಿಂದೆ ರಾತ್ರಿ ಕರ್ಫ್ಯೂ ತೆರವುಗೊಳಿಸಿದ್ದ ಸರ್ಕಾರ, ಹೊಸ ವರ್ಷಾಚರಣೆ ಸಂದರ್ಭದಲ್ಲಿ ಪ್ರಕರಣಗಳ ಹೆಚ್ಚಾಗುವುದನ್ನು ತಡೆಯಲು ರಾತ್ರಿ ಕರ್ಫ್ಯೂ ಮೊರೆ ಹೋಗಿದೆ.ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆಯನ್ನು ನಿಷೇಧಿಸಿದೆ.

ಮಂಗಳವಾರದಿಂದ ರಾತ್ರಿ ಕರ್ಫ್ಯೂ ಜಾರಿಯಲ್ಲಿದ್ದು, ಬುಧವಾರದಿಂದ ಸಾರ್ವಜನಿಕರ ರಾತ್ರಿ ಸಂಚಾರ ನಿಯಂತ್ರಣಕ್ಕೆ ಪೊಲೀಸರು ಬಿಗಿ ಕ್ರಮ ಕೈಗೊಂಡಿದ್ದಾರೆ. ಅಲ್ಲಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ರಾತ್ರಿ 10ರ ಬಳಿಕ ರಸ್ತೆಯಲ್ಲಿ ಓಡಾಡುವ ಜನರನ್ನು ಪ್ರಶ್ನಿಸುತ್ತಿದ್ದಾರೆ. ಮದ್ಯಪಾನ ಮಾಡಿ ಚಾಲನೆ ಮಾಡುವ ವಾಹನ ಸವಾರರ ಅಡ್ಡಗಟ್ಟಿ ದಂಡ ವಿಧಿಸುತ್ತಿದ್ದಾರೆ.

ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್, ಇಂದಿರಾನಗರ, ಕೋರಮಂಗಲ ಸೇರಿ ನಗರದ ಪ್ರಮುಖ ಪಬ್ ಮತ್ತು ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಹೊಸ ವರ್ಷವನ್ನು ಬರ ಮಾಡಿಕೊಳ್ಳಲು ಸಿದ್ಧತೆ ನಡೆಸಿದ್ದವರು ಈಗ ಬೇರೆ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾರೆ. ಪೊಲೀಸರಿಂದ ತಪ್ಪಿಸಿಕೊಳ್ಳಲು ಹೊರ ವಲಯದ ರೆಸಾರ್ಟ್‌ಗಳತ್ತ ಮುಖ ಮಾಡಿದ್ದಾರೆ.

ಕರ್ಫ್ಯೂ ಜಾರಿಗೂ ಮುನ್ನವೇ ಹಲವರು ರೆಸಾರ್ಟ್‌ಗಳನ್ನು ಬುಕ್ ಮಾಡಿಕೊಂಡಿದ್ದರು. ಕರ್ಫ್ಯೂ ಜಾರಿಯಾದ ಬಳಿಕ ರೆಸಾರ್ಟ್‌ಗಳನ್ನು ತಡಕಾಡುವ ಜನರ ಸಂಖ್ಯೆ ಹೆಚ್ಚಾಗಿದೆ. ಕೆಲವರಿಗೆ ಸ್ಥಳಾವಕಾಶ ಸಿಕ್ಕರೆ, ಹಲವರಿಗೆ ಸಿಗುತ್ತಿಲ್ಲ. ಸಾಮರ್ಥ್ಯಕ್ಕಿಂತ ಶೇ 50ರಷ್ಟು ಮಾತ್ರ ಅತಿಥಿಗಳಿಗೆ ಅವಕಾಶ ನೀಡಬೇಕು ಎಂಬ ನಿಯಮ ಇರುವುದರಿಂದ ರೆಸಾರ್ಟ್‌ಗಳಲ್ಲಿ ಅವಕಾಶ ಸಿಗದಂತಾಗಿದೆ. ಸಿಕ್ಕರೂ ದುಬಾರಿ ದರ ನಿಗದಿ ವಿಧಿಸಲಾಗುತ್ತಿದೆ.

ಸರ್ಕಾರದ ಬಿಗಿ ಕ್ರಮಗಳು ಈ ಬಾರಿಯ ಹೊಸ ವರ್ಷಾಚರಣೆಯನ್ನು ಇನ್ನಷ್ಟು ದುಬಾರಿಯಾಗಿಸಿದೆ ಎನ್ನುತ್ತಾರೆ ನಗರದ ನಿವಾಸಿಗಳು.

ರೆಸಾರ್ಟ್‌ಗಳಿಗೆ ಹೋಗಿ ವಾಸ್ತವ್ಯ ಹೂಡುವ ಆರ್ಥಿಕ ಶಕ್ತಿ ಇಲ್ಲದವರು ಮನೆ– ಮನೆಗಳಲ್ಲೇ ಹೊಸ ವರ್ಷವನ್ನು ಬರ ಮಾಡಿಕೊಳ್ಳಲು ಸಿದ್ಧತೆ ನಡೆಸಿಕೊಂಡಿದ್ದಾರೆ. ಅವಿವಾಹಿತ ಯುವಕರ ಮನೆಗಳು, ರೂಂಗಳೇ ಪಾರ್ಟಿ ಹಾಲ್‌ಗಳಾಗಿ ಪರಿವರ್ತನೆಗೊಳ್ಳಲು ಸಜ್ಜಾಗಿವೆ.



ರಾತ್ರಿ ಕರ್ಫ್ಯೂ ಕಟ್ಟುನಿಟ್ಟಾಗಿ ಜಾರಿಗೊಳಿಸುತ್ತಿರುವ ಪೊಲೀಸರು –ಪ್ರಜಾವಾಣಿ ಚಿತ್ರ

'ಫೈರ್ ಕ್ಯಾಂಪ್‌ಗೆ ಅಡ್ಡಿಯಿಲ್ಲ, ಡಿ.ಜೆ ಬೇಡ'


ಕಮಲ್ ಪಂತ್

'ಹೊಸ ವರ್ಷಾಚರಣೆಗೆ ಸಾಕಷ್ಟು ಜನ ಈಗಾಗಲೇ ಬೆಂಗಳೂರಿನಿಂದ ಹೊರಗಿನ ರೆಸಾರ್ಟ್‌ಗಳತ್ತ ತೆರಳಿದ್ದಾರೆ. ಅಲ್ಲಿ ಕುಟುಂಬದವರು ಸೇರಿ ಫೈರ್ ಕ್ಯಾಂಪ್ (ಬೆಂಕಿ ಶಿಬಿರ) ನಡೆಸಿಕೊಳ್ಳಲು ಅಡ್ಡಿಪಡಿಸುವುದಿಲ್ಲ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಸ್ಪಷ್ಟಪಡಿಸಿದರು.

'ಜನರು ಸಂಭ್ರಮಾಚರಣೆ ಮಾಡದೆ ಶೋಕದಲ್ಲಿ ಕೂರಬೇಕು ಎಂಬುದು ಸರ್ಕಾರದ ಉದ್ದೇಶ ಅಲ್ಲ. ಜನರು ಒಟ್ಟಿಗೆ ಸೇರಿದರೆ ಸೋಂಕು ಹರಡುವ ಸಾಧ್ಯತೆ ಇದೆ. ಆದ್ದರಿಂದ, ಗುಂಪು ಸೇರುವುದನ್ನು ತಡೆಯಲಾಗುತ್ತಿದೆಯಷ್ಟೆ' ಎಂದರು.

'ಡಿ.ಜೆ ಹಾಕಿ ನೃತ್ಯ ಮಾಡಲು ಅವಕಾಶ ನೀಡಿದರೆ ಜನ ಗುಂಪು ಸೇರುವ ಸಾಧ್ಯತೆ ಇರುತ್ತದೆ. ಆದ್ದರಿಂದ ಡಿ.ಜೆಗೆ ಅವಕಾಶ ನೀಡುತ್ತಿಲ್ಲ. ಕುಟುಂಬ ಸದಸ್ಯರು ಒಟ್ಟಾಗಿ ಬೆಂಕಿ ಮುಂದೆ ಕುಳಿತು ಸಂಭ್ರಮ ಆಚರಿಸಲು ಯಾವುದೇ ಅಡ್ಡಿ ಇಲ್ಲ' ಎಂದರು.

'ಹೋಟೆಲ್ ಮತ್ತು ರೆಸಾರ್ಟ್‌ಗಳಲ್ಲಿ ನಿಗದಿಗಿಂತ ಹೆಚ್ಚಿನ ಅತಿಥಿಗಳಿಗೆ ಅವಕಾಶ ನೀಡುವಂತಿಲ್ಲ. ಯಾರೊಬ್ಬರೂ ಕಾನೂನು ಮೀರಬಾರದು. ಅನಗತ್ಯವಾಗಿ ಪೊಲೀಸರು ಹೋಟೆಲ್ ಮತ್ತು ರೆಸಾರ್ಟ್‌ಗಳಿಗೆ ನುಗ್ಗಿ ತೊಂದರೆ ಕೊಡುವುದಿಲ್ಲ. ಪೊಲೀಸರು ತೊಂದರೆ ಕೊಟ್ಟಿರುವ ಬಗ್ಗೆ ದೂರುಗಳು ಬಂದರೆ ಪರಿಶೀಲಿಸಲಾಗುವುದು' ಎಂದು ಅವರು ಸ್ಪಷ್ಟಪಡಿಸಿದರು.

ಎಂ.ಜಿ. ರಸ್ತೆ ಬಣ ಬಣ

ಹೊಸ ವರ್ಷಾಚರಣೆ ಸಂದರ್ಭದಲ್ಲಿ ಪ್ರತಿವರ್ಷ ಗಿಜಿಗುಡುತ್ತಿದ್ದ ಮಹಾತ್ಮಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ ಮತ್ತು ಚರ್ಚ್ ರಸ್ತೆಗಳು ಬಣಗುಡುತ್ತಿವೆ.

ಕ್ರಿಸ್‌ಮಸ್ ಆಚೆ–ಈಚೆಗಿನ ದಿನಗಳಲ್ಲಿ ಪಾದಚಾರಿಗಳ ಓಡಾಡಲು ಸಾಧ್ಯವಾಗದಷ್ಟು ಜನ ಸೇರಿರುತ್ತಿದ್ದರು. ರಾತ್ರಿ ಕರ್ಫ್ಯೂ ಜಾರಿಯಾದ ಬಳಿಕ ವಹಿವಾಟು ಸಂಪೂರ್ಣ ಕುಸಿದಿದೆ ಎನ್ನುತ್ತಾರೆ ಇಲ್ಲಿನ ಹೋಟೆಲ್‌ಗಳ ಸಿಬ್ಬಂದಿ.

ಎಂ.ಜಿ. ರಸ್ತೆ ಸೇರಿ ನಗರದ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ (ಸಿಬಿಡಿ) ಶುಕ್ರವಾರ ಸಂಜೆ 6 ಗಂಟೆ ಬಳಿಕ ಸಾರ್ವಜನಿಕ ಸಂಚಾರವನ್ನು ಪೊಲೀಸರು ನಿಯಂತ್ರಿಸಲಿದ್ದಾರೆ. ಇಲ್ಲಿನ ಹೋಟೆಲ್‌ಗಳಲ್ಲಿ ಪಾರ್ಟಿ ಆಚರಿಸಲು ಮೊದಲೇ ಮುಂಗಡ ಕಾಯ್ದಿರಿಸಿದ್ದವರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. ಕಾಯ್ದಿರಿಸಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಬೇಕಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಕ್ಕೂರು– ಚೊಕ್ಕನಹಳ್ಳಿ ಸಂಪರ್ಕವೇ ದುಸ್ತರ

ಹದಗೆಟ್ಟ ರಸ್ತೆ: ವಾಹನ ಸಂಚಾರಕ್ಕೆ ಸಂಚಕಾರ

• ಡಿ.ಸುರೇಶ್

ಯಲಹಂಕ: ಅಗೆದು ಬಿಟ್ಟಿರುವ ರಸ್ತೆಗಳು, ಜಲ್ಲಿ ಹರಡಿ ಮಾಯವಾದ ಅಧಿಕಾರಿಗಳು, ಕಲ್ಲು-ಗುಂಡಿಗಳ ಹಾದಿಯಲ್ಲಿ ವಾಹನ ಸವಾರರ ಪರದಾಟ.

ಇದು ಜಕ್ಕೂರು ಬಡಾವಣೆಯಿಂದ ಚೊಕ್ಕನಹಳ್ಳಿ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯ ಸ್ಥಿತಿ ಇದು.

ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಯಾದ ಗ್ರಾಮಗಳಿಗೆ ಕಾವೇರಿ ನೀರು ಪೂರೈಕೆ ಮಾಡುವ ಉದ್ದೇಶದಿಂದ ಜಕ್ಕೂರು ಬಡಾವಣೆಯಿಂದ ಚೊಕ್ಕನಹಳ್ಳಿ ತನಕ ಬೆಂಗಳೂರು ಜಲಮಂಡಳಿ ವತಿಯಿಂದ 5ನೇ ಹಂತದ ಕಾವೇರಿನೀರು ಪೂರೈಕೆಗಾಗಿ (ಜೈಕಾ ಯೋಜನೆ) ದೊಡ್ಡ ಪೈಪ್‌ಗಳನ್ನು ಅಳವಡಿಸಲಾಗಿದೆ. ಅದಕ್ಕೆಂದು ತೆಗೆದಿದ್ದ ಗುಂಡಿಗಳನ್ನು ಸರಿಯಾಗಿ ಮುಚ್ಚದಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸಬೇಕಾಗಿದೆ.

'ಜಕ್ಕೂರು, ಸಂಪಿಗೇಹಳ್ಳಿ, ಶ್ರೀರಾಮಪುರ, ಅಗ್ರಹಾರ, ಚೊಕ್ಕನಹಳ್ಳಿ ಸೇರಿದಂತೆ ಹಲವು ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಇದಾಗಿದೆ. ಈ ಮಾರ್ಗದಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಕಾವೇರಿ ಕೊಳವೆ ಮಾರ್ಗ ಅಳವಡಿಸಲು ಗುಂಡಿ ತೆಗೆದಿರುವ ಜಲಮಂಡಳಿಯು ಅದನ್ನು ಮುಚ್ಚದೆ ಹಾಗೇ ಬಿಟ್ಟಿದೆ. ಪ್ರತಿನಿತ್ಯ ಈ ಭಾಗದಲ್ಲಿ ಸಂಚರಿಸುವ ವಾಹನ ಸವಾರರು ಹಾಗೂ ಪಾದಚಾರಿಗಳು ದುರಸ್ತಿ ಕಾಣದ ರಸ್ತೆಯಿಂದಾಗಿ ತೀವ್ರ ತೊಂದರೆ ಅನುಭವಿಸಬೇಕಾಗಿದೆ' ಎಂದು ಸ್ಥಳೀಯರು ಆರೋಪಿಸುತ್ತಾರೆ.

'ಜಕ್ಕೂರು ಬಡಾವಣೆಯ ಶನೈಶ್ಚರಸ್ವಾಮಿ ದೇವಾಲಯದಿಂದ ಜಕ್ಕೂರು ಮತ್ತು ಶಿವರಾಮಕಾರಂತನಗರ ಮಾರ್ಗವಾಗಿ ಚೊಕ್ಕನಹಳ್ಳಿಯವರೆಗೆ ಕಾವೇರಿ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಯನ್ನು ಎರಡು ವರ್ಷಗಳ ಹಿಂದೆ ಜಲಮಂಡಳಿ ಆರಂಭಿಸಿತು. ರಸ್ತೆಯ ಅರ್ಧ ಭಾಗವನ್ನು ಜೆಸಿಬಿಯಿಂದ ಸುಮಾರು ಏಳೆಂಟು ಅಡಿಗಳಷ್ಟು ಆಳದ ತನಕ ತೆಗೆದು, ಪೈಪ್‌ಲೈನ್ ಅಳವಡಿಸಿದ ನಂತರ ಸರಿಯಾಗಿ ಮುಚ್ಚಿಲ್ಲ' ಎಂದು ಜಕ್ಕೂರು ನಿವಾಸಿ ಎಂ.ಶ್ರೀನಿವಾಸ ಮೂರ್ತಿ ದೂರಿದರು.


ಎಂ. ಶ್ರೀನಿವಾಸ ಮೂರ್ತಿ

'ರಸ್ತೆಗೆ ಇತ್ತೀಚೆಗೆ ಕಾಟಾಚಾರಕ್ಕೆ ಜಲ್ಲಿ ಸುರಿದಿದ್ದರು. ವಾಹನಗಳ ಓಡಾಟದಿಂದ ಜಲ್ಲಿ ಕಲ್ಲುಗಳು ರಸ್ತೆಯೆಲ್ಲಾ ಹರಡಿಕೊಂಡಿವೆ. ವಾಹನ ಸಂಚಾರಕ್ಕೆ ಸಾಧ್ಯವೇ ಆಗದಷ್ಟು ತೊಂದರೆಯಾಗಿದೆ. ವೃದ್ಧರು ಮತ್ತು ಮಕ್ಕಳು ಪರದಾಡಬೇಕಾದ ಸ್ಥಿತಿ ಇದೆ. ಈ ರಸ್ತೆಯುದ್ದಕ್ಕೂ ಶಾಲಾ–ಕಾಲೇಜುಗಳಿದ್ದು, ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಪ್ರಯಾಸಪಡಬೇಕಾದ ಸ್ಥಿತಿ ಇದೆ' ಎಂದು ಆರೋಪಿಸಿದರು.

ಜಲ್ಲಿ ಸುರಿದಿರುವ ರಸ್ತೆಯಲ್ಲಿ ವಾಹನ ಚಲಾಯಿಸುವುದು ಕಷ್ಟ. ವಾಹನಗಳ ಟೈರ್‌ಗಳು ರಸ್ತೆ ಮಧ್ಯದಲ್ಲೇ ಪಂಕ್ಚರ್ ಆಗಿ ನಿಲ್ಲುವಂತಾಗಿದೆ. ಟೈರ್‌ಗಳಿಗೆ ಸಿಲುಕುವ ಕಲ್ಲುಗಳು ಸಿಡಿದು ಬೇರೆ ವಾಹನ ಮತ್ತು ಪಾದಚಾರಿಗಳಿಗೆ ಬಡಿಯುತ್ತಿವೆ. ಸ್ಥಳೀಯರಿಗೆ ನರಕವೇ ಕಣ್ಮುಂದೆ ಬಂದಂತಾಗಿದೆ' ಎಂದು ಸ್ಥಳೀಯರು ದೂರಿದರು.


ಜಲಮಮಡಳಿಯವರು ಅಗೆದು ಹಾಗೆಯೇ ಬಿಟ್ಟಿರುವ ರಸ್ತೆಯನ್ನು ಶಾಸಕ ಕೃಷ್ಣಬೈರೇಗೌಡ ಅವರು ಪರಿಶೀಲಿಸಿದರು



ಶಾಸಕರಿಂದ ಪರಿಶೀಲನೆ

ಶಾಸಕ ಕೃಷ್ಣಬೈರೇಗೌಡ ಅವರು ಜಲಮಂಡಳಿ ಹಾಗೂ ಬಿಬಿಎಂಪಿ ಅಧಿಕಾರಿಗಳೊಂದಿಗೆ ಬುಧವಾರ ಸ್ಥಳಕ್ಕೆ ಭೇಟಿ ನೀಡಿ ರಸ್ತೆಯ ಸ್ಥಿತಿ ಪರಿಶೀಲಿಸಿದರು.

ರಸ್ತೆಯಲ್ಲಿನ ತೊಂದರೆ ಬಗ್ಗೆ ಸ್ಥಳೀಯರು ಅಳಲು ತೋಡಿಕೊಂಡರು. ಈ ವೇಳೆ ಜಲಮಂಡಳಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕರು, ಕೂಡಲೇ ರಸ್ತೆಯನ್ನು ಸರಿಪಡಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಸೂಚಿಸಿದರು.



ಈ ರಸ್ತೆಯಲ್ಲಿ ವಾಹನಗಳು ಆಗಾಗ ಕೆಟ್ಟು ನಿಲ್ಲುವುದು ಸಾಮಾನ್ಯವಾಗಿದೆ. ಗರ್ಭಿಣಿಯರು ಮತ್ತು ರೋಗಿಗಳನ್ನು ಕರೆದೊಯ್ಯಲು ತೀವ್ರ ತೊಂದರೆಯಾಗುತ್ತಿದೆ.

ರವಿ, ಆಟೊರಿಕ್ಷಾ ಚಾಲಕ

'ವಾರದೊಳಗೆ ಪರಿಹಾರ'

'ರಸ್ತೆ ಅಭಿವೃದ್ಧಿಪಡಿಸುವ ಸಲುವಾಗಿ ಈಗಾಗಲೇ ವೆಟ್‌ಮಿಕ್ಸ್ ಮತ್ತು ಜಲ್ಲಿ ಹಾಕಲಾಗಿದೆ. ನಾಲ್ಕು ತಿಂಗಳಿಂದ ಮಳೆ ಪ್ರಮಾಣ ಜಾಸ್ತಿ ಇದ್ದಿದ್ದರಿಂದ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಲಿಲ್ಲ. ಮುಂದಿನ ವಾರದಲ್ಲಿ ರಸ್ತೆ ಅಭಿವೃದ್ಧಿಪಡಿಸಲಾಗುವುದು'

ನಾಗೇಂದ್ರಬಾಬು, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಜಲಮಂಡಳಿ

ಅರುಣಾಚಲದ 15 ಸ್ಥಳಗಳ ಹೆಸರು ಬದಲಿಸಿದ ಚೀನಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಅರುಣಾಚಲ ಪ್ರದೇಶದ 15 ಸ್ಥಳಗಳ ಹೆಸರುಗಳನ್ನು ಚೀನಾ ಬದಲಿಸಿದೆ. ಈಶಾನ್ಯದ ಈ ರಾಜ್ಯದ ಮೇಲೆ ತನಗೆ ಹಕ್ಕು ಇದೆ ಎಂಬುದನ್ನು ತೋರಿಸುವುದು ಇದರ ಉದ್ದೇಶ. ಪೂರ್ವ ಲಡಾಖ್‌ನ ಗಡಿಯಲ್ಲಿ ಭಾರತ–ಚೀನಾ ಸೈನಿಕರ ನಡುವೆ 20 ತಿಂಗಳಿಂದ ಸಂಘರ್ಷ ನಡೆಯುತ್ತಿದ್ದು, ಅದರ ನಡುವಲ್ಲಿಯೇ ಚೀನಾ ಈ ಕ್ರಮ ಕೈಗೊಂಡಿದೆ.

ಝಂಗಾಂಗ್ ಅಥವಾ ದಕ್ಷಿಣ ಷಿಝಾಂಗ್‌ನ (ಟಿಬೆಟ್ ಸ್ವಾಯತ್ತ ಪ್ರದೇಶ) 15 ಸ್ಥಳಗಳಿಗೆ ಮ್ಯಾಂಡರಿನ್ ಭಾಷೆಯ ಹೆಸರು ಇರಿಸಲಾಗಿದೆ ಎಂದು ಚೀನಾದ ಸರ್ಕಾರಿ ಸ್ವಾಮ್ಯದ ಪತ್ರಿಕೆ ಗ್ಲೋಬಲ್ ಟೈಮ್ಸ್ ವರದಿ ಮಾಡಿದೆ.

ಅರುಣಾಚಲ ಪ್ರದೇಶದಲ್ಲಿ 90 ಸಾವಿರ ಚದರ ಕಿಲೋಮೀಟರ್ ಪ್ರದೇಶವು ತನ್ನದು ಎಂದು ಚೀನಾ ಹೇಳುತ್ತಿದೆ. ಈ ಪ್ರದೇಶವನ್ನು ಝಂಗಾಂಗ್ ಅಥವಾ ದಕ್ಷಿಣ ಚೀನಾ ಎಂದು ಕರೆಯುತ್ತಿದೆ. ಆದರೆ, ಅರುಣಾಚಲ ಪ್ರದೇಶವು ತನ್ನ ಅವಿಭಾಜ್ಯ ಅಂಗ ಎಂದು ಭಾರತ ಹೇಳುತ್ತಿದೆ.

ಚೀನಾದ ಸ್ಟೇಟ್ ಕೌನ್ಸಿಲ್‌ನ ನಿಯಮಗಳಿಗೆ ಅನುಗುಣವಾಗಿ ದಕ್ಷಿಣ ಟಿಬೆಟ್‌ನ 15 ಸ್ಥಳಗಳ ಹೆಸರು ಬದಲಾಯಿಸಲಾಗಿದೆ ಎಂದು ಗ್ಲೋಬಲ್ ಟೈಮ್ಸ್ ಹೇಳಿದೆ. ಸ್ಟೇಟ್ ಕೌನ್ಸಿಲ್ ಎಂದರೆ ಚೀನಾದ ಮುಖ್ಯ ಆಡಳಿತ ಪ್ರಾಧಿಕಾರವಾಗಿದೆ. ಹೆಸರು ಬದಲಿಸಲಾಗಿದೆ ಎಂದು ಚೀನಾ ಹೇಳಿದ 15 ಸ್ಥಳಗಳಲ್ಲಿ ಎಂಟು ವಸತಿ ಪ್ರದೇಶಗಳು, ನಾಲ್ಕು ಪರ್ವತಗಳು, ಎರಡು ನದಿಗಳು ಮತ್ತು ಒಂದು ಕಣಿವೆ ಸೇರಿವೆ. 2017ರ ಏಪ್ರಿಲ್‌ನಲ್ಲಿಯೂ ಇಂತಹುದೇ ಪ್ರಯತ್ನಕ್ಕೆ ಚೀನಾ ಕೈ ಹಾಕಿತ್ತು. ಆರು ಸ್ಥಳಗಳ ಹೆಸರು ಬದಲಿಸಿತ್ತು. ಆದರೆ, ಭಾರತ ಅದನ್ನು ತಳ್ಳಿ ಹಾಕಿತ್ತು.

ಅರುಣಾಚಲ ಪ್ರದೇಶವು ಭಾರತದ ಭಾಗ ಎಂಬುದನ್ನು ಚೀನಾ ಎಂದೂ ಒಪ್ಪಿಲ್ಲ ಎಂದು ಚೀನಾದ ವಿದೇಶಾಂಗ ಸಚಿವಾಲಯವು 2020ರ ಫೆಬ್ರುವರಿಯಲ್ಲಿ ಹೇಳಿತ್ತು. ಚೀನಾದ ಸೈನಿಕರು ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶದಲ್ಲಿ ಭಾರತದೊಳಕ್ಕೆ ನುಸುಳುವ ಪ್ರಯತ್ನವನ್ನು ಇತ್ತೀಚೆಗೆ ಮಾಡಿದ್ದರು. ಚೀನಾದೊಂದಿಗಿನ ಸಂಘರ್ಷವು ಈ ಎರಡು ರಾಜ್ಯಗಳಿಗೂ ವಿಸ್ತರಣೆ ಆಗಬಹುದು ಎಂಬ ಅನುಮಾನಕ್ಕೆ ಇದು ಕಾರಣವಾಗಿತ್ತು.

ಇನ್ನೂ ಇಲ್ಲ ಪ್ರತಿಕ್ರಿಯೆ

ಚೀನಾದ ಕ್ರಮಕ್ಕೆ ಭಾರತದ ಅಧಿಕೃತ ಪ್ರತಿಕ್ರಿಯೆ ಇನ್ನೂ ಪ್ರಕಟವಾಗಿಲ್ಲ. ಆದರೆ, ಚೀನಾವು 2017ರ ಏಪ್ರಿಲ್‌ನಲ್ಲಿ ಇಂತಹುದೇ ಕ್ರಮಕ್ಕೆ ಮುಂದಾಗಿದ್ದಾಗ ಭಾರತ ಕಟುವಾದ ಪ್ರತಿಕ್ರಿಯೆ ನೀಡಿತ್ತು. 'ಪಟ್ಟಣಗಳಿಗೆ ಹೊಸ ಹೆಸರುಗಳನ್ನು ಇರಿಸುವುದರಿಂದ ನೆರೆಯ ದೇಶದ ಪ್ರದೇಶದ ಮೇಲೆ ನಿಮ್ಮ ಅಕ್ರಮ ಹಕ್ಕು ಸಾಧನೆಯು ಸಕ್ರಮ ಅನಿಸಿಕೊಳ್ಳುವುದಿಲ್ಲ' ಎಂದು ವಿದೇಶಾಂಗ ಸಚಿವಾಲಯವು ಹೇಳಿತ್ತು.

ಆಹಾರ ವಿತರಕರಿಂದ ಕನ್ನಡ ಕಡೆಗಣನೆ: ಕ್ರಮಕ್ಕೆ ಆಗ್ರಹ

ಬೆಂಗಳೂರು: 'ಗ್ರಾಹಕರಿಗೆ ಸಿದ್ಧ ಆಹಾರ ತಲುಪಿಸುವ ಸ್ವಿಗ್ಗಿ ಸಂಸ್ಥೆಯ ಸಿಬ್ಬಂದಿಯಲ್ಲಿ ಹಿಂದಿ ಭಾಷಿಕರೂ ಇದ್ದಾರೆ. ಅವರಿಗೆ ಸಂಸ್ಥೆ ಕನ್ನಡ ಕಲಿಸದಿರುವುದರಿಂದ ಗ್ರಾಹಕರು ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಇಲಾಖೆ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಸಂಸ್ಥೆಯು ಕನ್ನಡ ಕಡೆಗಣಿಸುತ್ತಿರುವ ಬಗ್ಗೆ ಪ್ರಭಾಕರ್ ಎಂಬುವರು ಪ್ರಾಧಿಕಾರಕ್ಕೆ ದೂರು ನೀಡಿದ್ದರು.

'ಸ್ವಿಗ್ಗಿ ಸಂಸ್ಥೆಯು ಕನ್ನಡ ಬಾರದ ಅನ್ಯ ಭಾಷಿಕರಿಗೆ ಕನ್ನಡ ಕಲಿಸುವ ಪ್ರಯತ್ನ ಮಾಡುತ್ತಿಲ್ಲ. ಕೆಲಸ ಮಾಡುವ ಕೆಲವರು ಹಿಂದಿ ಭಾಷೆಯನ್ನಷ್ಟೇ ಬಲ್ಲವರಾಗಿದ್ದಾರೆ. ಇವರು ಕನ್ನಡದಲ್ಲಿ ಸಂವಹನ ನಡೆಸುತ್ತಿಲ್ಲ. ಅಷ್ಟೇ ಅಲ್ಲ, 'ನಮಗೆ ಕನ್ನಡ ಬರುವುದಿಲ್ಲ. ಹಿಂದಿಯಲ್ಲೇ ಮಾತನಾಡಬೇಕು ಎಂಬ ಬೇಡಿಕೆ ಇಡುತ್ತಿದ್ದಾರೆ ಎಂದು ದೂರುದಾರರು ತಿಳಿಸಿದ್ದಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಜಿಎಸ್‌ಟಿ ಪರಿಹಾರ 5 ವರ್ಷ ವಿಸ್ತರಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಜಿಎಸ್‌ಟಿ ಪರಿಹಾರವನ್ನು ಇನ್ನೂ ಐದು ವರ್ಷಗಳವರೆಗೆ ವಿಸ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ಹಲವು ರಾಜ್ಯಗಳು ಬೇಡಿಕೆ ಇಟ್ಟಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯಗಳ ಹಣಕಾಸು ಸಚಿವರ ಜೊತೆ ಗುರುವಾರ ಬಜೆಟ್ ಪೂರ್ವಸಭೆ ನಡೆಸಿದರು. ಕೋವಿಡ್ ಸಾಂಕ್ರಾಮಿಕದಿಂದಾಗಿ ರಾಜ್ಯಗಳಿಗೆ ವರಮಾನ ನಷ್ಟ ಉಂಟಾಗಿದೆ. ಹೀಗಾಗಿ ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲಿ ಕೇಂದ್ರ ಸರ್ಕಾರದ ಪಾಲು ಹೆಚ್ಚಿಸುವಂತೆ ಸಚಿವೆ ನಿರ್ಮಲಾ ಅವರನ್ನು ರಾಜ್ಯಗಳು ಒತ್ತಾಯಿಸಿವೆ.



ಜಿಎಸ್‌ಟಿ ಜಾರಿಗೊಳಿಸುವುದರಿಂದ ರಾಜ್ಯಗಳಿಗೆ ಆಗುವ ವರಮಾನ ಕೊರತೆ ತುಂಬಿಕೊಡುವ ಪರಿಹಾರ ವ್ಯವಸ್ಥೆಯು 2022ರ ಜೂನ್‌ಗೆ ಅಂತ್ಯವಾಗಲಿದೆ.

ಸಭೆಯಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ದೆಹಲಿ ಉಪಮುಖ್ಯಮಂತ್ರಿ ಮನಿಶ್ ಸಿಸೋಡಿಯಾ, 'ಜಿಎಸ್‌ಟಿ ಪರಿಹಾರವನ್ನು ವಿಸ್ತರಿಸದೇ ಇದ್ದರೆ ಹಲವು ರಾಜ್ಯಗಳ ಆರ್ಥಿಕ ಸ್ಥಿತಿಯು ಹದಗೆಡಲಿದೆ' ಎಂದರು.

ಕೋವಿಡ್ ಸಾಂಕ್ರಾಮಿಕದಿಂದಾಗಿ ರಾಜ್ಯದ ವರಮಾನ ಇಳಿಕೆ ಆಗಿದ್ದು, ವೆಚ್ಚವು ಹೆಚ್ಚಾಗುತ್ತಿದೆ. ಹೀಗಾಗಿ 2022–23ನೇ ಹಣಕಾಸು ವರ್ಷದಲ್ಲಿ ಯಾವುದೇ ಷರತ್ತು ಇಲ್ಲದೇ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಎಸ್‌ಜಿಡಿಪಿ) ಶೇ 5ರಷ್ಟು ಮಾರುಕಟ್ಟೆಯಿಂದ ಸಾಲ ಪಡೆಯಲು ಅನುಮತಿ ನೀಡುವಂತೆ ತಮಿಳುನಾಡು ಸರ್ಕಾರವು ಬೇಡಿಕೆ ಇಟ್ಟಿದೆ.

ಪೆಟ್ರೋಲ್, ಡೀಸೆಲ್ ಮೇಲಿನ ಸೆಸ್ ತಗ್ಗಿಸಿ: ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ತಗ್ಗಿಸುವ ಬದಲಾಗಿ ಸೆಸ್ ಅನ್ನು ಕಡಿಮೆ ಮಾಡುವಂತೆ ಛತ್ತೀಸಗಡದ ಮುಖ್ಯಮಂತ್ರಿ ಭೂಪೇಷ್ ಬಘೆಲ್ ಅವರು ಒತ್ತಾಯಿಸಿದ್ದಾರೆ. ಎಕ್ಸೈಸ್ ಸುಂಕ ತಗ್ಗಿಸುವುದರಿಂದ ರಾಜ್ಯಗಳ ತೆರಿಗೆ ಪಾಲು ಕಡಿಮೆ ಆಗಲಿದೆ. ವ್ಯಾಟ್ ಸಂಗ್ರಹವು ಇಳಿಕೆ ಕಾಣಲಿದೆ ಎಂದು ಹೇಳಿದ್ದಾರೆ.

ಜವಳಿ, ಪಾದರಕ್ಷೆ ತೆರಿಗೆ ಹೆಚ್ಚಳಕ್ಕೆ ವಿರೋಧ

ಜವಳಿ, ಪಾದರಕ್ಷೆ ಮೇಲಿನ ಜಿಎಸ್‌ಟಿಯನ್ನು ಶೇ 5 ರಿಂದ ಶೇ 12ಕ್ಕೆ ಹೆಚ್ಚಿಸಿರುವ ಕೇಂದ್ರ ಸರ್ಕಾರದ ನಿರ್ಧಾರಕ್ಕೆ ಹಲವು ರಾಜ್ಯಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ.

ಜಿಎಸ್‌ಟಿ ಮಂಡಳಿಯು ಶುಕ್ರವಾರ ಸಭೆ ನಡೆಸಲಿದ್ದು, ಸರ್ಕಾರಿ ಮೂಲಗಳ ಪ್ರಕಾರ, ಜಿಎಸ್‌ಟಿ ಹೆಚ್ಚಳವನ್ನು ಕೈಬಿಡುವ ಸಾಧ್ಯತೆ ಇದೆ.

ಸಂಕ್ಷಿಪ್ತ ಸುದ್ದಿ

ದಾಸರಹಳ್ಳಿಗೆ ಇಂದು ದೇವೇಗೌಡ ಭೇಟಿ

ಬೆಂಗಳೂರು: ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದ ಹಲವು ಸ್ಥಳಗಳಿಗೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಇದೇ 31ರಂದು (ಶುಕ್ರವಾರ) ಭೇಟಿ ನೀಡಲಿದ್ದಾರೆ. ಸುಂಕದಕಟ್ಟೆ, ಹೆಗ್ಗನಹಳ್ಳಿ, ರಾಜಗೋಪಾಲನಗರ, ನೆಲಗದರನಹಳ್ಳಿ, ಚಿಕ್ಕಸಂದ್ರ, ಎ.ಜಿ.ಬಿ. ಲೇಔಟ್, ಅಬ್ಬಿಗೆರೆ ಸರ್ಕಲ್ ಮುಖ್ಯರಸ್ತೆ ಪ್ರದೇಶದಲ್ಲಿ ದೇವೇಗೌಡರು ಸಾರ್ವಜನಿಕರನ್ನು ಭೇಟಿ ಆಗಲಿದ್ದಾರೆ ಶಾಸಕ ಆರ್.ಮಂಜುನಾಥ್ ತಿಳಿಸಿದ್ದಾರೆ.

ಆರೋಗ್ಯ ತಪಾಸಣಾ ಶಿಬಿರ ಜ.2ಕ್ಕೆ

ಬೆಂಗಳೂರು: ಯೋಗ ಪರಿಜ್ಞಾನ ಪ್ರತಿಷ್ಠಾನವು ಕೆಂಗೇರಿ ಬಳಿಯ ಕೊಮ್ಮಘಟ್ಟದಲ್ಲಿರುವ ಪೂರ್ಣಾಯು ಆಯುರ್ವೇದ ಕೇಂದ್ರದಲ್ಲಿ ಹೊಸ ವರ್ಷದ ಪ್ರಯುಕ್ತ ಭಾನುವಾರ (ಜ.2) ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಉಚಿತ ಆಯುರ್ವೇದ ಆರೋಗ್ಯ ಶಿಬಿರ ಹಮ್ಮಿಕೊಂಡಿದೆ. ಮಾಹಿತಿಗೆ ಸಂಪರ್ಕ: 9481037171/ 9480709995

ಗಂಡನ ಜತೆ ಬಾಳಲು ಹೆಂಡತಿಗೆ ಬಲವಂತ ಸಲ್ಲದು: ಹೈಕೋರ್ಟ್

ಅಹಮದಾಬಾದ್ (ಪಿಟಿಐ): ಹೆಂಡತಿಯು ಗಂಡನ ಜೊತೆಗೇ ಬಾಳಬೇಕು ಮತ್ತು ದಾಂಪತ್ಯದ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ಬಲವಂತ ಮಾಡುವಂತಿಲ್ಲ. ಹೀಗೆ ಮಾಡಬೇಕು ಎಂದು ನ್ಯಾಯಾಲಯ ಕೂಡ ಆದೇಶ ನೀಡುವಂತಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

ಪತಿಯು ಎರಡನೇ ಮದುವೆಯಾದರೆ, ಗಂಡನ ಜೊತೆ ಬದುಕಲು ಮುಸ್ಲಿಂ ಮಹಿಳೆಯು ನಿರಾಕರಿಸಬಹುದು. ಏಕೆಂದರೆ, 'ಮುಸ್ಲಿಂ ಕಾನೂನು ಬಹುಪತ್ನಿತ್ವವನ್ನು ಒಪ್ಪುತ್ತದೆಯಾದರೂ ಅದನ್ನು ಪ್ರೋತ್ಸಾಹಿಸುವುದಿಲ್ಲ' ಎಂದೂ ಸ್ಪಷ್ಟಪಡಿಸಿದೆ.

ದಾಂಪತ್ಯದ ಹಕ್ಕುಗಳ ಮರುಸ್ಥಾಪನೆಯು ಗಂಡನ ಹಕ್ಕುಗಳ ಮೇಲೆ ಮಾತ್ರ ಅವಲಂಬಿತ ಅಲ್ಲ. ಗಂಡನ ಜತೆಗೇ ಬಾಳಬೇಕು ಎಂದು ಬಲವಂತ ಮಾಡುವುದು ಹೆಂಡತಿಯನ್ನು ತಾರತಮ್ಯದಿಂದ ನೋಡಿದಂತೆ ಆಗುವುದಿಲ್ಲವೇ ಎಂಬುದನ್ನೂ ಕೌಟುಂಬಿಕ ನ್ಯಾಯಾಲಯಗಳು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಮತ್ತು ನಿರಲ್ ಮೆಹ್ತಾ ಅವರ ಪೀಠವು ಹೇಳಿದೆ.

> **ಕಾನೂನಿನ ಬಗೆಗಿನ ನಮ್ಮ ದೃಷ್ಟಿಯನ್ನು ಆಧುನಿಕ ಸಾಮಾಜಿಕ ಪರಿಸ್ಥಿತಿಗೆ ತಕ್ಕಂತೆ ಬದಲಾಯಿಸಿಕೊಳ್ಳುವುದು ಅಗತ್ಯ**
> **ಗುಜರಾತ್ ಹೈಕೋರ್ಟ್**

ಗಂಡನ ಮನೆ ತೊರೆದಿದ್ದ ಮುಸ್ಲಿಂ ಮಹಿಳೆಯು ಮರಳಿ ಗಂಡನ ಮನೆಗೆ ಹೋಗಬೇಕು. ವೈವಾಹಿಕ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ಗುಜರಾತ್‌ನ ಬನಸ್ಕಾಂತ ಜಿಲ್ಲೆಯ ಕೌಟುಂಬಿಕ ನ್ಯಾಯಾಲಯವು 2021ರ ಜುಲೈನಲ್ಲಿ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ಮಹಿಳೆಯು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. 2010ರ ಮೇಯಲ್ಲಿ ಮಹಿಳೆಯ ಮದುವೆ ಆಗಿತ್ತು.



ಮಹಿಳೆಯು ಸರ್ಕಾರಿ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು 2017ರ ಜುಲೈನಲ್ಲಿ ಮಗನನ್ನು ಕರೆದುಕೊಂಡು ಗಂಡನ ಮನೆ ಬಿಟ್ಟು ಹೋಗಿದ್ದರು. ಆಸ್ಟ್ರೇಲಿಯಾಕ್ಕೆ ವಲಸೆ ಹೋಗಿ ಅಲ್ಲಿಯೇ ನೆಲೆಯಾಗುವಂತೆ ಗಂಡ ಮತ್ತು ಗಂಡನ ಮನೆಯವರು ಒತ್ತಡ ಹೇರಿದ್ದು ಇದಕ್ಕೆ ಕಾರಣ ಎಂದು ಅವರು ಹೇಳಿದ್ದಾರೆ.

ಮಹಿಳೆಯು ಕೆಲಸದಲ್ಲಿ ಇರುವುದರಿಂದಾಗಿ ಮನೆಯ ಜವಾಬ್ದಾರಿ ನಿರ್ವಹಿಸಲು ಅವರಿಗೆ ಸಾಧ್ಯವಾಗಿಲ್ಲ. ಹಾಗಾಗಿ, ಗಂಡನ ಮನೆಯವರು ಕಿರುಕುಳ ನೀಡುತ್ತಿದ್ದಾರೆ ಎಂಬ ಕ್ಷುಲ್ಲಕ ಕಾರಣ ಮುಂದಿಟ್ಟು ಅವರು ಮನೆ ಬಿಟ್ಟು ಹೋಗಿದ್ದಾರೆ ಎಂದು ಕೌಟುಂಬಿಕ ಕೋರ್ಟ್ ಭಾವಿಸಿತ್ತು ಎಂದು ಪೀಠ ಹೇಳಿದೆ.

ಮಹಿಳೆಯು ಮನೆ ಬಿಟ್ಟು ಹೋದ ಬಳಿಕ ಗಂಡ ಮತ್ತೊಂದು ಮದುವೆ ಆಗಿದ್ದಾನೆ. ಹೀಗಿರುವಾಗ ಕೌಟುಂಬಿಕ ನ್ಯಾಯಾಲಯವು ಗಂಡನ ಪರವಾಗಿ ಆದೇಶ ನೀಡಿದ್ದು ಎಷ್ಟು ಸರಿ ಎಂದೂ ಪೀಠವು ಪ್ರಶ್ನಿಸಿದೆ.

ಹೆಬ್ಬಗೋಡಿ, ಚಂದಾಪುರ: ಬಿಜೆಪಿ ಮೇಲುಗೈ

ಪ್ರಜಾವಾಣಿ ವಾರ್ತೆ

ಆನೇಕಲ್: ಆನೇಕಲ್ ತಾಲ್ಲೂಕಿನ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಹೆಬ್ಬಗೋಡಿ ನಗರಸಭೆ, ಚಂದಾಪುರ ಪುರಸಭೆಯಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ ದೊರೆತಿದೆ. ಜಿಗಣಿಯಲ್ಲಿ ಕಾಂಗ್ರೆಸ್ ಅಧಿಕಾರದ ಗದ್ದುಗೆ ಏರಲು ಯಶಸ್ವಿಯಾಗಿದೆ.

ಹೆಬ್ಬಗೋಡಿ ನಗರಸಭೆಯ 31 ವಾರ್ಡ್‌ಗಳ ಪೈಕಿ 16 ಬಿಜೆಪಿ, 7 ಕಾಂಗ್ರೆಸ್ ಮತ್ತು 3 ವಾರ್ಡ್‌ಗಳಲ್ಲಿ ಜೆಡಿಎಸ್ ಜಯಗಳಿಸಿದೆ. 5 ವಾರ್ಡ್‌ಗಳಿಗೆ ಅವಿರೋಧ ಆಯ್ಕೆಯಾಗಿದ್ದು, ಈ ಪೈಕಿ 3 ವಾರ್ಡ್‌ಗಳಲ್ಲಿ ಕಾಂಗ್ರೆಸ್ ಮತ್ತು 2 ಕ್ಷೇತ್ರಗಳಲ್ಲಿ ಬಿಜೆಪಿ ಜಯಗಳಿಸಿದೆ. ಇದರಿಂದಾಗಿ ಹೆಬ್ಬಗೋಡಿ ನಗರಸಭೆಯಲ್ಲಿ 18 ವಾರ್ಡ್‌ಗಳು ಬಿಜೆಪಿ ಪಾಲಾಗಿವೆ. 10 ವಾರ್ಡ್‌ಗಳಲ್ಲಿ ಕಾಂಗ್ರೆಸ್ ಮತ್ತು 3 ವಾರ್ಡ್‌ಗಳು ಜೆಡಿಎಸ್ ಪಾಲಾಗಿವೆ. ನಗರಸಭೆ ಅಧಿಕಾರ ಹಿಡಿಯಲು 16 ಸಂಖ್ಯೆ ಬೇಕಿತ್ತು. ಬಿಜೆಪಿ 18 ವಾರ್ಡ್‌ಗಳಲ್ಲಿ ಜಯಗಳಿಸಿದೆ. ಈ ಹಿಂದಿನ ಅವಧಿಯಲ್ಲೂ ಬಿಜೆಪಿ ಅಧಿಕಾರದಲ್ಲಿದ್ದು ತನ್ನ ಪಾರುಪತ್ಯವನ್ನು ಮುಂದುವರೆಸಿದೆ.

ಚಂದಾಪುರ ಪುರಸಭೆಯಲ್ಲಿ 23 ಕ್ಷೇತ್ರಗಳ ಪೈಕಿ 15 ಸ್ಥಾನಗಳಲ್ಲಿ ಬಿಜೆಪಿ, 5 ಕ್ಷೇತ್ರಗಳನ್ನು ಕಾಂಗ್ರೆಸ್ ಮತ್ತು 3 ವಾರ್ಡ್‌ಗಳಲ್ಲಿ ಪಕ್ಷೇತರ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಕಳೆದ ಅವಧಿಯಲ್ಲೂ ಬಿಜೆಪಿ ಚಂದಾಪುರದಲ್ಲಿ ಅಧಿಕಾರದಲ್ಲಿತ್ತು.

ಜಿಗಣಿ ಪುರಸಭೆಯ 23 ವಾರ್ಡ್‌ಗಳ ಪೈಕಿ 16 ವಾರ್ಡ್‌ಗಳಲ್ಲಿ ಕಾಂಗ್ರೆಸ್ ಜಯಗಳಿಸಿದೆ. 7 ವಾರ್ಡ್‌ಗಳಲ್ಲಿ ಬಿಜೆಪಿ ಜಯಗಳಿಸಿದೆ. ಕಳೆದ ಅವಧಿಯಲ್ಲಿ ಜಿಗಣಿ ಪುರಸಭೆಯಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು.

ದಂಪತಿ ಗೆಲುವು: ಜಿಗಣಿ ಪುರಸಭೆಯ 15ನೇ ವಾರ್ಡ್‌ನಲ್ಲಿ ಪ್ರಹ್ಲಾದರೆಡ್ಡಿ ಮತ್ತು 16 ವಾರ್ಡ್‌ನಲ್ಲಿ ಪ್ರಹ್ಲಾದರೆಡ್ಡಿ ಅವರ ಪತ್ನಿ ಅರುಣಕುಮಾರಿ ಜಯಗಳಿಸುವ ಮೂಲಕ ಗಂಡ ಹೆಂಡತಿ ಇಬ್ಬರೂ ಜಿಗಣಿ ಪುರಸಭೆಗೆ ಪ್ರವೇಶ ಪಡೆದಿದ್ದಾರೆ.

ಭಾರಿ ಅಂತರದ ಗೆಲುವು: ಹೆಬ್ಬಗೋಡಿ ನಗರಸಭೆಯ ವಾರ್ಡ್ ನಂ.23ರಲ್ಲಿ ಬಿಜೆಪಿ ಅಭ್ಯರ್ಥಿ ಜಿ.ನವೀನ್ 1,091 ಮತಗಳನ್ನು ಗಳಿಸಿದ್ದು ಪ್ರತಿಸ್ಪರ್ಧಿ ಕಾಂಗ್ರೆಸ್‌ನ ವಿ.ಗಾಯತ್ರಿ 150 ಮತಗಳನ್ನು ಗಳಿಸಿದ್ದಾರೆ. ಈ ಮೂಲಕ 941 ಮತಗಳ ಅಂತರದಿಂದ ಜಯಗಳಿಸುವ ಮೂಲಕ ಭಾರಿ ಅಂತರ ಕಾಪಾಡಿಕೊಂಡಿದ್ದಾರೆ.

ಭಾರಿ ಜನಸಂದಣಿ: ಮತ ಎಣಿಕೆ ಕೇಂದ್ರವಾದ ಆನೇಕಲ್ ಎಎಸ್‌ಬಿ ಪದವಿ ಪೂರ್ವ ಕಾಲೇಜು ಬಳಿ ತಾಲ್ಲೂಕಿನ ವಿವಿಧ ಭಾಗಗಳಿಂದ ಚುನಾವಣಾ ಫಲಿತಾಂಶಕ್ಕಾಗಿ ಕಾರ್ಯಕರ್ತರು, ಅಭಿಮಾನಿಗಳು ಬೃಹತ್ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಜನಜಂಗುಳಿಯನ್ನು ನಿಭಾಯಿಸಲು ಪೊಲೀಸರು ಹರಸಾಹಸ ಪಟ್ಟರು. ಬೆಳಗ್ಗೆ 8ಕ್ಕೆ ಪ್ರಾರಂಭವಾದ ಮತ ಎಣಿಕೆ 10 ವೇಳೆಗೆ ಮುಕ್ತಾಯವಾಯಿತು. ಮತ ಎಣಿಕೆ ಸುಗಮವಾಗಿ ನಡೆಯಿತು.

ಸಾಂಘಿಕ ಪ್ರಯತ್ನಕ್ಕೆ ಗೆಲುವು: ಆನೇಕಲ್ ತಾಲ್ಲೂಕು ಬಿಜೆಪಿ ಭದ್ರಕೋಟೆ. ಬಿಜೆಪಿಯ ತತ್ವ ಸಿದ್ಧಾಂತಗಳಲ್ಲಿ ನಂಬಿಕೆಯಿಟ್ಟು ಹೆಬ್ಬಗೋಡಿ ನಗರಸಭೆ ಮತ್ತು ಚಂದಾಪುರ ಪುರಸಭೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಗಳಿಸಿದೆ. ಕಾರ್ಯಕರ್ತರ ಸಾಂಘಿಕ ಪ್ರಯತ್ನ, ಪಾರದರ್ಶಕ ಆಡಳಿತಕ್ಕೆ ಜನತೆ ನೀಡಿದ ಮನ್ನಣೆಯಾಗಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಡಾ.ಎ. ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು.

ಜಿಗಣಿ ಪುರಸಭೆ ಕಾಂಗ್ರೆಸ್ ತೆಕ್ಕೆಗೆ

ಆನೇಕಲ್: ತಾಲ್ಲೂಕಿನ ಜಿಗಣಿ ಪುರಸಭೆಗೆ ನಡೆದ ಚುನಾವಣೆಯಲ್ಲಿ 23 ವಾರ್ಡ್‌ಗಳ ಪೈಕಿ 16 ವಾರ್ಡ್‌ಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸುವ ಮೂಲಕ ಅಧಿಕಾರದ ಗದ್ದುಗೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಕಾಂಗ್ರೆಸ್ 16 ವಾರ್ಡ್‌ಗಳಲ್ಲಿ ಮತ್ತು ಬಿಜೆಪಿ 7 ವಾರ್ಡ್‌ಗಳಲ್ಲಿ ಜಯಗಳಿಸಿದೆ. ಈ ಹಿಂದಿನ ಅವಧಿಯಲ್ಲಿ ಬಿಜೆಪಿ ಜಿಗಣಿ ಪುರಸಭೆಯಲ್ಲಿ ಅಧಿಕಾರದಲ್ಲಿತ್ತು. ಪ್ರಸ್ತುತ ಕಾಂಗ್ರೆಸ್ ಅಧಿಕಾರಕ್ಕೇರಿದೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಜಿಗಣಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬಮೂಲ್ ಮಾಜಿ ಅಧ್ಯಕ್ಷ ಆರ್.ಕೆ. ರಮೇಶ್ ಮತ್ತು ಪ್ರಹ್ಲಾದ ರೆಡ್ಡಿ ನೇತೃತ್ವದಲ್ಲಿ ವಿಜಯೋತ್ಸವ ಆಚರಿಸಿದರು.

ಆರ್.ಕೆ. ರಮೇಶ್ ಮಾತನಾಡಿ, 'ಜಿಗಣಿಯಲ್ಲಿ ಅಧಿಕಾರ ಉಳಿಸಿಕೊಳ್ಳಲು ಬಿಜೆಪಿ ಹರಸಾಹಸ ಮಾಡಿತ್ತು. ಸಂಸದ ಡಿ.ಕೆ. ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಪಕ್ಷ ಸಂಘಟಿಸಿ ಕೆಲಸ ಮಾಡಿದ ಹಿನ್ನೆಲೆಯಲ್ಲಿ ಅಧಿಕಾರಕ್ಕೆ ಬರಲು ಸಾಧ್ಯವಾಗಿದೆ. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಜನರ ಸೇವೆ ಮಾಡುವ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಪಕ್ಷವನ್ನು ಬಲಪಡಿಸಲು ಶ್ರಮಿಸಲಾಗುವುದು' ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಅಂಥೋಣಿ ಕಿರಣ್, ಶ್ರೀಧರ್ ಲಕ್ಷ್ಮಣ್, ಮುಖಂಡರಾದ ಕೆ. ಕುಮಾರ್, ಸಿ. ನಾಗರಾಜು, ಎನ್.ಬಿ.ಐ. ನಾಗರಾಜು, ಎಂ. ಬಾಬು, ಕೆ.ಎಸ್. ನಟರಾಜ್, ಪ್ರಸನ್ನಕುಮಾರ್, ಅಚ್ಯುತರಾಜು, ನರೇಂದ್ರಬಾಬು, ಆಂಜಿನಪ್ಪ, ಮಂಜುನಾಥ್, ಚಾಮರಾಜ, ಸುಂದರೇಶ್, ಚುಂಚಘಟ್ಟ ಬಾಬು, ಕೇಶವರೆಡ್ಡಿ, ಗೊಟ್ಟಿಗೆರೆ ಚಂದ್ರಶೇಖರ್, ಕೋಣನಕುಂಟೆ ಚಂದ್ರು ಹಾಜರಿದ್ದರು.



ಆನೇಕಲ್ ತಾಲ್ಲೂಕಿನ ಜಿಗಣಿ ಪುರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜಯಗಳಿಸಿದ್ದು ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಮುಖಂಡರಾದ ಆರ್.ಕೆ. ರಮೇಶ್, ಪ್ರಹ್ಲಾದ ರೆಡ್ಡಿ ಇದ್ದರು

ಫಲಿತಾಂಶ: ಜನರ ಒಲವು ತಿಳಿಯುತ್ತಿದೆ – ಸಿದ್ದರಾಮಯ್ಯ

‘ರಾಜ್ಯದಲ್ಲಿ ಕಾಂಗ್ರೆಸ್ ಪರ ಗಾಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕಾಂಗ್ರೆಸ್ ಪರ ಗಾಳಿ ಬೀಸುತ್ತಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದು ಅಧಿಕಾರ ಹಿಡಿಯುವುದು ನೂರಕ್ಕೆ ನೂರು ಖಚಿತ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜನರ ತೀರ್ಪು ಹೊರಬಿದ್ದಿದೆ. ಫಲಿತಾಂಶದಿಂದ ಜನಾಭಿಪ್ರಾಯ ನಮ್ಮ ಪರವಾಗಿದೆ ಎಂಬುದು ಕಂಡುಬರುತ್ತದೆ’ ಎಂದರು.

‘ಚುನಾವಣೆಯಲ್ಲಿ ಹಣ ಖರ್ಚು ಮಾಡಿ ಗೆಲ್ಲುತ್ತೇವೆ ಎಂದು ಬಿಜೆಪಿಯವರು ಜಂಭದಿಂದ ವರ್ತಿಸುತ್ತಾರೆ. ಆದರೆ, ಹಣವೊಂದೆ ಚುನಾವಣೆಯಲ್ಲಿ ಗೆಲ್ಲಲು ಸಾಕಾಗಲ್ಲ. ಜನರ ಪರವಾಗಿ ಕೆಲಸ ಮಾಡಬೇಕು, ಪ್ರಾಮಾಣಿಕ ಆಡಳಿತ ನೀಡಬೇಕು. ಆಗ ಜನ ಮತ ನೀಡುತ್ತಾರೆ’ ಎಂದರು.

‘ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶವನ್ನು ನಾನು ಯಾವಾಗಲೂ ಮುಂದಿನ ಚುನಾವಣೆಗಳ ದಿಕ್ಸೂಚಿ ಎಂದು ಹೇಳಲ್ಲ. ಆದರೆ, ಇದರಿಂದ ಜನರ ಒಲವು ಯಾರ ಕಡೆಗಿದೆ ಎಂದು ತಿಳಿಯುತ್ತದೆ ಎಂಬುದು ನನ್ನ ಅಭಿಪ್ರಾಯ’ ಎಂದರು.

ಅಭಿಪ್ರಾಯ ಕಾಂಗ್ರೆಸ್ ಪರ: ‘ನಗರವಾಸಿಗಳು, ಪಟ್ಟಣವಾಸಿಗಳ ಅಭಿಪ್ರಾಯ ಕಾಂಗ್ರೆಸ್ ಪರ ವಾಲುತ್ತಿದೆ ಎಂಬುದು ಫಲಿತಾಂಶದಿಂದ ಸ್ಪಷ್ಟವಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

‘ಸಾಮಾನ್ಯವಾಗಿ ಶಾಸಕರಿರುವ ಕಡೆ ಆಡಳಿತ ಪಕ್ಷಕ್ಕೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಹೆಚ್ಚಿನ ಶಕ್ತಿ ಇರುತ್ತದೆ. ಬಿಜೆಪಿ ಆಡಳಿತದಲ್ಲಿದ್ದು, ಆ ಪಕ್ಷದ ಶಾಸಕರಿದ್ದರೂ ಜನರು ಕಾಂಗ್ರೆಸ್ ಪರ ನಿಂತಿದ್ದಾರೆ. ಇದು ರಾಜ್ಯದ ಜನರ ಭಾವನೆ ಯಾವ ರೀತಿ ಇದೆ ಎಂಬುದಕ್ಕೆ ಸಾಕ್ಷಿ’ ಎಂದರು.

ಪ್ರಜಾ ಮತ
ಜನತಂತ್ರದ ಹಬ್ಬ 2021

ಉತ್ತಮ ಸಾಧನೆಗೆ ಅವಕಾಶವಿತ್ತು: ಬೊಮ್ಮಾಯಿ

ಬೆಂಗಳೂರು: ಬಿಜೆಪಿ ಕಳೆದ ಬಾರಿಗಿಂತ ಉತ್ತಮ ನಿರ್ವಹಣೆ ಮಾಡಿದೆ. ಆದರೆ, ಇನ್ನೂ ಹಲವು ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಉತ್ತಮ ಸಾಧನೆ ಮಾಡಬಹುದಿತ್ತು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯೆ ನೀಡಿದ್ದಾರೆ.

‘ನನ್ನ ಮತ ಕ್ಷೇತ್ರದಲ್ಲಿ ಈವರೆಗೆ ಬಿಜೆಪಿ ಗೆದ್ದಿಲ್ಲ. ಅಲ್ಲಿ ಶೇ 65 ರಷ್ಟು ಅಲ್ಪಸಂಖ್ಯಾತ ಸಮುದಾಯದವರು ಇದ್ದಾರೆ. ಅದು ಹೇಳುವುದು ಸಮಂಜಸವಲ್ಲ. ಎಲ್ಲ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳನ್ನು ಬೇಧ ಮಾಡದೇ ಅಭಿವೃದ್ಧಿ ಕಾರ್ಯ ಮಾಡುತ್ತೇವೆ’ ಎಂದು ಹೇಳಿದರು.


ಗೆಲುವು ಸಾಧಿಸಿದ ಬಿಜೆಪಿ ಅಭ್ಯರ್ಥಿಗಳನ್ನು ಯಾದಗಿರಿ ಜಿಲ್ಲೆಯ ಕೆಂಭಾವಿ ಪಟ್ಟಣದ ಬೀದಿಗಳಲ್ಲಿ ಪಕ್ಷದ ಕಾರ್ಯಕರ್ತರು ಮೆರವಣಿಗೆ ಮಾಡಿದರು

‘ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ನಾವು ಹೆಚ್ಚಿನ ಸಂಖ್ಯೆಯಲ್ಲಿ ಇದ್ದೇವೆ. 4–5 ನಗರಸಭೆ ಮತ್ತು ಪುರಸಭೆಗಳ ಅಲ್ಪಸಂಖ್ಯಾತರ ವಾರ್ಡ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದು ಹಿಗ್ಗುವ ಅಗತ್ಯವಿಲ್ಲ’ ಎಂದು ಬೊಮ್ಮಾಯಿ ತಿರುಗೇಟು ನೀಡಿದರು.

‘ಬಿಜೆಪಿಯ ಬುಡ ಅಲ್ಲಾಡುತ್ತಿದೆ’ ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ, ‘ಕಾಂಗ್ರೆಸ್‌ಗೆ ಬುಡವೇ ಇಲ್ಲ’. ‘ಕಾಂಗ್ರೆಸ್‌ನವರು 2023 ರಲ್ಲಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದಾರೆ. ಕನಸು ಕಾಣಲಿ, ನಮ್ಮ ಆಕ್ಷೇಪ ಇಲ್ಲ. ಹಕೀಕತ್ ಎಂದರೆ 2023 ರಲ್ಲೂ ಬಿಜೆಪಿಯೇ ಗೆಲ್ಲುತ್ತದೆ. 2028 ರವರೆಗೆ ಅಧಿಕಾರದಲ್ಲಿ ಇರುತ್ತದೆ’ ಎಂದು ಬೊಮ್ಮಾಯಿ ತಿಳಿಸಿದರು.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶ: ಪಕ್ಷಗಳ ಬಲಾಬಲ

ನಗರಸಭೆ

ಹೆಸರು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಇತರೆ	ಬಹುಮತ/ಅತಂತ್ರ
ಶಿರಾ	11	4	7	8	ಅತಂತ್ರ
ಹೆಬ್ಬಗೋಡಿ	10	18	3	00	ಬಿಜೆಪಿ
ಹೊಸಪೇಟೆ	12	10	00	12+1**	ಅತಂತ್ರ
ಗದಗ–ಬೆಟಗೇರಿ	15	18	00	02	ಬಿಜೆಪಿ
ಚಿಕ್ಕಮಗಳೂರು	12	18	02	2+1*	ಬಿಜೆಪಿ

ಪುರಸಭೆ

ಹೆಸರು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಇತರೆ	ಬಹುಮತ/ಅತಂತ್ರ
ಬಿಡದಿ	9	00	14	00	ಜೆಡಿಎಸ್
ಚಂದಾಪುರ	5	15	00	3	ಬಿಜೆಪಿ
ಜಿಗಣಿ	16	7	00	00	ಕಾಂಗ್ರೆಸ್
ಮಸ್ಕಿ	09	14	00	00	ಬಿಜೆಪಿ
ಕೆಂಭಾವಿ	08	13	00	02	ಬಿಜೆಪಿ
ಕಕ್ಕೇರಾ	16	06	00	01	ಕಾಂಗ್ರೆಸ್
ಕಾರಟಗಿ	11	11	01	00	ಅತಂತ್ರ
ಹಗರಿಬೊಮ್ಮನಹಳ್ಳಿ	12	11	00	00	ಕಾಂಗ್ರೆಸ್
ಕುರುಗೋಡು	08	07	02	01	ಕಾಂಗ್ರೆಸ್
ಕುರೇಕುಪ್ಪ	08	07	02	06	ಅತಂತ್ರ
ಅಥಣಿ	15	09	00	03	ಕಾಂಗ್ರೆಸ್
ಹಾರೂಗೇರಿ	07	15	00	01	ಬಿಜೆಪಿ
ಮುನವಳ್ಳಿ	11	10	00	02	ಅತಂತ್ರ
ಉಗಾರಖುರ್ದ್	11	07	00	05	ಅತಂತ್ರ
ಮುಗಳಖೋಡ	04	13	00	06	ಬಿಜೆಪಿ
ಅಣ್ಣಿಗೇರಿ	12	05	00	06	ಕಾಂಗ್ರೆಸ್
ಬಂಕಾಪುರ	14	07	00	02	ಕಾಂಗ್ರೆಸ್
ಮಲೇಬೆನ್ನೂರು	12	07	03	01	ಕಾಂಗ್ರೆಸ್
ಕಾಪು	7	12	01	03*	ಬಿಜೆಪಿ

ಪಟ್ಟಣ ಪಂಚಾಯಿತಿ

ಹೆಸರು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್	ಇತರೆ	ಬಹುಮತ/ಅತಂತ್ರ
ತುರವಿಹಾಳ	09	02	00	03	ಕಾಂಗ್ರೆಸ್
ಸಿರವಾರ	09	06	03	02	ಅತಂತ್ರ
ಕವಿತಾಳ	08	04	03	01	ಅತಂತ್ರ
ಬಳಗಾನೂರ	05	06	00	01	ಅತಂತ್ರ
ಭಾಗ್ಯನಗರ	08	09	01	01	ಅತಂತ್ರ
ಕುಕನೂರ	10	09	00	00	ಕಾಂಗ್ರೆಸ್
ಕನಕಗಿರಿ	12	05	00	00	ಕಾಂಗ್ರೆಸ್
ತಾವರಗೇರಾ	08	07	00	03	ಅತಂತ್ರ
ಮರಿಯಮ್ಮನಹಳ್ಳಿ	13	04	00	01	ಕಾಂಗ್ರೆಸ್
ಆಲಮೇಲ	07	09	00	03	ಅತಂತ್ರ
ದೇವರಹಿಪ್ಪರಗಿ	07	04	04	02	ಅತಂತ್ರ
ಕೊಲ್ಹಾರ	11	03	00	03	ಕಾಂಗ್ರೆಸ್
ಮನಗೂಳಿ	04	12	00	00	ಬಿಜೆಪಿ
ನಾಲತವಾಡ	09	00	01	04	ಕಾಂಗ್ರೆಸ್
ನಿಡಗುಂದಿ	09	06	00	01	ಕಾಂಗ್ರೆಸ್
ಎಂ.ಕೆ.ಹುಬ್ಬಳ್ಳಿ	00	00	00	14	ಅತಂತ್ರ
ಚಿಂಚಲಿ	09	05	00	05	ಅತಂತ್ರ
ಚನ್ನಮ್ಮ ಕಿತ್ತೂರು	05	09	00	04	ಬಿಜೆಪಿ
ಬೋರಗಾಂವ	00	00	00	17	ಅತಂತ್ರ
ಯಕ್ಸಂಬಾ	16	01	00	00	ಕಾಂಗ್ರೆಸ್
ಕಂಕಣವಾಡಿ	05	12	00	00	ಬಿಜೆಪಿ
ಐನಾಪುರ	13	06	00	00	ಕಾಂಗ್ರೆಸ್
ಶೇಡಬಾಳ	02	11	01	02	ಬಿಜೆಪಿ
ನಾಗನೂರ	00	00	00	17	ಅತಂತ್ರ
ಅರಭಾವಿ	00	05	00	11	ಅತಂತ್ರ
ಕಲ್ಲೋಳಿ	00	05	00	11	ಅತಂತ್ರ
ಗುತ್ತಲ	11	06	00	01	ಕಾಂಗ್ರೆಸ್
ಕಮತಗಿ	11	04	00	01	ಕಾಂಗ್ರೆಸ್
ಅಮೀನಗಡ	04	07	00	05	ಅತಂತ್ರ
ರನ್ನ ಬೆಳಗಲಿ	08	05	00	05	ಅತಂತ್ರ
ಜಾಲಿ	04	03	--	13	ಅತಂತ್ರ
ನಾಯಕನಹಟ್ಟಿ	11	02	00	03	ಕಾಂಗ್ರೆಸ್
ಕೋಟೆಕಾರು	04	11	01	01*	ಬಿಜೆಪಿ
ವಿಟ್ಲ	05	12	00	01*	ಬಿಜೆಪಿ

* ಎಸ್‌ಡಿಪಿಐ. ** ಹೊಸಪೇಟೆ ಒಟ್ಟು 13, ಅದರಲ್ಲಿ ಒಂದು ಆಮ್ ಆದ್ಮಿ ಪಕ್ಷ

ಉಪಚುನಾವಣೆ

ಪುರಸಭೆ		
ಸೇಡಂ	13ನೇ ವಾರ್ಡ್	ಕಾಂಗ್ರೆಸ್
ನಗರಸಭೆ		
ಹರಿಹರ	21ನೇ ವಾರ್ಡ್	ಕಾಂಗ್ರೆಸ್
ಚಾಮರಾಜನಗರ	6ನೇ ವಾರ್ಡ್	ಎಸ್‌ಡಿಪಿಐ

‘ಪಕ್ಷದ ಸಾಧನೆ ಉತ್ತಮ’

ಬೆಂಗಳೂರು: ‘ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಚುನಾವಣೆಯಲ್ಲಿ ಪಕ್ಷ ಉತ್ತಮ ಸಾಧನೆ ಮಾಡಿದ್ದು, ಗ್ರಾಮೀಣ ಮತ್ತು ನಗರ ಪ್ರದೇಶದ ಮತದಾರರು ಬಿಜೆಪಿಯನ್ನು ಬೆಂಬಲಿಸಿದ್ದಾರೆ’ ಎಂದು ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಎನ್. ರವಿಕುಮಾರ್ ಹೇಳಿದ್ದಾರೆ.

ಪ್ರಕಟವಾದ ಫಲಿತಾಂಶದಲ್ಲಿ ನಗರಸಭೆಯ ಒಟ್ಟು 167 ಸ್ಥಾನಗಳಲ್ಲಿ 67, ಪುರಸಭೆಯ 446 ರಲ್ಲಿ 173 ಮತ್ತು ಪಟ್ಟಣ ಪಂಚಾಯಿತಿಯ 582 ಸ್ಥಾನಗಳಲ್ಲಿ 194 ಸ್ಥಾನಗಳನ್ನು ಬಿಜೆಪಿ ಗೆದ್ದಿದೆ. ಒಟ್ಟು 1185 ಸ್ಥಾನಗಳಲ್ಲಿ ಬಿಜೆಪಿ 434, ಕಾಂಗ್ರೆಸ್ 499, ಜೆಡಿಎಸ್ 45 ಮತ್ತು ಪಕ್ಷೇತರರು 205 ಸ್ಥಾನಗಳನ್ನು ಗೆದ್ದಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣೆ: ಖಾತೆ ತೆರೆದ ‘ಆಮ್ ಆದ್ಮಿ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹೊಸಪೇಟೆ ನಗರಸಭೆಯ 22ನೇ ವಾರ್ಡಿನಲ್ಲಿ ಜಯಗಳಿಸುವ ಮೂಲಕ ‘ಆಮ್ ಆದ್ಮಿ’ ಪಕ್ಷ ಖಾತೆ ತೆರೆದಿದೆ.


ಶೇಕ್ಷಾವಲಿ

ಪಕ್ಷದ ಅಭ್ಯರ್ಥಿ ಶೇಕ್ಷಾವಲಿ ಅವರು ಎಎಪಿಯಿಂದ ಕಣಕ್ಕಿಳಿದಿದ್ದರು. ಮೊದಲ ಚುನಾವಣೆಯಲ್ಲೇ ಮತದಾರರು ಎಎಪಿ ಕೈ ಹಿಡಿದಿದ್ದಾರೆ. ಶೇಕ್ಷಾವಲಿ ಅವರು ಹೆಳವರ ಸಮುದಾಯದವರು. ಅತಿ ಸಣ್ಣ ಸಮುದಾಯವನ್ನು ಗುರುತಿಸಿ ಪಕ್ಷ ಟಿಕೆಟ್ ನೀಡಿತ್ತು.

1 ಮತ ಅಂತರದಲ್ಲಿ ಗೆಲುವು: ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಒಂದನೇ ವಾರ್ಡ್‌ನಿಂದ ಕಾಂಗ್ರೆಸ್ ಅಭ್ಯರ್ಥಿ ಎಲ್.ವಸಂತ ಅವರು 1 ಮತದ ಅಂತರದಿಂದ ಜಯಶಾಲಿಯಾಗಿದ್ದಾರೆ. ವಸಂತ 166 ಮತ ಪಡೆದರೆ, ಅವರ ಪ್ರತಿಸ್ಪರ್ಧಿ ಪಕ್ಷೇತರ ಅಭ್ಯರ್ಥಿ ಎಂ. ವಿರೂಪಾಕ್ಷ 165 ಮತ ಗಳಿಸಿದ್ದಾರೆ. ಎರಡು ಬಾರಿ ಮರು ಮತ ಎಣಿಕೆ ನಡೆಸಲಾಯಿತು.


ಎಲ್. ವಸಂತ


ಜಿ. ಸರಸ್ವತಿ

5 ಮತಗಳಿಂದ ಜಯ: ಜಿಲ್ಲೆಯ ಹಗರಿ ಬೊಮ್ಮನಹಳ್ಳಿ ಪುರಸಭೆಯ 1ನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಜಿ.ಸರಸ್ವತಿ ಅವರು 5 ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದಾರೆ. ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಮಮತಾ ಅವರನ್ನು ಸೋಲಿಸಿದ್ದಾರೆ.

ಕೋನರಡ್ಡಿ ಪಕ್ಷಾಂತರ: ಜೆಡಿಎಸ್ ಶೂನ್ಯ ಸಾಧನೆ

ಧಾರವಾಡ: ಜೆಡಿಎಸ್ ತೊರೆದು ಎನ್.ಎಚ್.ಕೋನರಡ್ಡಿ ಕಾಂಗ್ರೆಸ್ ಸೇರುತ್ತಿದ್ದಂತೆ, ಅಣ್ಣಿಗೇರಿ ಪುರಸಭೆಯ ಚುನಾವಣೆಯಲ್ಲಿ ಜೆಡಿಎಸ್ ಸ್ಥಾನ 10ರಿಂದ ಶೂನ್ಯಕ್ಕೆ ಕುಸಿದಿದೆ.

ಕಳೆದ ಚುನಾವಣೆಯಲ್ಲಿ ಜೆಡಿಎಸ್ 10 ಸ್ಥಾನಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಕಾಂಗ್ರೆಸ್ ಆಗ 8 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಬಿಜೆಪಿ 4 ಸ್ಥಾನ ಮತ್ತು ಬಿಎಸ್‌ಆರ್ ಪಕ್ಷ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿದ್ದವು.

ಚುನಾವಣೆ ಹೊಸ್ತಿಲಲ್ಲೇ ಕೋನರಡ್ಡಿ ಕಾಂಗ್ರೆಸ್ ಸೇರಿದ್ದರಿಂದ ಈ ಬಾರಿ ಪಕ್ಷದ ಸದಸ್ಯರ ಸ್ಥಾನ 12ಕ್ಕೆ ಏರಿದೆ. ಆ ಮೂಲಕ ಅಧಿಕಾರದ ಗದ್ದುಗೆ ಪಡೆದಿದೆ. ಬಿಜೆಪಿ 5 ಸ್ಥಾನಗಳಲ್ಲಿ ಜಯಗಳಿಸಿ ಕಳೆದ ಬಾರಿಗಿಂತ ಒಂದು ಸ್ಥಾನವನ್ನು ಹೆಚ್ಚಿಸಿಕೊಂಡಿದೆ. ಕಾಂಗ್ರೆಸ್ ಟಿಕೆಟ್ ಸಿಗದ ಕಾರಣ ಪಕ್ಷೇತರರಾಗಿ ನಿಂತಿದ್ದ 5 ಸದಸ್ಯರು ಆಯ್ಕೆಯಾಗಿದ್ದಾರೆ. ಬಿಜೆಪಿ ಬಂಡಾಯ ಅಭ್ಯರ್ಥಿಯೊಬ್ಬರು ಗೆಲುವು ಸಾಧಿಸಿದ್ದಾರೆ.

ರೋಹಿಣಿಗೆ ‘ಲಾಟರಿ’ ಜಯ

ಮೋಳೆ (ಬೆಳಗಾವಿ ಜಿಲ್ಲೆ): ಕಾಗವಾಡ ತಾಲೂಕಿನ ಶೇಡಬಾಳ ಪಟ್ಟಣ ಪಂಚಾಯ್ತಿ 12ನೇ ವಾರ್ಡ್‌ಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಾಲಾಶ್ರೀ ಪವಾರ ಹಾಗೂ ಬಿಜೆಪಿ ಅಭ್ಯರ್ಥಿ ರೋಹಿಣಿ ಬಾಳಿ 284 ಮತ ಗಳಿಸಿದ್ದರು.

ಇಬ್ಬರೂ ಅಭ್ಯರ್ಥಿಗಳು ಸಮಾನ ಮತ ಪಡೆದಿದ್ದರಿಂದ ಚುನಾವಣೆ ಅಧಿಕಾರಿಗಳು ಚೀಟಿ ಎತ್ತಿ ಆಯ್ಕೆ ಪ್ರಕ್ರಿಯೆ ನಡೆಸಿದರು. ಅಂತಿಮವಾಗಿ ಬಿಜೆಪಿಯ ರೋಹಿಣಿ ವಿಜೇತ ಅಭ್ಯರ್ಥಿ ಎಂದು ಘೋಷಿಸಿದರು.

ಖಾರದಪುಡಿ ಮಹೇಶ ಗೆಲುವು

ಅಕ್ರಮ ಅದಿರು ಸಾಗಣೆ ಪ್ರಕರಣದಲ್ಲಿ ಜೈಲುವಾಸ ಅನುಭವಿಸಿದ್ದ ಖಾರದಪುಡಿ ಮಹೇಶ, ನಗರಸಭೆ ಚುನಾವಣೆಯಲ್ಲಿ ಜಯಶಾಲಿ ಯಾಗಿದ್ದಾರೆ. ಕಾಂಗ್ರೆಸ್‌ನಿಂದ 20ನೇ ವಾರ್ಡ್‌ನಿಂದ ಮಹೇಶ ಸ್ಪರ್ಧಿಸಿದ್ದರು. ಅಕ್ರಮ ಗಣಿಗಾರಿಕೆ ವಿರುದ್ಧ ಹೋರಾಟ ನಡೆಸಿದ್ದ ಕಾಂಗ್ರೆಸ್ ಪಕ್ಷವು, ಮಹೇಶ ಅವರಿಗೆ ಟಿಕೆಟ್ ನೀಡಿದ್ದಕ್ಕೆ ತೀವ್ರ ಟೀಕೆ ವ್ಯಕ್ತವಾಗಿತ್ತು.


ಖಾರದಪುಡಿ ಮಹೇಶ

ಕಾಂಗ್ರೆಸ್ ಕಚೇರಿ ಸಹಾಯಕ ಕಂಠಿರಂಗಪ್ಪ ಗೆಲುವು

ಕನಕಗಿರಿ (ಕೊಪ್ಪಳ): ಕನಕಗಿರಿ ಬ್ಲಾಕ್ ಕಾಂಗ್ರೆಸ್ ಕಚೇರಿಯ ಸಹಾಯಕ ಕಂಠಿರಂಗಪ್ಪ ನಾಯಕ (ಕಂಠಿ) ಪಟ್ಟಣ ಪಂಚಾಯಿತಿ ಚುನಾವಣೆಯಲ್ಲಿ 5ನೇ ವಾರ್ಡ್‌ನಿಂದ ಗೆಲುವು ಸಾಧಿಸಿದ್ದಾರೆ.



ಒಂದು ಮತದ ಅಂತರದಿಂದ ಸದಸ್ಯತ್ವ

ಯಾದಗಿರಿ: ಕೆಂಭಾವಿ ಪುರಸಭೆಯ ವಾರ್ಡ್ ಸಂಖ್ಯೆ 5ರ ಕಾಂಗ್ರೆಸ್ ಅಭ್ಯರ್ಥಿ ರಮ್ಯಾ ರಾಘವೇಂದ್ರ ದೇಶಪಾಂಡೆ ಅವರು 263 ಮತ ಪಡೆದು ಗೆಲುವು ಸಾಧಿಸಿದರೆ, ಬಿಜೆಪಿ ಅಭ್ಯರ್ಥಿ ಭಾಗ್ಯಶ್ರೀ ಮಲ್ಲು ಸೊನ್ನದ ಅವರು 262 ಮತ ಪಡೆದು ಪಾರಭವಗೊಂಡರು. ಕೇವಲ ಒಂದು ಮತದ ಅಂತರದಿಂದ ರಮ್ಯಾ ಗೆದ್ದರು.

ನಾದಿನಿಯನ್ನು ಸೋಲಿಸಿದ ಅತ್ತಿಗೆ: ಕಕ್ಕೇರಾ ಪುರಸಭೆಯ 19ನೇ ವಾರ್ಡ್‌ನಲ್ಲಿ ಅತ್ತಿಗೆ ಪರಮವ್ವ ಕಾಂಗ್ರೆಸ್‌ನಿಂದ ಸ್ಪರ್ಧಿಸಿ 546 ಮತ ಪಡೆದು ಗೆದ್ದರೆ, ಬಿಜೆಪಿಯಿಂದ ಸ್ಪರ್ಧಿಸಿದ ಅವರ ನಾದಿನಿ ದುರಗವ್ವ 511 ಮತ ಪಡೆದು ಸೋತರು.

ಗೆಲುವಿನ ನಗೆ ಬೀರಿದ ಬಿಜೆಪಿ ಅಭ್ಯರ್ಥಿ (ಹಾವೇರಿ ಸುದ್ದಿ): ಶಿಗ್ಗಾವಿ ತಾಲ್ಲೂಕಿನ ಬಂಕಾಪುರ ಪುರಸಭೆಯ ವಾರ್ಡ್ 8ರ ಬಿಜೆಪಿ ಅಭ್ಯರ್ಥಿ ಲಕ್ಷ್ಮವ್ವ ಅವ್ವಪ್ಪ ಮಾಳಗಿಮನಿ (243 ಮತಗಳು) ತಮ್ಮ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಫೈರೋಜಾಬಾನು ಹಿಪ್ಪರಗಿ (242 ಮತಗಳು) ಅವರಿಗಿಂತ ಒಂದು ಮತ ಹೆಚ್ಚು ಪಡೆದು ಜಯ ಗಳಿಸಿದರು.



ವೈದ್ಯಕೀಯ ವಿದ್ಯಾರ್ಥಿನಿ ಪುರಸಭೆ ಸದಸ್ಯೆ

ಆನೇಕಲ್: ತಾಲ್ಲೂಕಿನ ಜಿಗಣಿ ಪುರಸಭೆಯ ವಾರ್ಡ್ ನಂ. 6ರಲ್ಲಿ ಕಾಂಗ್ರೆಸ್‌ನಿಂದ ಕಣಕ್ಕೆ ಇಳಿದಿದ್ದ ಎಂಬಿಬಿಎಸ್ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ 22 ವರ್ಷದ ಗಿರಿಷ್ಮಾ ಶ್ರೀಧರ್ ಗೆಲುವು ಸಾಧಿಸಿದ್ದಾರೆ. ಬೆಂಗಳೂರಿನ ವೈಟ್‌ಫೀಲ್ಡ್ ಬಳಿ ಇರುವ ವೈದೇಹಿ ವೈದ್ಯಕೀಯ ಕಾಲೇಜಿನಲ್ಲಿ ಅವರು ಎಂಬಿಬಿಎಸ್ ಓದುತ್ತಿದ್ದಾರೆ. ಅವರ ತಂದೆ ಈ ಹಿಂದೆ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು.


ಗಿರಿಷ್ಮಾ ಶ್ರೀಧರ್

ಗಿರಿಷ್ಮಾ ಅವರು 302 ಮತ ಪಡೆದಿದ್ದು, ಪ್ರತಿಸ್ಪರ್ಧಿ ಬಿಜೆಪಿಯ ಕೃಷ್ಣಮ್ಮ ಮುನಿಕೃಷ್ಣಪ್ಪ 204 ಮತ ಪಡೆದಿದ್ದಾರೆ.

ಚಮ್ಮಾರನಿಗೆ ಒಲಿದ ಪುರಸಭಾ ಸದಸ್ಯತ್ವ

ಕುರುಗೋಡು (ಬಳ್ಳಾರಿ ಜಿಲ್ಲೆ): ಚಮ್ಮಾರ ವೃತ್ತಿಯಿಂದ ಬದುಕು ಕಟ್ಟಿಕೊಂಡಿರುವ ಜಿ.ಮಂಜುನಾಥ ಅವರು ಕುರುಗೋಡು ಪುರಸಭೆ ಚುನಾವಣೆಗೆ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ.

ಪಟ್ಟಣದ ಬಾದನಹಟ್ಟಿ ರಸ್ತೆಯಲ್ಲಿ ಪಾದರಕ್ಷೆಗಳ ಮಾರಾಟದ ಅಂಗಡಿ ತೆರೆದಿರುವ ಅವರು ಇಲ್ಲಿನ 1ನೇ ವಾರ್ಡ್‌ನ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದು 254 ಮತಗಳನ್ನು ಪಡೆದಿದ್ದಾರೆ. ತಮ್ಮ ಪ್ರತಿಸ್ಪರ್ಧಿ ಬಿಜೆಪಿಯ ಕರಿದೊಡ್ಡಪ್ಪ (158) ಅವರನ್ನು 96 ಮತಗಳ ಅಂತರದಿಂದ ಪರಾಭವಗೊಳಿಸಿದರು.

‘22ನೇ ವಾರ್ಡ್‌ನಲ್ಲಿ ವಾಸವಿದ್ದರೂ ನಾನು ಗೆಲುವು ಸಾಧಿಸಿದ್ದು 1ನೇ ವಾರ್ಡ್‌ನಲ್ಲಿ. ಇಲ್ಲಿಯ ಸ್ನೇಹಿತರು ಹಿತೈಶಿಗಳು ಗೆಲುವಿಗೆ ಶ್ರಮಿಸಿದ್ದಾರೆ. ಶಾಸಕ ಜೆ.ಎನ್. ಗಣೇಶ್ ಕಾಂಗ್ರೆಸ್ ಪಕ್ಷದ ಟಿಕೆಟ್ ನೀಡಿ ಬೆಂಬಲಿಸಿದರು’ ಎನ್ನುತ್ತಾರೆ ಅವರು.


ಕಾಂಗ್ರೆಸ್ ಅಭ್ಯರ್ಥಿಯಾಗಿ ಜಯಗಳಿಸಿರುವ ಜಿ.ಮಂಜುನಾಥ ತಮ್ಮ ನಿತ್ಯದ ಕಾಯಕದಲ್ಲಿ ನಿರತರಾಗಿರುವುದು

ಗೆದ್ದವರೆಲ್ಲರೂ ಪಕ್ಷೇತರರು!

ಬೆಳಗಾವಿ: ಜಿಲ್ಲೆಯ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಎಂ.ಕೆ.ಹುಬ್ಬಳ್ಳಿ, ನಿಪ್ಪಾಣಿ ತಾಲ್ಲೂಕಿನ ಬೋರಗಾಂವ ಹಾಗೂ ಮೂಡಲಗಿ ತಾಲ್ಲೂಕಿನ ನಾಗನೂರ ಪಟ್ಟಣ ಪಂಚಾಯ್ತಿಗಳಲ್ಲಿ ಗೆದ್ದವರೆಲ್ಲರೂ ಪಕ್ಷೇತರರರು ಎಂಬುದು ವಿಶೇಷ.

ಬೋರಗಾಂವದಲ್ಲಿ ಕಳೆದ ಬಾರಿಯೂ ಪಕ್ಷೇತರರೇ ಅಧಿಕಾರದಲ್ಲಿದ್ದರು. ಈ ಬಾರಿಯೂ ಉತ್ತಮ ಪಾಟೀಲ ನೇತೃತ್ವದ ಪ್ಯಾನೆಲ್‌ನ 17 ಸದಸ್ಯರು ಆಯ್ಕೆಯಾಗಿದ್ದಾರೆ. ಇಲ್ಲಿ ರಾಜಕೀಯ ಪಕ್ಷಗಳಿಗಿಂತ ಪಕ್ಷೇತರರಿಗೆ ಮತದಾರರು ಮಣೆ ಹಾಕುತ್ತ ಬಂದಿದ್ದಾರೆ. ಎಂ.ಕೆ.ಹುಬ್ಬಳ್ಳಿಯಲ್ಲಿ ಗ್ರಾಮದೇವಿ ದೇವಸ್ಥಾನ ನಿರ್ಮಿಸಲಾಗುತ್ತಿದ್ದು, ಎಲ್ಲರೂ ಒಗ್ಗಟ್ಟಿನಿಂದ ಇರಬೇಕೆಂಬ ಉದ್ದೇಶದಿಂದ ಈ ಸಲ ಎಲ್ಲ ಅಭ್ಯರ್ಥಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲು ಸ್ಥಳೀಯರು ನಿರ್ಧರಿಸಿದ್ದರು. ಹೀಗಾಗಿ ರಾಜಕೀಯ ಪಕ್ಷಗಳ ಚಿಹ್ನೆಯಡಿ ಯಾರೂ ಸ್ಪರ್ಧಿಸದಂತೆ ಸೂಚಿಸಿದ್ದರು. ಅಂತೆಯೇ ಮೂವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಆದರೆ, ಕಡೇ ಘಳಿಗೆಯಲ್ಲಿ ಗೊಂದಲ ಉಂಟಾಗಿ ಹೆಚ್ಚಿನ ಅಭ್ಯರ್ಥಿಗಳು ಉಮೇದುವಾರಿಕೆಗೆ ಒಲವು ತೋರಿದ್ದರಿಂದ 11 ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಎಲ್ಲ ಪಕ್ಷೇತರರು ಗೆದ್ದಿದ್ದಾರೆ. ಈ ಹಿಂದೆ ಪಕ್ಷೇತರರ ನೆರವಿನೊಂದಿಗೆ ಇಲ್ಲಿ ಕಾಂಗ್ರೆಸ್ ಅಧಿಕಾರಕ್ಕೇರಿತ್ತು. ನಾಗನೂರಿನಲ್ಲಿ ಈ ಹಿಂದೆ ಬಿಜೆಪಿ ಅಧಿಕಾರದಲ್ಲಿತ್ತು. ಈ ಬಾರಿ ಬಿಜೆಪಿ ಟಿಕೆಟ್‌ಗಾಗಿ ಆಕಾಂಕ್ಷಿಗಳಲ್ಲಿ ಪೈಪೋಟಿ ಏರ್ಪಟ್ಟಿತ್ತು. ಆದರೆ, ಪಕ್ಷದ ನಾಯಕರು ಯಾರಿಗೂ ಬಿ ಫಾರಂ ನೀಡದ್ದರಿಂದ ಆಕಾಂಕ್ಷಿಗಳೆಲ್ಲ ಪಕ್ಷೇತರರಾಗಿ ಕಣಕ್ಕಿಳಿದಿದ್ದರು. ಈ ಪೈಕಿ ಶಾಸಕ ಬಾಲಚಂದ್ರ ಜಾರಕಿಹೊಳಿ ಬೆಂಬಲಿತ 17 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

707 ಮಂದಿಗೆ ಸೋಂಕು ದೃಢ • ಒಂದು ದಿನದಲ್ಲಿ 1.14 ಲಕ್ಷ ಮಾದರಿಗಳ ಪರೀಕ್ಷೆ

ರಾಜ್ಯದಲ್ಲಿ ಕೋವಿಡ್ ಮತ್ತಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಗುರುವಾರ 707 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ.

ಮೂರೂವರೆ ತಿಂಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ರಾಜ್ಯದ 29 ಜಿಲ್ಲೆಗಳಿಂದ 142 ಮಂದಿ ಕೋವಿಡ್ ಪೀಡಿತರಾದರೇ, ಬೆಂಗಳೂರಿನಲ್ಲಿ 565 ಮಂದಿ ಸೋಂಕಿತರಾಗಿದ್ದಾರೆ.

ರಾಜ್ಯದ 23 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿವೆ. ಕೋವಿಡ್ ಪರೀಕ್ಷೆಗಳ ಸಂಖ್ಯೆಯೂ ಏರಿಕೆ ಕಂಡಿದ್ದು, ಒಂದು ದಿನದ ಅವಧಿಯಲ್ಲಿ 1.14 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.61ರಷ್ಟಿದೆ. ಐದು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 16 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಚಿಕ್ಕಬಳ್ಳಾಪುರ ಸೇರಿದಂತೆ 8 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿಲ್ಲ.

ಉಡುಪಿಯಲ್ಲಿ 19, ಹಾಸನದಲ್ಲಿ 17, ಮೈಸೂರಿನಲ್ಲಿ 16, ಕೊಡಗಿನಲ್ಲಿ 12 ಹಾಗೂ ದಕ್ಷಿಣ ಕನ್ನಡದಲ್ಲಿ 11 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 10ಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.06 ಲಕ್ಷ ದಾಟಿದೆ.

ಸೋಂಕಿತರಲ್ಲಿ 252 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.59 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 8 ಸಾವಿರದ ಗಡಿ (8,223) ದಾಟಿದೆ. ಬೆಂಗಳೂರಿನಲ್ಲಿ 6,846 ಸೋಂಕಿತರಿದ್ದಾರೆ. ಹಾವೇರಿ ಹಾಗೂ ಗದಗ ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳಿಲ್ಲ. ಬೀದರ್, ಬಾಗಲಕೋಟೆ ಸೇರಿದಂತೆ ಆರು ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಮೂವರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.42 ರಷ್ಟು ಇದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,327ಕ್ಕೆ ಏರಿಕೆಯಾಗಿದೆ.



ಜಲಂಧರ್‌ನ ಕೋವಿಡ್–19 ಲಸಿಕಾ ಕೇಂದ್ರದ ಎದುರು ಲಸಿಕೆ ಪಡೆಯಲು ಸರತಿ ಸಾಲಿನಲ್ಲಿ ನಿಂತಿರುವ ಜನರು

ಮಹಾರಾಷ್ಟ್ರ: ಒಂದೇ ದಿನ 5000ಕ್ಕೂ ಹೆಚ್ಚು ಪ್ರಕರಣ

ಮುಂಬೈ: ಮಹಾರಾಷ್ಟ್ರದಲ್ಲಿ ಗುರುವಾರ 24 ಗಂಟೆಗಳ ಅವಧಿಯಲ್ಲಿ 5000ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಪರಿಸ್ಥಿತಿ ಅವಲೋಕನಕ್ಕಾಗಿ ಕೋವಿಡ್ ನಿಯಂತ್ರಣ ಕಾರ್ಯಾಚರಣೆ ಪಡೆಯ ಉನ್ನತ ಅಧಿಕಾರಿಗಳ ಜತೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಸಭೆ ನಡೆಸಿದರು.

‘ಕೋವಿಡ್ ದೃಢ ಪ್ರಕರಣಗಳು ಹೆಚ್ಚುತ್ತಿರುವುದು ಕಳವಳಕಾರಿ ವಿಷಯ’ ಎಂದು ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ರಾಜೇಶ್ ಟೋಪೆ ಹೇಳಿದ್ದಾರೆ.

ಗುರುವಾರ 5,368 ಪ್ರಕರಣಗಳು ವರದಿಯಾಗಿವೆ ಮತ್ತು 22 ಮಂದಿ ಸಾವಿಗೀಡಾಗಿದ್ದಾರೆ. ಮುಂಬೈವೊಂದರಲ್ಲೇ 3,671 ಪ್ರಕರಣಗಳು ದಾಖಲಾಗಿವೆ.

ಕೋವಿಡ್ ಲಸಿಕೆ: ಪ್ರತಿಕಾಯಗಳ ಅವಧಿ 9 ತಿಂಗಳಿಗೂ ಅಧಿಕ

ನವದೆಹಲಿ (ಪಿಟಿಐ): ಕೋವಿಡ್ –19 ನಂತರ ನೀಡಲಾಗುವ ಲಸಿಕೆಯಿಂದ ದೇಹದಲ್ಲಿ ಪ್ರತಿಕಾಯ ಶಕ್ತಿಯು ಒಂಬತ್ತು ತಿಂಗಳು ಅಥವಾ ಅದಕ್ಕೂ ಹೆಚ್ಚಿನ ಅವಧಿ ಇರಲಿದೆ. ಅಲ್ಲದೆ, ಕೋವಿಡ್ ಮುಂಚೂಣಿ ಕಾರ್ಯಕರ್ತರು, 60 ವರ್ಷ ಮೀರಿದವರಿಗೆ ಮುಂಜಾಗ್ರತೆಯಾಗಿ ನೀಡುವ ಲಸಿಕೆಯು ಅವರಲ್ಲಿ ಸೋಂಕಿನ ತೀವ್ರತೆಯನ್ನು ತಗ್ಗಿಸಲಿದೆ.

ಐಸಿಎಂಆರ್ ಪ್ರಧಾನ ನಿರ್ದೇಶಕ ಡಾ.ಬಲರಾಂ ಭಾರ್ಗವ ಅವರು, ಸಹಜ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬರಿಗೆ ತಗಲುವ ಸೋಂಕು ದೇಹದಲ್ಲಿನ ನಿರೋಧಕ ಶಕ್ತಿಯನ್ನು ಕುಗ್ಗಿಸಲಿದೆ. ಲಸಿಕೆಯ ಕಾರಣದಿಂದ ರೂಪುತಳೆಯುವ ಹೈಬ್ರಿಡ್ ಪ್ರತಿಕಾಯಗಳು, ಎರಡನೇ ಡೋಸ್ ಬಳಿಕ ಇನ್ನಷ್ಟು ದೃಢವಾಗಲಿದ್ದು, ಪ್ರತಿಕ್ರಿಯಾತ್ಮಕವಾಗಿರುತ್ತವೆ ಎಂದರು.

ಸೋಂಕು ತಗುಲಿದ್ದು, ಲಸಿಕೆಯನ್ನು ಪಡೆದಿದ್ದಲ್ಲಿ ದೇಹದಲ್ಲಿ ಮೂಡುವ ಪ್ರತಿರೋಧ ಶಕ್ತಿಯು ಸೋಂಕು ಅಥವಾ ಲಸಿಕೆಯನ್ನು ಮೀರಿದ್ದಾಗಿರುತ್ತದೆ. ಹೀಗಾಗಿ, ಲಸಿಕೆಯನ್ನು ಪಡೆಯುವುದು ತೀರಾ ಅಗತ್ಯವಾದುದಾಗಿದೆ ಎಂದರು.

ಮುಂಜಾಗ್ರತೆಯಾಗಿ ಹೆಚ್ಚುವರಿ ಡೋಸ್ ಕೊಡುವುದರ ಪ್ರಾಥಮಿಕ ಉದ್ದೇಶಗಳು ಮೂರು. ಅವುಗಳೆಂದರೆ ಸೋಂಕಿನ ತೀವ್ರತೆ ತಡೆಯುವುದು, ಆಸ್ಪತ್ರೆಗೆ ದಾಖಲಾಗುವುದು ಮತ್ತು ಸಾವಿನ ಸಾಧ್ಯತೆಗಳನ್ನು ತಗ್ಗಿಸುವುದೇ ಆಗಿದೆ ಎಂದರು.

ಹೊಸ ಪ್ರಕರಣಗಳ ದಿಢೀರ್ ಏರಿಕೆ



ನವದೆಹಲಿ: ಗುರುವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳಲ್ಲಿ ದೇಶದಲ್ಲಿ 13,154 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ ಎಂದು ಕೇಂದ್ರ ಆರೋಗ್ಯ ಇಲಾಖೆಯ ಪ್ರಕಟಣೆ ತಿಳಿಸಿದೆ.

ಇದೇ ಅವಧಿಯಲ್ಲಿ ಕೋವಿಡ್‌ನಿಂದ 268 ಸಾವು ಸಂಭವಿಸಿದೆ, ಸಕ್ರಿಯ ಪ್ರಕರಣಗಳ ಸಂಖ್ಯೆ 82,402ರಷ್ಟಿದೆ. ಇನ್ನು, ಓಮೈಕ್ರಾನ್ ಪ್ರಕರಣಗಳ ಸಂಖ್ಯೆ 961ಕ್ಕೆ ಏರಿದ್ದು, ದೆಹಲಿಯಲ್ಲಿ ಈವರೆಗೆ 263 ಮಹಾರಾಷ್ಟ್ರದಲ್ಲಿ 252 ಪ್ರಕರಣ ದಾಖಲಾಗಿವೆ. ಗುಜರಾತ್‌ನಲ್ಲಿ 97, ರಾಜಸ್ಥಾನದಲ್ಲಿ 69ಕ್ಕೆ ಏರಿದೆ.

ಜ.3 ರಿಂದ 15 ವರ್ಷ ಮೇಲ್ಪಟ್ಟವರಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ 15 ರಿಂದ 18 ವರ್ಷ ವಯೋಮಾನದವರಿಗೆ ಜನವರಿ 3 ರಿಂದ ಕೋವಿಡ್ ಲಸಿಕೆ ನೀಡುವ ಕಾರ್ಯಕ್ಕೆ ಚಾಲನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಈ ಸಂಬಂಧ ಅವರು ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಾಸಕರಿಗೆ ಪತ್ರವನ್ನು ಬರೆದು, ಇದಕ್ಕಾಗಿ ಅಗತ್ಯ ತಯಾರಿ ಮಾಡಿಕೊಳ್ಳುವಂತೆ ಸೂಚನೆ ನೀಡಿದ್ದಾರೆ.

ಜಾಗತಿಕವಾಗಿ ಕೋವಿಡ್-19 ಮತ್ತು ಓಮೈಕ್ರಾನ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಈ ವಯೋಮಾನದವರಿಗೂ ಲಸಿಕೆ ನೀಡಲು ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸು ಮಾಡಿದೆ. ಇದರ ಮೇರೆಗೆ ಕೇಂದ್ರ ಸರ್ಕಾರ ಜ.3 ರಿಂದ ಲಸಿಕೆ ನೀಡುವುದನ್ನು ಆರಂಭಿಸಲು ಸಲಹೆ ನೀಡಿದೆ. ಆದ್ದರಿಂದ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಮತ್ತು ವಿಧಾನಸಭಾ ಸದಸ್ಯರು ತಮ್ಮ ವಿಧಾನಸಭಾ ಕ್ಷೇತ್ರಗಳಲ್ಲಿ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡುವಂತೆ ಬೊಮ್ಮಾಯಿ ಕೋರಿದ್ದಾರೆ.

ರಾಜ್ಯದಲ್ಲಿ ಈವರೆಗೆ 8.5 ಕೋಟಿಗಿಂತ ಹೆಚ್ಚು ಕೋವಿಡ್ ಲಸಿಕೆ ಡೋಸ್ ನೀಡಲಾಗಿದೆ. ಇದರಲ್ಲಿ ಮೊದಲ ಡೋಸ್ 4.75 ಕೋಟಿ(ಶೇ 97), ಎರಡನೇ ಡೋಸ್ 3.78 ಕೋಟಿ (ಶೇ 77) ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

ಐವರು ನರ್ಸಿಂಗ್ ವಿದ್ಯಾರ್ಥಿನಿಯರಿಗೆ ಸೋಂಕು

ಬಂಗಾರಪೇಟೆ: ಪಟ್ಟಣ ಹೊರವಲಯದ ವಿಷ್ಣು ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿ ನಿಲಯದ ಐವರು ವಿದ್ಯಾರ್ಥಿನಿಯರಿಗೆ ಕೋವಿಡ್ ಸೋಂಕು ತಗುಲಿರುವುದು ದೃಢಪಟ್ಟಿದೆ.

ಕೆಜಿಎಫ್ ತಾಲ್ಲೂಕು ಆಸ್ಪತ್ರೆಯಲ್ಲಿ ನಾಲ್ವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಒಬ್ಬರನ್ನು ವಿದ್ಯಾರ್ಥಿನಿಲಯದಲ್ಲೇ ಕ್ವಾರಂಟೈನ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಂಕಿತರು ಪಶ್ಚಿಮ ಬಂಗಾಳದವರಾಗಿದ್ದು, ಡಿ. 18ರಂದು ರೈಲಿನಲ್ಲಿ ಪಟ್ಟಣದ ಕಾಲೇಜಿಗೆ ಬಂದಿದ್ದರು. 21ರ ಬಳಿಕ ಅವರ ಗಂಟಲು ದ್ರವ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ವಿದ್ಯಾರ್ಥಿ ನಿಲಯದಲ್ಲಿ ಒಟ್ಟು 63 ವಿದ್ಯಾರ್ಥಿನಿಯರು ಇದ್ದಾರೆ.

ಬಾಲಕರ ವಿದ್ಯಾರ್ಥಿ ನಿಲಯದ 56 ವಿದ್ಯಾರ್ಥಿಗಳ ಗಂಟಲು ದ್ರವ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.



ದೆಹಲಿಯ ಅಕ್ಷರಧಾಮ ಮೆಟ್ರೊ ನಿಲ್ದಾಣದ ಬಳಿ ಗುರುವಾರ ಪ್ರಯಾಣಿಕರ ಸಾಲು ಕಂಡುಬಂದಿತು–ಪಿಟಿಐ ಚಿತ್ರ

ನಗರ ಸಾರಿಗೆ ಬಸ್ ಜಖಂ; ಮೆಟ್ರೊ ನಿಲ್ದಾಣಗಳ ಬಳಿ ಸಾಲು

ನಿರ್ಬಂಧ: ದೆಹಲಿಯಲ್ಲಿ ಪ್ರಯಾಣಿಕರ ಆಕ್ರೋಶ

ನವದೆಹಲಿ: ಕೋವಿಡ್ ಹರಡುವಿಕೆ ತಡೆಯಲು ಹಾಗೂ ಹೊಸ ವರ್ಷಾಚರಣೆಯಲ್ಲಿ ಜನ ದಟ್ಟಣೆ ತಡೆಯಲು ರಾಷ್ಟ್ರ ರಾಜಧಾನಿಯಲ್ಲಿ ಇನ್ನಷ್ಟು ಬಿಗಿ ನಿಯಮಗಳನ್ನು ಜಾರಿಗೆ ತಂದಿರುವುದು ಬಸ್ ಹಾಗೂ ಮೆಟ್ರೊ ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಮೆಟ್ರೊ ನಿಲ್ದಾಣಗಳಲ್ಲಿ ಪ್ರಯಾಣಿಕರ ಸರತಿ ಸಾಲು ಗುರುವಾರವೂ ಮುಂದುವರಿದಿತ್ತು. ರಾಜೀವ್ ಚೌಕ್ ಮೆಟ್ರೊ ನಿಲ್ದಾಣದಿಂದ ರಾತ್ರಿ 9 ಗಂಟೆ ಬಳಿಕ ಪ್ರಯಾಣಿಕರು ಹೊರ ಹೋಗುವಂತಿಲ್ಲ ಎಂದು ಅಧಿಕಾರಿಗಳು ನಿರ್ಧಾರ ಕೈಗೊಂಡಿದ್ದು, ಇದು ಹೊಸ ವರ್ಷಾಚರಣೆಗಾಗಿ ಸಿದ್ಧತೆಯಲ್ಲಿ ತೊಡಗಿದ್ದ ದೆಹಲಿಗರಿಗೆ ನಿರಾಸೆ ಮೂಡಿಸಿದೆ. ದೆಹಲಿಯ ಹೃದಯಭಾಗ ಎನಿಸಿರುವ ಕನೌಟ್ ಎಂಬ ಪ್ರದೇಶದಲ್ಲಿ ಪ್ರತೀ ವರ್ಷ ಹೊಸ ವರ್ಷಾಚರಣೆಗೆ ಜನರು ಸೇರುತ್ತಿದ್ದರು. ಈ ಜಾಗಕ್ಕೆ ರಾಜೀವ್ ಚೌಕ್ ಮೆಟ್ರೊ ನಿಲ್ದಾಣ ಸಮೀಪದಲ್ಲಿದೆ.

ಕೋವಿಡ್ ನಿಯಮಾವಳಿ ಪ್ರಕಾರ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಜನರು ಹತ್ತಲು ಅವಕಾಶ ನೀಡದ್ದಕ್ಕೆ ದೆಹಲಿ ಡಿಟಿಸಿ ಬಸ್‌ಗಳನ್ನು ಪ್ರಯಾಣಿಕರು ಜಖಂಗೊಳಿಸಿದ್ದಾರೆ. ಗುಂಪು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಐವರನ್ನು ಬಂಧಿಸಲಾಗಿದೆ. ಬಸ್‌ಗಳು ಆಸನ ಸಾಮರ್ಥ್ಯದ ಶೇ 50ರಷ್ಟು ಪ್ರಯಾಣಿಕರೊಂದಿಗೆ ಸಂಚರಿಸಬೇಕಿದೆ.

ಅಧಿಕವಾಗುತ್ತಿದೆ ಆರ್ ಮೌಲ್ಯ: ಸೋಂಕು ಪ್ರಸರಣ ಪ್ರಮಾಣವನ್ನು ಸೂಚಿಸುವ ‘ಆರ್ ಮೌಲ್ಯ’ 1.22ಕ್ಕೆ ಏರಿಕೆ ಕಂಡಿದ್ದು, ಪ್ರಕರಣಗಳು ಅಧಿಕವಾಗುತ್ತಿರುವ ಎಚ್ಚರಿಕೆ ನೀಡಿದೆ. ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಗುಜರಾತ್, ತಮಿಳುನಾಡು, ದೆಹಲಿ ಮತ್ತು ಕರ್ನಾಟಕದಲ್ಲಿ ಕೋವಿಡ್ ದೃಢಪಡುವ ಪ್ರಮಾಣ ಹೆಚ್ಚುತ್ತಿದೆ.

‘ಸಮುದಾಯಕ್ಕೂ ಹರಡಿದ ಓಮೈಕ್ರಾನ್’

ನವದೆಹಲಿ: ಕೊರೊನಾ ವೈರಸ್‌ನ ಹೊಸ ರೂಪಾಂತರ ತಳಿ ಓಮೈಕ್ರಾನ್ ಸೋಂಕು ಕ್ರಮೇಣ ಸಮುದಾಯಕ್ಕೂ ಹರಡುತ್ತಿದೆ ಎಂದು ದೆಹಲಿ ಆರೋಗ್ಯ ಸಚಿವ ಸತ್ಯೇಂದರ್ ಜೈನ್ ಗುರುವಾರ ಕಳವಳ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ದೃಢಪಟ್ಟವರು ಓಮೈಕ್ರಾನ್ ಸೋಂಕು ಹೊಂದಿದ್ದಾರೆಯೇ ಎಂಬುದನ್ನು ದೃಢಪಡಿಸಿಕೊಳ್ಳಲು ನಡೆಸುವ ವಂಶವಾಹಿ ಸಂರಚನೆ ವಿಶ್ಲೇಷಣೆ (ಜಿನೋಮ್ ಸೀಕ್ವೆನ್ಸಿಂಗ್) ವರದಿಯಲ್ಲಿ ಶೇಕಡಾ 46ರಷ್ಟು ಮಾದರಿಗಳು ಓಮೈಕ್ರಾನ್ ಸೋಂಕನ್ನು ಹೊಂದಿವೆ ಎಂಬುದನ್ನು ತೋರಿಸುತ್ತಿದೆ. ಇದರಲ್ಲಿ ವಿದೇಶಿ ಪ್ರಯಾಣದ ಹಿನ್ನೆಲೆ ಇಲ್ಲದವರೂ ಇದ್ದಾರೆ. ಇದರ ಅರ್ಥ ಓಮೈಕ್ರಾನ್ ದೆಹಲಿಯಲ್ಲಿ ಕ್ರಮೇಣ ಸಮುದಾಯಕ್ಕೂ ಹರಡುತ್ತಿದೆ' ಎಂದು ಹೇಳಿದ್ದಾರೆ.

ಅನೇಕ ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ವಿಮಾನ ನಿಲ್ದಾಣದಲ್ಲಿ ನೆಗೆಟಿವ್ ವರದಿ ಬಂದ ಬಳಿಕ ಕೋವಿಡ್ ಸೋಂಕು ತಗುಲಿದೆ. ಕುಟುಂಬ ಸದಸ್ಯರಿಗೂ ಸೋಂಕು ಹರಡುತ್ತಿದೆ ಎಂದು ಹೇಳಿದರು. ಕೋವಿಡ್ ಪ್ರಕರಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ದೆಹಲಿಯಲ್ಲಿ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತಿದೆ ಎಂದು ಆರೋಗ್ಯ ಸಚಿವರು ತಿಳಿಸಿದ್ದಾರೆ.

ಪ್ರಧಾನಿಯನ್ನು ಅನುಸರಿಸುತ್ತಿದ್ದೇನೆ: ಮಾಸ್ಕ್ ಹಾಕದ್ದಕ್ಕೆ ಸಂಜಯ್ ರಾವುತ್ ಪ್ರತಿಕ್ರಿಯೆ

ನಾಸಿಕ್: ಸಭೆಯೊಂದರಲ್ಲಿ ಮಾಸ್ಕ್ ರಹಿತರಾಗಿ ಕಾಣಿಸಿಕೊಂಡ ಶಿವಸೇನಾ ಸಂಸದ ಸಂಜಯ್ ರಾವುತ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಅನುಸರಿಸುತ್ತಿರುವುದಾಗಿ ಉತ್ತರಿಸಿದ ಪ್ರಸಂಗ ನಡೆದಿದೆ.

ಮಹಾರಾಷ್ಟ್ರದ ನಾಸಿಕ್‌ನಲ್ಲಿ ಗುರುವಾರ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಸಂಜಯ್ ರಾವುತ್ ಮಾಸ್ಕ್ ಧರಿಸದೆ ಪಾಲ್ಗೊಂಡಿದ್ದರು. ಮಾಸ್ಕ್ ಯಾಕೆ ಧರಿಸಿಲ್ಲ ಎಂದು ಕೆಲವು ವರದಿಗಾರರು ರಾವುತ್ ಅವರನ್ನು ಪ್ರಶ್ನಿಸಿದ್ದರು.

'ಪ್ರಧಾನಿ ನರೇಂದ್ರ ಮೋದಿ ಜನರಿಗೆ ಮಾಸ್ಕ್ ಧರಿಸಲು ಹೇಳುತ್ತಾರೆ. ಆದರೆ, ಸ್ವತಃ ಅವರೇ ಮಾಸ್ಕ್ ಧರಿಸುವುದಿಲ್ಲ. ಮಹಾರಾಷ್ಟ್ರದ ಸಿ.ಎಂ ಉದ್ಧವ್ ಠಾಕ್ರೆ ಮಾಸ್ಕ್ ಧರಿಸುತ್ತಾರೆ, ಆದರೆ ಮೋದಿ ರಾಷ್ಟ್ರ ನಾಯಕ. ನಾನು ಪ್ರಧಾನ ಮಂತ್ರಿಯನ್ನು ಅನುಸರಿಸುತ್ತೇನೆ. ಹಾಗಾಗಿ ನಾನು ಮಾಸ್ಕ್ ಧರಿಸುವುದಿಲ್ಲ. ಜನರೂ ಮಾಸ್ಕ್ ಧರಿಸುವುದಿಲ್ಲ' ಎಂದು ಸಂಜಯ್ ರಾವುತ್ ಪ್ರತಿಕ್ರಿಯಿಸಿದ್ದಾರೆ.

ಇದೇ ವೇಳೆ, ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಮುನ್ನೆಚ್ಚರಿಕೆ ವಹಿಸಬೇಕು. ಆರ್ಥಿಕತೆ ಬೆಳವಣಿಗೆಗೆ ಅಡ್ಡಿ ಪಡಿಸುವಂತಹ ಅಡೆತಡೆಗಳ ಹೇರಿಕೆಯಾಗುವುದಿಲ್ಲ ಎಂದು ಭಾವಿಸಿದ್ದೇನೆ. ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ, ಅವರ ಪತಿ ಸದಾನಂದ ಸುಳೆ, ಮಹಾರಾಷ್ಟ್ರ ಶಿಕ್ಷಣ ಮಂತ್ರಿ ವರ್ಷಾ ಗಾಯಕ್‌ವಾಡ್ ಅವರಿಗೆ ಕೋವಿಡ್ ಸೋಂಕು ದೃಢಪಟ್ಟಿದೆ. ಹಾಗಾಗಿ ಪ್ರತಿಯೊಬ್ಬರೂ ಸಾರ್ವಜನಿಕ ಕಾರ್ಯಕ್ರಮಗಳಿಗೆ ತೆರಳುವಾಗ ಜಾಗರೂಕರಾಗಿರಬೇಕು ಎಂದರು.

‘ಸಂವಿಧಾನ ವಿರೋಧಿ ಮೌನಿ ಪ್ರಧಾನಿ ’

ಪ್ರಜಾವಾಣಿ ವಾರ್ತೆ



ಪ್ರೊ.ಬಿ.ಕೆ. ಚಂದ್ರಶೇಖರ್

ಮೈಸೂರು: ‘ಉತ್ತರಾಖಂಡದ ಹರಿದ್ವಾರದಲ್ಲಿ ನಡೆದ ಧರ್ಮ ಸಂಸದ್‌ನಲ್ಲಿ ಕೇಳಿ ಬಂದಿದ್ದ ದ್ವೇಷ ಭಾಷಣವನ್ನು ಪ್ರಧಾನಿ ನರೇಂದ್ರ ಮೋದಿ ಖಂಡಿಸಬೇಕಿತ್ತು. ಆದರೆ ಅವರದ್ದು ಸಂವಿಧಾನ ವಿರೋಧಿ ಮೌನ’ ಎಂದು ಕೆಪಿಸಿಸಿ ವಕ್ತಾರ ಪ್ರೊ. ಬಿ.ಕೆ.ಚಂದ್ರಶೇಖರ್ ದೂರಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಬಹಿರಂಗವಾಗಿ ಮುಸ್ಲಿಮರನ್ನು ಕೊಲ್ಲುವಂತೆ ಧರ್ಮ ಸಂಸದ್‌ನಲ್ಲಿ ಆಹ್ವಾನ ನೀಡಿರುವ ಬಗ್ಗೆ ಮೋದಿ ಹಾಗೂ ಗೃಹ ಸಚಿವರು ಪ್ರತಿಕ್ರಿಯೆಯನ್ನೇ ನೀಡದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಮುಸ್ಲಿಮರ ವಿರುದ್ಧ ದ್ವೇಷ ಹರಡಲು ಸಂಘ ಪರಿವಾರಕ್ಕೆ ಪರೋಕ್ಷವಾಗಿ ಕುಮ್ಮಕ್ಕು ನೀಡಿದಂತಾಗಿದೆ. ಇದು ಅಪಾಯಕಾರಿ ಬೆಳವಣಿಗೆ’ ಎಂದು ಹೇಳಿದರು.

‘ದೆಹಲಿಯಿದ ಐಎಎಫ್ ಹೆಲಿಕಾಪ್ಟರ್‌ನಲ್ಲಿ ಉತ್ತರ ಪ್ರದೇಶಕ್ಕೆ ಬಂದು ಪ್ರಧಾನಿ ರಾಜಕೀಯ ಭಾಷಣ ಮಾಡುತ್ತಾರೆ. ಜನರ ತೆರಿಗೆ ಹಣ ಬಳಸಿ ಜಾರಿಗೆ ತಂದ ಯೋಜನೆಗಳ ಉದ್ಘಾಟನೆ ವೇಳೆ ರಾಜಕೀಯ ಭಾಷಣ ಮಾಡುವ ಮೂಲಕ ಅವರು ತಮ್ಮ ಹುದ್ದೆಯ ಘನತೆಯನ್ನು ಕೆಡಿಸುವ, ಪ್ರಜಾಪ್ರಭುತ್ವದ ಬುನಾದಿಗೆ ಪೆಟ್ಟು ಕೊಡುವ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಮತ್ತು ಬಿಜೆಪಿ ನಡುವೆ ವ್ಯತ್ಯಾಸವಿಲ್ಲದಂತೆ ಮಾಡಿದ್ದಾರೆ’ ಎಂದು ದೂರಿದರು.

‘ಪಕ್ಷದ ಕಾರ್ಯಕ್ರಮಕ್ಕೆ ಜನರನ್ನು ಸೇರಿಸಲು ಪಂಚಾಯಿತಿ ಅಧಿಕಾರಿಗಳ ನೆರವು ಪಡೆಯಲಾಗುತ್ತಿದೆ. ಸರ್ಕಾರಿ ವಾಹನದಲ್ಲಿ ಪ್ರಯಾಣಿಸಿ, ರಾಜಕೀಯ ಭಾಷಣ ಮಾಡಿದರೆ ಪ್ರಶ್ನಿಸುವ ಅಧಿಕಾರವಿದ್ದರೂ ಚುನಾವಣಾ ಆಯೋಗವು ಸರ್ಕಾರದ ಇಲಾಖೆಯಂತೆ ವರ್ತಿಸುತ್ತಿದೆ’ ಎಂದು ಆರೋಪಿಸಿದರು.

‘ಪ್ರಧಾನಿ ಅವರು ರೋಮ್‌ನಲ್ಲಿ ಪೋಪ್ ಭೇಟಿಯಾಗಿ ಮರಳಿದ ಹದಿನೈದು ದಿನಗಳಲ್ಲೇ ಇಡೀ ದೇಶದಲ್ಲಿ, ಮುಖ್ಯವಾಗಿ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಕ್ರೈಸ್ತರು, ಚರ್ಚ್‌ಗಳ ಮೇಲೆ ವ್ಯವಸ್ಥಿತ ದಾಳಿ ಶುರುವಾಗಿದೆ. ಇದರ ಹಿಂದಿನ ಹುನ್ನಾರವೇನು’ ಎಂದು ಪ್ರಶ್ನಿಸಿದರು.

ವೈದ್ಯಾಧಿಕಾರಿಯಿಂದ ಲೈಂಗಿಕ ಕಿರುಕುಳ: ನರ್ಸಿಂಗ್ ಟ್ರೈನಿ ದೂರು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ಕಣ್ಣಿನ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಮಹೇಶ್ವರ್ ಅವರು ಲೈಂಗಿಕ ಕಿರುಕುಳ ನೀಡಿದ್ದಾರೆ’ ಎಂದು ಆರೋಪಿಸಿ ಇಲ್ಲಿನ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಸಿಮ್ಸ್) ನರ್ಸಿಂಗ್ ತರಬೇತಿ ಪಡೆಯುತ್ತಿರುವ ಯುವತಿಯೊಬ್ಬರು ಸಂಸ್ಥೆಯ ಜಿಲ್ಲಾ ಸರ್ಜನ್ ಮತ್ತು ಡೀನ್‌ಗೆ ದೂರು ನೀಡಿದ್ದಾರೆ.

ಎರಡು ದಿನಗಳ ಹಿಂದೆ ಘಟನೆ ನಡೆದಿದೆ. ಯುವತಿ ದೂರು ನೀಡಿರುವುದನ್ನು ಅಧಿಕಾರಿಗಳಿಬ್ಬರೂ ‘ಪ್ರಜಾವಾಣಿ’ಗೆ ಖಚಿತಪಡಿಸಿದ್ದಾರೆ. ಅಲ್ಪಾವಧಿಯ ನರ್ಸಿಂಗ್ ತರಬೇತಿಗಾಗಿ ಎನ್‌ಜಿಒವೊಂದರ ಮೂಲಕ ಅವರು ಸಿಮ್ಸ್‌ಗೆ ಸೇರ್ಪಡೆಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಂಸ್ಥೆಯ ಬೋಧನಾ ಆಸ್ಪತ್ರೆಯಲ್ಲಿ ಡಾ.ಮಹೇಶ್ವರ್ ಲೈಂಗಿಕ ಕಿರುಕುಳ ನೀಡಲು ಯತ್ನಿಸಿ, ಅಶ್ಲೀಲವಾಗಿ ವರ್ತಿಸಿದರು. ವೈದ್ಯರು ಎಳೆದಾಡಿದ ಸಂದರ್ಭದಲ್ಲಿ ಮಹಿಳೆ ಜೋರಾಗಿ ಕಿರುಚಿದಾಗ, ನರ್ಸಿಂಗ್ ತರಬೇತಿ ಪಡೆಯುತ್ತಿದ್ದ ಇತರರು ಧಾವಿಸಿ ಆಕೆಯನ್ನು ರಕ್ಷಿಸಿದರು. ಎಲ್ಲರೂ ಸೇರಿ ವೈದ್ಯರಿಗೆ ಹೊಡೆದಿದ್ದಾರೆ ಎನ್ನಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಂಸ್ಥೆಯ ಡೀನ್ ಡಾ.ಸಂಜೀವ್, ‘ದೂರು ಬಂದಿದೆ. ತಕ್ಷಣವೇ ತನಿಖೆಗಾಗಿ ಸಮಿತಿಯೊಂದನ್ನು ರಚಿಸಲಾಗಿದೆ. ಪೊಲೀಸರ ಸಹಾಯವನ್ನೂ ಪಡೆದಿದ್ದೇವೆ. ಸಮಿತಿಯು ದೂರಿನ ಸತ್ಯಾಸತ್ಯತೆ ಬಗ್ಗೆ ತನಿಖೆ ನಡೆಸಿ ವರದಿ ನೀಡಲಿದೆ. ನಂತರ ಕ್ರಮ ಕೈಗೊಳ್ಳಲಾಗುವುದು’ ಎಂದರು.



ಚೆನ್ನೈನಲ್ಲಿ ಮಳೆ

ಚೆನ್ನೈನಲ್ಲಿ ಗುರುವಾರ ಭಾರಿ ಮಳೆಯಾಗಿದ್ದು ಕನಿಷ್ಠ ಮೂವರು ಸಾವಿಗೀಡಾಗಿದ್ದಾರೆ. ಕೆಲವೇ ತಾಸುಗಳಲ್ಲಿ 20 ಸೆಂ.ಮೀ ಮಳೆ ಆಗಿದೆ. ಪ್ರತ್ಯೇಕ ಘಟನೆಗಳಲ್ಲಿ ಇಬ್ಬರು ಮಹಿಳೆಯರು ಮತ್ತು ಮಗು ಅಸುನೀಗಿದ್ದಾರೆ. ತಗ್ಗುಪ್ರದೇಶಗಳಲ್ಲಿ ನೀರು ನುಗ್ಗಿ ಹರಿಯಿತು. ಹಲವು ಪ್ರದೇಶಗಳು ಜಲಾವೃತಗೊಂಡ ಸಂಚಾರ ಅಸ್ತವ್ಯಸ್ತಗೊಂಡಿತು. ಮಧ್ಯಾಹ್ನ 2 ಗಂಟೆ ವೇಳೆಗೆ ದಿಢೀರ್ ಆರಂಭವಾದ ಮಳೆ ರಾತ್ರಿಯವರೆಗೂ ಸುರಿಯಿತು.

ಕಾಂಗ್ರೆಸ್ ಮುನ್ನಡೆ; ಬಿಜೆಪಿ ಹಿನ್ನಡೆ

ಒಂದನೇ ಪುಟದಿಂದ

ಮುಖ್ಯಮಂತ್ರಿ ಬೊಮ್ಮಾಯಿ ಪ್ರತಿನಿಧಿಸುವ ಹಾವೇರಿ ಜಿಲ್ಲೆಯ ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಬಂಕಾಪುರ ಪುರಸಭೆಯ 23 ವಾರ್ಡ್‌ಗಳ ಪೈಕಿ 14ರಲ್ಲಿ ಕಾಂಗ್ರೆಸ್ ಗೆದ್ದಿದ್ದರೆ 7ರಲ್ಲಿ ಬಿಜೆಪಿ, 2 ರಲ್ಲಿ ಪಕ್ಷೇತರರು ಗೆದ್ದಿದ್ದಾರೆ. ಆದರೆ, ಈ ಹಿಂದೆಯೂ ಇಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ವಿಧಾನಮಂಡಲದ ಅಧಿವೇಶನದ ಗಡಿಬಿಡಿಯಲ್ಲಿ ಮುಳುಗಿದ್ದ ಬೊಮ್ಮಾಯಿ, ಈ ಚುನಾವಣೆಯ ಬಗ್ಗೆ ಗಮನಹರಿಸಿದೇ ಇರುವುದು ಇಲ್ಲಿನ ಅಪಯಶಸ್ಸಿಗೆ ಕಾರಣವಿದ್ದೀತು. ನೆಹರೂ ಓಲೇಕಾರ ಪ್ರತಿನಿಧಿಸುವ ಹಾವೇರಿ ಕ್ಷೇತ್ರದ ಗುತ್ತಲ ಪಟ್ಟಣ ಪಂಚಾಯಿತಿಯಲ್ಲಿ ಕಾಂಗ್ರೆಸ್ ಗಣನೀಯ ಸಾಧನೆ ಮಾಡಿದೆ. ಸಚಿವ ಸಿ.ಸಿ. ಪಾಟೀಲ ಪ್ರತಿನಿಧಿಸುವ ಗದಗ ಜಿಲ್ಲೆಯ ಗದಗ–ಬೆಟಗೇರಿ ಪುರಸಭೆಯಲ್ಲಿ ಬಿಜೆಪಿ ಮೇಲುಗೈ ಸಾಧಿಸಿದೆ.

ಬೆಳಗಾವಿಯಲ್ಲಿ ಇಬ್ಬರು ಬಿಜೆಪಿ ಸಂಸದರು, ಇಬ್ಬರು ಸಚಿವರೂ ಸೇರಿದಂತೆ 14 (ಓರ್ವ ಮೇಲ್ಮನೆ ಸದಸ್ಯ) ಶಾಸಕರು, ರಾಜ್ಯಸಭಾ ಸದಸ್ಯರೂ ಇದ್ದರೂ ಬಿಜೆಪಿ ಮಹತ್ವದ ಸಾಧನೆ ಮಾಡಿಲ್ಲ. ಈ ಜಿಲ್ಲೆ ವ್ಯಾಪ್ತಿಯ 5 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಅಧಿಕಾರ ಹಿಡಿಯುವ ಶಕ್ತಿ ಪಡೆದಿದ್ದರೆ, ಕಾಂಗ್ರೆಸ್ 3, ಪಕ್ಷೇತರರು 8 ಕಡೆಗಳಲ್ಲಿ ಬಹುಮತ ಪಡೆದಿದ್ದಾರೆ. ಬಿಜೆಪಿ ಶಾಸಕ ಮಹೇಶ ಕುಮಟಳ್ಳಿ, ಮೇಲ್ಮನೆ ಸದಸ್ಯ ಲಕ್ಷ್ಮಣ ಸವದಿ ಪ್ರಾತಿನಿಧ್ಯ ಇರುವ ಅಥಣಿ ಪುರಸಭೆಯ 27 ವಾರ್ಡ್‌ಗಳಲ್ಲಿ 15ರಲ್ಲಿ ಗೆದ್ದಿರುವ ಕಾಂಗ್ರೆಸ್ ಅಧಿಕಾರ ಹಿಡಿಯಲಿದೆ. ಬಿಜೆಪಿ 9 ಸ್ಥಾನ ಮಾತ್ರ ಪಡೆದಿದೆ. 3 ಪಕ್ಷೇತರರ ಪಾಲಾಗಿದೆ.


ಸಚಿವೆ ಶಶಿಕಲಾ ಜೊಲ್ಲೆ ಪ್ರತಿನಿಧಿಸುವ ನಿಪ್ಪಾಣಿ ಕ್ಷೇತ್ರದ ಬೋರಗಾಂವ ಪಟ್ಟಣ ಪಂಚಾಯಿತಿಯಲ್ಲಿ 17ಕ್ಕೆ 17 ವಾರ್ಡ್‌ಗಳನ್ನೂ ಪಕ್ಷೇತರರೇ ಗೆದ್ದಿದ್ದರೆ, ಜೊಲ್ಲೆಯವರ ಸ್ವಂತ ಊರು ಚಿಕ್ಕೋಡಿ ತಾಲ್ಲೂಕಿನ ಯಕ್ಸಂಬಾ ಪಟ್ಟಣ ಪಂಚಾಯಿತಿಯಲ್ಲಿ 17 ವಾರ್ಡ್‌ಗಳಲ್ಲಿ 16 ರಲ್ಲಿ ಕಾಂಗ್ರೆಸ್ ವಿಜಯ ಸಾಧಿಸಿದೆ. 1ರಲ್ಲಿ ಮಾತ್ರ ಬಿಜೆಪಿ ಗೆದ್ದಿದೆ. ಬಿಜೆಪಿ ಶಾಸಕ ಬಾಲಚಂದ್ರ ಜಾರಕಿಹೊಳಿ ಪ್ರತಿನಿಧಿಸುವ ಅರಭಾವಿ ವಿಧಾನಸಭಾ ಕ್ಷೇತ್ರದ ಮೂಡಲಗಿ ತಾಲ್ಲೂಕಿನ ಅರಭಾವಿ ಪಟ್ಟಣ ಪಂಚಾಯಿತಿಯ 16 ವಾರ್ಡ್‌ಗಳಲ್ಲಿ ಬಿಜೆಪಿ 6ಕ್ಕೆ ತೃಪ್ತಿಪಟ್ಟುಕೊಂಡಿದ್ದರೆ, ಪಕ್ಷೇತರರು 10ರಲ್ಲಿ ವಿಜಯ ಸಾಧಿಸಿದ್ದಾರೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ಪ್ರತಿನಿಧಿಸುವ ಚಿಕ್ಕಮಗಳೂರು ಕ್ಷೇತ್ರದ ಚಿಕ್ಕಮಗಳೂರು ನಗರಸಭೆಯಲ್ಲಿ ಬಿಜೆಪಿ ಪ್ರಯಾಸ ಪಟ್ಟು ಸರಳ ಬಹುಮತ ಪಡೆದಿದೆ. ನೂತನ ಜಿಲ್ಲೆ ವಿಜಯನಗರ ವ್ಯಾಪ್ತಿಯ ಹೊಸಪೇಟೆ ನಗರಸಭೆಯಲ್ಲಿ ‘ಗದ್ದುಗೆ ಹಿಡಿದೇ ತೀರುತ್ತೇವೆ’ ಎಂದು ಹೇಳಿದ್ದ ಸಚಿವ ಆನಂದ್‌ಸಿಂಗ್ ಅದರಲ್ಲಿ ಯಶಸ್ವಿಯಾಗಿಲ್ಲ. 35 ವಾರ್ಡ್‌ಗಳ ಪೈಕಿ 12ರಲ್ಲಿ ಕಾಂಗ್ರೆಸ್, 10ರಲ್ಲಿ ಬಿಜೆಪಿ ಗೆದ್ದಿದೆ. 12 ಮಂದಿ ಪಕ್ಷೇತರರು, 1ರಲ್ಲಿ ಎಎಪಿ ಅಭ್ಯರ್ಥಿ ಗೆದ್ದಿದ್ದಾರೆ. ಬಿಜೆಪಿಗಿಂತ ಕಾಂಗ್ರೆಸ್ ಮುನ್ನಡೆ ಸಾಧಿಸಿದೆ.

ಸಚಿವ ಗೋವಿಂದ ಕಾರಜೋಳ ಪ್ರತಿನಿಧಿಸುವ ಮುಧೋಳ ಕ್ಷೇತ್ರದ ಬೆಳಗಲಿ ಪಟ್ಟಣ ಪಂಚಾಯಿತಿಯ 18 ವಾರ್ಡ್‌ಗಳಲ್ಲಿ 8 ರಲ್ಲಿ ಕಾಂಗ್ರೆಸ್ ಗೆದ್ದಿದ್ದರೆ ತಲಾ ಐದು ವಾರ್ಡ್‌ಗಳನ್ನು ಬಿಜೆಪಿ, ಪಕ್ಷೇತರರು ತಮ್ಮದಾಗಿಸಿಕೊಂಡಿದ್ದಾರೆ.

ತುಮಕೂರು ಜಿಲ್ಲೆ ಶಿರಾದಲ್ಲಿ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಗೆದ್ದಿತ್ತು. ಆದರೆ, ನಗರಸಭೆಯ 30 ವಾರ್ಡ್‌ಗೆ ನಡೆದ ಚುನಾವಣೆಯಲ್ಲಿ 11ರಲ್ಲಿ ಕಾಂಗ್ರೆಸ್,7ರಲ್ಲಿ ಜೆಡಿಎಸ್ ಗೆದ್ದಿದ್ದರೆ, ಬಿಜೆಪಿ 4ಕ್ಕೆ ಸಮಾಧಾನ ಪಟ್ಟುಕೊಳ್ಳಬೇಕಾಗಿದೆ. ಪಕ್ಷೇತರರು 8 ಕಡೆ ವಿಜಯ ಸಾಧಿಸಿದ್ದಾರೆ. ಇಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯಬೇಕಾದರೆ ಪಕ್ಷೇತರರನ್ನು ವಿಶ್ವಾಸಕ್ಕೆ ಪಡೆಯಬೇಕು. ಪಕ್ಷೇತರರು ನೆರವಿಗೆ ಬಾರದಿದ್ದರೆ ಯಾರೂ ಅಧಿಕಾರ ಹಿಡಿಯುವ ಪರಿಸ್ಥಿತಿ ಇಲ್ಲ.

ಹಳೆ ಮೈಸೂರು ಭಾಗದಲ್ಲಿ ತಮ್ಮದೇ ಪ್ರಭಾವ ಸೃಷ್ಟಿಯಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬಿಂಬಿಸಿಕೊಳ್ಳುತ್ತಿದ್ದಾರೆ. ರಾಮನಗರ ಜಿಲ್ಲೆ ಮಾಗಡಿ ವಿಧಾನಸಭೆ ಕ್ಷೇತ್ರದ ಬಿಡದಿ ಪಟ್ಟಣ ಪಂಚಾಯಿತಿಯಲ್ಲಿ ಜೆಡಿಎಸ್ ಮೇಲುಗೈ ಸಾಧಿಸಿದೆ.



ದೆಹಲಿ: ಕೋರ್ಟ್ ಕಲಾಪ ವರ್ಚ್ಯುವಲ್ ಆಗಿ ನಡೆಸಲು ನಿರ್ಧಾರ

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೋರ್ಟ್ ಕಲಾಪಗಳನ್ನು ವರ್ಚ್ಯುವಲ್ ಆಗಿ ನಡೆಸಲು ದೆಹಲಿ ಹೈಕೋರ್ಟ್ ಗುರುವಾರ ನಿರ್ಧರಿಸಿದೆ. ಜನವರಿ 3ರಿಂದ 15ರವರೆಗಿನ ಕೋರ್ಟ್ ಕಲಾಪಗಳನ್ನು ವರ್ಚ್ಯುವಲ್ ಆಗಿ ನಡೆಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕೊರೊನಾ ವೈರಸ್‌ನ ಹೊಸ ರೂಪಾಂತರ ತಳಿ ಓಮೈಕ್ರಾನ್ ಪ್ರಕರಣಗಳು ಹೆಚ್ಚುತ್ತಿದ್ದು, ಆತಂಕಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಭಾವ್ಯ ಕೋವಿಡ್ ಅಲೆಯನ್ನು ತಡೆಗಟ್ಟಲು ಎಲ್ಲ ರೀತಿಯ ಅಗತ್ಯ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ತಿಳಿಸಿದ್ದಾರೆ.

ಕೊಲ್ಹಾರ: ಖಾತೆ ತೆರೆದ ಎಐಎಂಐಎಂ

ಕೊಲ್ಹಾರ (ವಿಜಯಪುರ ಜಿಲ್ಲೆ): ಇಲ್ಲಿನ ಕೊಲ್ಹಾರ ಪಟ್ಟಣ ಪಂಚಾಯ್ತಿಯ 17 ವಾರ್ಡ್‌ಗಳಿಗೆ ನಡೆದ ಚುನಾವಣೆಯಲ್ಲಿ ಐದು ಸ್ಥಾನಗಳಿಗೆ ಸ್ಪರ್ಧಿಸಿದ್ದ ಅಸಾದುದ್ದೀನ್ ಓವೈಸಿ ನೇತೃತ್ವದ ಎಐಎಂಐಎಂ ಪಕ್ಷವು ಎರಡು ಸ್ಥಾನಗಳಲ್ಲಿ ಜಯಗಳಿಸಿದೆ.

ಒಟ್ಟು ಐದು ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಎಐಎಂಐಎಂ 2 ಸ್ಥಾನಗಳಲ್ಲಿ ಗೆದ್ದಿದೆ. ಆಕೆರಾ ಅನ್ವರ್ ಕಂಕರಪೀರ (523) ಹಾಗೂ ತೌಸೀಫ್ ಶರಫುದ್ದೀನ್ ಗಿರಗಾವಿ (376) ಆಯ್ಕೆಯಾಗಿದ್ದಾರೆ.

‘ಸಂಕ್ರಾಂತಿಗೆ ಸಚಿವ ಸಂಪುಟ ಪುನರ್‌ರಚನೆ’

ಪ್ರಜಾವಾಣಿ ವಾರ್ತೆ



ಬಸನಗೌಡ ಪಾಟೀಲ ಯತ್ನಾಳ

ವಿಜಯಪುರ: ಸಂಕ್ರಾಂತಿ ವೇಳೆಗೆ ರಾಜ್ಯ ಸಚಿವ ಸಂಪುಟ ಪುನರ್ ರಚನೆಯಾಗಲಿದೆ. ಜೊತೆಗೆ ಪಕ್ಷ ಸಂಘಟನೆಯಲ್ಲೂ ಬದಲಾವಣೆಯಾಗಲಿದೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರಿಯಾಗಿ ಕಾರ್ಯನಿರ್ವಹಿಸದ, ಕಚೇರಿಗೆ ಹೋಗದ ನಿಷ್ಕ್ರಿಯ ಸಚಿವರನ್ನು ಕೈಬಿಟ್ಟು, ಹೊಸಬರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ ಎಂದರು.

ಜಿಲ್ಲಾ ಕೆಡಿಪಿ ಸಭೆ ನಡೆಸದ, ಕೇವಲ ಧ್ವಜಾರೋಹಣಕ್ಕೆ ಸೀಮಿತವಾದ ಸಚಿವರನ್ನು ಕೈಬಿಡಲಿದ್ದಾರೆ. ವಿಜಯಪುರಕ್ಕೆ ಸೂಕ್ತ ಪ್ರಾತಿನಿಧ್ಯ ಸಿಗಲಿದೆ. ಹೊಸ ಜಿಲ್ಲಾ ಉಸ್ತುವಾರಿ ಸಚಿವರು ಸಿಗಲಿದ್ದಾರೆ ಎಂದು ಹೇಳಿದರು.

ಮುಂಬರುವ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲು ಪಕ್ಷ ಸಂಘಟನೆಯಲ್ಲೂ ಗಮನಾರ್ಹ ಬದಲಾವಣೆಯಾಗಲಿದೆ ಎಂದು ಯತ್ನಾಳ ಸುಳಿವು ನೀಡಿದರು.

ಜಿ.ಪಂ– ಸಿಇಒಗಳ ಕಾರ್ಯ ನಿರ್ವಹಣೆಗೆ ಶ್ರೇಯಾಂಕ: ಮುಖ್ಯಮಂತ್ರಿ ಬೊಮ್ಮಾಯಿ

‘ಹಳ್ಳಿಗೆ ಹೋಗಿ ಸಮಸ್ಯೆ ಬಗೆಹರಿಸಿ’

ಪ್ರಜಾವಾಣಿ ವಾರ್ತೆ



ಜಿಲ್ಲಾಪಂಚಾಯಿತಿ ಸಿಇಒಗಳ ಸಭೆಯಲ್ಲಿ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಸರ್ಕಾರದ ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಇದ್ದರು.

ಬೆಂಗಳೂರು: ‘ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು(ಸಿಇಒ) ಇನ್ನು ಮುಂದೆ ಹಳ್ಳಿ– ಹಳ್ಳಿಗಳಿಗೂ ಹೋಗಿ ಅಲ್ಲಿನ ಸಮಸ್ಯೆಗಳನ್ನು ತಿಳಿದುಕೊಂಡು ಅಲ್ಲೇ ಬಗೆಹರಿಸಬೇಕು. ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ಭಾವನೆ ತಾಳುವಂತಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಾಕೀತು ಮಾಡಿದ್ದಾರೆ.

ವಿಧಾನಸೌಧದಲ್ಲಿ ಗುರುವಾರ ನಡೆದ ಜಿಲ್ಲಾ ಪಂಚಾಯಿತಿಗಳ ಸಿಇಒಗಳ ಸಭೆಯಲ್ಲಿ ಮಾತನಾಡಿ, ಸಿಇಒಗಳು ಹಳ್ಳಿ ಕಡೆಗೆ ಹೆಚ್ಚಿನ ಪ್ರವಾಸ ಮಾಡಬೇಕು. ಇದಕ್ಕೆ ಪೂರಕವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಆಮೂಲಾಗ್ರ ಬದಲಾವಣೆ ತರಲು ಉದ್ದೇಶಿಸಿರುವುದಾಗಿ ತಿಳಿಸಿದರು. ಈ ಸಭೆ ಸುಮಾರು ಐದೂವರೆ ತಾಸು ನಡೆಯಿತು.

‘ಮುಂದಿನ ದಿನಗಳಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ಸಿಇಒಗಳ ಕಾರ್ಯ ನಿರ್ವಹಣೆಗೆ ಜಿಲ್ಲಾವಾರು ಶ್ರೇಯಾಂಕ ನೀಡಲಾಗುವುದು. ಜನೋಪಯೋಗಿ ಸರ್ಕಾರ ಆಗಬೇಕಾದರೆ ಜಿಲ್ಲಾ ಪಂಚಾಯಿತಿಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವುದು ಅತಿ ಮುಖ್ಯ. ನಿಮ್ಮ ಜಿಲ್ಲೆಯಲ್ಲಿ ಉತ್ತಮ ಕಾರ್ಯಶೈಲಿಯ ಮೂಲಕ ನಿಮ್ಮದೇ ಛಾಪು ಮೂಡಿಸಿ’ ಎಂದು ಬೊಮ್ಮಾಯಿ ಸಲಹೆ ನೀಡಿದರು.

‘ತಳ ಹಂತದಲ್ಲಿ ಯೋಜನೆಗಳ ಅನುಷ್ಠಾನ ಅತಿಮುಖ್ಯ. ವಿಕೇಂದ್ರೀಕರಣದ ಮೂಲಕ ಹೆಚ್ಚಿನ ಅಧಿಕಾರ ನೀಡಲಾಗಿದೆ. ನಿಮ್ಮ ವಿವೇಚನಾಧಿಕಾರವನ್ನು ಜಾಗರೂಕತೆಯಿಂದ ಜನರ ಹಿತಕ್ಕಾಗಿ ಬಳಕೆ ಮಾಡಬೇಕು. ಬಡವರ ಅನುಕೂಲಕ್ಕಾಗಿ ಅಧಿಕಾರಿಗಳು ಕೈಗೊಳ್ಳುವ ತೀರ್ಮಾನಗಳಿಗೆ ಸರ್ಕಾರ ಸಂಪೂರ್ಣ ಬೆಂಬಲ ನೀಡಲಿದೆ’ ಎಂದರು.

‘ಅಧಿಕಾರಿಗಳು ಸ್ಪಷ್ಟ ನಿರ್ಣಯ ತೆಗೆದುಕೊಳ್ಳಬೇಕು. ಅನಿಶ್ಚಿತತೆ ಪ್ಲೇಗ್ ಇದ್ದಂತೆ. ವಿಳಂಬ ಧೋರಣೆ ಅತ್ಯಂತ ದುಬಾರಿ. ಅಧಿಕಾರಿಗಳ ವಿಳಂಬ ಧೋರಣೆ ಜನರನ್ನು ಸಂಕಷ್ಟಕ್ಕೆ ಈಡು ಮಾಡುತ್ತದೆ. ಜನರ ಸುತ್ತ ಅಭಿವೃದ್ಧಿ ಆಗಬೇಕೇ ಹೊರತು ಅಭಿವೃದ್ಧಿ ಸುತ್ತ ಜನ ಓಡಾಡಬಾರದು. ಜನರು ಹೆಚ್ಚಿನ ಸಂಖ್ಯೆಯಲ್ಲಿ ನಿಮ್ಮ ಹತ್ತಿರ ಬರುತ್ತಾರೆ ಎಂದರೆ ತಳಹಂತದಲ್ಲಿ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ’ ಎಂದರು.

ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿನವರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮೇಲಕ್ಕೆತ್ತುವುದು, ಎಸ್‌ಸಿ–ಎಸ್‌ಟಿ ಸಮುದಾಯ ಯೋಜನೆಗಳು ತಲುಪುವಂತೆ ನೋಡಿಕೊಳ್ಳುವುದು, ಶಾಲಾ–ಕಾಲೇಜುಗಳ ಸ್ಥಿತಿಗತಿ ಸುಧಾರಿಸುವುದು, ಆರೋಗ್ಯ, ಕೋವಿಡ್, ಕೋವಿಡ್ ಲಸಿಕೆ ನೀಡಿಕೆ ಬಗ್ಗೆ ಚರ್ಚಿಸಲಾಯಿತು ಎಂದರು.

ಗ್ರಾಮಗಳ ನಲ್ಲಿಗಳಿಗೆ ಮೀಟರ್ ಅಳವಡಿಕೆಗೆ ಸಲಹೆ

ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರು ಪೂರೈಕೆಗೆ ನಲ್ಲಿ ಅಳವಡಿಕೆ ಮತ್ತು ಮೀಟರ್ ಅಳವಡಿಕೆಯಿಂದ ನೀರು ವ್ಯರ್ಥವಾಗುವುದನ್ನು ತಪ್ಪಿಸುವುದರ ಜತೆಗೆ ಪಂಚಾಯಿತಿಗಳಿಗೆ ಆದಾಯವೂ ಸಿಗುತ್ತದೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಿಇಒಗಳ ಸಭೆಯಲ್ಲಿ ಜಲಜೀವನ್ ಮಿಷನ್ ಕುರಿತು ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಅವರು ಈ ವಿಷಯ ತಿಳಿಸಿದರು.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಹಲಗಲಿ ಗ್ರಾಮದಲ್ಲಿ ಕಳೆದ 7–8 ವರ್ಷ ಹಿಂದೆ ಪ್ರತಿ ನಿತ್ಯವೂ 15 ಲಕ್ಷ ಲೀಟರ್ ನೀರು ಬಳಕೆಯಾಗುತ್ತಿತ್ತು. ಅಲ್ಲಿ ನಲ್ಲಿ ಸಂಪರ್ಕ ಮತ್ತು ಮೀಟರ್ ಅಳವಡಿಕೆ ಮಾಡಿದ ಬಳಿಕ 5 ಲಕ್ಷ ಲೀಟರ್ ನೀರು ಮಾತ್ರ ಬಳಕೆಯಾಗುತ್ತಿದೆ. ಗ್ರಾಮಪಂಚಾಯಿತಿಗೆ ಮೀಟರ್‌ನಿಂದ ₹10 ಲಕ್ಷ ಆದಾಯ ಸಿಗುತ್ತಿದೆ ಎಂದು ಕಾರಜೋಳ ವಿವರಿಸಿದರು.

ನಿರ್ಲಕ್ಷ್ಯ ತೋರಿದರೆ ಕಠಿಣ ಕ್ರಮ: ಮುಖ್ಯಮಂತ್ರಿ ಎಚ್ಚರಿಕೆ

‘ಸರ್ಕಾರ ಹಲವು ಕಾರ್ಯಕ್ರಮಗಳು ಆರು–ಏಳು ತಿಂಗಳಾದರೂ ಜನರಿಗೆ ತಲುಪುತ್ತಿಲ್ಲ ಎಂಬ ದೂರುಗಳು ಇವೆ. ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸದೇ ನಿರ್ಲಕ್ಷ್ಯ ತೋರಿದರೆ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

‘ನಾವು ಜನರ ಹಿತಕ್ಕಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತೇವೆ. ಅದನ್ನು ಪ್ರಾಮಾಣಿಕವಾಗಿ ಜನರಿಗೆ ತಲುಪಿಸುವುದು ನಿಮ್ಮ ಕರ್ತವ್ಯ. ನಾವು ಕಠಿಣ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ನೀಡಬಾರದು. ಕೃಷಿ, ಜಲ್ ಜೀವನ್ ಮಿಷನ್, ಬೆಳೆ ಪರಿಹಾರ ವಿತರಣೆಯಲ್ಲಿ ನಿರೀಕ್ಷಿತ ಪ್ರಗತಿ ಕಾಣುತ್ತಿಲ್ಲ. ಮುಂದಿನ ಸಭೆಯ ವೇಳೆಗೆ ಪ್ರಗತಿ ಕಂಡಿಲ್ಲ ಎಂದರೆ ನಾನು ಸುಮ್ಮನಿರುವುದಿಲ್ಲ’ ಎಂದು ಚಾಟಿ ಬೀಸಿದರು.

‘ದೇಗುಲ: ಆರ್ಥಿಕ ಪರಿಸ್ಥಿತಿ ನೋಡಿ ಸ್ವತಂತ್ರಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಆರ್ಥಿಕವಾಗಿ ಸಂಕಷ್ಟದಲ್ಲಿರುವ ದೇವಾಲಯಗಳನ್ನು ಸ್ವತಂತ್ರಗೊಳಿಸಿದರೆ, ಅವುಗಳನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗಿ ಉಪಕಾರಕ್ಕಿಂತ ತೊಂದರೆಯೇ ಹೆಚ್ಚಾಗಲಿದೆ’ ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಹಿಂದೂ ದೇವಾಲಯಗಳಿಗೆ ಆರ್ಥಿಕ ನಿರ್ವಹಣೆಯ ಸ್ವಾತಂತ್ರ್ಯ ನೀಡುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿದ ಹೇಳಿಕೆಗೆ ಗುರುವಾರ ಪ್ರತಿಕ್ರಿಯಿಸಿದ ಅವರು, ‘ಸಾಕಷ್ಟು ದೇವಾಲಯಗಳು ಆರ್ಥಿಕವಾಗಿ ಸಂಕಷ್ಟದಲ್ಲಿವೆ. ಹಿಂದೂ ದೇವಾಲಯಗಳನ್ನು ಸರ್ಕಾರ ಅಭಿವೃದ್ಧಿಪಡಿಸುವ ಕೆಲಸ ಮಾಡಿದರೆ ನಮ್ಮ ತಕರಾರು ಇಲ್ಲ. ಸಾರಾಸಗಟಾಗಿ ಎಲ್ಲ ದೇವಾಲಯಗಳನ್ನು ಸ್ವತಂತ್ರಗೊಳಿಸುವ ಮೊದಲು ದೇವಾಲಯಗಳ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಬೇಕು’ ಎಂದು ಸಲಹೆ ನೀಡಿದರು.

‘ಜನರನ್ನು ಭಾವನಾತ್ಮಕವಾಗಿ ಹಾದಿ ತಪ್ಪಿಸಲು ಸರ್ಕಾರ ಎಷ್ಟೇ ಪ್ರಯತ್ನ ಮಾಡಿದರೂ ಜನರು ಬುದ್ಧಿವಂತರಿದ್ದಾರೆ. ತಾವೇನು ತೀರ್ಮಾನ ಮಾಡಬೇಕು ಅದನ್ನೇ ಜನ ಮಾಡುತ್ತಾರೆ’ ಎಂದೂ ಹೇಳಿದರು.

ಸರ್ಕಾರ ಅತಿದೊಡ್ಡ ತಪ್ಪು: ‘ಹಿಂದೂ ದೇವಾಲಯಗಳನ್ನು ಸ್ವತಂತ್ರಗೊಳಿಸುವ ಮೂಲಕ ರಾಜ್ಯ ಸರ್ಕಾರ ಅತಿದೊಡ್ಡ ತಪ್ಪು ಮಾಡುತ್ತಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ದೇವಾಲಯಗಳು ರಾಜ್ಯದ ಸಂಪತ್ತು. ಈ ದೇವಾಲಯಗಳಿಂದ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿ ಆದಾಯ ಸಂಗ್ರಹವಾಗುತ್ತದೆ. ಸರ್ಕಾರದ ಈ ನಿಲುವು ಅನುಷ್ಠಾನಗೊಳಿಸಲು ಅವಕಾಶ ನೀಡುವುದಿಲ್ಲ.

ಈ ಬಗ್ಗೆ ಹಿರಿಯ ನಾಯಕರ ಜತೆ ಚರ್ಚಿಸಿ, ಅಂತಿಮ ನಿರ್ಧಾರಕ್ಕೆ ಬರುತ್ತೇವೆ’ ಎಂದರು.

ಬಸು ಬೇವಿನಗಿಡದಗೆ ‘ಬಾಲ ಪುರಸ್ಕಾರ’, ಎಚ್. ಲಕ್ಷ್ಮೀನಾರಾಯಣಸ್ವಾಮಿಗೆ ‘ಯುವ ಪುರಸ್ಕಾರ’

ನಾಗಭೂಷಣಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯು ವಿವಿಧ ಪ್ರಕಾರದ ಸಾಹಿತ್ಯ ಕೃತಿಗಳಿಗೆ ನೀಡುವ ಪ್ರಶಸ್ತಿಗಳನ್ನು ಗುರುವಾರ ಘೋಷಿಸಿದ್ದು, ಡಿ.ಎಸ್. ನಾಗಭೂಷಣ ಅವರ ‘ಗಾಂಧಿ ಕಥನ’ ಕೃತಿಯು ಈ ವರ್ಷದ ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದೆ.

‘ಬಾಲ ಪುರಸ್ಕಾರ’ಕ್ಕೆ ಬಸು ಬೇವಿನಗಿಡದ ಅವರ ಮಕ್ಕಳ ಕಾದಂಬರಿ ‘ಓಡಿ ಹೋದ ಹುಡುಗ’ ಆಯ್ಕೆಯಾಗಿದೆ. ಅಕಾಡೆಮಿಯು ನೀಡುವ ‘ಯುವ ಪುರಸ್ಕಾರ’ಕ್ಕೆ ಎಚ್. ಲಕ್ಷ್ಮೀನಾರಾಯಣಸ್ವಾಮಿ ಅವರ ಮಹಾಕಾವ್ಯ ‘ತೊಗಲ ಚೀಲದ ಕರ್ಣ’ ಆಯ್ಕೆಯಾಗಿದೆ.

ವರ್ಷದ ಪುಸ್ತಕ ಪ್ರಶಸ್ತಿಯು ₹1 ಲಕ್ಷ ಹಾಗೂ ಸನ್ಮಾನ ಒಳಗೊಂಡಿದ್ದು, ಯುವ ಹಾಗೂ ಬಾಲ ಪುರಸ್ಕಾರಗಳು ₹50 ಸಾವಿರ ಹಾಗೂ ಸನ್ಮಾನ ಒಳಗೊಂಡಿವೆ.

ಕೃತಿ ಆಯ್ಕೆ ಸಮಿತಿಯಲ್ಲಿ ಬೊಳುವಾರು ಮಹಮದ್ ಕುಂಞಿ, ಅಮರೇಶ ನುಗಡೋಣಿ ಹಾಗೂ ಸಬೀಹಾ ಭೂಮಿಗೌಡ ಅವರಿದ್ದರು. ಪುಸ್ತಕ ಆಯ್ಕೆ ಪ್ರಕ್ರಿಯೆಯು ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸಂಯೋಜಕರಾದ ಸರಜೂ ಕಾಟ್ಕರ್ ಅವರ ಉಸ್ತುವಾರಿಯಲ್ಲಿ ನಡೆಯಿತು.

ಯುವ ಸಾಹಿತ್ಯ ಪ್ರಶಸ್ತಿಯ ತೀರ್ಪುಗಾರರಾಗಿ ಕಮಲಾ ಹಂಪನಾ, ಜಗದೀಶ್ ಕೊಪ್ಪ ಹಾಗೂ ವಿಜಯಕುಮಾರಿ ಅವರು ಹೊಣೆ ನಿರ್ವಹಿಸಿದ್ದರೆ, ಬಾಲ ಸಾಹಿತ್ಯ ಪ್ರಶಸ್ತಿಗೆ ಟಿ.ಪಿ. ಅಶೋಕ, ಮಾಲತಿ ಪಟ್ಟಣಶೆಟ್ಟಿ ಹಾಗೂ ಎಸ್. ದಿವಾಕರ ಅವರು ತೀರ್ಪುಗಾರರಾಗಿದ್ದರು. ಫೆಬ್ರುವರಿ ತಿಂಗಳಲ್ಲಿ ದೆಹಲಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಪ್ರಶಸ್ತಿ ವಿಜೇತರರನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಚಂದ್ರಶೇಖರ ಕಂಬಾರ ಅವರು ಅಭಿನಂದಿಸಿದ್ದಾರೆ.


ಆಶ್ಚರ್ಯವಾಗಿದೆ



ಈ ಪ್ರಶಸ್ತಿ ಸಂತೋಷವನ್ನೂ ಉಂಟುಮಾಡಿದೆ. ಜೊತೆಗೆ ಆಶ್ಚರ್ಯವೂ ಆಗಿದೆ. ಗಾಂಧೀಜಿಯನ್ನು ಜನರು ಮರೆತೇ ಹೋದರು ಎಂದು ಭಾವಿಸಿದಾಗ, ಗಾಂಧೀಜಿ ಕುರಿತ ಪುಸ್ತಕ ಮಾನ್ಯತೆ ಪಡೆದಿದೆ. ಗಾಂಧೀಜಿ ಇನ್ನೂ ಜೀವಂತವಾಗಿದ್ದಾರೆ. ಅವರ ವ್ಯಕ್ತಿತ್ವವನ್ನು ಅವಹೇಳನ, ಅಪಪ್ರಚಾರ ಮಾಡುವ ಸಂದರ್ಭದಲ್ಲಿ ಗಾಂಧೀಜಿ ಇನ್ನೂ ಚಿಗುರುತ್ತಿದ್ದಾರೆ ಎನ್ನುವುದು ಇಲ್ಲಿ ತಿಳಿಯುತ್ತಿದೆ. ಜನರು ಈ ಕೃತಿಗೆ ಮೊದಲೇ ಪ್ರಶಸ್ತಿ ನೀಡಿದ್ದರು. ಇದರ ಪ್ರಕಾಶಕರೂ ಗಾಂಧಿವಾದಿ. ಇದು ಗಾಂಧೀಜಿ ಬಗ್ಗೆ ಸಮಗ್ರ ಚಿತ್ರಣ ನೀಡುವ ಕೃತಿ. ಇದರ ಹಿಂದೆ ವ್ಯಾಪಕ ಓದು ಇದೆ. ನಾನು ಲೋಹಿಯಾ ವಿಚಾರದಿಂದ ಪ್ರಭಾವಿತನಾದವನು. ಈ ಕಾಲಕ್ಕೆ ಲೋಹಿಯಾ ವಿಚಾರಗಳು ಸಾಲದು ಎನ್ನುವ ಕಾರಣಕ್ಕೆ ಗಾಂಧಿಯವರ ಬಗ್ಗೆ ವಿಶೇಷ ಆಸಕ್ತಿ ತಳೆದು ಈ ಕೃತಿ ರಚಿಸಿದೆ. ಗಾಂಧೀಜಿಯನ್ನು ಇಂದು ಮತ್ತೆ ಪುನರುಜ್ಜೀವಗೊಳಿಸಬೇಕಾಗಿದೆ. ಇಂದಿನ ಸವಾಲುಗಳಿಗೆ ಗಾಂಧೀಜಿ ಮಾತ್ರ ಉತ್ತರ ಕೊಡಲು ಸಾಧ್ಯ.

–ಡಿ.ಎಸ್. ನಾಗಭೂಷಣ


ತಂದೆ ತಾಯಿ ಕನಸು



ವೈಯಕ್ತಿಕವಾಗಿ ಬಹಳ ಖುಷಿಯಾಗುತ್ತದೆ. ನನ್ನ ಕುಟುಂಬದಲ್ಲಿ ಅಕ್ಷರ ಜ್ಞಾನ ಪಡೆದು ಉನ್ನತ ಶಿಕ್ಷಣ ಪಡೆದ ಮೊದಲಿಗನು ನಾನು. ಇದರ ಹಿಂದೆ ತಂದೆ ತಾಯಿಯ ಕನಸಿದೆ. ಅವರ ಕಷ್ಟವಿದೆ. ಅಕ್ಷರ ಜ್ಞಾನದಿಂದ ವಂಚಿತರಾಗಿದ್ದ ಇಡೀ ಶೋಷಿತ ಸಮುದಾಯಕ್ಕೆ ಹಾಗೂ ಅಕ್ಷರ ಜ್ಞಾನ ಪಡೆದ ನನ್ನ ತಲೆಮಾರಿಗೆ ಪ್ರಾತಿನಿಧಿಕವಾಗಿ ಈ ಪ್ರಶಸ್ತಿ ದೊರಕಿದೆ ಎಂದು ಭಾವಿಸುತ್ತೇನೆ.

–ಎಚ್. ಲಕ್ಷ್ಮೀನಾರಾಯಣಸ್ವಾಮಿ

ಸೂಕ್ಷ್ಮತೆ ತಿಳಿಸುವ ಉದ್ದೇಶ



ಮಕ್ಕಳ ಸಾಹಿತ್ಯ ಉಪದೇಶವಾಗಬಾರದು. ಮಕ್ಕಳಿಗೆ ರಂಜನೆಯಷ್ಟೇ ಕೊಡಬಾರದು. ಅವರಿಗೆ ಸಾಹಿತ್ಯ ಸೃಷ್ಟಿ, ಅದರ ಸೂಕ್ಷ್ಮತೆಯನ್ನು ತಿಳಿಸುವ ಅದನ್ನು ಬೆಳೆಸುವ ಕೆಲಸ ಮಾಡಬೇಕು.

–ಬಸು ಬೇವಿನಗಿಡದ



ಪ್ರಶಸ್ತಿ ಸ್ವೀಕಾರ

ಕೇಂದ್ರ ಸಾಹಿತ್ಯ ಅಕಾಡೆಮಿಯು ನೀಡುವ ಅನುವಾದ ಸಾಹಿತ್ಯ ಪ್ರಶಸ್ತಿಯನ್ನು ಲೇಖಕರಾದ ಡಾ ಬೂದಾಳು ನಟರಾಜ ಅವರಿಗೆ ಗುರುವಾರ ನವದೆಹಲಿಯಲ್ಲಿ ಪ್ರದಾನ ಮಾಡಲಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ ಚಂದ್ರಶೇಖರ ಕಂಬಾರ ಅಭಿನಂದಿಸಿದರು

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಒಕ್ಕಲಿಗರ ಸಂಘದ ಚುನಾವಣೆ: ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘಕ್ಕೆ ಡಿ.12ರಂದು ನಡೆದಿದ್ದ ಚುನಾವಣೆಯಲ್ಲಿ ಚಲಾವಣೆಗೊಂಡಿರುವ ಎಲ್ಲ ಮತಗಳ ಮರುಎಣಿಕೆ ನಡೆಸಲು ನಿರ್ದೇಶಿಸುವಂತೆ ಕೋರಿ ಸಲ್ಲಿಕೆಯಾಗಿರುವ ತಕರಾರು ಅರ್ಜಿ ಸಂಬಂಧ ಸಂಘದ ಆಡಳಿತಾಧಿಕಾರಿ ಹಾಗೂ ಚುನಾವಣಾಧಿಕಾರಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಮತ ಎಣಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಹೆಸರಘಟ್ಟ ಹೋಬಳಿಯ ಕಡತನಮಲೆ ಗ್ರಾಮದ ಕೆ.ಆರ್. ಸತೀಶ್ ಸೇರಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಮೂವರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ಅವರಿದ್ದ ರಜಾಕಾಲದ ಪೀಠ ವಿಚಾರಣೆ ನಡೆಸಿತು.

ವಾದ ಆಲಿಸಿದ ಪೀಠ, ಅರ್ಜಿ ಸಂಬಂಧ ರಾಜ್ಯ ಒಕ್ಕಲಿಗರ ಸಂಘದ ಚುನಾವಣಾಧಿಕಾರಿ ಹಾಗೂ ಆಡಳಿತಾಧಿಕಾರಿಗೆ ನೋಟಿಸ್ ಜಾರಿಗೊಳಿಸಿತಲ್ಲದೆ, ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ತುರ್ತು ನೋಟಿಸ್ ಜಾರಿಗೊಳಿಸಿ, ವಿಚಾರಣೆ ಮುಂದೂಡಿತು.

ಆಕ್ಷೇಪವೇನು?: ‘ರಾಜ್ಯ ಒಕ್ಕಲಿಗರ ಸಂಘಕ್ಕೆ ಡಿ.12ರಂದು ನಡೆದಿದ್ದ ಚುನಾವಣೆಯಲ್ಲಿ ಒಟ್ಟು 1,40,704 ಮತಗಳು ಚಲಾವಣೆಗೊಂಡಿದ್ದವು. ಡಿ.15ರಂದು ಮತ ಎಣಿಕೆ ನಡೆದಿತ್ತು. ಆದರೆ, ಮತ ಎಣಿಕೆಗೆ ನಿಯೋಜಿಸಲ್ಪಟ್ಟಿದ್ದ ಸಿಬ್ಬಂದಿ ಚುನಾವಣಾ ಅಭ್ಯರ್ಥಿಗಳನ್ನು ಸಂಪರ್ಕಿಸಿ, ಹೆಚ್ಚುವರಿ ಮತಗಳನ್ನು ಸೇರಿಸಲು ಹಣ ನೀಡುವಂತೆ ಬೇಡಿಕೆ ಇಟ್ಟಿದ್ದರು. ಈ ವಿಚಾರ ಪತ್ರಿಕೆಗಳಲ್ಲೂ ಪ್ರಕಟಗೊಂಡಿದೆ. ಮತ ಎಣಿಕೆಗೆ ನಿಯೋಜಿಸಲ್ಪಟ್ಟ ಸಿಬ್ಬಂದಿ ಅಕ್ರಮವೆಸಗಿದ್ದು, ಇಡೀ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗಿಲ್ಲ’ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

‘ವೈಯಕ್ತಿಕ ಹೇಳಿಕೆ ಪಕ್ಷ ವಿರೋಧಿ ಚಟುವಟಿಕೆಯಲ್ಲ’

ಹುಬ್ಬಳ್ಳಿ: ‘ಪಕ್ಷದ ಶಾಸಕರು ಹಾಗೂ ಸಚಿವರು ವೈಯಕ್ತಿಕವಾಗಿ ನೀಡುವ ಹೇಳಿಕೆಗಳು ಪಕ್ಷ ವಿರೋಧಿ ಚಟುವಟಿಕೆಯಾಗುವುದಿಲ್ಲ’ ಎಂದು ಶಾಸಕ ಜಗದೀಶ ಶೆಟ್ಟರ್ ಹೇಳಿದರು.

ಸಂಪುಟದಲ್ಲಿರುವ ಹಿರಿಯರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡಬೇಕು ಎಂಬ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಹೇಳಿಕೆ ಕುರಿತು, ನಗರದಲ್ಲಿ ಗುರುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ವೈಯಕ್ತಿಕ ಹೇಳಿಕೆಗೆ ಮುಕ್ತ ಅವಕಾಶವಿದೆ. ಸಂಪುಟ ವಿಸ್ತರಣೆ ಕುರಿತ ನನ್ನ ಹೇಳಿಕೆಯನ್ನು ಪಕ್ಷದ ಆಂತರಿಕ ಸಭೆಯಲ್ಲಿ ವ್ಯಕ್ತಪಡಿಸುತ್ತೇನೆ’ ಎಂದರು.

‘ಬಿ.ಎಸ್. ಯಡಿಯೂರಪ್ಪ ಅವರು ವಿದೇಶ ಪ್ರವಾಸದಲ್ಲಿದ್ದಾರೆ. ಕಾರ್ಯಕಾರಿಣಿಗೆ ಬಂದಿದ್ದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಬೇಗನೆ ದೆಹಲಿಗೆ ಹೊರಟರು. ಹಾಗಾಗಿ, ಕಾರ್ಯಕಾರಿ ಸಮಿತಿ ಸಭೆಯನ್ನು ಮುಂದೂಡಲಾಯಿತು. ಮುಂದೆ ನಡೆಯುವ ಸಭೆಯಲ್ಲಿ ಪಕ್ಷದ ಅಭ್ಯರ್ಥಿಗೆ ಬೆಳಗಾವಿಯಲ್ಲಿ ಸೋಲಾಗಿರುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹೊಸ ವರ್ಷದ ಹೊಸ್ತಿಲಲ್ಲಿ ‘...ಶುಭಾಶಯಗಳು’



ಹೊಸ ವರ್ಷದ ಹೊಸ್ತಿಲಲ್ಲಿ ‘ಹುಟ್ಟು ಹಬ್ಬದ ಶುಭಾಶಯಗಳು’ ಎನ್ನುತ್ತಿದ್ದಾರೆ ನಟ ದಿಗಂತ್. ಸಿನಿಮಾ ಹಾಗೂ ಅದರಾಚೆಗೂ ಈ ವರ್ಷ ಸುದ್ದಿಯಾದ ದಿಗಂತ್ ತಮ್ಮ ಸಿನಿಬದುಕಿನ ಏಳುಬೀಳುಗಳನ್ನು ತೆರೆದಿಟ್ಟಿದ್ದಾರೆ. ದಿಗಂತ್ ಬದುಕು, ಅಭಿರುಚಿಗಳ ಬಗೆಗಿನ ಝಲಕ್ ಇಲ್ಲಿದೆ.

ಶರತ್ ಹೆಗ್ಡೆ

- **ಹೊಸ ವರ್ಷದ ಶುಭಾಶಯ ಹೇಳುವ ಹೊತ್ತಿನಲ್ಲಿ ‘ಹುಟ್ಟುಹಬ್ಬದ ಶುಭಾಶಯಗಳು’ ಹೇಳುತ್ತಿದ್ದೀರಲ್ಲಾ?**

ಚಿತ್ರ ಇಂದು ಬಿಡುಗಡೆಯಾಗುತ್ತಿದೆ. ಆದರೆ, ಮೂರು ದಿನ ಮೊದಲು ಅಂದರೆ ಡಿ. 28ರಂದು ನನ್ನ ಜನ್ಮದಿನ ಇತ್ತು. ಹಾಗಾಗಿ ನನ್ನ ಜನ್ಮದಿನದ ಹೊತ್ತಿಗೇ ಆ ಸಿನಿಮಾ ಬಿಡುಗಡೆ ಮಾಡೋಣ ಎಂದು ನನ್ನ ನಿರ್ಮಾಪಕರು ಹೇಳಿದರು. ಹಾಗಾಗಿ ಈ ಶೀರ್ಷಿಕೆ ಇಟ್ಟಿದ್ದೇವೆ.

- **ಪ್ರೀತಿ, ಲಘು ವಿಷಯಗಳ ಮೇಲೆ ಸಿನಿಮಾ ಮಾಡುತ್ತಿದ್ದವರು, ಈಗ ಪತ್ತೇದಾರಿಕೆ ಆರಂಭಿಸಿದ್ದೀರಲ್ಲಾ?**

ನನಗೆ ಮೊದಲಿನಿಂದಲೂ ಸಸ್ಪೆನ್ಸ್, ಥ್ರಿಲ್ಲರ್, ಪತ್ತೇದಾರಿಕೆ ಕಥೆಗಳು ಇಷ್ಟ. ನಾನು ಸಿನಿಮಾ, ಒಟಿಟಿ ಸರಣಿಗಳಲ್ಲಿ ಇಂಥದ್ದನ್ನೇ ಹುಡುಕಿ ನೋಡುತ್ತೇನೆ. ನನ್ನ ಪ್ರೇಕ್ಷಕರಿಗೂ ಹೊಸ ರೀತಿಯ ಸಿನಿಮಾ ಕೊಡೋಣ ಎಂದು ಯೋಚಿಸಿ ಈ ಚಿತ್ರ ಕೊಟ್ಟಿದ್ದೇನೆ. ಜನರಿಗೂ ಇಷ್ಟವಾಗುತ್ತದೆ ಎಂಬ ನಂಬಿಕೆ ಇದೆ. ಈ ಕಥೆ ನನ್ನನ್ನು ಸೀಟಿನ ತುದಿಯಲ್ಲೇ ಕೂರಿಸಿತು.

- **‘...ಶುಭಾಶಯಗಳು’ ಸಿದ್ಧತೆ ಹೇಗಿತ್ತು?**

ಕೋವಿಡ್ ಸಾಂಕ್ರಾಮಿಕಕ್ಕಿಂತ (ಮೊದಲ ಲಾಕ್‌ಡೌನ್) ಮೊದಲೇ ಈ ಚಿತ್ರ ಬರಬೇಕಿತ್ತು. ಎಲ್ಲವೂ ಸಿದ್ಧವಾಗಿತ್ತು. ಆದರೆ, ಅನಿವಾರ್ಯವಾಗಿ ಎರಡು ವರ್ಷ ಕಾಯಬೇಕಾಯಿತು.

- **ನಿಮ್ಮನ್ನು ದೂದ್‌ಪೇಢಾ ಎಂದು ಯಾಕೆ ಕರೆಯುತ್ತಾರೆ?**

‘ಗಾಳಿಪಟ’ ಚಿತ್ರದಲ್ಲಿ ಗಣೇಶ್ ಅವರು ನನ್ನನ್ನು ದೂದ್ ಎಂದು ಕರೆಯುತ್ತಿದ್ದರು. ಹಾಗೆ ಮುಂದೆ ಹಲವರು ದೂದ್‌ಪೇಢಾ ಎಂದು ಕರೆದರು. ಈ ಚಿತ್ರದಲ್ಲೂ ಅದೇ ಘಟನೆಯ ಹಿನ್ನೆಲೆಯಲ್ಲಿ ಹಾಸ್ಯನಟ ಮನು ಅವರು ನನ್ನನ್ನು ತಮಾಷೆಗಾಗಿ ಹಾಗೆ ಕರೆದಿದ್ದಾರೆ ಅಷ್ಟೆ.

- **‘ಮಿಸ್ ಕ್ಯಾಲಿಫೋರ್ನಿಯಾ’ದಿಂದ ‘...ಶುಭಾಶಯಗಳು’ವರೆಗಿನ ಪಯಣ ನೆನಪಿಸಬಹುದಾ?**

ಹೌದು ಸಾಕಷ್ಟು ಏಳು ಬೀಳುಗಳನ್ನು ಕಂಡಿದ್ದೇನೆ. ಬಿದ್ದಿದ್ದೇನೆ. ಬಿದ್ದವನು ಎದ್ದು ಮಣ್ಣು ಕೊಡವಿಕೊಂಡಿದ್ದೇನೆ. ಒಂದಿಷ್ಟು ಜನರನ್ನು ನಗಿಸಿದ್ದೇನೆ, ಅಳಿಸಿದ್ದೇನೆ. ಜನರ ಪ್ರೀತಿ ಸಾಕಷ್ಟು ಸಿಕ್ಕಿದೆ. ಮಾತ್ರವಲ್ಲ ಸಿನಿಮಾ ಪಯಣದಲ್ಲೇ ಧರ್ಮಪತ್ನಿಯೂ ಸಿಕ್ಕಿದಳು. ಚಿತ್ರರಂಗ ಎಲ್ಲವನ್ನೂ ಕೊಟ್ಟಿದೆ. ಹಾಗಾಗಿ ಚಿತ್ರರಂಗಕ್ಕೆ ನಾನು ಆಭಾರಿ.

- **ಸಿನಿಮಾ ಹೊರತಾದ ಕಾರಣಗಳಿಗೆ ಸುದ್ದಿಯಾದಿರಲ್ಲಾ?**

ನಾವು ಸಿನಿಮಾದಲ್ಲಿ ಇರುವ ಕಾರಣಕ್ಕೆ ಇಂಥದ್ದನ್ನೆಲ್ಲಾ ಎದುರಿಸಬೇಕಾಗಿ ಬಂದಿತು. ಏನು ಮಾಡಲಿ ಹೇಳಿ, ಇವೆಲ್ಲಾ ಬದುಕಿನ ಭಾಗ. ಅನುಭವಿಸಿ ಮುಂದೆ ಹೋಗಬೇಕು. ಕೆಲವರು ಇಲಿ ಹೋದರೆ ಹುಲಿ ಹೋಯ್ತು ಅನ್ನುತ್ತಾರಲ್ಲಾ ಹಾಗೆ. ಇಂಥದ್ದೆಲ್ಲ ಇರುತ್ತೆ ಬಿಡಿ.

- **ಸಿನಿಬದುಕಿನ ಕನಸುಗಳು?**

ಸಿನಿಮಾ ರಂಗದಲ್ಲಿ ಗಳಿಸಿದ್ದನ್ನು ಸಿನಿಮಾ ಕ್ಷೇತ್ರಕ್ಕೇ ಕೊಡಬೇಕು. ನನ್ನದೇ ಆದ ನಿರ್ಮಾಣ ಕಂಪನಿ ತೆರೆಯಬೇಕು. ಹೊಸಬರಿಗೆ ಅವಕಾಶ ಕೊಟ್ಟು ಬೆಳೆಸಬೇಕು ಎಂಬ ಕನಸಿದೆ. ನಾನೇ ದುಡಿದು ರಾಶಿ ಹಾಕಿಕೊಳ್ಳಬೇಕು ಎಂಬ ಉದ್ದೇಶ ಇಲ್ಲ. ಹೊಸ ಪ್ರತಿಭೆಗಳನ್ನು ಮೇಲೆ ತರಲು ನನ್ನ ಕೈಲಾದ ಮಟ್ಟದಲ್ಲಿ ಒಂದಷ್ಟು ಸಿನಿಮಾಗಳನ್ನು ಮಾಡಬೇಕು ಎಂಬ ಆಸೆ ಇದೆ.

- **ಬೇರೆ ಭಾಷೆಗಳಲ್ಲಿ ಪ್ರಯತ್ನಗಳು?**

ಹೌದು, ಎಂಎಕ್ಸ್ ಪ್ಲೇಯರ್ ಒಟಿಟಿ ವೇದಿಕೆಯಲ್ಲಿ ಪ್ರಯತ್ನ ಮಾಡಿದ್ದೇನೆ. ಹಿಂದಿ ಭಾಷೆಯಲ್ಲಿ ಮಾಡಿದ ‘ರಾಮ್‌ಯುದ್ಧ್’ ಸರಣಿಯಲ್ಲಿ ರಾಮನ ಪಾತ್ರ ಮಾಡಿದ್ದೇನೆ. ಅದನ್ನು ಸುಮಾರು ಎರಡೂವರೆ ಲಕ್ಷ ಮಂದಿ ವೀಕ್ಷಿಸಿದ್ದಾರೆ. ಇಂಥ ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತೇನೆ.

- **ಹೊಸ ವರ್ಷದ ಗುರಿಗಳು?**

ಹೌದು ಓಮೈಕ್ರಾನ್‌ನಂಥ ಪಿಡುಗು ಯಾರಿಗೂ ಸಂಕಷ್ಟ ತರದಿರಲಿ. ಈಗಾಗಲೇ ಐದು ಸಿನಿಮಾಗಳು ಬಿಡುಗಡೆಗೆ ಕಾದಿವೆ. ಈ ಪೈಕಿ ಬಹುನಿರೀಕ್ಷಿತ ‘ಗಾಳಿಪಟ–2’ ಚಿತ್ರವೂ ಒಂದು. ಅದು ಜನರಿಗೆ ತಲುಪಿ ಅವರಿಗೆ ಖುಷಿ ಸಿಕ್ಕರೆ ಸಾಕು.

- **ಸಿನಿಮಾದಾಚೆಗಿನ ದಿಗಂತ್?**

ನಾನೊಬ್ಬ ಒಳ್ಳೆಯ ಬ್ಯಾಡ್ಮಿಂಟನ್ ಆಟಗಾರ. ಸೈಕ್ಲಿಂಗ್, ಬೈಕ್ ಸವಾರಿ, ಚಾರಣ ನನಗಿಷ್ಟ. ಕುಂಗ್‌ಫೂ ಕಲಿತಿದ್ದೇನೆ. ಬ್ಯಾಕ್‌ಫ್ಲಿಪ್, ಸ್ಕೂಬಾ ಡೈವಿಂಗ್ ನನಗೆ ತುಂಬಾ ಖುಷಿಕೊಡುವ ಸಂಗತಿಗಳು. ಹೀಗೆ ತುಂಬಾ ಹವ್ಯಾಸಗಳಿವೆ. ❖



ರಚಿತಾ ರಾಮ್

ಫೆ.4ಕ್ಕೆ ‘ಗಜಾನನ ಆ್ಯಂಡ್ ಗ್ಯಾಂಗ್’



ಅದಿತಿ ಪ್ರಭುದೇವ

ಈಗಾಗಲೇ ಟ್ರೇಲರ್ ಮೂಲಕವೇ ಸದ್ದು ಮಾಡಿರುವ ‘ಗಜಾನನ ಆ್ಯಂಡ್ ಗ್ಯಾಂಗ್’ ಹುಡುಗರು 2022ರ ಫೆ.4ರಂದು ಬೆಳ್ಳಿತೆರೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಶ್ರೀ ಮಹಾದೇವ್ ಹಾಗೂ ಅದಿತಿ ಪ್ರಭುದೇವ ನಟನೆಯ ಈ ಸಿನಿಮಾಗೆ, ‘ನಮ್ ಗಣಿ ಬಿಕಾಂ ಪಾಸ್’ ಸಿನಿಮಾ ಮೂಲಕ ಚಿತ್ರರಂಗಕ್ಕೆ ನಾಯಕ ಮತ್ತು ನಿರ್ದೇಶಕನಾಗಿ ಪ್ರವೇಶಿಸಿದ ಅಭಿಷೇಕ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಚಿತ್ರದ ಶೀರ್ಷಿಕೆಯೇ ಹೇಳುವಂತೆ ಕಾಲೇಜು ಕಥೆಯಾಧಾರಿತ ಸಿನಿಮಾ ಇದಾಗಿದ್ದು, ಹಾಸ್ಯ, ಭಾವನಾತ್ಮಕತೆಯೂ ಸಿನಿಮಾದಲ್ಲಿದೆ. ಶ್ರೀ ಮಹಾದೇವ್, ಗಜ ಎಂಬ ಪಾತ್ರದಲ್ಲಿ ಎರಡು ಶೇಡ್‌ನಲ್ಲಿ ಕಾಣಿಸಿಕೊಂಡಿದ್ದು, ಅದಿತಿ ಪ್ರಭುದೇವ ಮಿಡಲ್ ಕ್ಲಾಸ್ ಕಾಲೇಜು ಹುಡುಗಿಯಾಗಿ ನಟಿಸಿದ್ದಾರೆ. ನಿರ್ದೇಶಕ ಅಭಿಷೇಕ್ ಶೆಟ್ಟಿ ಕೂಡಾ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಬಿಗ್‌ಬಾಸ್ ಖ್ಯಾತಿಯ ರಘು ಗೌಡ, ಚೇತನ್ ದುರ್ಗ, ನಾಟ್ಯ ರಂಗ, ಅಶ್ವಿನ್ ಹಾಸನ್ ಹಾಗೂ ಶಮಂತ್ ಊರೂಫ್ ಬ್ರೋ ಗೌಡ ಕೂಡ ಈ ಚಿತ್ರದಲ್ಲಿ ಬಣ್ಣಹಚ್ಚಿದ್ದಾರೆ.

ಬೃಂದಾವನ್ ಎಂಟರ್‌ಪ್ರೈಸಸ್ ಅಡಿಯಲ್ಲಿ ಯು.ಎಸ್. ನಾಗೇಶ್ ಕುಮಾರ್ ಈ ಸಿನಿಮಾಕ್ಕೆ ಬಂಡವಾಳ ಹೂಡಿದ್ದಾರೆ. ಪ್ರದ್ಯುತನ್ ಸಂಗೀತ ನೀಡಿದ್ದು, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಚಿತ್ರಕ್ಕಿದೆ. ❖

ಜೀ5ನಲ್ಲಿ ‘ಗಗವೃವಾ’



ಒಟಿಟಿ

ಕ್ರೇಜಿಸ್ಟಾರ್ ರವಿಚಂದ್ರ ವಿ. ನಟನೆಯ ‘ಕನ್ನಡಿಗ’, ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ನಟನೆಯ ‘ಭಜರಂಗಿ–2’ ಸಿನಿಮಾ ಬಳಿಕ ಇದೀಗ ಒಟಿಟಿ ವೇದಿಕೆ ‘ಜೀ 5’ನಲ್ಲಿ ಶೀಘ್ರದಲ್ಲೇ ರಾಜ್ ಬಿ. ಶೆಟ್ಟಿ ನಟಿಸಿ ನಿರ್ದೇಶಿಸಿರುವ ‘ಗರುಡ ಗಮನ ವೃಷಭ ವಾಹನ’ ತೆರೆಕಾಣಲಿದೆ.

2021ರಲ್ಲಿ ಚಿತ್ರಮಂದಿರಗಳಲ್ಲಿ ತೆರೆಕಂಡ ‘ಹೀರೋ’, ‘ರಾಮಾರ್ಜುನ’, ‘ಪುಕ್ಸಟ್ಟೆ ಲೈಫು ಪುರುಸೋತ್ತೆ ಇಲ್ಲ’ ಸಿನಿಮಾಗಳು ನಂತರ ‘ಜೀ5’ನಲ್ಲಿ ತೆರೆಕಂಡಿದ್ದವು. ಕಳೆದ ನ.19ರಂದು ಚಿತ್ರಮಂದಿರಗಳಲ್ಲಿ ತೆರೆಕಂಡಿದ್ದ ವಿಭಿನ್ನ ಕಥಾಹಂದರ ಹೊಂದಿದ್ದ ‘ಗರುಡ ಗಮನ ವೃಷಭ ವಾಹನ’ ಪ್ರೇಕ್ಷಕರನ್ನು ಚಿತ್ರಮಂದಿರದತ್ತ ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ‘ಹರಿ’ ಪಾತ್ರದಲ್ಲಿ ನಟ ರಿಷಬ್ ಶೆಟ್ಟಿ, ‘ಶಿವ’ ಎಂಬ ಪಾತ್ರದಲ್ಲಿ ರಾಜ್ ಪ್ರೇಕ್ಷಕರನ್ನು ಕರಾವಳಿಯ ರೌಡಿಸಂ ಲೋಕಕ್ಕೆ ಕರೆದೊಯ್ದಿದ್ದರು. ಸಂಕ್ರಾಂತಿಗೆ ಜೀ5ನಲ್ಲಿ ಚಿತ್ರ ಬಿಡುಗಡೆಯಾಗುವ ಸಾಧ್ಯತೆ ಇದೆ. ❖

ಕೊನೆ ಶುಕ್ರವಾರ ಸಿನಿಮಾ ಹಬ್ಬ

ಇಂದು ತೆರೆಗೆ

ನಟ ಅಜೇಯ ರಾವ್ ಹಾಗೂ ಡಿಂಪಲ್ ಕ್ವೀನ್ ರಚಿತಾ ರಾಮ್ ಅಭಿನಯದ ‘ಲವ್ ಯೂ ರಚ್ಚು’, ಸ್ಯಾಂಡಲ್‌ವುಡ್‌ನ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಅಭಿನಯದ ‘ಅರ್ಜುನ್ ಗೌಡ’ ವರ್ಷದ ಕೊನೆಯ ಶುಕ್ರವಾರವಾದ ಇಂದು ಬೆಳ್ಳಿತೆರೆ ಪ್ರವೇಶಿಸುತ್ತಿವೆ.

‘ಲವ್ ಯೂ ರಚ್ಚು’ವಿನಲ್ಲಿ ಪ್ರೀತಿ, ಪ್ರಣಯ ಇದೆಯಾದರೂ ಮುಂದೆ ಅಪರಾಧ ಮತ್ತು ಪತ್ತೇದಾರಿಕೆಯ ಕಥೆಯಾಗಿ ತಿರುವು ಪಡೆದುಕೊಳ್ಳುತ್ತದೆ ಎಂದಿದೆ ಚಿತ್ರತಂಡ. ಚಿತ್ರದ ಹೆಸರು ಮತ್ತು ಕಥೆ, ನಾಯಕಿ ಕೇಂದ್ರಿತವೇ ಆಗಿದೆ. ಶೀರ್ಷಿಕೆಯೇ ‘...ರಚ್ಚು’ ಎಂದು ಇರುವುದರಿಂದ ಸಹಜವಾಗಿ ಕುತೂಹಲ ರಚಿತಾ ರಾಮ್ ಪಾತ್ರದ ಮೇಲೆಯೇ ಇದೆ. ಚಿತ್ರ ಬಿಡುಗಡೆಗೆ ಮುನ್ನವೇ ನಿರ್ಮಾಪಕ ಗುರು ದೇಶಪಾಂಡೆ ಮತ್ತು ನಾಯಕ ಅಜೇಯ ರಾವ್ ನಡುವಿನ ಭಿನ್ನಾಭಿಪ್ರಾಯ ಸಾಕಷ್ಟು ಸುದ್ದಿಯಾಗಿತ್ತು.

ಕೋಟಿ ರಾಮು ಎಂದೇ ಖ್ಯಾತರಾದ ನಿರ್ಮಾಪಕ ದಿವಂಗತ ರಾಮು ಅವರ ನಿರ್ಮಾಣದ ಕೊನೆಯ ಚಿತ್ರ ‘ಅರ್ಜುನ್ ಗೌಡ’ ಮೇಲೂ ಸಾಕಷ್ಟು ನಿರೀಕ್ಷೆ ಇದೆ. ಎರಡು ವರ್ಷಗಳ ಹಿಂದೆಯೇ ಚಿತ್ರೀಕರಣ ಮುಗಿದಿದ್ದರೂ, ಕೋವಿಡ್‌ನಿಂದ ಈ ಸಿನಿಮಾ ಬಿಡುಗಡೆ ವಿಳಂಬವಾಗಿತ್ತು. ರಾಮು ಅವರ ಬ್ಯಾನರ್‌ನಲ್ಲಿ ಬಂದ ಸಿನಿಮಾಗಳಲ್ಲಿ ಹೆಚ್ಚಿನವು ಮಾಸ್ ಕಮರ್ಷಿಯಲ್ ಚಿತ್ರಗಳು. ಇದೇ ಜಾನರ್‌ನಲ್ಲಿ ಶಂಕರ್ ನಿರ್ದೇಶನದಲ್ಲಿ ಈ ಚಿತ್ರವು ಮೂಡಿಬಂದಿದ್ದು, ಭರ್ಜರಿಯಾದ ಆ್ಯಕ್ಷನ್ ಸೀಕ್ವೆನ್ಸ್‌ಗಳು ಸಿನಿಮಾದಲ್ಲಿವೆ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ
ದ್ವೇಷಕ್ಕೆ ಹಲವು ಮುಖ. ಆದರೆ, ಪ್ರೀತಿಗೆ ಒಂದೇ ಮುಖ.
-ವಿಲಿಯಂ ಷೇಕ್ಸ್‌ಪಿಯರ್

ನಗರ ಸ್ಥಳೀಯ ಸಂಸ್ಥೆ ಫಲಿತಾಂಶ ಕಾಂಗ್ರೆಸ್‌ಗೆ ಖುಷಿ, ಬಿಜೆಪಿಗೆ ಬಿಸಿ

ರಾಜ್ಯದ ಐದು ನಗರಸಭೆ, 19 ಪುರಸಭೆ ಮತ್ತು 34 ಪಟ್ಟಣ ಪಂಚಾಯಿತಿಗಳ ಒಟ್ಟು 1,184 ವಾರ್ಡ್‌ಗಳಿಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು, ಕಾಂಗ್ರೆಸ್ ಪಾಳೆಯದಲ್ಲಿ ನವೋತ್ಸಾಹ ಕಂಡುಬಂದಿದೆ. ಈ ಚುನಾವಣೆಯಲ್ಲಿ ಹೆಚ್ಚಿನ ವಾರ್ಡ್‌ಗಳನ್ನು ಗೆಲ್ಲಲು ಆಡಳಿತಾರೂಢ ಬಿಜೆಪಿ ಶತಪ್ರಯತ್ನ ನಡೆಸಿದರೂ ಹಿನ್ನಡೆಯನ್ನು ಅನುಭವಿಸಿರುವುದು ಎದ್ದು ಕಾಣುತ್ತಿದೆ. ಒಟ್ಟು ವಾರ್ಡ್‌ಗಳಲ್ಲಿ 501 ವಾರ್ಡ್‌ಗಳಲ್ಲಿ ಗೆಲುವು ದಾಖಲಿಸುವ ಮೂಲಕ ಕಾಂಗ್ರೆಸ್ ಮೇಲುಗೈ ಸಾಧಿಸಿದೆ. ಬಿಜೆಪಿಯು 433 ವಾರ್ಡ್‌ಗಳಲ್ಲಿ ಜಯ ಗಳಿಸಿದೆ. ಜೆಡಿಎಸ್ ನಿರಾಶಾದಾಯಕ ಎನ್ನಬಹುದಾದ ಫಲಿತಾಂಶ ಪಡೆದಿದ್ದು, 45 ವಾರ್ಡ್‌ಗಳಿಗಷ್ಟೇ ಸೀಮಿತಗೊಂಡಿದೆ. ಅಚ್ಚರಿಯ ಎನ್ನುವಂತೆ ಪಕ್ಷೇತರರು ಒಟ್ಟು 195 ವಾರ್ಡ್‌ಗಳಲ್ಲಿ ಜಯ ಸಾಧಿಸಿರುವುದು ಮತದಾರರಿಗೆ ರಾಜಕೀಯ ಪಕ್ಷಗಳ ಬಗ್ಗೆ ಉಂಟಾಗಿರುವ ಜುಗುಪ್ಸೆಯನ್ನು ತೋರಿಸುವಂತಿದೆ. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸಾಮಾನ್ಯವಾಗಿ ಬಿಜೆಪಿ ಮೇಲುಗೈ ಸಾಧಿಸುವ ಪ್ರವೃತ್ತಿ ಕೆಲವು ವರ್ಷಗಳಿಂದ ನಡೆದುಬಂದಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದರೆ ಬಿಜೆಪಿಗೆ ಚಿಂತೆ ಹೆಚ್ಚಿಸಿರುವ ವಿದ್ಯಮಾನವಿದು ಎನ್ನಬಹುದು. ಅದೂ ಅಲ್ಲದೆ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಆಡಳಿತ ಪಕ್ಷಕ್ಕೆ ಗೆಲ್ಲುವ ಅವಕಾಶ ಹೆಚ್ಚಿರುತ್ತದೆ. ಆಡಳಿತದ ಬಗ್ಗೆ ಮತದಾರರಲ್ಲಿ ಆಕ್ರೋಶ ಅಥವಾ ಬೇಸರ ಇದ್ದಾಗ ಮಾತ್ರ ವಿರೋಧ ಪಕ್ಷಗಳಿಗೆ ಹೆಚ್ಚಿನ ಸ್ಥಾನಗಳು ಲಭಿಸುತ್ತವೆ. ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತದ ಬಗ್ಗೆ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಉಂಟಾಗಿರುವ ಭ್ರಮನಿರಸನವೇ ಪಕ್ಷದ ಹಿನ್ನಡೆಗೆ ಕಾರಣ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲವಾದರೂ ಈ ದಿಕ್ಕಿನಲ್ಲಿ ರಾಜಕೀಯ ವಿಶ್ಲೇಷಣೆ ಚರ್ಚೆ ಶುರುವಾಗಿರುವುದಂತೂ ನಿಜ.



ಭಾವನಾತ್ಮಕ ವಿಷಯಗಳೇ ಸದಾಕಾಲ ಚುನಾವಣೆಯನ್ನು ಗೆಲ್ಲುವ ತಂತ್ರಗಳಾಗುವುದಿಲ್ಲ ಎನ್ನುವುದನ್ನು ಬಿಜೆಪಿ ಅರ್ಥ ಮಾಡಿಕೊಳ್ಳಬೇಕಿದೆ

ಇನ್ನೇನು ಒಂದೂಕಾಲು ವರ್ಷದಲ್ಲಿ ವಿಧಾನಸಭಾ ಚುನಾವಣೆಯೂ ಬರಲಿದೆ. ಈ ವರ್ಷದ ಕೊನೆಯಲ್ಲಿ ಬಂದಿರುವ ಈ ಫಲಿತಾಂಶವು ಆಯಾ ಪಕ್ಷ ತನ್ನ ಕಾರ್ಯವೈಖರಿಯನ್ನು ಬದಲಾಯಿಸಿಕೊಳ್ಳಬೇಕೆಂಬ ಸೂಚನೆ ನೀಡಿದೆ. ಪಕ್ಷದಲ್ಲಿನ ಆಂತರಿಕ ಬೇಗುದಿಯು ಚುನಾವಣೆಯ ಫಲಿತಾಂಶದಲ್ಲಿ ಪ್ರಮುಖ ಪಾತ್ರ ವಹಿಸಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಮುಖ್ಯಮಂತ್ರಿ ಬದಲಾವಣೆ ಕುರಿತ ವದಂತಿ ಕೆಲವು ವಾರಗಳಿಂದ ತೇಲಾಡುತ್ತಿದೆ. ಈಚೆಗೆ ನಡೆದ ಪಕ್ಷದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ವರಿಷ್ಠರು ಈ ವದಂತಿಯನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಮಾತ್ರವಲ್ಲ, ಪಕ್ಷದೊಳಗೇ ಇಂತಹ ವದಂತಿಯನ್ನು ಹುಟ್ಟುಹಾಕುತ್ತಿರುವ ನಾಯಕರಿಗೆ ಎಚ್ಚರಿಕೆಯನ್ನೂ ನೀಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿನಿಧಿಸುವ ಕ್ಷೇತ್ರ ಇರುವ ಹಾವೇರಿ ಜಿಲ್ಲೆ ವ್ಯಾಪ್ತಿಯ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯಲ್ಲಿ ಕಾಂಗ್ರೆಸ್ ಗೆಲುವು ದಾಖಲಿಸಿದೆ. ವಿಧಾನ ಪರಿಷತ್‌ನ ಸ್ಥಳೀಯ ಸಂಸ್ಥೆಗಳಿಂದ ಈಚೆಗೆ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿಗೆ ಸರಿಸಮನಾಗಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು. ಈ ಫಲಿತಾಂಶಗಳನ್ನು ಅವಲೋಕಿಸಿದರೆ ಬಿಜೆಪಿಗೆ ಮುಂದಿನ ದಿನಗಳು ರಾಜಕೀಯವಾಗಿ ಹೆಚ್ಚು ಕಠಿಣವಾಗಲಿರುವ ಸಂಭವವೇ ಕಾಣಿಸುತ್ತಿದೆ. ಆಪರೇಷನ್ ಕಮಲ ಕಾರ್ಯಾಚರಣೆಯ ಮೂಲಕ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಕೆಲವು ಶಾಸಕರಿಂದ ರಾಜೀನಾಮೆ ಕೊಡಿಸಿ ರಾಜ್ಯದಲ್ಲಿ ಅಧಿಕಾರ ಹಿಡಿದಿರುವ ಬಿಜೆಪಿ, ಉತ್ತಮ ಆಡಳಿತದ ಮೂಲಕ ಜನರ ಆಶೀರ್ವಾದ ಪಡೆಯಲು ಅವಕಾಶವಿತ್ತು. ಆದರೆ ಪಕ್ಷದಲ್ಲಿನ ಒಳಜಗಳ, ಮುಖ್ಯಮಂತ್ರಿ ಬದಲಾವಣೆ, ಕೊರೊನಾ ಸಂಕಷ್ಟವನ್ನು ಎದುರಿಸುವಲ್ಲಿ ಉಂಟಾದ ವೈಫಲ್ಯ, ಬೆಲೆ ಏರಿಕೆ, ನಿರುದ್ಯೋಗ ಪ್ರಮಾಣದಲ್ಲಿ ಹೆಚ್ಚಳ ಮುಂತಾಗಿ ಹಲವು ವಿಷಯಗಳು ಬಿಜೆಪಿ ರಾಜಕೀಯ ಹಾದಿಯನ್ನು ದುರ್ಗಮವಾಗಿಸುತ್ತಿವೆ. ಜೊತೆಗೆ ಧರ್ಮ, ಜಾತಿ ಮುಂತಾಗಿ ಭಾವನಾತ್ಮಕ ವಿಷಯಗಳೇ ಸದಾಕಾಲ ಚುನಾವಣೆಯನ್ನು ಗೆಲ್ಲುವ ತಂತ್ರಗಳಾಗುವುದಿಲ್ಲ ಎನ್ನುವುದನ್ನು ಬಿಜೆಪಿ ನಾಯಕರು ಅರ್ಥ ಮಾಡಿಕೊಳ್ಳಬೇಕಿದೆ.

ಕಾಂಗ್ರೆಸ್‌ನಿಂದ ಸೆಳೆದು ತಂದ ನಾಯಕರಲ್ಲಿ ಕೆಲವರು ಬಿಜೆಪಿಗೆ ಹೆಚ್ಚು ಮತ ಗಳಿಸಿಕೊಡುವಲ್ಲಿ ವಿಫಲರಾಗಿರುವುದು ನಗರ ಸ್ಥಳೀಯ ಸಂಸ್ಥೆಗಳ ಫಲಿತಾಂಶದಲ್ಲಿ ಎದ್ದು ಕಾಣುತ್ತಿದೆ. ಇಬ್ಬರು ಸಚಿವರು ಸೇರಿ ವಿಧಾನಸಭೆಯ 13 ಸದಸ್ಯರನ್ನು ಹೊಂದಿರುವ ಬೆಳಗಾವಿ ಜಿಲ್ಲೆಯ 16 ಸ್ಥಳೀಯ ಸಂಸ್ಥೆಗಳ ಪೈಕಿ ಬಿಜೆಪಿಗೆ ಐದರಲ್ಲಿ ಮಾತ್ರ ಬಹುಮತ ಪಡೆಯಲು ಸಾಧ್ಯವಾಗಿದೆ. ಬಳ್ಳಾರಿಯ ಮೂರು ಸ್ಥಳೀಯ ಸಂಸ್ಥೆಗಳ ಪೈಕಿ ಒಂದರಲ್ಲಿ ಕಾಂಗ್ರೆಸ್ ಬಹುಮತ ಪಡೆದರೆ, ಎರಡರಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ವಿಜಯಪುರ, ಬಾಗಲಕೋಟೆ, ಕೊಪ್ಪಳ, ಹಾವೇರಿ, ವಿಜಯನಗರ, ರಾಯಚೂರು, ದಾವಣಗೆರೆ ಜಿಲ್ಲೆಗಳಲ್ಲೂ ಕಾಂಗ್ರೆಸ್‌ಗೆ ಹೆಚ್ಚಿನ ಕಡೆ ಅಧಿಕಾರ ಹಿಡಿಯಲು ಅವಕಾಶ ದೊರೆತಿರುವುದು ಆ ಪಕ್ಷದ ಆತ್ಮವಿಶ್ವಾಸವನ್ನು ಹೆಚ್ಚಿಸುವಂತಿದೆ. 'ಐದು ನಗರಸಭೆಗಳ ಪೈಕಿ ಮೂರರಲ್ಲಿ ನಾವು ಅಧಿಕಾರಸೂತ್ರ ಹಿಡಿಯಲಿದ್ದೇವೆ' ಎಂದು ಬಿಜೆಪಿ ನಾಯಕರು ಹೆಮ್ಮೆಪಡಬಹುದಾದರೂ ಶೇಕಡಾವಾರು ಮತ ಗಳಿಕೆಯಲ್ಲಿ ಪಕ್ಷಕ್ಕೆ ಉಂಟಾಗಿರುವ ಹಿನ್ನಡೆಯನ್ನು ಲಘುವಾಗಿ ಪರಿಗಣಿಸಲು ಆಗುವುದಿಲ್ಲ.

ದಿನದ ಟ್ವೀಟ್




ವಿರುದ್ಧದ ನಿರ್ಧಾರ

ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆಯ (ಆಫ್‌ಸ್ಪ) ವ್ಯಾಪ್ತಿ ಕಡಿಮೆ ಮಾಡಬಹುದೆಂಬ ವರದಿಗಳಿದ್ದವು. ಆದರೆ ಸರ್ಕಾರ ಅದನ್ನು ವಿಸ್ತರಿಸುತ್ತಿರುವಂತೆ ತೋರುತ್ತಿದೆ. ಈಶಾನ್ಯ ಭಾಗದಲ್ಲಿ ಶಾಂತಿ ಕಾಯ್ದುಕೊಳ್ಳಲಾಗುವುದು ಎಂದು ಗೃಹ ಸಚಿವರು ಹೇಳಿದ ಒಂದು ತಿಂಗಳ ನಂತರ, ಸಂಪೂರ್ಣ ವಿರುದ್ಧವಾದ ನಿರ್ಧಾರ ಕೈಗೊಳ್ಳಲಾಗಿದೆ.

ಸುಹಾಸಿನಿ ಹೈದರ್, ಪತ್ರಕರ್ತೆ

ಕಿಡಿನುಡಿ



ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ನಾಯಕ ಮತ್ತು ಮುಖ್ಯ ಕೋಚ್‌ಗೆ ಅಧಿಕೃತವಾಗಿ ಪಾತ್ರ ವಹಿಸುವ ಅವಕಾಶ ಸಿಗಬೇಕು. ಅದರಲ್ಲೂ ಉತ್ತಮ ಅನುಭವವುಳ್ಳ ಕೋಚ್‌ಗಳಿದ್ದಾಗ ಆಯ್ಕೆಯಲ್ಲಿ ಪಾತ್ರ ವಹಿಸಬೇಕು. ಉದಾಹರಣೆಗೆ: ಆಗ ನಾನು ಮತ್ತು ಈಗ ರಾಹುಲ್ ದ್ರಾವಿಡ್ ಅವರಂತಹ ಅನುಭವಿಗಳಿದ್ದಾಗ ಮಹತ್ವ ಕೊಡಬೇಕು.

ರವಿ ಶಾಸ್ತ್ರಿ, ಭಾರತ ಕ್ರಿಕೆಟ್ ತಂಡದ ಮಾಜಿ ಕೋಚ್

25 ವರ್ಷಗಳ ಹಿಂದೆ

ಮಂಗಳವಾರ, 31-12-1996

• **ಅಸ್ಸಾಂ: ರೈಲಿನಲ್ಲಿ ಬಾಂಬ್ ಸ್ಫೋಟ- 300 ಸಾವು**

ಗುವಾಹಟಿ, ಡಿ. 30 (ಪಿಟಿಐ)- ದೆಹಲಿಗೆ ತೆರಳುತ್ತಿದ್ದ ಬ್ರಹ್ಮಪುತ್ರಾ ಮೇಲ್ ರೈಲಿನಲ್ಲಿ ಇಂದು ರಾತ್ರಿ ಶಕ್ತಿಶಾಲಿ ಬಾಂಬ್ ಸ್ಫೋಟಿಸಿ ಸುಮಾರು 300ಕ್ಕೂ ಹೆಚ್ಚು ಪ್ರಯಾಣಿಕರು ಸತ್ತ ಭೀಕರ ದುರ್ಘಟನೆ ಸಂಭವಿಸಿದೆ.

ರಾತ್ರಿ 7.30ಕ್ಕೆ ಕೊಕ್ರಜಾರ್ ಜಿಲ್ಲೆಯ ಶೇಷಪಾಣಿ ರೈಲು ನಿಲ್ದಾಣದ ಬಳಿ ಈ ಬಾಂಬ್ ಸ್ಫೋಟದ ದುರಂತ ಸಂಭವಿಸಿದೆ. 3 ಬೋಗಿಗಳು ಬಾಂಬ್‌ಗೆ ಸಿಕ್ಕು ಪೂರ್ಣ ನಾಶವಾಗಿದ್ದು, ಇತರ ಎರಡು ಬೋಗಿಗಳು ಹಳಿ ತಪ್ಪಿ ಉರುಳಿವೆ ಎಂದು ಮಧ್ಯರಾತ್ರಿ ಬಂದ ವರದಿಗಳು ತಿಳಿಸಿವೆ. ದುರಂತದಲ್ಲಿ ನೂರಾರು ಪ್ರಯಾಣಿಕರಿಗೆ ಗಾಯಗಳಾಗಿವೆ. ಇದು ಬೋಡೋ ಉಗ್ರಗಾಮಿಗಳ ಕೃತ್ಯ ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

• **ರಾಜೀವ್ ಹತ್ಯೆ ಪ್ರಕರಣ ವಿಚಾರಣೆ ಮರು ಆರಂಭ**

ಚೆನ್ನೈ, ಡಿ. 30 (ಯುಎನ್‌ಐ)- ಐದು ವರ್ಷಗಳಿಂದ ವಿಚಾರಣೆ ನಡೆಯುತ್ತಿರುವ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೊಸದಾಗಿ ನೇಮಕವಾಗಿರುವ ನ್ಯಾಯಾಧೀಶರು ಇಂದು ತಮ್ಮ ಮೊದಲ ವಿಚಾರಣಾ ಸಭೆ ನಡೆಸುವುದರೊಂದಿಗೆ ಈ ಪ್ರಕರಣ ಈಗ ಕೊನೆಯ ಘಟ್ಟಕ್ಕೆ ಬಂದಿದೆ. ರಾಜೀವ್ ಹತ್ಯೆ ಪ್ರಕರಣದ ವಿಚಾರಣಾ ಅಧಿಕಾರಿಯಾಗಿದ್ದ ನ್ಯಾಯಮೂರ್ತಿ ಎಸ್.ಎಂ.ಸಿದ್ದಿಕ್ ಅವರು ಹೈಕೋರ್ಟ್ ನ್ಯಾಯಾಧೀಶರಾಗಿ ನೇಮಕಗೊಂಡಿದ್ದರಿಂದ ಆ ಸ್ಥಾನಕ್ಕೆ, ಮದ್ರಾಸ್ ಹೈಕೋರ್ಟ್‌ನ ಅಡಿಷನಲ್ ರಿಜಿಸ್ಟ್ರಾರ್ ಆಗಿದ್ದ ನವನೀತಂ ಈಗ ಹೊಸ ವಿಚಾರಣಾ ಅಧಿಕಾರಿ.

50 ವರ್ಷಗಳ ಹಿಂದೆ

ಶುಕ್ರವಾರ, 31-12-1971

• **ಡಾ. ವಿಕ್ರಂ ಸಾರಾಭಾಯಿ ಅವರ ಹಠಾತ್ ನಿಧನ**

ತಿರುವನಂತಪುರ, ಡಿ. 30- ಅಣುಶಕ್ತಿ ಆಯೋಗ ಮತ್ತು ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಡಾ. ವಿಕ್ರಂ ಸಾರಾಭಾಯಿ (52) ಅವರು ಇಲ್ಲಿಗೆ 12 ಕಿಲೊಮೀಟರ್ ದೂರದಲ್ಲಿರುವ ಸರ್ಕಾರಿ ಪ್ರವಾಸಿ ಹೋಟೆಲಾದ ಕೋವಲಂ ಅರಮನೆಯಲ್ಲಿ ಇಂದು ಬೆಳಿಗ್ಗೆ ನಿಧನರಾದರು.

• **ಭಾರತದಲ್ಲಿ ಅಂತರಿಕ್ಷ ಯುಗ ಪ್ರವರ್ತಕ**

ಮುಂಬಯಿ, ಡಿ. 30- ಇಂದು ಮುಂಜಾನೆ ತಿರುವನಂತಪುರದಲ್ಲಿ ನಿಧನರಾದ ಅಣುಶಕ್ತಿ ಆಯೋಗ ಮತ್ತು ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಡಾ. ವಿಕ್ರಂ ಸಾರಾಭಾಯಿ ಅವರು ವಿಜ್ಞಾನ ಜಗತ್ತಿನಲ್ಲಿ ಅತ್ಯಂತ ಗೌರವಾನ್ವಿತ ನಾಯಕರಲ್ಲೊಬ್ಬರು.

ಡಾ. ಹೋಮಿ ಭಾಭಾ ಅವರ ಆಕಸ್ಮಿಕ ಮರಣದ ನಂತರ ಅಣುಶಕ್ತಿ ಆಯೋಗದ ಅಧ್ಯಕ್ಷತೆ ವಹಿಸಿಕೊಂಡ ಡಾ. ಸಾರಾಭಾಯಿ ಅವರು ಶಾಂತಿಯುತ ಉದ್ದೇಶಗಳಿಗಾಗಿ ಅಣುಶಕ್ತಿ ಬಳಸುವ ಭಾರತದ ಯೋಜನೆಗಳನ್ನು ಅಸಾಧಾರಣ ಹುಮ್ಮಸ್ಸಿನಿಂದ ಪ್ರಗತಿಪಥದಲ್ಲಿ ಒಯ್ದು ರಾಷ್ಟ್ರದ ಅಣು ನೀತಿ ರೂಪಿಸಲು ಸಹಾಯ ಮಾಡಿದರು.

ಅಭಿವೃದ್ಧಿಯ ಆದ್ಯತೆ ಗುರುತಿಸುವುದರಲ್ಲಿ ಕಲ್ಯಾಣ ಕರ್ನಾಟಕದ 'ಜನಕಲ್ಯಾಣ' ಅಡಗಿದೆ

ಅಭಿವೃದ್ಧಿ: ಆದ್ಯತೆಯಲ್ಲಿ ಎಡವಟ್ಟು



ವಿಶ್ಲೇಷಣೆ

ಟಿ.ಆರ್.ಚಂದ್ರಶೇಖರ

ರಾಜ್ಯದ ಕಲ್ಯಾಣ ಕರ್ನಾಟಕ ಪ್ರದೇಶದ ಎಲ್ಲ ಜಿಲ್ಲೆಗಳೂ ಅತ್ಯಂತ ಹಿಂದುಳಿದಿವೆ. ಇದನ್ನು ರಾಜ್ಯದ ಮೊದಲ ಮಾನವ ಅಭಿವೃದ್ಧಿ ವರದಿ, ಡಾ. ಡಿ.ಎಂ.ನಂಜುಂಡಪ್ಪ ಸಮಿತಿ ವರದಿ, 2011ರ ಜನಗಣತಿ ವರದಿ, 2005 ಮತ್ತು 2015ರ ಕರ್ನಾಟಕ ಮಾನವ ಅಭಿವೃದ್ಧಿ ವರದಿಗಳು ಅನುಮಾನಕ್ಕೆ ಆಸ್ಪದವಿಲ್ಲದಂತೆ ದೃಢಪಡಿಸಿವೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ- 5 ಮತ್ತು ನೀತಿ ಆಯೋಗದ 'ಭಾರತದಲ್ಲಿ ಬಹುಮುಖಿ ಬಡತನ' ವರದಿಯೂ ಈ ವಿಷಯವನ್ನು ಇತ್ತೀಚೆಗೆ ಖಚಿತಪಡಿಸಿವೆ.

ಕಳೆದ 20-30 ವರ್ಷಗಳ ಅವಧಿಯಲ್ಲಿ ಈ ಪ್ರದೇಶದ ಅಭಿವೃದ್ಧಿಗೆ ಸರ್ಕಾರ ಏನೇನೂ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳಲು ಬರುವುದಿಲ್ಲ. ಅದು ಅನೇಕ ಕಾರ್ಯಯೋಜನೆಗಳನ್ನು ಜಾರಿಗೆ ತಂದಿದೆ. ಉದಾಹರಣೆಗೆ, ನಂಜುಂಡಪ್ಪ ವರದಿಯ ಶಿಫಾರಸಿನ ಅನ್ವಯ ರಾಜ್ಯದ 114 ಹಿಂದುಳಿದ ತಾಲ್ಲೂಕುಗಳಿಗೆ ಸಂಬಂಧಿಸಿದ 'ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆ'. ಯೋಜನೆ ಆರಂಭವಾದ 2007- 08ರಿಂದ 2020- 21ರವರೆಗೆ ಸರ್ಕಾರ ನೀಡಿರುವ ಅನುದಾನ ₹ 36,848 ಕೋಟಿ. ಆದರೆ ವೆಚ್ಚವಾದದ್ದು ₹ 27,362 ಕೋಟಿ (ಶೇ 74.25).

ಕಲ್ಯಾಣ ಕರ್ನಾಟಕದ ಅತ್ಯಂತ ಹಿಂದುಳಿದಿರುವಿಕೆಗೆ ಮುಖ್ಯ ಕಾರಣ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿನ ಸಮಸ್ಯೆಗಳು ಎಂಬುದನ್ನು ಎಲ್ಲ ವರದಿಗಳು ದಾಖಲಿಸಿವೆ. ಆದರೆ ವಿಶೇಷ ಅಭಿವೃದ್ಧಿ ಯೋಜನೆಯ ಒಟ್ಟು ಅನುದಾನದಲ್ಲಿ ಇವೆರಡಕ್ಕೆ ಮೀಸಲಿಟ್ಟ ಹಣ ₹ 3,836 ಕೋಟಿ (ಶೇ 10.41). ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೆ ನೀಡಿದ ಪ್ರಮಾಣ ಶೇ 1.41 (₹ 521 ಕೋಟಿ). ಹಾಗಾದರೆ ಇದರಲ್ಲಿ ಯಾವುದಕ್ಕೆ ಹೆಚ್ಚು ಹಣ ನೀಡಲಾಗಿದೆ? ನೀರಾವರಿ (₹ 7,860 ಕೋಟಿ), ಮೂಲಸೌಕರ್ಯ (₹ 1,780 ಕೋಟಿ), ಇಂಧನ (₹ 2,738 ಕೋಟಿ) ಮತ್ತು ಲೋಕೋಪಯೋಗಿ ಇಲಾಖೆಗಳಿಗೆ (₹ 2,738 ಕೋಟಿ) ನೀಡಿರುವ ಒಟ್ಟು ಅನುದಾನ ₹ 14,523 ಕೋಟಿ (ಶೇ 39.41). ಇದೇ ರೀತಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು 371 ಜೆ ಪರಿಚ್ಛೇದದಡಿ 2013-14ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇದರಡಿ ಸರ್ಕಾರ ಎಂಟು ವರ್ಷಗಳಲ್ಲಿ ಘೋಷಿಸಿದ ಒಟ್ಟು ಅನುದಾನ ₹ 7,385 ಕೋಟಿ. ವೆಚ್ಚವಾದದ್ದು ₹ 6,079 ಕೋಟಿ (ಶೇ 82.31). ಇದರಲ್ಲಿ ಶೇ 70ರಷ್ಟು ಹಣ ಮೂಲಸೌಲಭ್ಯ ಕಾಮಗಾರಿಗಳಿಗೆ ಎಂಬ ನಿಯಮವನ್ನೇ ಮಾಡಲಾಗಿದೆ.

ಇವೆಲ್ಲವೂ ಕಾಮಗಾರಿ- ಕಾಂಟ್ರಾಕ್ಟ್‌ಗಿರಿ ಅನುದಾನಗಳು. ಕಲ್ಯಾಣ ಕರ್ನಾಟಕ ಪ್ರದೇಶ ಇಂದಿಗೂ ಹಿಂದುಳಿದಿರುವುದಕ್ಕೆ ಕಾರಣ ಇಂತಹ ಅಭಿವೃದ್ಧಿ ಆದ್ಯತೆಗಳ ವಿಕೃತಿಯಲ್ಲಿದೆ. ಅಭಿವೃದ್ಧಿಯಲ್ಲಿ ಜನರು, ಜೀವನೋಪಾಯ, ಮಹಿಳೆಯರು, ಮಕ್ಕಳ ಬದುಕು- ಬವಣೆ ಮುಖ್ಯ ಎಂಬುದನ್ನು ಎಲ್ಲ ವರದಿಗಳೂ ಸಾರಿವೆ. ಆದರೆ ಸರ್ಕಾರ ಇದನ್ನು ಧಿಕ್ಕರಿಸಿ ರಸ್ತೆ, ಸೇತುವೆ, ನೀರಾವರಿ ಅಂತಹವೇ ಅಭಿವೃದ್ಧಿ ಎಂದು ಭಾವಿಸಿದೆ. ಸಮಗ್ರ ಅಭಿವೃದ್ಧಿಗೆ ಇವೆಲ್ಲವೂ ಬೇಕು. ಆದರೆ ಇವೇ ಅಭಿವೃದ್ಧಿಯಲ್ಲ.

ನೀತಿ ಆಯೋಗದ ವರದಿಯ ಪ್ರಕಾರ, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಬಹುಮುಖಿ ಬಡತನ ಎದುರಿಸುತ್ತಿರುವವರ ಪ್ರಮಾಣ ಶೇ 13.16ರಷ್ಟು. ಕಲ್ಯಾಣ ಕರ್ನಾಟಕದ ಯಾದಗಿರಿ ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ 41.67, ರಾಯಚೂರಿನಲ್ಲಿ ಶೇ 32.39, ನಾಲ್ಕು ಜಿಲ್ಲೆಗಳಲ್ಲಿ ಈ ಪ್ರಮಾಣ ಶೇ 20ಕ್ಕಿಂತ ಅಧಿಕವಾಗಿದೆ. ಇದಕ್ಕೆ ಕಾರಣವಾಗಿರುವ ಸಂಗತಿಗಳನ್ನು ವರದಿ ದಾಖಲಿಸಿದೆ. ಈ ಸೂಚ್ಯಂಕದ ಮಾಪನಕ್ಕೆ ಆರೋಗ್ಯ ಕ್ಷೇತ್ರದ ಮೂರು, ಶಿಕ್ಷಣ ಕ್ಷೇತ್ರದ ಎರಡು ಮತ್ತು ಜೀವನಮಟ್ಟದ ಏಳು ಸೂಚಿಗಳನ್ನು ಬಳಸಲಾಗಿದೆ. ಈ 12 ಸೂಚಿಗಳಲ್ಲಿ ಪೌಷ್ಟಿಕತೆ, ಮಹಿಳೆಯರ ಆರೋಗ್ಯ ಹಾಗೂ ಮಕ್ಕಳ ಮರಣಸೂಚಿಗಳ ಕೊರತೆಯ ಕಾಣಿಕೆ ಶೇ 38.9ರಷ್ಟಿದ್ದರೆ, ಶಿಕ್ಷಣ ಕ್ಷೇತ್ರದ ಸೂಚಿಗಳ ಕೊರತೆಯ ಕೊಡುಗೆ ಶೇ 23.1 ಮತ್ತು ಜೀವನಮಟ್ಟದ ಸೂಚಿಗಳ ಕೊರತೆಯ ಕೊಡುಗೆ ಶೇ 36.1. ಒಟ್ಟಾರೆ ರಾಜ್ಯದಲ್ಲಿ ಬಹುಮುಖಿ ಬಡತನಕ್ಕೆ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿನ ಕೊರತೆಯ ಕಾಣಿಕೆ ಶೇ 62ರಷ್ಟಿದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ- 5 ವರದಿಯು ಈ ಜಿಲ್ಲೆಗಳಲ್ಲಿನ ಮಕ್ಕಳು ಮತ್ತು ಮಹಿಳೆಯರ ಅಪೌಷ್ಟಿಕತೆ (ರಕ್ತಹೀನತೆ/ಅನೀಮಿಯ) ಪ್ರಮಾಣ 2019-20ರಲ್ಲಿ ಅತ್ಯಧಿಕ ಎಂಬುದನ್ನು ದೃಢಪಡಿಸಿದೆ. ಈ ಜಿಲ್ಲೆಗಳಲ್ಲಿ 6ರಿಂದ 59 ತಿಂಗಳ ವಯೋಮಾನದ ಒಟ್ಟು ಮಕ್ಕಳಲ್ಲಿ ಅನೀಮಿಯ ಪ್ರಮಾಣ ಸರಾಸರಿ ಶೇ 70ಕ್ಕಿಂತ ಅಧಿಕ ಮಕ್ಕಳಲ್ಲಿದೆ. ಇದೇ ರೀತಿಯಲ್ಲಿ 15ರಿಂದ 49 ವರ್ಷಗಳ ವಯೋಮಾನದ ಒಟ್ಟು ಮಹಿಳೆಯರಲ್ಲಿನ ಅನೀಮಿಯ ಪ್ರಮಾಣ ಶೇ 65ಕ್ಕಿಂತ ಅಧಿಕವಾಗಿದೆ. ಈ ಸಮಸ್ಯೆಗಳನ್ನು ಎದುರಿಸುವುದಕ್ಕೆ ಸರ್ಕಾರವು ಯಾವುದೇ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿಲ್ಲ.

ಸರ್ಕಾರವು ಇತ್ತೀಚೆಗಿನ ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ₹ 2,398.45 ಕೋಟಿ ವೆಚ್ಚದ ವಿವಿಧ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಇದರಲ್ಲಿ ಘೋಷಿಸಿರುವ ಹತ್ತಾರು ಕಾರ್ಯಕ್ರಮಗಳಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳು ಗೈರಾಗಿವೆ. ಇಲ್ಲಿಯೂ ಕಾಮಗಾರಿ- ಕಾಂಟ್ರಾಕ್ಟ್‌ಗಿರಿ ಯೋಜನೆಗಳಿಗೆ ಒತ್ತು ನೀಡಲಾಗಿದೆ. ಇಲ್ಲಿನ ಒಟ್ಟು ವೆಚ್ಚದಲ್ಲಿ ಬೆಳಗಾವಿ ವಿಭಾಗದ ಜಿಲ್ಲೆಗಳಿಗೆ ಸಿಂಹಪಾಲು ದೊರೆತರೆ ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ ಕನಿಷ್ಠ ಪಾಲು ದೊರೆತಿದೆ. ನಂಜುಂಡಪ್ಪ ವರದಿಯ ಪ್ರಕಾರ, 2002ರಲ್ಲಿ ರಾಜ್ಯದ ಒಟ್ಟು ಹಿಂದುಳಿದಿರುವಿಕೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಪಾಲು ಶೇ 40ರಷ್ಟಿದ್ದರೆ ಬೆಳಗಾವಿ ವಿಭಾಗದ ಪಾಲು ಶೇ 20. ಆದರೆ ಅನುದಾನ ಹಂಚಿಕೆಯಲ್ಲಿ ಸದರಿ ಅನುಪಾತವನ್ನು ಸರ್ಕಾರ ಕಿಂಚಿತ್ತೂ ಪಾಲಿಸುತ್ತಿಲ್ಲ.



ದುರ್ಬಲ ವರ್ಗದವರ ಪ್ರಮಾಣವು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಅಧಿಕ. ಒಂದು ಪ್ರದೇಶದ ಅಭಿವೃದ್ಧಿಯ ಮೌಲ್ಯಮಾಪನದಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಅಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ದುರ್ಬಲ ವರ್ಗದವರ (ವಲ್‌ನರಬಲ್ ಸೆಕ್ಷನ್) ಪ್ರಮಾಣ. ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರನ್ನು 'ದುರ್ಬಲ ವರ್ಗ' ಎಂದು ಪರಿಗಣಿಸಬಹುದು. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಈ ವರ್ಗದ ಒಟ್ಟು ಪ್ರಮಾಣ ಶೇ 39.81. ಆದರೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಇವರ ಪ್ರಮಾಣ ಶೇ 51.21ರಷ್ಟಿದೆ. ಅನೇಕ ಚಾರಿತ್ರಿಕ ಮತ್ತು ಧಾರ್ಮಿಕ ಕಾರಣಗಳಿಂದಾಗಿ ಈ ವರ್ಗಗಳ ಆರ್ಥಿಕ-ಸಾಮಾಜಿಕ ಸ್ಥಿತಿಗತಿಯು ಉಳಿದ ವರ್ಗಗಳ ಸ್ಥಿತಿಗತಿಗಿಂತ ಕೆಳಮಟ್ಟದಲ್ಲಿದೆ.

ಈ ಪ್ರದೇಶದ ಅಭಿವೃದ್ಧಿಗಾಗಿ ಯೋಜನೆ ರೂಪಿಸುವಾಗ ಈ ಜನಸಂಖ್ಯಾ ಸ್ವರೂಪವನ್ನು ಗಮನಿಸಬೇಕಾಗುತ್ತದೆ. ಆದರೆ ಸರ್ಕಾರ ಇಂತಹ ಸೂಕ್ಷ್ಮ ಸಂರಚನೆಗಳನ್ನು ಗಮನಿಸುವುದಿಲ್ಲ. ಇಂತಹ ವಿವಿಧ ಸಾಮಾಜಿಕ ಸ್ತರದ ಜನಸಂಖ್ಯಾ ಸ್ವರೂಪದ ವ್ಯವಸ್ಥೆಯಲ್ಲಿ ಅಭಿವೃದ್ಧಿಯನ್ನು ಅಖಂಡವಾಗಿ ಪರಿಗಣಿಸಿದರೆ ಅಲ್ಲಿ ದುರ್ಬಲ ವರ್ಗಗಳಿಗೆ 'ನ್ಯಾಯ' ದೊರೆಯುವುದಿಲ್ಲ.

ಒಂದು ಪ್ರದೇಶದ ಅಭಿವೃದ್ಧಿಯ ಬಗ್ಗೆ ಚರ್ಚಿಸುವಾಗ ಗಮನಿಸಬೇಕಾದ ಮತ್ತೊಂದು ಜನಸಂಖ್ಯಾ ಸಂಗತಿಯೆಂದರೆ, ಅಲ್ಲಿನ ಭೂರಹಿತ ದಿನಗೂಲಿ ಕಾರ್ಮಿಕರ ಪ್ರಮಾಣ. 2011ರ ಜನಗಣತಿ ಪ್ರಕಾರ, ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ಭೂರಹಿತ ದಿನಗೂಲಿ ಕಾರ್ಮಿಕರ ಪ್ರಮಾಣ ಶೇ 25.67ರಷ್ಟಿದ್ದರೆ, ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಇವರ ಪ್ರಮಾಣ ಸರಾಸರಿ ಶೇ 39.74. ಈ ವರ್ಗದ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣ ಪುರುಷರ ಪ್ರಮಾಣಕ್ಕಿಂತ ಅಧಿಕವಾಗಿರುತ್ತದೆ. ಇದನ್ನು ತೀವ್ರ ದುಃಸ್ಥಿತಿಯ ಸೂಚಿಯನ್ನಾಗಿ ಪರಿಗಣಿಸಬಹುದು. ರಾಜ್ಯದಲ್ಲಿನ ಬಹಳಷ್ಟು ವಲಸೆ ಕಾರ್ಮಿಕರಲ್ಲಿ ಈ ವರ್ಗದ ಪ್ರಮಾಣ ಅಧಿಕವಾಗಿರುತ್ತದೆ. ಇವರಲ್ಲಿ ಅನಕ್ಷರತೆ ಅಧಿಕ. ಈ ವರ್ಗವು ಆಹಾರ ಅಭದ್ರತೆಯನ್ನು ಎದುರಿಸುತ್ತಿರುತ್ತದೆ. ರಾಜ್ಯದಲ್ಲಿ ಇವರ ಪ್ರಮಾಣ 71.55 ಲಕ್ಷದಷ್ಟು ಇದ್ದರೆ, ಕಲ್ಯಾಣ ಕರ್ನಾಟಕದಲ್ಲಿ 19.91 ಲಕ್ಷದಷ್ಟು ಇದೆ. ಇದು ಸಣ್ಣ ಸಂಖ್ಯೆಯೇನಲ್ಲ. ಒಟ್ಟಾರೆ ಈ ಪ್ರದೇಶದ 'ಜನಕಲ್ಯಾಣ' ಬರೀ ಭರವಸೆಗಳಲ್ಲಿ, ಹೆಸರು ಬದಲಾವಣೆ ಪ್ರಕ್ರಿಯೆಯಲ್ಲಿ ಮತ್ತು ಜನರಿಗೆ ಮುಖ್ಯವಲ್ಲದ ಸಂಗತಿಗಳಲ್ಲಿ ಮರೆಯಾಗಿಬಿಟ್ಟಿದೆ.

ಈ ಎಲ್ಲ ಸಂಗತಿಗಳನ್ನು ಗಮನದಲ್ಲಿಟ್ಟು ಸರ್ಕಾರವು ಈ ಪ್ರದೇಶದಲ್ಲಿನ ಜನರ ಕಲ್ಯಾಣಕ್ಕೆ ತೀವ್ರಗತಿಯಲ್ಲಿ ಗಮನ ನೀಡುವುದು ಅವಶ್ಯಕ. ರಾಜ್ಯದ ಅಭಿವೃದ್ಧಿಯು ಹಿಂದುಳಿದ ಪ್ರದೇಶದ ಅಭಿವೃದ್ಧಿಯನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ. ಏಕೆಂದರೆ ಇಲ್ಲಿ ಅಭಿವೃದ್ಧಿಯ ಸಂಭಾವ್ಯ ಸಾಮರ್ಥ್ಯವು ಈಗಾಗಲೇ ಅಭಿವೃದ್ಧಿ ಹೊಂದಿದ ಪ್ರದೇಶಗಳಿಗಿಂತ ಉತ್ತಮವಾಗಿರುತ್ತದೆ.

ಚುರುಮುರಿ



ಹಗಲಲ್ಲೇ ಬರಬೇಕೆ?

• ಆನಂದ

'ಇನ್ನೊಂದು ಹೊಸ ವರ್ಷ ಬಂತಲ್ರೀ. ಹ್ಯಾಪಿ ನ್ಯೂ ಇಯರ್ ಅಂತ ಹೇಳಬೇಕು ಎಲ್ಲಾರಿಗೂ' ಹೆಂಡತಿ ಉವಾಚ.

'ಎರಡು ವರ್ಷದಿಂದ ಹೇಳ್ತಾನೆ ಇದೀವಿ. ವರ್ಷವೇನೋ ಹೊಸದು. ಹ್ಯಾಪಿ ಅಂತೂ ಆಗಲಿಲ್ಲ. ಈ ಸಲ ಹೇಗಿರುತ್ತೋ ನೋಡಬೇಕು'.

'ಆದರೆ ಈ ಇಂಗ್ಲಿಷ್ ಹೊಸ ವರ್ಷ ಏಕೆ ನಡುರಾತ್ರೀಲೇ ಬರುತ್ತೆ ಪ್ರತೀ ಸಲಾನೂ?'

'ಏನು ಪ್ರಶ್ನೆ? ಅದೇನು ಹಾಡು ಹಗಲಲ್ಲೇ ಬರಬೇಕೆ?'

'ಈಗ ನಮ್ಮ ಹೊಸ ವರ್ಷಗಳೆಲ್ಲ ಬೆಳಗಾದ ನಂತರವೇ ಬರ್ತಾ ಇಲ್ವೇ? ಉಗಾದಿ ನಮ್ಮ ಹೊಸ ವರ್ಷ ಅಲ್ವೇ? ಅದೇನು ರಾತ್ರಿ 12ಕ್ಕೆ ಬರುತ್ತೇನು? ಅದನ್ನು ಕರೆದುಕೊಂಡು ಬರೋದಿಕ್ಕೆ ಎಂಜಿ ರೋಡ್‌ಗೇ ಹೋಗಬೇಕೆ? ಬರೀ ಉಗಾದಿ ಯಾಕೆ, ನಮ್ಮಲ್ಲಿ 10ಕ್ಕೂ ಹೆಚ್ಚು ನ್ಯೂ ಇಯರ್‌ಗಳಿವೆ. ಅವು ಯಾವುವೂ ಮಿಡ್‌ನೈಟ್ ಎಂಟ್ರಿ ಕೊಡೋದಿಲ್ಲ'.

'10ಕ್ಕೂ ಹೆಚ್ಚು ನ್ಯೂ ಇಯರ್‌ಗಳು?'

'ಹೌದ್ರೀ, ಕಾಶ್ಮೀರದ ನವ್ರೆಹ್‌ದಿಂದ ಕನ್ಯಾಕುಮಾರಿಯ, ಅಂದರೆ ತಮಿಳುನಾಡಿನ ಪುತಂಡುವರೆಗೆ ಒಟ್ಟು 11 ತರಹ ನ್ಯೂ ಇಯರ್‌ಗಳಿವೆ. ಮಹಾರಾಷ್ಟ್ರದಲ್ಲಿ ಗುಡಿಪಾಡವಾ, ಪಂಜಾಬಿನಲ್ಲಿ ಬೈಸಾಖಿ, ಅಸ್ಸಾಂನಲ್ಲಿ ಬಿಹು, ಕೇರಳದಲ್ಲಿ ವಿಶು, ಬಂಗಾಳದಲ್ಲಿ ಪೊಹಲೆ ಬೈಶಾಕ್...'

'ಅವು ಯಾವುವೂ ಜನವರಿ 1ನೇ ತಾರೀಖು ಬರೋದಿಲ್ಲ ಅಲ್ವೇ?'

'ಇಲ್ಲ, ಎಲ್ಲಾ ಮಾರ್ಚ್- ಏಪ್ರಿಲ್, ಜೂನ್- ಜುಲೈ ಅಥವಾ ಅಕ್ಟೋಬರ್- ನವೆಂಬರ್‌ನಲ್ಲಿ ಬರುತ್ತವೆ. ಈ ಇಂಗ್ಲಿಷ್‌ದೇ ಜನವರಿ 1ನೇ ತಾರೀಖು ಫಿಕ್ಸ್‌ಡ್ ಎಂಟ್ರಿ. ಪ್ರತಿವರ್ಷ ನಾವು ಭಾರತೀಯರು ಎರಡೆರಡು ಹೊಸ ವರ್ಷ ಸೆಲೆಬ್ರೇಟ್ ಮಾಡ್ತೀವಿ. ಒಂದಕ್ಕೆ ಕಾಂಟಿನೆಂಟಲ್ ಮೆನು. ಇನ್ನೊಂದಕ್ಕೆ ಶುದ್ಧ ಭಾರತೀಯ ಮೆನು'.

'ಆದರೆ ಕ್ಯಾಲೆಂಡರ್ ಮಾತ್ರ ಒಂದೇ. ಅದು ಇಂಗ್ಲಿಷ್ ಕ್ಯಾಲೆಂಡರ್'.

'ಅದೇನೋ ಕರೆಕ್ಟ್. ನಮ್ಮ ಹೊಸ ವರ್ಷಗಳು ಊಟಕ್ಕುಂಟು ಲೆಕ್ಕಕ್ಕಿಲ್ಲ'.

'ನನ್ನ ತರಹಾ ಅನ್ನು'.

ಸಂಗತ

ರೈತಸ್ನೇಹಿ ನಿಶಾಚರಿ: ಮಹತ್ವ ಅರಿಯಿರಿ

ಅರಣ್ಯ ಇಲಾಖೆಯ ಕಣ್ತಪ್ಪಿಸಿ ಗೂಬೆಗಳನ್ನು ಹಿಡಿದು ಮಾರುವ ಕಳ್ಳವ್ಯಾಪಾರ ಎಗ್ಗಿಲ್ಲದೇ ನಡೆಯುತ್ತಿದೆ

• ಅಖಿಲೇಶ್ ಚಿಪ್ಪಳಿ

ಇತ್ತೀಚೆಗೆ ಸಂಜೆ ಫೋನ್ ಕರೆಯೊಂದು ಬಂತು. 'ಗೂಬೆಯೊಂದು ರಸ್ತೆಯಲ್ಲಿ ಬಿದ್ದಿದೆ, ನಿಮ್ಮ ಹತ್ತಿರ ತರುತ್ತಿದ್ದೇವೆ' ಎಂದು. ಆಗ ನಾನು ಅರಣ್ಯ ಇಲಾಖೆಯ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಯಾವುದೋ ಚರ್ಚೆಯಲ್ಲಿ ನಿರತನಾಗಿದ್ದೆ. ಅವರಿಗೂ ಗೂಬೆಯ ವಿಷಯ ತಿಳಿಸಿ ಹೊರಬಂದು ಕಾಯುತ್ತಾ ನಿಂತೆ. ಸ್ಕೂಟಿಯಲ್ಲಿ ಬಂದ ಯುವಕರು ರಟ್ಟಿನ ಪೆಟ್ಟಿಗೆಯೊಂದನ್ನು ಹಸ್ತಾಂತರಿಸಿ ಹೊರಟುಹೋದರು.

ಗೂಬೆಯ ಉಸಿರಾಟಕ್ಕೆ ತೊಂದರೆಯಾಗಬಾರದೆಂದು ರಟ್ಟಿನ ಪೆಟ್ಟಿಗೆಗೆ ಹಲವು ರಂಧ್ರಗಳನ್ನು ಮಾಡಿದ್ದರು. ಪೆಟ್ಟಿಗೆಯನ್ನು ತೆಗೆದರೆ, ಸುಂದರ ವದನದ ಗೂಬೆ ತನ್ನೆರಡು ಮಹಾಗಾತ್ರದ ಕಣ್ಣುಗಳಿಂದ ಎವೆಯಿಕ್ಕದೆ ನೋಡಿತು. ಅಷ್ಟರಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ ಬಂದರು. ಗೂಬೆಗೆ ಪೆಟ್ಟಾಗಿದೆಯೋ ಅಥವಾ ವಿದ್ಯುತ್ ತಂತಿ ಏನಾದರೂ ತಗುಲಿದೆಯೋ ಗೊತ್ತಾಗಲಿಲ್ಲ. ಚಿಕಿತ್ಸೆ ಅಗತ್ಯವಿದೆಯೇ ಎಂಬ ಬಗ್ಗೆ ಚರ್ಚೆ ನಡೆಯಿತು.

ಗೂಬೆಯ ರೆಕ್ಕೆಗಾಗಲೀ ಕಾಲಿಗಾಗಲೀ ಯಾವುದೇ ಪೆಟ್ಟಾಗಿರಲಿಲ್ಲ. ನೋಡಲು ಪಾರಿವಾಳದಷ್ಟು ದೊಡ್ಡದಾಗಿದ್ದರೂ ಅದು ಹಾರಲು ಕಲಿಯಲು ಪ್ರಾರಂಭಿಸಿದ ಮರಿಯಾಗಿತ್ತು. ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಯವರ ಮನೆಯ ಕಾಂಪೌಂಡಿನಲ್ಲಿ ಒಂದಿಷ್ಟು ಮರಗಳಿದ್ದವು. ಹಾರಿದರೆ ಹಾರಿ ಹೋಗಲಿ ಎಂದುಕೊಂಡು ಕತ್ತಲಲ್ಲಿ ಬಿಟ್ಟೆವು. ಮೂರ್ನಾಲ್ಕು ಮೀಟರ್ ದೂರವಷ್ಟೇ ಹಾರಲು ಶಕ್ತವಾಯಿತು. ಎತ್ತರಕ್ಕೆ ಜಿಗಿದು ಮರವೇರಿ ಶತ್ರುಗಳಿಂದ ತಪ್ಪಿಸಿಕೊಳ್ಳುವಷ್ಟು ಶಕ್ತವಾಗಿರಲಿಲ್ಲ. ಅಂದರೆ, ಅದರ ರೆಕ್ಕೆ ಬಲಿಯುವಷ್ಟು ದಿನ ಸಾಕಬೇಕು.

ಗೂಬೆಗಳು ನಿಶಾಚರ ಪಕ್ಷಿಗಳು. ಹಗಲು ಹೊತ್ತಿನಲ್ಲಿ ವಿಶ್ರಾಂತಿ ಪಡೆದು, ರಾತ್ರಿ ಸಂಚರಿಸುತ್ತವೆ. ರೈತರಿಗೆ ಪಿಡುಗಾದ ಇಲಿಗಳೇ ಅವುಗಳ ಮುಖ್ಯ ಆಹಾರ. ಸಸ್ಯಾಹಾರ, ಮಾಂಸಾಹಾರ ಎಂಬ ಚರ್ಚೆ ರಾಜ್ಯದಲ್ಲಿ ಬಿಸಿಯೇರಿದ ಹೊತ್ತಿನಲ್ಲೇ 'ನನಗೆ ಮಾಂಸಾಹಾರವೇ ಶ್ರೇಷ್ಠ' ಎಂದು ಸವಾಲು ಹಾಕುವಂತೆ ಗೂಬೆ ನಮ್ಮ ಅತಿಥಿಯಾಗಿ ಬಂದಿತ್ತು. ತಜ್ಞರನ್ನು ಸಂಪರ್ಕಿಸಲಾಗಿ, ಗೂಬೆಯನ್ನು ಪಂಜರದಲ್ಲಿಟ್ಟು, ಕೋಳಿಯ ತಲೆಯನ್ನು ನಾಲ್ಕಾರು ದಿನ ಹಾಕಿದರೆ, ಅಷ್ಟರಲ್ಲಿ ಅದರ ರೆಕ್ಕೆ ಬಲಿಯುತ್ತದೆ, ನಂತರದಲ್ಲಿ ಹಾರಲು ಬಿಡಿ ಎಂದರು. ಈಗ ಅದಕ್ಕೊಂದು ಪಂಜರ ಬೇಕಿತ್ತು. ಇಡೀ ಸಾಗರದಲ್ಲಿ ಎಲ್ಲಿ ಹುಡುಕಿದರೂ ಗೂಬೆಯನ್ನಿಡುವ ಪಂಜರ ಸಿಗಲಿಲ್ಲ. ಪರ್ಯಾಯವೇನು ಎಂಬ ಪ್ರಶ್ನೆಗೆ ಬೆತ್ತದ ಬುಟ್ಟಿ ಉತ್ತರವಾಯಿತು.

ಮಣ್ಣುಮುಕ್ಕ ಹಾವಿನ ಬಗೆಗೆ ಇರುವಂತೆ ಗೂಬೆಗಳ ಕುರಿತಾಗಿಯೂ ಮೂಢನಂಬಿಕೆಗಳಿವೆ. ಗೂಬೆ ಕಳ್ಳರು ದೊಡ್ಡ ಮಟ್ಟದ ಹಣಕಾಸಿನ ವ್ಯವಹಾರ ಮಾಡುತ್ತಾರೆ. ಲಕ್ಷ್ಮಿಯ ವಾಹನವೆಂದು ಕರೆಯಲಾಗುವ ಗೂಬೆಯನ್ನು ಸಾಕಿದವರು ದಿಢೀರನೆ ಶ್ರೀಮಂತರಾಗುತ್ತಾರೆ ಎಂದುಕೊಂಡವರಿದ್ದಾರೆ. ಈ ಕಲ್ಪನೆ ಅತಿದೊಡ್ಡ ಮೂರ್ಖತನ. ಬದಲಿಗೆ ಇಲಿಗಳನ್ನು ಹಿಡಿದು ತಿನ್ನುವ ಗೂಬೆಗಳನ್ನು ತಂದು ಮನೆಯಲ್ಲಿ ಸಾಕಿಕೊಂಡರೆ ಅದು ರೈತರಿಗೆ ತುಂಬಲಾರದ ನಷ್ಟ. ಗೂಬೆಗಳ ವ್ಯಾಪಾರ ಎಗ್ಗಿಲ್ಲದೇ ನಡೆಯುತ್ತಿದೆ. ಇಲಾಖೆಯವರು ಗೂಬೆ ಕದಿಯುವವರನ್ನು ಹಿಡಿಯುವ ಪ್ರಮಾಣ ಅಥವಾ ಅವರು ಸಿಕ್ಕಿಬೀಳುವ ಪ್ರಮಾಣ ಶೇ 1ರಷ್ಟಿದೆ ಅಷ್ಟೆ.

ರಾಜ್ಯ ಮಟ್ಟದ ದಿನಪತ್ರಿಕೆಯೊಂದರ ಮೇಲೆ ಗೂಬೆಯನ್ನಿಟ್ಟು, ದಿನಾಂಕ ಹಾಗೂ ಜಿಲ್ಲೆ ಕಾಣುವ ಹಾಗೆ ವಿಡಿಯೊ ಮಾಡಲಾಗುತ್ತದೆ. ಗೂಬೆ ದೊಡ್ಡದಿದ್ದಷ್ಟೂ ಅದಕ್ಕೆ ಬೆಲೆ ಹೆಚ್ಚು. ಗೂಬೆಯ ಎತ್ತರ, ಅಗಲ, ತೂಕ ಇತ್ಯಾದಿಗಳನ್ನು ವಿಡಿಯೊದಲ್ಲಿ ನಮೂದಿಸಿ, ಕಳ್ಳಕಾಕರ ವಾಟ್ಸ್‌ಆ್ಯಪ್ ಗುಂಪಿಗೆ ಹಾಕಲಾಗುತ್ತದೆ. ಅಲ್ಲಿಗೆ ಅಂತರಜಿಲ್ಲಾ ಗೂಬೆ ಕಳ್ಳಸಾಗಣೆದಾರರಿಗೆ ಗೂಬೆ ಯಾವ ಜಿಲ್ಲೆಯಲ್ಲಿ ಲಭ್ಯವಿದೆ ಎಂಬ ವಿವರ ಸಿಗುತ್ತದೆ. ಇಲಾಖೆಯವರಿಗೆ ಸುಲಭವಾಗಿ ಮಾಹಿತಿ ಸಿಗಬಾರದು ಎಂಬ ಉದ್ದೇಶದಿಂದ ಈ ತರಹದ ತಂತ್ರಗಳನ್ನು ಗೂಬೆ ಕಳ್ಳರು ಅಳವಡಿಸಿಕೊಂಡಿದ್ದಾರೆ.



ಜೀವವೈವಿಧ್ಯದ ಹಾರದಲ್ಲಿ ಗೂಬೆಯದು ಬಹುಮುಖ್ಯ ಪಾತ್ರ. ರೈತರು ಬೆಳೆಯುವ ಬೆಳೆಯ ಶೇ 40ರಷ್ಟನ್ನು ಇಲಿಗಳು ನಾಶ ಮಾಡುತ್ತವೆ ಎಂದು ಅಂಕಿ-ಅಂಶಗಳು ಹೇಳುತ್ತವೆ. ನೈಸರ್ಗಿಕವಾಗಿ ಇಲಿ ಸಂತತಿಯನ್ನು ನಿಯಂತ್ರಿಸುವಲ್ಲಿ ಉರಗಗಳು ಪ್ರಥಮ ಸ್ಥಾನದಲ್ಲಿದ್ದರೆ, ಗೂಬೆ ಸಂತತಿ ಎರಡನೇ ಸ್ಥಾನದಲ್ಲಿದೆ. ನಗರ, ಮಹಾನಗರಗಳ ಅಳಿದುಳಿದ ಮರಗಳಲ್ಲೂ ಇವು ಹೊಂದಾಣಿಕೆ ಮಾಡಿಕೊಂಡು ಬದುಕಲು ಕಲಿತಿವೆ.

ಬಿದಿರಿನ ಬುಟ್ಟಿಯಡಿಯಲ್ಲಿ ಗೂಬೆಮರಿಗೆ ತಿನ್ನಲು ಕೋಳಿ ತಲೆ ಸಿಕ್ಕಿತು. ಒಂದು ಬೌಲಿನಲ್ಲಿ ನೀರನ್ನಿಟ್ಟು ಮನೆಗೆ ಹೋದೆವು. ಬೆಳಗ್ಗೆ ಬಂದು ನೋಡಿದರೆ, ಕೋಳಿ ತಲೆಯಲ್ಲಿನ ಕೊಂಚ ಮಾಂಸವನ್ನು ಹಿಸಿದು ತಿಂದ ಕುರುಹು ಕಂಡಿತು. ನೀರನ್ನು ಕುಡಿದಿತ್ತು. ಮನುಷ್ಯರ ಹಸ್ತಕ್ಷೇಪದಿಂದ ಆದ ಮಾನಸಿಕ ಒತ್ತಡದಿಂದ ಹೊರಬಂದಿತ್ತು. ಮೂರನೇ ದಿನದಲ್ಲೂ ಗೂಬೆಮರಿಯ ಆರೋಗ್ಯ ಸೂಚ್ಯಂಕ ಏರುಗತಿಯಲ್ಲಿ ಮತ್ತು ಒತ್ತಡದ ಸೂಚ್ಯಂಕ ಇಳಿಗತಿಯಲ್ಲಿತ್ತು.

ಇನ್ನು ಎರಡು ದಿನಗಳ ಆರೈಕೆ ಬೇಕಾಗಬಹುದು ಎಂಬುದು ತಜ್ಞರ ಅಭಿಮತ. ನಂತರದಲ್ಲಿ, ನಾವೇ ಬೆಳೆಸುತ್ತಿರುವ 'ಉಷಾಕಿರಣ'ವೆಂಬ ಖಾಸಗಿ ಕಾಡಿನಲ್ಲಿ ಅದನ್ನು ಬಿಡಲು ಅರಣ್ಯ ಇಲಾಖೆಯ ಸಿಬ್ಬಂದಿ ಒಪ್ಪಿಕೊಂಡಿದ್ದಾರೆ. ಸಾಗರ ಪಟ್ಟಣದಿಂದ ಸುಮಾರು ಏಳು ಕಿಲೊಮೀಟರ್ ದೂರದಲ್ಲಿರುವ ಉಷಾಕಿರಣದಲ್ಲಿ ಅದು ಬೇಗನೇ ಹೊಂದಿಕೊಳ್ಳುವ ವಿಶ್ವಾಸ ನಮಗಿದೆ. ಉಷಾಕಿರಣವನ್ನು ನೋಡಿದ ಮೇಲೆ ಗೂಬೆಗೂ ಈ ವಿಶ್ವಾಸ ಬರಬಹುದು.

ವಾಚಕರ ವಾಣಿ

ಸೌರವಿದ್ಯುತ್: ಬೇಕು ಇನ್ನಷ್ಟು ಒತ್ತು

ರಾಷ್ಟ್ರದಲ್ಲಿ ಕಲ್ಲಿದ್ದಲು ಬಳಸಿ ವಿದ್ಯುತ್ ಉತ್ಪಾದಿಸುವ ವಿದ್ಯುತ್ ಘಟಕಗಳು ಹಾಗೂ ವಾಹನಗಳ ಚಾಲನೆಗೆ ಬಳಸುವ ಪೆಟ್ರೋಲ್, ಡೀಸೆಲ್‌ನಿಂದಾಗಿ ಬಿಡುಗಡೆಯಾಗುವ ಇಂಗಾಲದ ಡೈ ಆಕ್ಸೈಡ್‌ನಿಂದ ಪರಿಸರದಲ್ಲಿ ವಾಯುಮಾಲಿನ್ಯ ಹೆಚ್ಚಳವಾದ ಅಂಶ ಜಗಜ್ಜಾಹೀರಾಗಿದೆ. ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರದ, ಸರ್ವ ಋತುಗಳಲ್ಲೂ ಉಚಿತವಾಗಿ ದೊರೆಯುವ ಸೌರಶಕ್ತಿಯ ಸದ್ಬಳಕೆ ಮಾಡಿಕೊಂಡು, ಸೌರವಿದ್ಯುತ್ ಉತ್ಪಾದನೆಗೆ ಇನ್ನಷ್ಟು ಹೆಚ್ಚು ಒತ್ತು ನೀಡಬೇಕಾಗಿದೆ. ವಿದ್ಯುತ್‌ಚಾಲಿತ ಬಸ್‌ಗಳಿಗಾಗಿ ಬಸ್ ಡಿಪೊ, ಬಸ್ ನಿಲ್ದಾಣಗಳ ಚಾವಣಿಗಳು, ಇತರ ಸರ್ಕಾರಿ ಕಟ್ಟಡಗಳು, ಖಾಸಗಿ ಒಡೆತನದ ಕಟ್ಟಡಗಳ ಮೇಲೆ ಸೌರವಿದ್ಯುತ್ ಫಲಕಗಳನ್ನು ಅಳವಡಿಸಿ, ಕನಿಷ್ಠ ದರದಲ್ಲಿ ಸೌರವಿದ್ಯುತ್ ಅನ್ನು ವಾಹನಗಳಿಗೆ ಒದಗಿಸುವುದು ಸೂಕ್ತ ಮತ್ತು ಸಮಯೋಚಿತ ಕ್ರಮವಾಗುತ್ತದೆ.

ಈ ಕುರಿತು ಪರಿಸರ ತಜ್ಞರು, ಪರಿಸರಪ್ರೇಮಿಗಳು, ಸಂಘಟನೆಗಳು ಸಕಾರಾತ್ಮಕವಾಗಿ ಚಿಂತನೆ ಮಾಡಿ, ಸೌರ ವಿದ್ಯುತ್ ಅನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಲು ಸರ್ಕಾರದ ಮನವೊಲಿಸಲು ಮುಂದಾಗಬೇಕು.

ಬಸವರಾಜ ಹುಡೇದಗಡ್ಡಿ, ಬೆಂಗಳೂರು

ಅನುಮತಿ ನೀಡಿದ್ದು ಯಾರು?

ಇತ್ತೀಚೆಗೆ ಮನೆದೇವರ ದರ್ಶನಕ್ಕೆಂದು ಬೆಂಗಳೂರಿನಿಂದ ಚಿಂತಾಮಣಿ ಕಡೆಗೆ ಕಾರಿನಲ್ಲಿ ಪ್ರಯಾಣ ಬೆಳೆಸಿದ್ದೆ. ಹೊಸಕೋಟೆ ಬಳಿ ಟೋಲ್ ಪಾವತಿಸಿ ಎಡಕ್ಕೆ ತಿರುಗಿ ಮುಂದೆ ಸಾಗುತ್ತಿದ್ದಂತೆ, ತೀರಾ ಸಾಧಾರಣವಾದ, ಅಲ್ಲಲ್ಲಿ ಹಳ್ಳಬಿದ್ದ ರಸ್ತೆಯಲ್ಲೇ ಪ್ರಯಾಣ ಮುಂದುವರಿಸಬೇಕಾಯಿತು. ಎಚ್.ಕ್ರಾಸ್ ಎಂಬ ಊರು ದಾಟಿದ ನಂತರ ಧುತ್ತನೆ ಎದುರಾಯಿತು ಟೋಲ್‌ಗೇಟ್!

ಅಲ್ಲಿದ್ದ ಸಿಬ್ಬಂದಿ ಟೋಲ್ ಹಣ ನೀಡಿ ಎಂದರು. ಕನಿಷ್ಠಮಟ್ಟದ ಡಾಂಬರೂ ಕಣದ ರಸ್ತೆಗೆ ಟೋಲ್ ಪಾವತಿಸಬೇಕೇ ಎಂದು ಪ್ರಶ್ನಿಸಿದ ನನಗೆ, ಕೆಲ ದಿನಗಳಲ್ಲಿ ಟಾರು ಹಾಕುತ್ತೇವೆ ಎಂಬ ಉತ್ತರ ಸಿಕ್ಕಿತು. ಅವರನ್ನು ಎದುರಿಸಲಾಗದೆ ಹಣ ಪಾವತಿಸಿದೆ. ಅಲ್ಲಿ ಫಾಸ್ಟ್‌ಟ್ಯಾಗ್ ಕೂಡ ಇರಲಿಲ್ಲ. ಅಭಿವೃದ್ಧಿಪಡಿಸಿದ ರಸ್ತೆಯಲ್ಲಿ ಸಂಚರಿಸಲು ಟೋಲ್ ಪಾವತಿ ಸರಿ, ಆದರೆ ಇಂತಹ ರಸ್ತೆಯಲ್ಲಿ ಟೋಲ್‌ಗೆ ಅನುಮತಿ ನೀಡಿದ್ದು ಸರಿಯೇ? ಮತ್ತು ಯಾರು? ಇದು ಅಧಿಕೃತವೋ ಅನಧಿಕೃತವೋ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸೂಕ್ತ ವಿಷಯಕ್ಕೆ ಸಿಗಲಿ ಆದ್ಯತೆ

ಹಿಂದೂ ದೇವಾಲಯಗಳ ಮೇಲಿನ ಸರ್ಕಾರದ ಹಿಡಿತವನ್ನು ಸಡಿಲಗೊಳಿಸಿ, ಅವುಗಳ ಸ್ವತಂತ್ರ ನಿರ್ವಹಣೆಗೆ ಅನುಗುಣವಾದ ಕಾನೂನು ಜಾರಿಗೆ ತರುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ (ಪ್ರ.ವಾ., ಡಿ. 30). ಕರ್ನಾಟಕದ ಚುನಾಯಿತ ಸರ್ಕಾರವು ಹಿಂದೂ ಧರ್ಮಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಮಾತ್ರ ಜಾರಿಗೆ ತರಲು ಅಧಿಕಾರದಲ್ಲಿ ಇರುವುದೇ?

ಬೆಳಗಾವಿ ಅಧಿವೇಶನವು ರಾಜ್ಯದ ಜನತೆಗೆ ಸಂಬಂಧಿಸಿದ ಗಂಭೀರ ವಿಷಯಗಳನ್ನು ಚರ್ಚಿಸದೆ, ಬರೀ ಮತಾಂತರ ನಿಷೇಧ ಕಾಯ್ದೆಯ ಪರ, ವಿರೋಧದ ಚರ್ಚೆಯಲ್ಲೇ ಮುಗಿದುಹೋಯಿತು. ರಾಜ್ಯವನ್ನು ಕಾಡುತ್ತಿರುವ ಸಮಸ್ಯೆಗಳಾದ ಅಗತ್ಯ ವಸ್ತುಗಳ ಬೆಲೆ ಏರಿಕೆ, ಕೋವಿಡ್ ಹರಡುವಿಕೆ, ನೆರೆ ಪರಿಹಾರ, ನಿರುದ್ಯೋಗ, ಹೊಸ ಶಿಕ್ಷಣ ನೀತಿ, ಮಹಿಳಾ ಮತ್ತು ಮಕ್ಕಳ ಅಪೌಷ್ಟಿಕತೆಯಂತಹ ಸಾಲು ಸಾಲು ವಿಷಯಗಳನ್ನು ಸರ್ಕಾರ ಅಥವಾ ವಿರೋಧ ಪಕ್ಷಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಆದ್ದರಿಂದ ಬಜೆಟ್ ಅಧಿವೇಶನಕ್ಕೂ ಮುನ್ನ ಮತಧರ್ಮಗಳ ವಿಷಯಗಳನ್ನು ಬಿಟ್ಟು ಈಗಿರುವ ಸಮಸ್ಯೆಗಳನ್ನು ಬಗೆಹರಿಸುವ ದಿಸೆಯಲ್ಲಿ ಸರ್ಕಾರ ಕಾರ್ಯಪ್ರವೃತ್ತವಾಗಲಿ.

ಸುವರ್ಣ ಸಿ.ಡಿ., ತರೀಕೆರೆ

ಸ್ವಾಮಿಗಳು ಸನ್ನಡತೆ ಪ್ರೋತ್ಸಾಹಿಸಲಿ

ಇಂದಿನ ಬಹುತೇಕ ಮಠಾಧೀಶರ ನಡವಳಿಕೆಯನ್ನು ರವೀಂದ್ರ ಭಟ್ಟ ಅವರ ಲೇಖನ (ಪ್ರ.ವಾ., ಡಿ. 30) ನಿರೂಪಿಸಿದೆ. ನಮ್ಮ ಅನೇಕ ಮಠಾಧೀಶರು ರಾಜಕಾರಣಿಗಳ ಜೊತೆ ಸೇರಿ ಒಳಗೊಳಗೆ ಆಡುವ ಆಟಗಳಿಗೆ, ಮಾಡುವ ಮಾಟಗಳಿಗೆ ಈಗ ಇತಿಮಿತಿಯೇ ಇಲ್ಲದಂತಾಗಿದೆ. ಕೆಲ ಸ್ವಾಮೀಜಿಗಳಂತೂ ತಮ್ಮ ಮಠದ ಭಕ್ತರನ್ನೋ ಅಥವಾ ತಮಗೆ ಲಾಭ ಮಾಡಿಕೊಡುವ ರಾಜಕೀಯ ಪಕ್ಷದ ಅಭ್ಯರ್ಥಿಯನ್ನೋ ಢಾಣಾ ಡಂಗುರವಾಗಿ ಬೆಂಬಲಿಸುತ್ತಾರೆ. ಅಲ್ಲದೆ ಇಂಥವರನ್ನೇ ಬೆಂಬಲಿಸುವಂತೆ ಫರ್ಮಾನು ಬೇರೆ ಹೊರಡಿಸುತ್ತಾರೆ. ಪಕ್ಷ ರಾಜಕಾರಣಿಗಳಂತೆ ಅವರು ಚುನಾವಣೆ ಪ್ರಚಾರಕ್ಕೆ ಹೋಗುವುದಿಲ್ಲ. ಹಣ, ಹೆಂಡ ಹಂಚುವುದಕ್ಕೆ ಪ್ರೋತ್ಸಾಹಿಸುವುದಿಲ್ಲ. ಆದರೆ ಇವೆರಡನ್ನು ಬಿಟ್ಟು ಉಳಿದೆಲ್ಲ ರಾಜಕಾರಣ ಮಾಡುವುದನ್ನು ಕಣ್ಣಾರೆ ಕಾಣುತ್ತಿದ್ದೇವೆ. ಅವರು ಇದನ್ನು ಕದ್ದುಮುಚ್ಚಿಯೇನೂ ಮಾಡುತ್ತಿಲ್ಲ. ಈ ಸ್ವಾಮಿಗಳು ಅನೇಕ ವೇಳೆ ಪರಮಭ್ರಷ್ಟರಿಗೂ ಆಶೀರ್ವಾದ ಮಾಡುತ್ತಾರೆ. ದುರಾಚಾರಿ, ದುರ್ಗುಣಿಗಳಿಗೂ ಸ್ವಾಮಿಗಳ ಹರಕೆ ದಕ್ಕುತ್ತದೆ.

ಹಿಂದೊಂದು ಕಾಲವಿತ್ತು. ಮಂತ್ರಿ, ಮುಖ್ಯಮಂತ್ರಿಗಳು ಸ್ವಾಮೀಜಿಗಳನ್ನು ಕಾಣಲು ಅವರಿಗೆ ಫೋನ್ ಮಾಡಿ ತಿಳಿಸಿ, ಮಠಕ್ಕೆ ಭೇಟಿ ನೀಡಿ ದರ್ಶನ ಪಡೆದು ಬರುತ್ತಿದ್ದರು. ಆದರೆ ಬದಲಾದ ಈಗಿನ ಕಾಲದಲ್ಲಿ ಸ್ವಾಮೀಜಿಗಳೇ ರಾಜಕಾರಣಿಗಳ ಬಾಗಿಲ ಕದ ತಟ್ಟಿ ದರ್ಶನ ಪಡೆದು ಬರುತ್ತಿದ್ದಾರೆ! ಕೆಲವು ಸ್ವಾಮಿಗಳಂತೂ ಯಾರನ್ನು ಮಂತ್ರಿಯನ್ನಾಗಿ ಮಾಡಬೇಕು, ಸಚಿವ ಸಂಪುಟದಿಂದ ಯಾರನ್ನು ಕೈ ಬಿಡಬೇಕು ಎಂಬಂಥ ಪಕ್ಕಾ ರಾಜಕಾರಣದ ವಿಷಯದಲ್ಲಿಯೂ ಹಸ್ತಕ್ಷೇಪ ಮಾಡುತ್ತಿದ್ದಾರೆ. ಹಾಗೆಂದ ಮಾತ್ರಕ್ಕೆ ರಾಜಕೀಯ ಕುರಿತು ಇವರು ಕಿಂಚಿತ್ ಯೋಚನೆಯನ್ನೂ ಮಾಡಬಾರದು ಎಂದರ್ಥವಲ್ಲ. ಬೇಕಿದ್ದರೆ ಇವರು ಉತ್ತಮ ಸಮಾಜ ನಿರ್ಮಾಣದ ಸಲುವಾಗಿ ಸಾರ್ವಜನಿಕರಲ್ಲಿ ರಾಜಕೀಯ ಮೌಲ್ಯಗಳನ್ನು ತುಂಬಲಿ. ಏಕೆಂದರೆ ಮತದಾರ ಭ್ರಷ್ಟನಾಗಿರುವುದರಿಂದಲೇ ಅವನ ಪ್ರತಿನಿಧಿ ಕೂಡ ಭ್ರಷ್ಟನಾಗಬೇಕಾಗಿದೆ. 'ಎಂಥ ಹಿಟ್ಟೋ ಅಂಥ ರೊಟ್ಟಿ'. ಹೀಗಾಗಿ, ಸ್ವಾಮಿಗಳಾದವರು ಸನ್ನಡತೆಯನ್ನು ಪ್ರೋತ್ಸಾಹಿಸಲಿ. ಸಮಾಜದಲ್ಲಿ ಅರಿವು ಮೂಡಿಸುವ ಕೆಲಸ ಮಾಡಲಿ.

ಡಾ. ಶಿವರಂಜನ್ ಸತ್ಯಂಪೇಟೆ, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಾರ ಕಲಿಸದ ಆಂಧ್ರ ಪ್ರದೇಶ, ತೆಲಂಗಾಣ, ಪುದುಚೇರಿ ಪ್ರಕರಣ

ಮತಪತ್ರಕ್ಕೆ ಆಧಾರ್ ಮಾಹಿತಿ ಕಳವಿಗೆ ಹೆದ್ದಾರಿ

• ಕುಮಾರ ಸಂಭವ

7.8 ಕೋಟಿ ಮತದಾರರ ವೈಯಕ್ತಿಕ ಮಾಹಿತಿಯನ್ನು ರಾಜಕೀಯ ಪಕ್ಷಗಳು ಅಕ್ರಮವಾಗಿ ಪಡೆದುಕೊಂಡಿವೆ ಎಂದು ಭಾರತೀಯ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರವು (ಯುಐಡಿಎಐ) ಒಪ್ಪಿಕೊಂಡಿತ್ತು. ಆಂಧ್ರ ಪ್ರದೇಶ ಮತ್ತು ತೆಲಂಗಾಣ ವಿಧಾನಸಭೆಗಳಿಗೆ 2019ರಲ್ಲಿ ಚುನಾವಣೆ ನಡೆದಿತ್ತು, ಆ ಸಂದರ್ಭದಲ್ಲಿ, 5.5 ಕೋಟಿ ಮತದಾರರ ಆಧಾರ್ ಸಂಖ್ಯೆಯನ್ನು ಮತದಾರರ ಗುರುತು ಚೀಟಿಗೆ ಜೋಡಿಸಲಾಗಿತ್ತು. ಆದರೆ, ಮನೆ ಮನೆಗೆ ತೆರಳಿ ದೃಢೀಕರಣ ಕೆಲಸವನ್ನು ಮಾಡಿರಲಿಲ್ಲ. ಆಧಾರ್–ಮತದಾರರ ಗುರುತು ಚೀಟಿ ಜೋಡಣೆಗೆ ಹಲವು ಮತದಾರರು ಆಕ್ಷೇಪ ವ್ಯಕ್ತಪಡಿಸಿದ್ದರು.

ಮತದಾರರ ಗುರುತು ಚೀಟಿಗೆ ಆಧಾರ್ ಜೋಡಣೆಯಾದರೆ, ಅದನ್ನು ಬಳಸಿಕೊಂಡು ಮತದಾರರ ಮೇಲೆ ಹೇಗೆ ಪ್ರಭಾವ ಬೀರಬಹುದು ಎಂಬುದಕ್ಕೆ ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಪುದುಚೇರಿ ಚುನಾವಣೆ ಸಂದರ್ಭದಲ್ಲಿ ನಡೆದ ವಿದ್ಯಮಾನವು ಉದಾಹರಣೆಯಾಗಿದೆ. ಮತದಾರರ ಗುರುತು ಚೀಟಿಗೆ ಆಧಾರ್ ಸಂಖ್ಯೆ ಜೋಡಣೆಗಾಗಿ ಕಾಯ್ದೆಯನ್ನು ಸಂಸತ್ತು ಡಿಸೆಂಬರ್ 20ರಂದು ವಿರೋಧ ಪಕ್ಷಗಳ ತೀವ್ರ ವಿರೋಧದ ನಡುವೆಯೂ ಅಂಗೀಕರಿಸಿದೆ. ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಪುದುಚೇರಿ ಪ್ರಕರಣಗಳ ಪೊಲೀಸ್ ತನಿಖೆ ಮತ್ತು ಚುನಾವಣಾ ಆಯೋಗದ ತನಿಖೆಯ ಆಂತರಿಕ ದಾಖಲಾತಿಗಳನ್ನು ರಿಪೋರ್ಟರ್ಸ್ ಕಲೆಕ್ಟಿವ್ ಪರಿಶೀಲನೆ ನಡೆಸಿದೆ. ಮತದಾರ ಮಾಹಿತಿಯನ್ನು ರಾಜಕೀಯ ಪಕ್ಷಗಳು ಹೇಗೆ ಬಳಸಿಕೊಂಡಿವೆ ಮತ್ತು ಅದರ ಮೇಲೆ ಕಣ್ಣಾವಲು ಇರಿಸಬೇಕಿದ್ದ ಸಂಸ್ಥೆಗಳು ಹೇಗೆ ನಡೆದುಕೊಂಡಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ.



ಸಮಾಲೋಚನೆ ಮತ್ತು ಪರಿಶೀಲನೆಯಂತಹ ಪ್ರಕ್ರಿಯೆಗಳನ್ನು ನಿರ್ಲಕ್ಷಿಸಿ ಚುನಾವಣಾ ಕಾನೂನುಗಳ ತಿದ್ದುಪಡಿ ಕಾಯ್ದೆ 2021 ಅನ್ನು ಅಂಗೀಕರಿಸಲಾಗಿದೆ. ಮತದಾರರ ಚೀಟಿಗೆ ಹೆಸರು ಸೇರಿಸುವಾಗ ಅಥವಾ ದೃಢೀಕರಣದ ಸಂದರ್ಭದಲ್ಲಿ ಮತದಾರರ ಆಧಾರ್ ಸಂಖ್ಯೆಯನ್ನು ಚುನಾವಣಾ ನೋಂದಣಾಧಿಕಾರಿಯು ಪಡೆದುಕೊಳ್ಳಲು ಈ ಕಾಯ್ದೆಯು ಅವಕಾಶ ಒದಗಿಸುತ್ತದೆ. ಆಧಾರ್ ಮತ್ತು ಮತದಾರರ ಗುರುತು ಚೀಟಿ ಜೋಡಣೆಯು ಚುನಾವಣೆಯ ಸಂದರ್ಭದಲ್ಲಿ ದುರ್ಬಳಕೆ ಆಗಬಹುದು ಎಂದು ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸಿವೆ.

ಎಲ್ಲಾ ವಿವರಗಳ ಕೊಂಡಿ ಆಧಾರ್

'ಮತದಾರರ ವಿವರ, ಫೋನ್ ಸಂಖ್ಯೆ, ಜಾತಿಯ ವಿವರಗಳು ಮತ್ತು ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ವಿವರವು ಸರ್ಕಾರದ ವಿವಿಧ ಡೇಟಾಬೇಸ್‌ಗಳಲ್ಲಿ ಬಿಡಿಬಿಡಿಯಾಗಿ ಲಭ್ಯವಿದೆ. ರಾಜಕೀಯ ಪಕ್ಷಗಳು ಇವುಗಳನ್ನು ಡೇಟಾಬೇಸ್‌ನಿಂದ ಪಡೆದುಕೊಳ್ಳಬಹುದು ಮತ್ತು ಡಾರ್ಕ್‌ವೆಬ್ ಮಾರುಕಟ್ಟೆಯಿಂದಲೂ ಖರೀದಿಸಬಹುದು. ಈ ಎಲ್ಲಾ ಮಾಹಿತಿಗಳು ಬಿಡಿಬಿಡಿಯಾಗಿ ಮಾತ್ರವೇ ಲಭ್ಯವಿದ್ದು, ಒಂದಕ್ಕೊಂದು ಪರಸ್ಪರ ಜೋಡಣೆಯಾಗಿರುವುದಿಲ್ಲ. ಇವಿಷ್ಟೇ ಮಾಹಿತಿಯಿಂದ ಮತದಾರರ ಪೂರ್ಣ ಚಿತ್ರಣ ಪಡೆದುಕೊಳ್ಳಲು ಸಾಧ್ಯವಿಲ್ಲ. ಈ ಎಲ್ಲಾ ವಿವರಗಳನ್ನು ಪರಸ್ಪರ ಜೋಡಿಸುವ ಏಕೈಕ ಕೊಂಡಿ ಆಧಾರ್ ಮಾತ್ರ' ಎನ್ನುತ್ತಾರೆ ದತ್ತಾಂಶ ಮತ್ತು ಖಾಸಗಿತನ ಸಂಶೋಧಕ ಆನಂದ್ ವೆಂಕಟನಾರಾಯಣನ್.

ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳು ಆಧಾರ್ ವಿವರ ನೀಡಬೇಕು ಎಂದು 2018ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದ ಪ್ರಕರಣದಲ್ಲಿ ಆನಂದ್ ನಾರಾಯಣನ್ ಅವರು, ತಜ್ಞ ಸಾಕ್ಷಿಯಾಗಿದ್ದರು.

'ವಿವಿಧ ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸಾರ್ವಜನಿಕರು ನೀಡಿರುವ ಕೆವೈಸಿ (ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ) ದಾಖಲೆಯಲ್ಲಿ ಆಧಾರ್ ಮತ್ತು ಫೋನ್ ಸಂಖ್ಯೆಯ ವಿವರ ಇರುತ್ತದೆ. ಈ ದತ್ತಾಂಶವು ಕಾಳಸಂತೆಯಲ್ಲಿ ಬಿಕರಿಗೆ ಇದೆ. ಸರ್ಕಾರವು ಮತದಾರರ ಗುರುತಿನ ಚೀಟಿಗೆ ಆಧಾರ್ ಅನ್ನು ಜೋಡಿಸಿದ ತಕ್ಷಣ, ಈ ಎಲ್ಲಾ ವಿವರಗಳನ್ನು ಪರಸ್ಪರ ಜೋಡಿಸಬಲ್ಲ ಒಂದು ಕೊಂಡಿಯಾಗಿ ಆಧಾರ್ ಕೆಲಸ ಮಾಡುತ್ತದೆ. ಈ ಆಧಾರ್ ದತ್ತಾಂಶವನ್ನು ಪಡೆದುಕೊಳ್ಳುವ ಪಕ್ಷವು, ಮತದಾರರ ವ್ಯಕ್ತಿತ್ವದ ಸಂಪೂರ್ಣ ಚಿತ್ರವನ್ನು ರಚಿಸಿಕೊಳ್ಳಲು ಸಾಧ್ಯವಾಗುತ್ತದೆ' ಎಂದು ಅವರು ವಿವರಿಸಿದ್ದಾರೆ.

'ಆಧಾರ್ ದತ್ತಾಂಶ ಒಂದು ಸಿಕ್ಕರೆ ಸಾಕು ಮತದಾರರ ಜಾತಿ, ಧರ್ಮ, ವಿಳಾಸ, ಕೌಟುಂಬಿಕ ವಿವರ, ಸರ್ಕಾರದಿಂದ ಪಡೆದ ವಿವಿಧ ಅನುಕೂಲಗಳ ವಿವರ, ಆರ್ಥಿಕ ಸ್ಥಿತಿಗತಿ, ಸಾಮಾಜಿಕ ಜೀವನ ಮತ್ತಿತರ ಎಲ್ಲಾ ವಿವರಗಳು ಲಭ್ಯವಾಗುತ್ತವೆ. ಇದನ್ನು ಬಳಸಿಕೊಂಡು ರಾಜಕೀಯ ಪಕ್ಷಗಳು ಆ ಮತದಾರರ ವ್ಯಕ್ತಿತ್ವದ ಸಂಪೂರ್ಣ ಚಿತ್ರಣ, ಆತನ ರಾಜಕೀಯ ಮತ್ತು ಮತದಾನದ ಆದ್ಯತೆಯ ಅಂದಾಜನ್ನು ಮಾಡಲು ಸಾಧ್ಯವಾಗುತ್ತದೆ. ಈ ವಿವರಗಳನ್ನು ಬಳಸಿಕೊಂಡು ಪ್ರತಿ ಮತಗಟ್ಟೆಯಲ್ಲಿ ಯಾರು ಯಾರಿಗೆ ಮತ ಹಾಕುತ್ತಾರೆ ಎಂಬುದನ್ನು ಕರಾರುವಾಕ್ಕಾಗಿ ಊಹಿಸಲು ಸಾಧ್ಯವಿದೆ. ಅಲ್ಲಿಗೆ ಗೋಪ್ಯ ಮತದಾನದ ಕತೆ ಮುಗಿಯುತ್ತದೆ' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

'ಯಾರು ಯಾರಿಗೆ ಮತ ಹಾಕಲಿದ್ದಾರೆ ಎಂಬುದರ ದತ್ತಾಂಶ ದೊರೆತರೆ, ತಮಗೆ ಮತ ನೀಡದೇ ಇರುವವರನ್ನು ರಾಜಕೀಯ ಪಕ್ಷಗಳು ಮತದಾರರ ಪಟ್ಟಿಯಿಂದ ತೆಗೆದುಹಾಕುವ ಅಪಾಯವೂ ಇದೆ. ಇದನ್ನು ಮತದಾರರ ಪಟ್ಟಿ ಶುದ್ಧೀಕರಣದ ಹೆಸರಿನಲ್ಲಿ ಮಾಡಬಹುದು. ಆದರೆ ಇದು ಆರಂಭವಾದರೆ, ಚುನಾವಣಾ ಆಯೋಗ ಮತ್ತು ಆಧಾರ್ ಪ್ರಾಧಿಕಾರವೂ ಇದನ್ನು ತಡೆಯಲು ಸಾಧ್ಯವಿಲ್ಲ' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

'ಸರ್ಕಾರ ಈಗ ತಂದಿರುವ ಹೊಸ ಕಾನೂನಿನ ಪ್ರಕಾರ, ಆಧಾರ್ ಇಲ್ಲ ಎಂಬ ಕಾರಣಕ್ಕೆ ಮತದಾರರ ಪಟ್ಟಿಯಿಂದ ಯಾರ ಹೆಸರನ್ನೂ ತೆಗೆದುಹಾಕಲು ಅವಕಾಶವಿಲ್ಲ. ಆದರೆ ಅಂತಹವರು ಸೂಕ್ತ ದಾಖಲೆಯನ್ನು ಸಲ್ಲಿಸಿದರಷ್ಟೇ ಈ ವಿನಾಯಿತಿ ದೊರೆಯಲಿದೆ. ಗಮನಿಸಬೇಕಾದ ಅಂಶವೆಂದರೆ ಆ ಸೂಕ್ತ ದಾಖಲೆ ಯಾವುದು ಮತ್ತು ಅದರ ದೃಢೀಕರಣ ವಿಧಾನ ಏನು ಎಂಬುದನ್ನು ಸರ್ಕಾರ ಇನ್ನಷ್ಟೇ ನಿರ್ಧರಿಸಬೇಕಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದರೆ, ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ ನೈಜ ಮತದಾರರ ಹೆಸರನ್ನೂ ಪಟ್ಟಿಯಿಂದ ತೆಗೆದುಹಾಕಿದ ರೀತಿಯಲ್ಲಿಯೇ ಬೇರೆಡೆಯೂ ಆಗಬಹುದು' ಎನ್ನುತ್ತಾರೆ ಸುಪ್ರೀಂ ಕೋರ್ಟ್‌ನ ವಕೀಲೆ ವೃಂದಾ ಭಂಡಾರಿ.

ಪುದುಚೇರಿಯಲ್ಲಿ ಏನಾಯಿತು?

ಪುದುಚೇರಿಯ ಬಿಜೆಪಿ ಘಟಕವು ಜನರ ಅನುಮತಿ ಪಡೆಯದೇ ಅವರ ಮೊಬೈಲ್ ಸಂಖ್ಯೆ, ಆಧಾರ್ ಸಂಖ್ಯೆ ಮೊದಲಾದ ವೈಯಕ್ತಿಕ ಮಾಹಿತಿಯನ್ನು ಪಡೆಯುತ್ತಿದೆ ಎಂದು ಆರೋಪಿಸಿ ಕಾರ್ಯಕರ್ತ ಆನಂದ್ ಎಂಬುವರು ಮದ್ರಾಸ್ ಹೈಕೋರ್ಟ್‌ನಲ್ಲಿ ಮಾರ್ಚ್ 18ರಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಆನಂದ್ ಅವರು ತಮ್ಮ ಅರ್ಜಿಯಲ್ಲಿ ಉಲ್ಲೇಖಿಸಿರುವ ಪ್ರಕಾರ, ಪುದುಚೇರಿಯ 30 ವಿಧಾನಸಭಾ ಕ್ಷೇತ್ರಗಳ ಸುಮಾರು 900 ಮತಗಟ್ಟೆಗಳಿಗೂ ಬಿಜೆಪಿ ಪ್ರತ್ಯೇಕ ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನು ಸೃಷ್ಟಿಸಿತ್ತು. ಮತದಾರರ ಆಧಾರ್ ಸಂಖ್ಯೆಯ ಜತೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆಗೆ ವಾಟ್ಸ್‌ಆ್ಯಪ್ ಗ್ರೂಪ್ ಸೇರುವಂತೆ ಆಹ್ವಾನ ಬರುತ್ತಿತ್ತು. 'ವ್ಯಕ್ತಿಯೊಬ್ಬರು ಎರಡು ಮೊಬೈಲ್ ಸಂಖ್ಯೆಗಳನ್ನು ಉಪಯೋಗಿಸುತ್ತಿದ್ದರೆ, ಆಧಾರ್ ಜೊತೆ ಜೋಡಣೆಯಾಗಿರುವ ಸಂಖ್ಯೆಗೆ ಮಾತ್ರ ವಾಟ್ಸ್‌ಆ್ಯಪ್ ಗ್ರೂಪ್ ಸೇರುವಂತೆ ಆಹ್ವಾನ ಬರುತ್ತಿತ್ತೇ ವಿನಾ, ಜೋಡಣೆಯಾಗದ ಮೊಬೈಲ್ ಸಂಖ್ಯೆಗೆ ಅಲ್ಲ' ಎಂದು ಅವರು ಪ್ರತಿಪಾದಿಸಿದ್ದಾರೆ.

ವಾಸಸ್ಥಳ ಬದಲಾಯಿಸಿದರೂ, ಪ್ರಸ್ತುತ ವಾಸವಾಗಿರುವ ವಿಧಾನಸಭಾ ಕ್ಷೇತ್ರದ ಬಿಜೆಪಿ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರುವಂತೆ ಆಹ್ವಾನಿಸುವ ಸಂದೇಶಗಳು ಬರುವ ವಿದ್ಯಮಾನವೂ ಪುದುಚೇರಿಯಲ್ಲಿ ಕಂಡುಬಂದಿದೆ. 'ಮತದಾರ ತನ್ನ ಆಧಾರ್ ಕಾರ್ಡ್‌ನಲ್ಲಿ ಮನೆಯ ವಿಳಾಸ ತಿದ್ದುಪಡಿ ಮಾಡಿದಾಗ, ಬಿಜೆಪಿ ಈ ವಿಳಾಸ ಬಳಸಿಕೊಂಡಿರುವ ಸಾಧ್ಯತೆ ಇದೆ' ಎಂದು ಹೇಳಿದ್ದಾರೆ.

ಕರೆ ಮಾಡಿ ಜನರನ್ನು ಸಂಪರ್ಕಿಸುವ ಯತ್ನಗಳು ನಡೆದಿವೆ. 'ಇಂತಹ ಒಂದು ಕರೆಯನ್ನು ನಾನು ಸ್ವೀಕರಿಸಿದೆ. ಕರೆ ಮಾಡಿದವರು ನನ್ನ ಹೆಸರು, ನನ್ನ ಮತಗಟ್ಟೆಯ ಮಾಹಿತಿ ನೀಡಿದರು. ಪಕ್ಷವು ಪುದುಚೇರಿ ನಿವಾಸಿಗಳ ಮೊಬೈಲ್ ಸಂಖ್ಯೆಗಳನ್ನು ಪಡೆದುಕೊಂಡಿರುವುದು ಸ್ಪಷ್ಟ. ಈ ಸಂಖ್ಯೆಗಳನ್ನು ಬಳಸಿಕೊಂಡು ಗೂಗಲ್ ಪೇ ಮೊದಲಾದ ಆ್ಯಪ್‌ಗಳ ಮೂಲಕ ಮತದಾರರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡುವ ಅವಕಾಶವೂ ಸಿಕ್ಕಂತಾಗುತ್ತದೆ. ಇಂತಹ ಹಣ ವರ್ಗಾವಣೆಗಳನ್ನು ಪರೀಕ್ಷಿಸುವ ಯಾವ ವ್ಯವಸ್ಥೆಯೂ ಸದ್ಯಕ್ಕೆ ಇಲ್ಲದ ಕಾರಣ, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಎಂಬುದು ಅಸಂಬದ್ಧ ಎನಿಸುತ್ತದೆ' ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ತನಿಖೆ ಏನು ಹೇಳುತ್ತದೆ?

ಕೋರ್ಟ್ ನಿರ್ದೇಶನದ ಅನ್ವಯ, ತನಿಖೆ ನಡೆಸಲು ಪುದುಚೇರಿ ಪೊಲೀಸರಿಗೆ ಚುನಾವಣಾ ಆಯೋಗ ಕೇಳಿಕೊಂಡಿತ್ತು. ಹಾಫ್ ಸರ್ಕಲ್ ಮೀಡಿಯಾ ಪ್ರೈ.ಲಿ. ಸಂಸ್ಥೆಗೆ ಎಸ್‌ಎಂಎಸ್ ಕಳುಹಿಸುವ ಜವಾಬ್ದಾರಿಯನ್ನು ಬಿಜೆಪಿ ನೀಡಿತ್ತು ಎಂದು ರಾಜ್ಯದ ಸೈಬರ್ ಕ್ರೈಂ ವಿಭಾಗದ ಆರಂಭಿಕ ತನಿಖಾ ಮಾಹಿತಿ ಹೇಳುತ್ತದೆ. ಅಭಿಯಾನಕ್ಕಾಗಿ ಮಾಡಿದ ವೆಚ್ಚ ಎಷ್ಟು ಎಂಬ ಮಾಹಿತಿಯನ್ನು ಬಿಜೆಪಿ ನೀಡಿಲ್ಲ. ಇದು ಚುನಾವಣಾ ನಿಯಮಗಳ ಉಲ್ಲಂಘನೆ.

ಪುದುಚೇರಿಯಲ್ಲಿ ಬಿಜೆಪಿ ಪ್ರಚಾರಕ್ಕೆ ಆಯ್ದುಕೊಂಡ ವಿಧಾನದಲ್ಲಿ 'ಗಂಭೀರ ಉಲ್ಲಂಘನೆ' ಆಗಿರುವುದನ್ನು ಕೋರ್ಟ್ ಗುರುತಿಸಿದೆ. ಈ ಸಂಬಂಧ ತನಿಖೆ ನಡೆಸಿ ಆರು ವಾರದೊಳಗೆ ಉತ್ತರ ನೀಡುವಂತೆ ಆಯೋಗ ಹಾಗೂ ಯುಐಡಿಎಐಗೆ ಕೋರ್ಟ್ ಸೂಚಿಸಿತ್ತು. ಆದರೆ ಇಲ್ಲಿಯವರೆಗೆ ಈ ಪ್ರಕರಣವು ವಿಚಾರಣೆಗೆ ಬಂದಿಲ್ಲ. ಈ ಆದೇಶ ನೀಡಿದ ನ್ಯಾಯಮೂರ್ತಿಯನ್ನು ಮದ್ರಾಸ್ ಹೈಕೋರ್ಟ್‌ನಿಂದ ವರ್ಗಾವಣೆ ಮಾಡಲಾಗಿದೆ.

ಬಿಜೆಪಿ ಪ್ರತಿಪಾದನೆ

ಮತದಾರರ ಮಾಹಿತಿ ಪಡೆದಿರುವುದನ್ನು ಬಿಜೆಪಿ ನಿರಾಕರಿಸಿಲ್ಲ. 'ಮತದಾರರನ್ನು ಗುರುತಿಸಲು ಅನುಕೂಲವಾಗಲಿ ಎಂಬ ಕಾರಣಕ್ಕೆ ಆಯಾ ವಿಧಾನಸಭಾ ಕ್ಷೇತ್ರದ ಹೆಸರಿನಲ್ಲಿ ವಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸಲಾಗಿದೆ' ಎಂದು ಪಕ್ಷದ ಪುದುಚೇರಿ ಘಟಕದ ಅಧ್ಯಕ್ಷ ವಿ. ಸಾಯಿನಾಥನ್ ಅವರು ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ. ಉಳಿದ ಆರೋಪಗಳನ್ನು ಬಿಜೆಪಿ ನಿರಾಕರಿಸಿದೆ.

'ಕ್ಷೇತ್ರಕಾರ್ಯದ ವೇಳೆ ಪಕ್ಷದ ಕಾರ್ಯಕರ್ತರು ಮತದಾರರಿಂದ ಸಂಗ್ರಹಿಸಿದ ಹಾಗೂ ಡೇಟಾಬೇಸ್‌ನಲ್ಲಿ ಸಿಗುವ ಮಾಹಿತಿ ಆಧರಿಸಿ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಲಾಗಿದೆ. ಎಸ್‌ಎಂಎಸ್ ಕಳುಹಿಸಲು ಉಪಯೋಗಿಸಿರುವ ಮೊಬೈಲ್ ಸಂಖ್ಯೆಗಳನ್ನು ಬೇರಾವ ಮೂಲದಿಂದಲೂ ಪಡೆದಿಲ್ಲ' ಎಂಬುದನ್ನು ಬಿಜೆಪಿ ಸ್ಪಷ್ಟಪಡಿಸಿದೆ.

ಮತದಾರರ ಹೆಸರೇ ಮಾಯ

ಆಂಧ್ರಪ್ರದೇಶದಲ್ಲಿ ಈ ಹಗರಣ ಮತ್ತೊಂದು ಹಂತಕ್ಕೆ ಹೋಗಿದೆ. 'ತೆಲುಗುದೇಶಂ ಪಕ್ಷದ ಅಭಿಯಾನವು ಆಧಾರ್ ಸಂಖ್ಯೆ ಪಡೆಯಲಷ್ಟೇ ಸೀಮಿತವಾಗಿಲ್ಲ. ತಮ್ಮ ಪಕ್ಷದ ಪರ ಇಲ್ಲದ ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಿರುವ ಸಾಧ್ಯತೆಯೂ ಇದೆ' ಎಂದು ತೆಲಂಗಾಣ ಪೊಲೀಸರು ಹೇಳಿದ್ದರು.

ಮತಚೀಟಿಗೆ ಆಧಾರ್ ಸಂಖ್ಯೆ ಜೋಡಿಸುವ ಯೋಜನೆಗೆ ಆಯ್ಕೆಯಾಗಿದ್ದ ಆಂಧ್ರಪ್ರದೇಶದಲ್ಲಿ ಮೊದಲ ವರ್ಷವೇ 25 ಲಕ್ಷ ಜನರ ಹೆಸರು ಮತದಾರರ ಪಟ್ಟಿಯಿಂದ ಬಿಟ್ಟುಹೋಗಿತ್ತು. ಟಿಡಿಪಿ ರಚಿಸಿದ್ದ 'ಸೇವಾಮಿತ್ರ' ಆ್ಯಪ್‌ನಲ್ಲಿ ಮತದಾರರ ಮೊಬೈಲ್ ಸಂಖ್ಯೆ, ಕುಟುಂಬದ ವಿವರ, ಅವರ ರಾಜಕೀಯ ಒಲವು ಏನು ಎಂಬ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಆರೋಪಿಸಿತ್ತು. ಪಕ್ಷದ ದೂರಿನ ಮೇರೆಗೆ ತೆಲಂಗಾಣ ಪೊಲೀಸರು ಆ್ಯಪ್ ಅಭಿವೃದ್ಧಿಪಡಿಸಿದ್ದ ಐಟಿ ಗ್ರಿಡ್ಸ್ ಇಂಡಿಯಾ ಪ್ರೈ.ಲಿ. ಸಂಸ್ಥೆಯಲ್ಲಿ ಶೋಧ ನಡೆಸಿದ್ದರು.

ಜಾಣಕುರುಡು

ಆಂಧ್ರ ಪ್ರದೇಶ ಪ್ರಕರಣ ಬೆಳಕಿಗೆ ಬಂದು ಎರಡು ವರ್ಷಗಳೇ ಕಳೆದಿವೆ. ಆದರೆ ತನಿಖೆ ಪೂರ್ಣವಾಗಿಲ್ಲ. ಚುನಾವಣಾ ಆಯೋಗ ಮತ್ತು ಯುಐಡಿಎಐ ಯಾವುದೇ ಕ್ರಮ ತೆಗೆದುಕೊಳ್ಳದಿರುವುದೇ ಇದಕ್ಕೆ ಕಾರಣ.

ಪುದುಚೇರಿ ಪ್ರಕರಣದಲ್ಲಿ ಆಯೋಗವು ಆರಂಭದಲ್ಲಿ ಬೇರೆಯವರ ಮೇಲೆ ಹೊಣೆ ವರ್ಗಾಯಿಸಲು ಯತ್ನಿಸಿತ್ತು. ಆದರೆ, ಮದ್ರಾಸ್ ಹೈಕೋರ್ಟ್ 2021ರ ಏಪ್ರಿಲ್ 1ರ ವಿಚಾರಣೆಯಲ್ಲಿ ಛೀಮಾರಿ ಹಾಕಿದ ನಂತರ ಕೆಲವು ಕ್ರಮಗಳನ್ನು ತೆಗೆದುಕೊಂಡಿತು. 'ನಮ್ಮ ಪ್ರಾಧಿಕಾರದಿಂದ ಯಾವುದೇ ದತ್ತಾಂಶವನ್ನು, ಯಾರಿಗೂ ನೀಡಿಲ್ಲ' ಎಂದು ಯುಐಡಿಎಐ ಕೈತೊಳೆದುಕೊಂಡಿತು. ಆಧಾರ್ ಪ್ರಾಧಿಕಾರವು ಆಂಧ್ರಪ್ರದೇಶದ ಪ್ರಕರಣದಲ್ಲಿ ಯಾವುದೇ ಹೇಳಿಕೆ ನೀಡಿಲ್ಲ. ಆದರೆ ಆಧಾರ್ ಮಾಹಿತಿ ದುರ್ಬಳಕೆ ವಿರುದ್ಧ ಎಫ್‌ಐಆರ್ ದಾಖಲಿಸಿದೆ. 'ಆಧಾರ್ ಪ್ರಾಧಿಕಾರದ ಕೇಂದ್ರೀಕೃತ ಡೇಟಾಬೇಸ್, ಸೆಂಟ್ರಲ್ ಐಡೆಂಟಿಟೀಸ್ ಡೇಟಾ ರೆಪೋಸಿಟರಿ ಮತ್ತು ರಾಜ್ಯ ನಿವಾಸಿ ದತ್ತಾಂಶ ಕೇಂದ್ರಗಳಿಂದ ಈ ದತ್ತಾಂಶಗಳನ್ನು ಕಳವು ಮಾಡಿರುವ ಸಾಧ್ಯತೆ ಇದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಿತ್ತು.

ಎಫ್‌ಐಆರ್‌ನಲ್ಲಿನ ಮಾಹಿತಿಗಳ ಬಗ್ಗೆ ಮಾಧ್ಯಮಗಳು ವರದಿ ಮಾಡಿದ ಬೆನ್ನಲ್ಲೇ ಆಧಾರ್ ಪ್ರಾಧಿಕಾರವು, 'ನಮ್ಮ ಸರ್ವರ್‌ಗಳಿಂದ ಈ ದತ್ತಾಂಶಗಳನ್ನು ಕಳವು ಮಾಡಿಲ್ಲ. ಬದಲಿಗೆ ರಾಜಕೀಯ ಪಕ್ಷಗಳು ನೇರವಾಗಿ ಫಲಾನುಭವಿಗಳಿಂದಲೇ ಈ ವಿವರ ಪಡೆದುಕೊಂಡಿವೆ' ಎಂದು ಹೇಳಿಕೆ ನೀಡಿತು. ಆದರೆ ತಾನೇ ದಾಖಲಿಸಿದ್ದ ಎಫ್‌ಐಆರ್‌ನಲ್ಲಿರುವ ಹೇಳಿಕೆಯನ್ನೂ ಆಧಾರ್ ಪ್ರಾಧಿಕಾರ ಬದಲಿಸಿದೆಯೇ ಎಂಬುದು ಬಹಿರಂಗವಾಗಿಲ್ಲ.

* ರಿಪೋರ್ಟರ್ಸ್ ಕಲೆಕ್ಟಿವ್ ವರದಿ. ವರದಿಯ ಇಂಗ್ಲಿಷ್ ಆವೃತ್ತಿ ಆರ್ಟಿಕಲ್–14.ಕಾಂನಲ್ಲಿ ಲಭ್ಯವಿದೆ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 9

ಕೈಲಾಸ ಸೇರಿದ ಚಂಚುಲೆ

'ಚಂಚುಲೆಯು ಶಿವಸಾನ್ನಿಧ್ಯವನ್ನು ಹೊಂದಿದ ನಂತರ ಅವಳು ಅಲ್ಲಿ ಏನು ಮಾಡಿದಳು? ಅವಳ ಗಂಡ ಬಿಂದುಗನ ಗತಿ ಏನಾಯಿತು? ಈ ವಿಷಯವನ್ನೀಗ ಹೇಳು' ಎಂದು ಶೌನಕಮುನಿಯು ಸೂತಪುರಾಣಿಕನನ್ನು ಕಾತರದಿಂದ ಕೇಳುತ್ತಾನೆ. ಆಗ ಸೂತಮುನಿ, ಚಂಚುಲೆ ಕೈಲಾಸ ಸೇರಿದ ನಂತರ ತನ್ನ ಪತಿ ಬಿಂದುಗನನ್ನು ಪಾರ್ವತಿ ಮಾತೆಯಿಂದ ಸದ್ಗತಿ ಕೊಡಿಸಿದ ಕಥೆಯನ್ನ ಹೇಳತೊಡಗುತ್ತಾನೆ.

ಕೈಲಾಸಕ್ಕೆ ಬಂದ ಚಂಚುಲೆಗೆ ದೇವಲೋಕದವರ ರೂಪವೂ ಶರೀರವೂ ಬಂತು. ಕೈಲಾಸದ ನೆಲ ಸ್ಪರ್ಶಿಸುತ್ತಿದ್ದಂತೆ ದಿವ್ಯವಾದ ಅಲಂಕಾರಗಳಿಂದ ದೇವತೆಯಂತೆ ಚಂಚುಲೆ ಶೋಭಿಸತೊಡಗಿದಳು. ಕೈಲಾಸದಲ್ಲಿ ತ್ರಿಲೋಚನನಾದ ಈಶ್ವರನನ್ನು ವಿಷ್ಣು, ಬ್ರಹ್ಮ, ಇಂದ್ರನೇ ಮೊದಲಾದ ದೇವತೆಗಳು ಮತ್ತು ಗಣೇಶ, ಭೃಂಗಿ, ನಂದಿ, ವೀರಭದ್ರ ಮುಂತಾದ ಗಣಗಳು ಭಕ್ತಿಯಿಂದ ಆರಾಧಿಸುತ್ತಿದ್ದುದನ್ನು ಕಂಡಳು. ಶಿವನ ಎಡಭಾಗದಲ್ಲಿ ಮಿಂಚಿನಂತೆ ಪ್ರಕಾಶಿಸುತ್ತಿದ್ದ ಜಗನ್ಮಾತೆ ಗೌರಿ ಕುಳಿತಿದ್ದಳು. ಸಮುದ್ರಮಂಥನ ಸಂದರ್ಭದಲ್ಲಿ ಉದ್ಭವಿಸಿದ ವಿಷವನ್ನು ಕುಡಿದಿದ್ದರಿಂದ ಶಿವನ ಕತ್ತು ಕಪ್ಪಾಗಿತ್ತು. ಅವನ ದೇಹಕ್ಕೆ ವಿಭೂತಿ ಲೇಪಿಸಿದ್ದರಿಂದ ಬಿಳುಪಾಗಿತ್ತು. ಕೈಲಾಸದಲ್ಲಿ ಇಂಥ ದೃಶ್ಯವನ್ನು ನೋಡಿ ಚಂಚುಲೆಯು ಸಂತೋಷದಿಂದ ರೋಮಾಂಚಿತಳಾದಳು. ಅವಳು ಶಿವ-ಪಾರ್ವತಿಯರನ್ನು ಪ್ರತ್ಯಕ್ಷವಾಗಿ ನೋಡಿದ ಸಂತೋಷ ಸಂಭ್ರಮದಿಂದ ಭಾಷ್ಪಾಂಜಲಿ ಸುರಿಸುತ್ತಾ, ನಮಸ್ಕರಿಸಿದಳು.

ತಮ್ಮ ಬಳಿ ಬಂದು ನಮಸ್ಕರಿಸುತ್ತಿದ್ದ ಚಂಚುಲೆಯನ್ನು ಪಾರ್ವತಿ ಮತ್ತು ಈಶ್ವರ ದಯಾಪೂರಿತ ದೃಷ್ಟಿಯಿಂದ ನೋಡಿದರು. ಅನಂತರ ಪಾರ್ವತಿಯು ಚಂಚುಲೆಯನ್ನು ಪ್ರೀತಿಯಿಂದ ತನ್ನ ಸಖಿಯನ್ನಾಗಿಮಾಡಿಕೊಂಡಳು. ಇದರಿಂದ ಚಂಚುಲೆ ಕೈಲಾಸದಲ್ಲಿ ದಿವ್ಯವಾದ ಆದರಾನುಭೂತಿ ಪಡೆದಳು. ಜ್ಯೋತಿರ್ಮಯವೂ ಆನಂದಮಯವೂ ಶಾಶ್ವತವೂ ಆದ ಕೈಲಾಸದಲ್ಲಿ ಚಂಚುಲೆಯು ಶಾಶ್ವತವಾದ ಸುಖವನ್ನನುಭವಿಸುತ್ತಾ ಇದ್ದಳು. ಹೀಗಿರುವಾಗ ಒಂದು ದಿನ ಚಂಚುಲೆ ಕೈಲಾಸ ಪರ್ವತದಲ್ಲಿದ್ದ ಪಾರ್ವತಿ ಬಳಿ ಹೋಗಿ ಪರಮಾನಂದದಿಂದ ಭಾವಪರವಶಳಾಗಿ ಭಕ್ತಿಯಿಂದ ಸ್ತೋತ್ರಮಾಡಿದಳು. ಸಂತುಷ್ಟಳಾದ ಪಾರ್ವತಿ 'ಎಲೈ ಸಖಿ ಚಂಚುಲೆಯೇ, ನಿನ್ನ ಸ್ತುತಿಯನ್ನು ಮೆಚ್ಚಿದ್ದೇನೆ. ನಿನಗೆ ಬೇಕಾದ ವರವನ್ನು ಕೇಳು, ಕೊಡುವೆನು' ಎಂದಳು. ಆಗ ಚಂಚುಲೆಯು ಆನಂದಾಶ್ರು ಸುರಿಸುತ್ತಾ, 'ನನ್ನ ಪತಿ ಬಿಂದುಗ ಈಗ ಎಲ್ಲಿರುವನು? ನನ್ನ ಪತಿಯೊಡನೆ ನಾನು ಸೇರುವಂತೆ ನನಗೆ ಅನುಗ್ರಹಮಾಡು' ಎಂದು ಕೋರಿದಳು.

ಆಗ ಜಗನ್ಮಾತೆ ಪಾರ್ವತಿ 'ಮಗಳೇ ಚಂಚುಲೆ, ನಿನ್ನ ಗಂಡ ಬಿಂದುಗ ಮಹಾಪಾಪಿಯಾಗಿದ್ದರಿಂದ ಬಹುಕಾಲ ನರಕದಲ್ಲಿ ಶಿಕ್ಷೆ ಅನುಭವಿಸಿದ ನಂತರ, ಅವನೀಗ ವಿಂಧ್ಯಾರಣ್ಯದಲ್ಲಿ ಪಿಶಾಚಿಯ ಜನ್ಮ ಪಡೆದಿದ್ದಾನೆ. ಪಿಶಾಚಿಯಾಗಿ ನಾನಾ ದುಃಖಗಳನ್ನು ಅನುಭವಿಸುತಾ, ವಿಂಧ್ಯಾರಣ್ಯದಲ್ಲಿ ಗಾಳಿಯನ್ನೇ ಆಹಾರಮಾಡಿಕೊಂಡು ಅಲೆಯುತ್ತಿದ್ದಾನೆ' ಎಂದು ತಿಳಿಸಿದಳು.

ಜಗನ್ಮಾತೆ ಗೌರಿ ಹೇಳಿದ್ದನ್ನು ಕೇಳಿ ಚಂಚುಲೆಗೆ ತುಂಬಾ ದುಃಖವಾಗುತ್ತದೆ. ತನ್ನ ಪತಿ ಬಿಂದುಗನಿಗೆ ಬಂದ ಘನಘೋರ ಸ್ಥಿತಿಯನ್ನು ನೆನೆದು ರೋದಿಸುತ್ತಾಳೆ. ಸುಮಾರು ಹೊತ್ತು ಗೋಳಾಡಿದ ಚಂಚುಲೆ, ನಂತರ ತನ್ನ ಮನಸ್ಸನ್ನು ಸಮಾಧಾನಮಾಡಿಕೊಂಡು 'ಕೆಟ್ಟ ಬುದ್ಧಿಯಿಂದ ಪಾಪಿಯಾದ ನನ್ನ ಪತಿ ಪಿಶಾಚಿಯಂತೆ ಅಲೆಯುತ್ತಿರುವುದನ್ನು ಕೇಳಿ ಬಹಳ ದುಃಖವಾಗಿದೆ. ಪತಿಯ ಪಾಪ ಪರಿಹಾರದ ಮಾರ್ಗ ತಿಳಿಸು ತಾಯಿ. ನಾನು ಪತಿಯಿಂದ ದೂರ ಇರಲಾರೆ, ಪತಿಯೊಂದಿಗೆ ಮತ್ತೆ ಸೇರುವಂತೆ ಮಾಡು' ಅಂತ ಪಾರ್ವತಿಯನ್ನು ಅಂಗಲಾಚಿ ಬೇಡಿಕೊಳ್ಳುತ್ತಾಳೆ. ಚಂಚುಲೆಯ ಮಾತನ್ನು ಕೇಳಿ ಭಕ್ತವತ್ಸಲೆಯಾದ ಪಾರ್ವತಿ ಪ್ರಸನ್ನಳಾಗಿ 'ಚಂಚುಲೆ, ಗಂಡನ ಮೇಲೆ ನೀನು ಇಟ್ಟಿರುವ ಪ್ರೀತಿ ಕಂಡು ನನಗೆ ಸಂತೋಷವಾಗಿದೆ. ಆದ್ದರಿಂದ ನಿನ್ನ ಪತಿಯ ಪಾಪ ವಿಮೋಚನೆಗೆ ಸರಳವಾದ ಮಾರ್ಗ ತಿಳಿಸುತ್ತೇನೆ. ಪವಿತ್ರವಾದ ಶಿವಕಥೆಯನ್ನು ಕೇಳಿ ನೀನು ಪುನೀತಳಾದಂತೆ, ನಿನ್ನ ಗಂಡ ಸಹ ಶಿವಪುರಾಣ ಕೇಳಿದರೆ, ಅವನಿಗೆ ಬಂದಿರುವ ಪಿಶಾಚಜನ್ಮ ಹೋಗಿ ಸದ್ಗತಿ ಪಡೆಯುತ್ತಾನೆ. ಆಗ ಅವನು ಕೈಲಾಸಕ್ಕೆ ಬಂದು, ನಿನ್ನ ಸೇರುತ್ತಾನೆ' ಅಂತ ಪಾರ್ವತಿದೇವಿ ಪಾಪ ಪರಿಹಾರದ ಮಾರ್ಗ ತಿಳಿಸುತ್ತಾಳೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಆನಂದದ ಲೀಲೆ

ಶಶ್ವದ್ವಿಕಾಸನ ಹ್ರಾಸನ ಕ್ರಮಗಳಿಂ |
ವಿಶ್ವದಲಿ ನರ್ತಿಸುತೆ ಪೌರುಷೋನ್ನತಿಯೊಳ್ ||
ಸ್ವಸ್ವರೂಪವನರಸುವಾಟ ಪರಚೇತನದ |
ಹೃಷ್ಯದ್ವಿಲಾಸವೆಲೊ – ಮಂಕುತಿಮ್ಮ || 531 ||

ಪದ-ಅರ್ಥ: ಶಶ್ವದ್ವಿಕಾಸನ = ಶಶ್ವತ್ (ಶಾಶ್ವತವಾದ) + ವಿಕಾಸನ(ಅರಳುವಿಕೆ), ಹ್ರಾಸನ = ಕುಗ್ಗುವ, ಮುಚ್ಚಿಕೊಳ್ಳುವ, ಪುರುಷೋನ್ನತಿ = ಮನುಷ್ಯನ ಉನ್ನತಿ, ಸ್ವಸ್ವರೂಪವನರಸುವಾಟ = ಸ್ವಸ್ವರೂಪವನು(ತನ್ನ ನಿಜರೂಪವನ್ನು) + ಅರಸುವ(ಹುಡುಕುವ) + ಆಟ. ಹೃಷ್ಯದ್ವಿಲಾಸ = ಹೃಷ್ಯತ್ (ಆನಂದದ) + ವಿಲಾಸ(ಕ್ರೀಡೆ, ಸಂಭ್ರಮ).

ವಾಚ್ಯಾರ್ಥ: ಶಾಶ್ವತವಾದ ಶಕ್ತಿಯೊಂದು, ವಿಕಸನ ಮತ್ತು ಆಕುಂಚನದ ಕ್ರಿಯೆಗಳಿಂದ ಪ್ರಪಂಚದಲ್ಲಿ ನರ್ತಿಸುತ್ತ, ಮನುಷ್ಯನ ಉನ್ನತಿಯಲ್ಲಿ ತನ್ನ ನಿಜಸ್ವರೂಪವನ್ನು ಹುಡುಕಿಕೊಳ್ಳುವ ಆಟವೇ ಪರಚೇತನದ ಆನಂದದ ಸಂಭ್ರಮ.

ವಿವರಣೆ: ಜಗತ್ತಿನ ಮೂಲ ಸ್ವಭಾವ ಆವರ್ತನಶೀಲತೆ. ಇಡೀ ವಿಶ್ವಚರಿತ್ರೆಯೇ ಅದರ ಆಕುಂಚನ ಹಾಗೂ ವಿಸ್ತರಣದ ಕಥೆ. ಒಂದು ಪುಟ್ಟ ಬೀಜದಿಂದ ಹುಟ್ಟಿದ ಸಸಿ ಬೃಹತ್ ಮರವಾಗಿ ಸಂಭ್ರಮಿಸುತ್ತದೆ. ಒಂದು ದಿನ ಅದು ಮತ್ತೆ ಬೀಜದಲ್ಲಿಯೇ ಪರ್ಯಾವಸನವಾಗುತ್ತದೆ. ಮನುಷ್ಯ ದೇಹದಲ್ಲೂ ಅದೇ ಆವರ್ತತೆ. ಬಾಲ್ಯ, ಯೌವನ, ವೃದ್ಧಾಪ್ಯ ನಂತರ ಸಾವು. ಸಾವು ಮತ್ತೊಂದು ಹುಟ್ಟಿಗೆ ಬೀಜ. ಇದು ಜೀವನ ಕಾಲಚಕ್ರ.

ಈ ಪ್ರಪಂಚ, ಗ್ರಹ, ತಾರೆಗಳು ಸೂರ್ಯ ಒಂದು ದಿನ ಸೃಷ್ಟಿಯಾಗಿವೆಯೆಂದರೆ, ಅವು ಕಾಲಚಕ್ರದಲ್ಲಿ ಸಿಲುಕಿವೆ ಎಂದೇ ಅರ್ಥ. ಅವು ಒಂದು ದಿನ ಅಳಿದು ಮರೆಯಾಗಲೇಬೇಕು. ಅದೇ ಜಗತ್ಪ್ರಳಯ ಆನಂತರ ಮತ್ತೆ ಹುಟ್ಟು, ಬೆಳವಣಿಗೆ, ಸಾವು. ಈ ಚಕ್ರವನ್ನು ಯಾವ ಶಕ್ತಿಯೂ ನಿಲ್ಲಿಸಲು ಸಾಧ್ಯವಿಲ್ಲ. ರೋಮ್ ಸಾಮ್ರಾಜ್ಯ ತಲೆ ಎತ್ತಿತು. ಪ್ರಚಂಡ ಶಕ್ತಿಯಾಗಿ ಬೆಳಗಿ ಪ್ರಪಂಚದ ಕಣ್ಣು ಕುಕ್ಕಿತು. ಮುಂದೆ ಹೇಳ ಹೆಸರಿಲ್ಲದೆ ಮರೆಯಾಯಿತು. ಈಗ ಅಲ್ಲಿ ಆ ಸಮೃದ್ಧ ಸಾಮ್ರಾಜ್ಯದ ನೆನಪಿನಲ್ಲಿ ಕಟ್ಟಡಗಳು ಪ್ರವಾಸಿಗರನ್ನು ಸೆಳೆಯುವ ಪಳೆಯುಳಿಕೆಗಳಾಗಿ ನಿಂತಿವೆ. ಎಷ್ಟೊಂದು ಜನ ಅವತಾರಿಗಳು ಬಂದರು, ತಮ್ಮ ಧರ್ಮದ ಸಿದ್ಧಾಂತಗಳನ್ನು ಪಸರಿಸಿದರು. ಕೊನೆಗೆ ಒಬ್ಬರೂ ನೆಲೆ ನಿಲ್ಲದೆ ಕಣ್ಮರೆಯಾದರು. ಹೀಗೆ ಆವರ್ತನಶೀಲವಾದ ಪ್ರಪಂಚವನ್ನು ನಿಗ್ರಹಿಸುವ ಶಕ್ತಿಯೊಂದಿದೆಯಲ್ಲ! ಅದು ಪರಿವರ್ತನೆಗೆ ನಿಲುಕದ ವಸ್ತು. ಇದೊಂದು ವಿಶೇಷ. ಸದಾ ಪರಿವರ್ತನಶೀಲ ಪ್ರಪಂಚಕ್ಕೆ ಮಧ್ಯದಲ್ಲಿ, ಅದಕ್ಕೆ ಕಾರಣನಾಗಿ ಅಪರಿವರ್ತನೀಯ ಭಗವಂತ ಇದ್ದಾನೆ. ಅವನನ್ನು ಗುರುತಿಸುವುದು ಸಾಧನೆಗಳಿಂದಲೇ. ತಾನು ಒಂದು ದಿನ ಇಲ್ಲವಾಗುತ್ತೇನೆ ಎಂದು ತಿಳಿದೂ ಸಾಧನೆಯ ಬೆನ್ನು ಹತ್ತಿ ಸಾಧಿಸುವುದು ಪುರುಷೋನ್ನತಿ. ಹಾಗಾಗಿರದಿದ್ದರೆ ಪ್ರಪಂಚ ಇಷ್ಟು ಬೃಹತ್ತಾಗಿ, ಸಮೃದ್ಧವಾಗಿ ಬೆಳೆಯುತ್ತಿತ್ತೇ?

ರೋಮ್ ಸಾಮ್ರಾಜ್ಯ ಬಿದ್ದುದನ್ನು ಕಂಡರೂ ಮೆಸಿಡೋನಿಯನ್, ಟ್ಯಾಂಗ್, ಜಪಾನ ಸಾಮ್ರಾಜ್ಯ, ಯುವಾನ ರಾಜ್ಯ, ಫ್ರೆಂಚ್ ಸಾಮ್ರಾಜ್ಯ, ಮಂಗೋಲ್ ಮತ್ತು ಬ್ರಿಟಿಶ್ ಸಾಮ್ರಾಜ್ಯಗಳು ತಲೆ ಎತ್ತಿದುವೇಕೆ? ಎಲ್ಲ ಸಾಧನೆಗಳ ಮೂಲ ಉದ್ದೇಶ ತಮ್ಮಲ್ಲಿ ಅಂತರ್ಗತವಾಗಿರುವ ಶಕ್ತಿಯನ್ನು ಬಳಸಿ, ತಮ್ಮ ನಿಜಸ್ವರೂಪವನ್ನು ಕಂಡುಕೊಳ್ಳುವುದು. ಈ ಪುರುಷೋನ್ನತಿಯ ಪಥದಲ್ಲಿ ಮನೋವಿಕಾಸ. ಅದು ಪೂರ್ಣವಾದಾಗ ದೇವದರ್ಶನ! ಹೀಗೆ ನಮ್ಮೆಲ್ಲರನ್ನು, ಸ್ವಶೋಧದಲ್ಲಿ ತೊಡಗಿಸುವುದೇ ಪರಸತ್ವದ ಆನಂದದ ಲೀಲೆ.

ದಿನ ಭವಿಷ್ಯ

ಶುಕ್ರವಾರ ಡಿಸೆಂಬರ್ 31, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ) ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಾಷಾಢ ದ್ವಾದಶಿ ಗಂ. 1-29 (ಬೆ. 7-23) ಉಪರಿ ತ್ರಯೋದಶಿ ಗಂ. 54-12 (ಬೆ.ಝಾ. 5-04) ಶುಕ್ರವಾರ ನಿತ್ಯ ನಕ್ಷತ್ರ ಅನೂರಾಧಾ ಗಂ. 33-3 (ರಾ. 8--01) ಶೂಲ ನಾಮ ಯೋಗ ಗಂ. 23-54 ತೈತಲ ಕರಣ ಗಂ. 1-29 ಉಪರಿ ಗರಜ ಕರಣ ಗಂ. 27-6 ವಿಷ ಗಂ. 46-5 ಅಮೃತ ಗಂ. 8-38 ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-42 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 6

ಮೇಷ: ಭತ್ತ, ಜೋಳ, ಗೋಧಿ, ಉದ್ದು, ರಾಗಿ ಮುಂತಾದ ಆಹಾರ ಬೆಳೆಗಳ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಕಪ್ಪು ಲೋಹಗಳ ವ್ಯವಹಾರಸ್ಥರಿಗೆ ಉತ್ತಮ ವ್ಯವಹಾರ ಕುದುರಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸಿನ ದಿನ.

ವೃಷಭ: ವಿದೇಶದಲ್ಲಿರುವ ಆತ್ಮೀಯ ಬಂಧುಗಳ ಆಗಮನ ಸಾಧ್ಯತೆ. ಹಣಕಾಸಿನ ವಿಷಯದಲ್ಲಿ ಜಿಗುಟುತನ ತೋರುವುದು ಉತ್ತಮ. ದೇಹಾರೋಗ್ಯದಲ್ಲಿ ಸುಧಾರಣೆ. ಶುಭಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ.

ಮಿಥುನ: ಮನೆಗೆ ಬಂಧುಬಾಂಧವರ ಆಗಮನ ಸಾಧ್ಯತೆ. ಶುಭ ಕಾರ್ಯಗಳ ಬಗ್ಗೆ ಎಲ್ಲರೊಡನೆ ಸುದೀರ್ಘ ಚರ್ಚೆ ಮಾಡುವ ಸಾಧ್ಯತೆ. ಕಲಾಕೃತಿಗಳ ಮಾರಾಟಗಾರರಿಗೆ ಹೊಸ ವ್ಯವಹಾರ ಕುದುರುವ ಸಾಧ್ಯತೆ.

ಕರ್ಕಾಟಕ: ಪ್ರಯಾಣದಿಂದ ಅತಿಯಾದ ಆಯಾಸವಾಗಿ ಆರೋಗ್ಯದಲ್ಲಿ ವ್ಯತ್ಯಯ. ಮಕ್ಕಳ ವಿಷಯದಲ್ಲಿ ಬಿಗಿ ನಿಲುವು ತಾಳುವುದು ಅಷ್ಟೊಂದು ಶ್ರೇಯಸ್ಸನ್ನು ತರದು. ಪತ್ನಿಯ ಸಹಕಾರದಿಂದಾಗಿ ಉತ್ತಮ ವಾತಾವರಣ.

ಸಿಂಹ: ಆದಾಯದಲ್ಲಿ ನಿಶ್ಚಿತತೆ. ಕ್ರೀಡಾಪಟುಗಳಿಗೆ ಸಾಧನೆಗೈಯುವ ದಿನವಾಗಲಿದೆ. ಮನೆಯಲ್ಲಿ ಅತಿಥಿ ಸತ್ಕಾರದಂತಹ ಸಂಭ್ರಮ ನಡೆಯಲಿದೆ. ವ್ಯವಹಾರಗಳಲ್ಲಿ ಪ್ರಗತಿ. ಕುಲದೇವತಾ ದರ್ಶನ ಭಾಗ್ಯ.

ಕನ್ಯಾ: ಮೇಲಧಿಕಾರಿಗಳಿಂದ ಪ್ರಶಂಸೆ ಗೌರವ ದೊರಕುವ ಸಾಧ್ಯತೆ. ಸ್ನೇಹಿತರಿಂದ ಹಣಕಾಸಿನ ಸಹಾಯಕ್ಕಾಗಿ ಬೇಡಿಕೆ ಬರಲಿದೆ. ಬಂಧುಗಳ ಸಂಭ್ರಮದಲ್ಲಿ ಭಾಗವಹಿಸಿ. ಆರೋಗ್ಯದ ಗಮನ ಅಗತ್ಯ.

ತುಲಾ: ಲೇವಾದೇವಿ ಹಾಗೂ ಹಣಕಾಸಿನ ವ್ಯವಹಾರದಲ್ಲಿ ಸಾಧಾರಣ ಲಾಭ. ಭೂ ಸಂಬಂಧಿ ವ್ಯವಹಾರಗಳಿಗೆ ಸರ್ಕಾರಿ ವಲಯದಿಂದ ಉತ್ತಮ ಸಹಕಾರ ದೊರಕಲಿದೆ. ಚಿಲ್ಲರೆ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ.

ವೃಶ್ಚಿಕ: ರಾಜಕೀಯದಲ್ಲಿರುವವರಿಗೆ ದುಗುಡ ದುಮ್ಮಾನಗಳು ಎದುರಾಗುವ ಸಾಧ್ಯತೆ. ಹಿಂಬಾಲಕರಿಂದಲೇ ಮೋಸ ಹೋಗುವ ಸಾಧ್ಯತೆ. ಸಹೋದರರಿಗಾಗಿ ನಿವೇಶನ ಅಥವಾ ಭೂಮಿ ಖರೀದಿ ಯೋಗ.

ಧನು: ಅರಣ್ಯಗಳಲ್ಲಿ ಕೆಲಸ ಮಾಡುವವರಿಗೆ ಮತ್ತು ಪ್ರಕೃತಿ ಪ್ರಿಯರಿಗೆ ಗೌರವಾದರಗಳು ಹೆಚ್ಚಲಿವೆ. ಪ್ರಶಸ್ತಿ ಪುರಸ್ಕಾರಗಳ ಯೋಗ. ಉದ್ಯೋಗಸ್ಥರಿಗೆ ವರ್ಗಾವಣೆ ಬಗ್ಗೆ ಪ್ರಯತ್ನಿಸಲು ಉತ್ತಮ ದಿನವಾಗಿ ಪರಿಣಮಿಸಲಿದೆ.

ಮಕರ: ನ್ಯಾಯಾಲಯಗಳಲ್ಲಿನ ಮೊಕದ್ದಮೆಗಳು ನಿಮ್ಮ ಪರವಾಗಿ ತಿರುಗುವ ಸಾಧ್ಯತೆ ಎದ್ದು ಕಾಣುತ್ತಿದೆ. ವೈದ್ಯಕೀಯ ನೆರವಿಗಾಗಿ ಖರ್ಚು. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು ಗಳಿಸಿ ಜನ ಮೆಚ್ಚುಗೆಗೆ ಪಾತ್ರರಾಗುವಿರಿ.

ಕುಂಭ: ಹೊಸ ಉದ್ಯೋಗ ದೊರಕುವುದು ಅಥವಾ ಉದ್ಯೋಗದಲ್ಲಿ ಪಲ್ಲಟವಾಗುವ ಸಾಧ್ಯತೆ. ತಂದೆಯಿಂದ ಗೃಹ ನಿರ್ಮಾಣದ ಬಗ್ಗೆ ಪ್ರಸ್ತಾಪ. ಮನೆಯಲ್ಲಿ ರಾಜಿ ಸಂಧಾನದ ಮಾತುಕತೆ ನಡೆಯುವುದು.

ಮೀನ: ಗೃಹ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡವರಿಗೆ ಹಣಕಾಸಿನ ಹೊಂದಾಣಿಕೆಯಾಗಲಿದೆ. ಪತ್ರಕರ್ತರಿಗೆ, ಅಂಕಣ ಬರಹಗಾರರಿಗೆ ಹೆಸರು ಗಳಿಸಲು ವಿಪುಲ ಅವಕಾಶ. ದೇವತಾನುಗ್ರಹದಿಂದಾಗಿ ಕಾರ್ಯಾನುಕೂಲ.


ನಿಮ್ಮ ಜನ್ಮದಿನ 31-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ವಿದ್ಯಾರ್ಥಿನಿಯರಿಗೆ ಅತ್ಯಂತ ಯಶಸ್ಸು. ಮನೆಯಲ್ಲಿನ ಜವಾಬ್ದಾರಿಗಳು ಹೆಚ್ಚುವ ಸಾಧ್ಯತೆ. ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಹೆಚ್ಚಿನ ಖರ್ಚು. ವಿದೇಶದಲ್ಲಿರುವ ಹತ್ತಿರದ ಬಂಧುಗಳ ಆಗಮನವಾಗಲಿದೆ. ತಾಂತ್ರಿಕ ವಿಷಯಗಳ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಯಶಸ್ಸಿಗಾಗಿ ಹೆಚ್ಚಿನ ಶ್ರಮ.

ಪದಬಂಧ 4824

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಪ್ರತಿಜ್ಞೆಯಲ್ಲಿರುವ ಎಚ್ಚರ! (2)
5.ಅಂಗಳದ ಬಳಿಯಿರುವ ಹೆಂಗಸು! (3)
6.ಬಟ್ಟೆಯ ಸಣ್ಣ ಪಟ್ಟಿ (2)
7.ಸೀರೆಯ ಹೊದೆಯುವ ಭಾಗ (3)
9.ಗಡಿ ಬಳಿ ತಲೆದೋರಿದ ಶೀತ (3)
10.ಹೊಣೆಗಾರಿಕೆಯಿದು (5)
11.ಕತ್ತರಿಸುವ ಸಾಧನ (3)
12.ಗೆಳೆಯನೊಂದಿಗಿರುವ ಸ್ನೇಹಿತೆ (3)
15.ನುಡಿಸುವ ಸಾಧನ (2)
16.ಕೂಸಿನ ತಲೆಗೆ ಕಟ್ಟುವ ಟೋಪಿ (3)
17.ಕಂದರಲ್ಲಿರುವ ಕೂಸು! (2)

ಮೇಲಿಂದ ಕೆಳಕ್ಕೆ
1.ತನ್ನನ್ನು ತಾನೇ ಹೊಗಳಿಕೊಳ್ಳುವುದು (4)
2.ತನಗೆ ತಾನೇ ಮಾತಾಡಿಕೊಳ್ಳುವುದು (3)
3.ಅವಸರವನ್ನು ಹೀಗೆ ಹೇಳಿ (4)
8.ಹಳೆ ಸಾಮಾನುಗಳನ್ನು ಮಾರುವ ಸ್ಥಳ (3)
9.ಸುಕ್ಕನ್ನು ಹೀಗೂ ಹೇಳುವರು (3)
11.ಕಣದಲ್ಲಿ ಹಾಕಿದ ಲಗಾಮು (4)
13.ಎಳ್ಳು ನೀರು ಬಿಡುವಿಕೆ (4)
14.ಬಟ್ಟೆಯನ್ನು ಎಣ್ಣೆಯಲ್ಲಿ ಅದ್ದಿ ಉರಿಸುವ ಕೈದೀಪ (3)



4823ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕಲಹ 3.ಸಮಾರೋಪ 5.ವರ 6.ಮಡಿವಂತ 7.ಸ್ವಕಪೋಲಕಲ್ಪನೆ 10.ಆಕಸ್ಮಿಕ 11.ತೋಪು 13.ಯಥಾಕಾಲ

ಮೇಲಿಂದ ಕೆಳಕ್ಕೆ: 1.ಕಳೆ 2.ಹತ್ತಿರ 4.ಪರಾತ 5.ವಭಾಸ್ವ 6.ಮಶಕ 8.ಪೋಷಕ 9.ನೆನಪು 10.ಆಲಯ 11.ತೋಲನ 12.ಮಿತ್ರ

ಸುಡೊಕು 5210

5		6		7		3		8
	8		2		4		1	7
7		1		5		4		9
	9		5				7	
1				4				3
	6				8		5	
9		5			6	2		1
				3			8	
6		8	4			9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5209 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

‘ಕ್ಷೀಣಿಸುತ್ತಿರುವ ಸಕ್ರಿಯ ಉಗ್ರರ ಸಂಖ್ಯೆ’

ಶ್ರೀನಗರ: ‘ಕಾಶ್ಮೀರ ಕಣಿವೆಯಲ್ಲಿ ಸಕ್ರಿಯ ಉಗ್ರರ ಸಂಖ್ಯೆ ಕ್ಷೀಣಿಸುತ್ತಿದ್ದು, ಮೂರು ದಶಕಗಳಲ್ಲೇ ಉಗ್ರರ ಸಂಖ್ಯೆ 200ಕ್ಕಿಂತ ಕಡಿಮೆಯಾಗಿದೆ. ಸದ್ಯ ಸ್ಥಳೀಯ ಸಕ್ರಿಯ ಉಗ್ರರ ಸಂಖ್ಯೆ 86 ಇದೆ’ ಎಂದು ಕಾಶ್ಮೀರ ವಲಯ ಐಜಿಪಿ ವಿಜಯ್‌ಕುಮಾರ್ ತಿಳಿಸಿದರು.

ದಕ್ಷಿಣ ಕಾಶ್ಮೀರದ ಕುಲ್ಗಾಮ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘2021ರಲ್ಲಿ ಉಗ್ರ ಪಡೆ ಸೇರಿದ್ದ 128 ಸ್ಥಳೀಯ ಉಗ್ರರಲ್ಲಿ 73 ಮಂದಿಯನ್ನು ಹತ್ಯೆ ಮಾಡಲಾಗಿದ್ದು, 17 ಮಂದಿಯನ್ನು ಬಂಧಿಸಲಾಗಿದೆ.


ವಿಜಯ ಕುಮಾರ್

2021ರಲ್ಲಿ ಉಗ್ರ ಪಡೆ ಸೇರಿದ 39 ಮಂದಿ ಮಾತ್ರ ಸದ್ಯ ಸಕ್ರಿಯರಾಗಿದ್ದಾರೆ’ ಎಂದು ಹೇಳಿದರು.

ಜನರಲ್ ಕಮಾಂಡಿಂಗ್ ಆಫೀಸರ್ ಡಿ.ಪಿ. ಪಾಂಡೆ ಮಾತನಾಡಿ, ‘ಉಗ್ರರ ನೇಮಕಾತಿಯೂ ಕೂಡ ಕಡಿಮೆಯಾಗಿದ್ದು, ಕಳೆದ ವರ್ಷ 180 ಉಗ್ರರ ನೇಮಕ ನಡೆದಿತ್ತು. ಈ ಬಾರಿ 128ರಿಂದ 130 ಉಗ್ರರ ನೇಮಕ ನಡೆದಿದೆ’ ಎಂದರು.

ಕಾಶ್ಮೀರದಲ್ಲಿ 165 ಸ್ಥಳೀಯ ಉಗ್ರರು, 75 ವಿದೇಶಿ ಉಗ್ರರು ಸಕ್ರಿಯರಾಗಿದ್ದಾರೆ ಎಂದು ಬುಧವಾರ (ಡಿ.29) ಐಜಿಪಿ ಹೇಳಿದ್ದರು. ಗುರುವಾರ ಇಬ್ಬರು ವಿದೇಶಿ ಉಗ್ರ ಸೇರಿ ಆರು ಮಂದಿಯನ್ನು ಹತ್ಯೆಗೈಯಲಾಗಿದ್ದು, ಈಗ ಸ್ಥಳೀಯ ಉಗ್ರರ ಸಂಖ್ಯೆ 159, ವಿದೇಶಿ ಉಗ್ರರ ಸಂಖ್ಯೆ 73ಕ್ಕೆ ಇಳಿದಿದೆ. ಕಾಶ್ಮೀರದಲ್ಲಿ ಈ ವರ್ಷ 87 ಎನ್‌ಕೌಂಟರ್ ನಡೆದಿದ್ದು, 19 ವಿದೇಶಿ ಉಗ್ರರು, 149 ಸ್ಥಳೀಯರು ಸೇರಿ 168 ಉಗ್ರರನ್ನು ಭದ್ರತೆ ಪಡೆಗಳು ಕೊಂದುಹಾಕಿವೆ. ಕಳೆದ ವರ್ಷ 200 ಉಗ್ರರನ್ನು ಹತ್ಯೆ ಮಾಡಲಾಗಿತ್ತು.

ಮಹಾತ್ಮ ಗಾಂಧಿ ವಿರುದ್ಧ ಅವಹೇಳನಕಾರಿ ಹೇಳಿಕೆ: ಕಾಳಿಚರಣ್ ಮಹಾರಾಜ್ ಬಂಧನ

ಛತ್ತೀಸಗಡ (ಪಿಟಿಐ): ಮಹಾತ್ಮ ಗಾಂಧಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಮಧ್ಯಪ್ರದೇಶದ ಧಾರ್ಮಿಕ ಮುಖಂಡ ಕಾಳಿಚರಣ್ ಮಹಾರಾಜ್ ಅವರನ್ನು ಛತ್ತೀಸಗಡ ಪೊಲೀಸರು ಬಂಧಿಸಿದ್ದಾರೆ.

ರಾಯ್‌ಪುರದಲ್ಲಿ ಡಿಸೆಂಬರ್ 26ರಂದು ಭಾನುವಾರ ನಡೆದ ಧರ್ಮ ಸಂಸತ್‌ನಲ್ಲಿ ಮಹಾತ್ಮ ಗಾಂಧಿ ವಿರುದ್ಧ ಆಕ್ಷೇಪಾರ್ಹ ಪದ ಬಳಸಲಾಗಿತ್ತು. ಗಾಂಧಿಯನ್ನು ಹತ್ಯೆ ಮಾಡಿದ್ದಕ್ಕೆ ನಾಥುರಾಮ್ ಗೋಡ್ಸೆಯನ್ನು ಶ್ಲಾಘಿಸಲಾಗಿತ್ತು. ಘಟನೆಗೆ ಸಂಬಂಧಿಸಿ ಕಾಳಿಚರಣ್ ಮತ್ತು ಇತರ ಧಾರ್ಮಿಕ ಮುಖಂಡರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ರಾಯ್‌ಪುರದ ಮಾಜಿ ಮೇಯರ್ ಮತ್ತು ಕಾಂಗ್ರೆಸ್ ನಾಯಕ ಪ್ರಮೋದ್ ದುಬೆ ದೂರು ದಾಖಲಿಸಿದ್ದರು.

ಕಾಳಿಚರಣ್ ಮಹಾರಾಜ್ ಅವರನ್ನು ರಾಜ್ಯ ಪೊಲೀಸರು ವಶಕ್ಕೆ ತೆಗೆದುಕೊಳ್ಳಲಿದ್ದಾರೆ, ಅವರ ವಿರುದ್ಧ ದೇಶದ್ರೋಹ ಮೊಕದ್ದಮೆ ದಾಖಲಿಸಬೇಕು ಎಂದು ಮಹಾರಾಷ್ಟ್ರ ಗೃಹ ಸಚಿವ ದಿಲೀಪ್ ವಾಲ್ಸೆ ಪಾಟೀಲ್ ಗುರುವಾರ ಹೇಳಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ್ದ ಕಾಳಿಚರಣ್, 'ರಾಜಕೀಯದ ಮೂಲಕ ರಾಷ್ಟ್ರವನ್ನು ವಶಪಡಿಸಿಕೊಳ್ಳುವುದು ಇಸ್ಲಾಂನ ಗುರಿಯಾಗಿದೆ. ನಮ್ಮ ಮುಂದೆಯೇ ಅವರು 1947 ರಲ್ಲಿ (ವಿಭಜನೆಯನ್ನು ಉಲ್ಲೇಖಿಸಿ) ದೇಶಗಳನ್ನು ವಶಪಡಿಸಿಕೊಂಡರು. ಅವರು ಮೊದಲು ಇರಾನ್, ಇರಾಕ್ ಮತ್ತು ಅಫ್ಘಾನಿಸ್ತಾನವನ್ನು ವಶಪಡಿಸಿಕೊಂಡರು. ಬಳಿಕ ಅವರು ರಾಜಕೀಯದ ಮೂಲಕವೇ ಬಾಂಗ್ಲಾದೇಶ ಮತ್ತು ಪಾಕಿಸ್ತಾನವನ್ನು ವಶಪಡಿಸಿಕೊಂಡರು. ಗಾಂಧಿಯನ್ನು ಕೊಂದ ನಾಥೂರಾಂ ಗೋಡ್ಸೆಗೆ ನಾನು ನಮಸ್ಕರಿಸುತ್ತೇನೆ' ಎಂದಿದ್ದರು.

ಪ್ರತ್ಯೇಕ ಎನ್‌ಕೌಂಟರ್: ಯೋಧರೊಬ್ಬರು ಹುತಾತ್ಮ

6 ಜೆಇಎಂ ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತನಾಗ್ ಹಾಗೂ ಕುಲ್ಗಾಮ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಪ್ರತ್ಯೇಕ ಎನ್‌ಕೌಂಟರ್‌ನಲ್ಲಿ ಪಾಕಿಸ್ತಾನದ ಇಬ್ಬರು ಸೇರಿ ಜೈಶ್-ಮೊಹಮ್ಮದ್ (ಜೆಇಎಂ) ಸಂಘಟನೆಯ ಆರು ಉಗ್ರರು ಹತ್ಯೆಯಾಗಿದ್ದಾರೆ. ಯೋಧರೊಬ್ಬರು ಹುತಾತ್ಮರಾಗಿದ್ದಾರೆ.

ಅನಂತನಾಗ್ ಜಿಲ್ಲೆಯ ನೌಗಮ್ ಹಾಗೂ ಕುಲ್ಗಾಮ್ ಜಿಲ್ಲೆಯ ಮಿರ್ಹಾಮ ಗ್ರಾಮದಲ್ಲಿ ಬುಧವಾರ ತಡರಾತ್ರಿ ಹಾಗೂ ಗುರುವಾರ ನುಸುಕಿನ ವೇಳೆ ಅರೆಸೇನಾಪಡೆ, ಸೇನೆ ಹಾಗೂ ಪೊಲೀಸರು ನಡೆಸಿದ ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆಯಲ್ಲಿ ಉಗ್ರರು ಬಲಿಯಾಗಿದ್ದಾರೆ.

‘ಎರಡು ಪ್ರತ್ಯೇಕ ಎನ್‌ಕೌಂಟರ್‌ನಲ್ಲಿ ಆರು ಮಂದಿ ಜೆಇಎಂ ಉಗ್ರರನ್ನು ಹತ್ಯೆ ಮಾಡಲಾಗಿದ್ದು, ಇಬ್ಬರು ಪಾಕಿಸ್ತಾನಿಗಳು, ಇಬ್ಬರು ಸ್ಥಳೀಯ ಉಗ್ರರಾಗಿದ್ದು, ಮತ್ತಿಬ್ಬರ ಗುರುತು ಪತ್ತೆ ಹಚ್ಚುವ ಕಾರ್ಯ ನಡೆದಿದ್ದು, ಇದು ನಮಗೆ ಸಿಕ್ಕ ದೊಡ್ಡ ಯಶಸ್ಸು’ ಎಂದು ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಉಗ್ರರು ಅಡಗಿರುವ ಖಚಿತ ಮಾಹಿತಿ ಮೇರೆಗೆ ಎರಡೂ ಪ್ರದೇಶಗಳಲ್ಲೂ ಸ್ಥಳೀಯ ಪೊಲೀಸ್, ಸೇನೆ ಹಾಗೂ ಅರೆಸೇನಾ ಪಡೆ ಜಂಟಿ ಶೋಧ ಕಾರ್ಯಾಚರಣೆ ನಡೆಸಿದ್ದವು. ಈ ವೇಳೆ ಉಗ್ರರು ಅಪ್ರಚೋದಿತ ಗುಂಡಿನ ಸುರಿಮಳೆಗೈದರು. ಈ ವೇಳೆ ಭದ್ರತೆ ಪಡೆಗಳು ನಡೆಸಿದ ಪ್ರತಿ ಗುಂಡಿನ ದಾಳಿ ನಡೆಸಿದ್ದಾರೆ. ಗುಂಡಿನ ಚಕಮಕಿಯಲ್ಲಿ ಪೊಲೀಸ್ ಕಾನ್‌ಸ್ಟೆಬಲ್, ಇಬ್ಬರು ಯೋಧರು ಗಾಯಗೊಂಡಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಯೋಧರು ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು’ ಎಂದು ಮೂಲಗಳು ತಿಳಿಸಿವೆ.

ಕುಲ್ಗಾಮ್ ಜಿಲ್ಲೆಯ ಮಿರ್ಹಾಮ ಗ್ರಾಮದಲ್ಲಿ ನಡೆದ ಮತ್ತೊಂದು ಎನ್‌ಕೌಂಟರ್‌ನಲ್ಲಿ ಮೂವರು ಉಗ್ರರು ಹತ್ಯೆಯಾಗಿದ್ದಾರೆ. ಹತ್ಯೆಯಾದವರನ್ನು ಮೊಹಮ್ಮದ್ ಶಫಿ ದಾರ್, ಉಜೈರ್ ಅಹ್ಮದ್, ಶಾಹಿದ್ ಅಲಿಯಾಸ್ ಶಹಜೈದ್ ಎಂದು ಗುರುತಿಸಲಾಗಿದ್ದು, ಶಾಹಿದ್ ಪಾಕಿಸ್ತಾನದ ಉಗ್ರನಾಗಿದ್ದು, ಉಳಿದ ಇಬ್ಬರು ಸ್ಥಳೀಯರಾಗಿದ್ದಾರೆ. ಹತ್ಯೆಯಾದವರಿಂದ ಎಂ4, ಎಕೆ ಮಾದರಿಯ ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ವಕ್ತಾರರು ತಿಳಿಸಿದರು.

‘ಬದಲಾಗುತ್ತಿರುವ ಹವಾಮಾನ ಹಾಗೂ ಹಿಮ ಸುರಿಯುತ್ತಿರುವುದು ಕಣಿವೆಯಲ್ಲಿ ಗುಂಡಿನ ಚಕಮಕಿ ಹೆಚ್ಚಾಗಲು ಪ್ರಮುಖ ಕಾರಣ. ಸಾಮಾನ್ಯವಾಗಿ ಈ ಸಮಯದಲ್ಲಿ ಉಗ್ರರು ತಮ್ಮ ವಾಸ ಸ್ಥಾನವನ್ನು ಬದಲಿಸುತ್ತಿದ್ದು, ಗ್ರಾಮಗಳತ್ತ ಹಿಂತಿರುಗುತ್ತಿದ್ದಾರೆ. ಹಾಗಾಗಿ ಮಾಹಿತಿ ಮೇರೆಗೆ ದಾಳಿ ನಡೆಸಲಾಗುತ್ತಿದೆ. ಚಳಿಗಾಲದಲ್ಲಿ ಗುಂಡಿನ ದಾಳಿ ಹೆಚ್ಚಾಗಲು ಇದು ಮುಖ್ಯ ಕಾರಣ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ದಕ್ಷಿಣ ಕಾಶ್ಮೀರದಲ್ಲಿ ಕಳೆದ ಒಂದು ವಾರದಲ್ಲಿ ಉಗ್ರರ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ 11 ಉಗ್ರರು ಹತರಾಗಿದ್ದಾರೆ. ಡಿ.26ರಂದು ಶೋಪಿಯಾನ್, ಪುಲ್ವಾಮ ಹಾಗೂ ಅನಂತನಾಗ್ ಜಿಲ್ಲೆಯಲ್ಲಿ ನಡೆದ ಮೂರು ಪ್ರತ್ಯೇಕ ಎನ್‌ಕೌಂಟರ್‌ನಲ್ಲಿ ಐವರು ಉಗ್ರರು ಹತ್ಯೆಯಾಗಿದ್ದರು.

ಪಾಕ್‌ನ ದೇಗುಲಕ್ಕೆ ಭೇಟಿ ನೀಡಲಿರುವ ಭಾರತದ ಹಿಂದೂ ಯಾತ್ರಿಕರು

ಇಸ್ಲಾಮಾಬಾದ್ (ಪಿಟಿಐ): ಕಳೆದ ವರ್ಷ ಇಸ್ಲಾಮಿಕ್ ಮೂಲಭೂತವಾದಿಗಳ ಪಕ್ಷವೊಂದು ಧ್ವಂಸಗೊಳಿಸಿದ ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿನ ಶತಮಾನಗಳಷ್ಟು ಹಳೆಯ ದೇಗುಲವೊಂದಕ್ಕೆ ಭಾರತ, ಯುಎಇ ಮತ್ತು ಅಮೆರಿಕ ದೇಶದ ಸುಮಾರು 250ಸದಸ್ಯರ ಹಿಂದೂ ಯಾತ್ರಿಕರ ತಂಡ ಈ ವಾರ ಭೇಟಿ ನೀಡಲಿದೆ ಎಂದು ಗುರುವಾರ ಮಾಧ್ಯಮವೊಂದು ವರದಿ ಮಾಡಿದೆ.

1919ರಲ್ಲಿ ಕಾರಕ್ ಜಿಲ್ಲೆಯ ತೇರಿ ಗ್ರಾಮದಲ್ಲಿ ದೇಹತ್ಯಾಗ ಮಾಡಿದ ಸನ್ಯಾಸಿ ಪರಮಹಂಸ ಮಹಾರಾಜರ ದೇಗುಲಕ್ಕೆ ಹಿಂದೂ ಯಾತ್ರಿಕರು ಭೇಟಿ ನೀಡಲಿದ್ದಾರೆ. 1920ರಲ್ಲಿ ಈ ದೇಗುಲ ನಿರ್ಮಾಣವಾಗಿತ್ತು

ಪಾಕಿಸ್ತಾನ ಹಿಂದೂ ಮಂಡಳಿ (ಪಿಎಚ್‌ಸಿ) ಆಹ್ವಾನದ ಮೇರೆಗೆ ತೇರಿ ಗ್ರಾಮದಲ್ಲಿನ ಸನ್ಯಾಸಿ ಪರಮಹಂಸರ ಸಮಾಧಿ ಸ್ಥಳಕ್ಕೆ ಭೇಟಿ ನೀಡಲು ಹಿಂದೂ ಯಾತ್ರಿಕರು ಜನವರಿ 1 ರಂದು ಪೆಶಾವರಕ್ಕೆ ಬರಲಿದ್ದಾರೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.



ಗಾಳಿಪಟ ಪ್ರದರ್ಶನ ಅಮೃತಸರದಲ್ಲಿ ಹೊಸ ವರ್ಷದ ನಿಮಿತ್ತ ನಡೆದ ಕಾರ್ಯಾಗಾರದಲ್ಲಿ ರಚಿಸಿದ ವಿಭಿನ್ನ ಶೈಲಿಯ ಗಾಳಿಪಟಗಳನ್ನು ಜಗ್ಮೋಹನ ಕನೋಜಿಯಾ ಪ್ರದರ್ಶಿಸಿದರು. – ಪಿಟಿಐ ಚಿತ್ರ

ಗಂಡ–ಹೆಂಡತಿ ಕಲಹದಲ್ಲಿ ಕೂಸು ಬಡವಾಗಬಾರದು: ‘ಸುಪ್ರೀಂ’

ನವದೆಹಲಿ (ಪಿಟಿಐ): ಗಂಡ ಮತ್ತು ಹೆಂಡತಿ ನಡುವಿನ ಕಲಹದಿಂದ ಮಗುವಿಗೆ ತೊಂದರೆ ಉಂಟಾಗಬಾರದು ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಎ.ಎಸ್.ಬೋಪಣ್ಣ ಅವರನ್ನೊಳಗೊಂಡ ಪೀಠವೊಂದು ಸೇನಾಧಿಕಾರಿಯೊಬ್ಬರ ವಿವಾಹ ವಿಚ್ಛೇದನ ಕುರಿತ ಅರ್ಜಿ ಕುರಿತಂತೆ ಈ ಹೇಳಿಕೆ ನೀಡಿದೆ.

13 ವರ್ಷದ ಮಗನು ವಯಸ್ಕ ಹಂತಕ್ಕೆ ಬರುವವರೆಗೆ ಆತನ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು. ಪತ್ನಿಗೆ ಜೀವನ ನಿರ್ವಹಣೆಗೆ ₹50 ಸಾವಿರ ಸಂದಾಯ ಮಾಡಬೇಕು ಎಂದು ಪೀಠವು ಸೇನಾಧಿಕಾರಿಗೆ ನಿರ್ದೇಶನ ನೀಡಿದೆ.

‘ಅರ್ಜಿದಾರರಾದ ಪತ್ನಿ ಮತ್ತು ಪ್ರತಿವಾದಿ ಪತಿಯ ಹೇಳಿಕೆಗಳಲ್ಲಿ ವಾಸ್ತವಾಂಶಗಳನ್ನು ಪರಿಗಣಿಸಿದಾಗ ಇಬ್ಬರೂ 2011ರ ಮೇ ನಿಂದ ಒಟ್ಟಿಗೆ ವಾಸವಾಗಿಲ್ಲ. ಆದ್ದರಿಂದ ಇಬ್ಬರ ನಡುವಿನ ಮದುವೆಯ ಬಂಧ ಕಡಿತಗೊಂಡಿದೆ ಎಂದು ಹೇಳಬಹುದು.



ಇನ್ನೊಂದೆಡೆ ಗಂಡ ಪುನರ್ವಿವಾಹವಾಗಿದ್ದಾರೆ. ಸಂವಿಧಾನದ 142ನೇ ವಿಧಿಯ ಪ್ರಕಾರ ಪ್ರಕರಣದ ಸತ್ಯಾಂಶಗಳನ್ನು ಗಮನದಲ್ಲಿಟ್ಟುಕೊಂಡು ಕೌಟುಂಬಿಕ ನ್ಯಾಯಾಲಯವು ನೀಡಿರುವ ವಿಚ್ಛೇದನದ ತೀರ್ಪಿನಲ್ಲಿ ಮಧ್ಯಪ್ರವೇಶಿಸುವ ಅಗತ್ಯವಿಲ್ಲ’ ಎಂದು ಹೇಳಿದೆ.

ಪತಿಯು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಅವರು ತಮ್ಮ ಮಗ ವಯಸ್ಕನಾಗುವವರೆಗೆ ಆತನ ಪೋಷಣೆ ಮಾಡಬೇಕು. ಪತಿ ಮತ್ತು ಪತ್ನಿಯರ ನಡುವಿನ ಕಲಹ ಏನೇ ಇರಬಹುದು. ಆದರೆ ಮಗು ಇದರಿಂದ ಯಾವುದೇ ತೊಂದರೆ ಪಡುವಂತಾಗಬಾರದು’ ಎಂದು ಪೀಠ ತಿಳಿಸಿದೆ.

‘ತಾಯಿಗೆ ಯಾವುದೇ ಆದಾಯ ಮೂಲವಿಲ್ಲ. ಆದ್ದರಿಂದ ಮಗುವಿನ ಪಾಲನೆ, ಪೋಷಣೆ ಮತ್ತು ಜೀವನ ನಿರ್ವಹಣೆಗೆ ಅಗತ್ಯ ಪ್ರಮಾಣದ ಹಣದ ಅವಶ್ಯವಿದೆ. ಇದು ಪೂರ್ಣವಾಗಿ ಪತಿಯಿಂದಲೇ ಸಂದಾಯವಾಗಬೇಕು. 2019ರ ಡಿಸೆಂಬರ್‌ನಿಂದ ಅನ್ವಯವಾಗುವಂತೆ ಪತಿಯು ತನ್ನ ಪತ್ನಿಗೆ ಪ್ರತಿ ತಿಂಗಳು ₹ 50 ಸಾವಿರ ನೀಡಬೇಕು’ ಎಂದೂ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ.

2005ರ ನವೆಂಬರ್ 16 ರಂದು ಸೇನಾಧಿಕಾರಿಯ ವಿವಾಹ ನೆರವೇರಿತ್ತು. ಪತ್ನಿಯು ತನ್ನ ಪತಿಗೆ ವಿವಾಹೇತರ ಸಂಬಂಧಗಳು ಇರುವುದಾಗಿ ಸೇನಾಧಿಕಾರಿಗಳಿಗೆ ದೂರು ನೀಡಿದ್ದರು. ಈ ಬಗ್ಗೆ ಸೇನೆಯು ಅಧಿಕಾರಿಯ ವಿರುದ್ಧ ನಡೆಸಿದ ವಿಚಾರಣೆಯಲ್ಲಿ ಅವರು ದೋಷಮುಕ್ತರಾಗಿದ್ದರು.

2014ರಲ್ಲಿ ಸೇನಾಧಿಕಾರಿಯು ಜೈಪುರ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿ ವಿಚ್ಛೇದನ ಪಡೆದುಕೊಂಡಿದ್ದರು.

ಸಂಕ್ಷಿಪ್ತ ಸುದ್ದಿ

ಅಸ್ಟ್ರಾಜೆನೆಕಾ: ಬ್ರಿಟನ್‌ನಲ್ಲಿ ವರ್ಷಾಚರಣೆ


ಲಂಡನ್ (ಪಿಟಿಐ): ಕೋವಿಡ್-19ರ ವಿರುದ್ಧದ ಅಸ್ಟ್ರಾಜೆನೆಕಾ ಲಸಿಕೆಯನ್ನು ಅಂಗೀಕರಿಸಿ ವರ್ಷವಾಗಿರುವ ಹಿನ್ನೆಲೆಯಲ್ಲಿ ಬ್ರಿಟನ್ ಗುರುವಾರ ವಾರ್ಷಿಕೋತ್ಸವ ಆಚರಿಸಿದೆ.

ಒಪ್ಪಂದದ ಭಾಗವಾಗಿ ಈ ಲಸಿಕೆಯನ್ನು ಭಾರತದಲ್ಲಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಕೋವಿಶೀಲ್ಡ್ ಹೆಸರಿನಲ್ಲಿ ಸಿದ್ಧಪಡಿಸಿ, ನಿರ್ವಹಿಸುತ್ತಿದೆ.

ಜಾಗತಿಕವಾಗಿ ಕೋವಿಡ್‌ನಿಂದ ಲಕ್ಷಾಂತರ ಜನರ ಜೀವ ಉಳಿಸಲು ನೆರವಾಗಿರುವ ಅಸ್ಟ್ರಾಜೆನೆಕಾ ಲಸಿಕೆಯನ್ನು ತಯಾರಿಸಿದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಮತ್ತು ಸಂಶೋಧಕರಿಗೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಕೃತಜ್ಞತೆ ಸಲ್ಲಿಸಿದ್ದಾರೆ.

ಚೀನಾ: ಕೋವಿಡ್ ಪ್ರಕರಣಗಳ ಏರಿಕೆ

ಬೀಜಿಂಗ್(ಪಿಟಿಐ): ಚೀನಾದಲ್ಲಿ ದಿನೇ ದಿನೇ ಕೋವಿಡ್–19ರ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದ್ದು, ಗುರುವಾರ 207 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ತಿಳಿಸಿದೆ.



ಈ ಪೈಕಿ 156 ಪ್ರಕರಣಗಳು ಸ್ಥಳೀಯ ಜನರಲ್ಲಿ ಕಂಡುಬಂದಿದ್ದರೆ, 51 ಪ್ರಕರಣಗಳು ಹೊರ ದೇಶಗಳಿಂದ ಬಂದವರಲ್ಲಿ ಪತ್ತೆಯಾಗಿವೆ.

ದೇಶದಲ್ಲಿ ಬುಧವಾರ 197 ಹಾಗೂ ಮಂಗಳವಾರ 209 ಪ್ರಕರಣಗಳು ದಾಖಲಾಗಿವೆ. ಪ್ರಸ್ತುತ 2,563 ರೋಗಿಗಳು ಕೋವಿಡ್ ಚಿಕಿತ್ಸೆ ಪಡೆಯುತ್ತಿದ್ದಾರೆ, ಅವರಲ್ಲಿ 15 ಜನರ ಸ್ಥಿತಿ ಗಂಭೀರವಾಗಿದೆ ಎಂದು ಅದು ಹೇಳಿದೆ.

ಇಲ್ಲಿಯವರೆಗೆ ಚೀನಾದಲ್ಲಿ ಒಟ್ಟಾರೆ 1,01,890 ಜನರಿಗೆ ಸೋಂಕು ದೃಢಪಟ್ಟಿದ್ದು, 4636 ಜನರು ಮೃತಪಟ್ಟಿದ್ದಾರೆ

ಚೀನಾದಿಂದ ಪಾಕ್‌ಗೆ 25 ‘ಜೆ–10ಸಿ’ ಫೈಟರ್ ಜೆಟ್

ಇಸ್ಲಾಮಾಬಾದ್ (ಪಿಟಿಐ): ಭಾರತದ ರಫೇಲ್ ವಿಮಾನಗಳ ಖರೀದಿಗೆ ಪ್ರತಿಯಾಗಿ ಪಾಕಿಸ್ತಾನವು ತನ್ನ ಮಿತ್ರ ರಾಷ್ಟ್ರ ಚೀನಾದಿಂದ 25 ಅತ್ಯಾಧುನಿಕ ‘ಜೆ–10ಸಿ’ ಫೈಟರ್ ಜೆಟ್‌ಗಳನ್ನು ಪಡೆಯಲಿದೆ ಎಂದು ಪಾಕ್‌ನ ಆಂತರಿಕ ಸಚಿವ ಶೇಖ್ ರಶೀದ್ ಅಹ್ಮದ್ ಹೇಳಿದ್ದಾರೆ.

ರಾವಲ್ಪಿಂಡಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಸಚಿವರು, ಎಲ್ಲ ಹವಾಮಾನದ ಸಂದರ್ಭದಲ್ಲಿಯೂ ಕಾರ್ಯ ನಿರ್ವಹಿಸಬಲ್ಲ ಜೆ–10ಸಿ ಫೈಟರ್ ಜೆಟ್‌ಗಳು ಮಾರ್ಚ್ 23ರ ಪಾಕಿಸ್ತಾನ ದಿನಾಚರಣೆ ಸಂದರ್ಭದಲ್ಲಿ ಪಾಲ್ಗೊಳ್ಳಲಿವೆ ಎಂದು ಅವರು ತಿಳಿಸಿದರು.

ನಾಗಾಲ್ಯಾಂಡ್‌ನಲ್ಲಿ ಆಫ್‌ಸ್ಪ 6 ತಿಂಗಳು ವಿಸ್ತರಣೆ

ನವದೆಹಲಿ (ಪಿಟಿಐ): ನಾಗಾಲ್ಯಾಂಡ್‌ನಲ್ಲಿ ಡಿಸೆಂಬರ್ 30 ರಿಂದ ಮತ್ತೆ ಆರು ತಿಂಗಳವರೆಗೆ ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ– ಆಫ್‌ಸ್ಪ ವಿಸ್ತರಿಸಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ನಾಗಾಲ್ಯಾಂಡ್ ಇಡೀ ಪ್ರದೇಶ ಪ್ರಕ್ಷುಬ್ಧ ಮತ್ತು ಅಪಾಯಕಾರಿ ಪರಿಸ್ಥಿತಿಯಲ್ಲಿದೆ ಎಂದೂ ಹೇಳಿದೆ.

ಈಚೆಗೆ ಇಲ್ಲಿ ಪ್ರತ್ಯೇಕತಾವಾದಿಗಳು ಎಂದು ತಪ್ಪಾಗಿ ಭಾವಿಸಿ 13 ಮಂದಿ ನಾಗರಿಕರನ್ನು ಸೇನಾ ಸಿಬ್ಬಂದಿ ಹತ್ಯೆಗೈದಿತ್ತು. ಆಫ್‌ಸ್ಪ ಹಿಂದಕ್ಕೆ ಪಡೆಯಬೇಕು ಎಂದು ಸತತ ಪ್ರತಿಭಟನೆಗಳು ನಡೆದಿದ್ದಲ್ಲದೆ ನಾಗಾಲ್ಯಾಂಡ್ ವಿಧಾನಸಭೆಯಲ್ಲಿ ಈ ಬಗ್ಗೆ ಸರ್ವಾನುಮತದ ನಿರ್ಣಯ ಅಂಗೀಕರಿಸಲಾಗಿತ್ತು.

ಈ ಬೆಳವಣಿಗೆಗಳ ನಂತರದಲ್ಲೂ ಗೃಹ ವ್ಯವಹಾರಗಳ ಸಚಿವಾಲಯ ಗುರುವಾರ ಆಫ್‌ಸ್ಪ ಅವಧಿ ವಿಸ್ತರಿಸಿ ಅಧಿಸೂಚನೆಯನ್ನು ಹೊರಡಿಸಿದೆ.

ನಾಗಾಲ್ಯಾಂಡ್‌ನ ವಿವಾದಾತ್ಮಕ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯನ್ನು ಹಿಂಪಡೆಯುವ ಸಾಧ್ಯತೆಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ಕೆಲವು ದಿನಗಳ ಹಿಂದಷ್ಟೇ ಉನ್ನತ ಮಟ್ಟದ ಸಮಿತಿಯನ್ನೂ ರಚಿಸಿದೆ.

ಯೋಧರ ವಿಚಾರಣೆ

ಕೊಹಿಮಾ (ಪಿಟಿಐ): ಭದ್ರತಾ ಪಡೆಗಳು 14 ಮಂದಿ ನಾಗರಿಕರನ್ನು ಹತ್ಯೆಗೈದ ಪ್ರಕರಣಕ್ಕೆ ಸಂಬಂಧಿಸಿದಂತೆ ಗುರುವಾರ ವಿಶೇಷ ತನಿಖಾ ದಳದ ಅಧಿಕಾರಿಗಳು ಸೇನಾಪಡೆಯ ಯೋಧರ ವಿಚಾರಣೆ ನಡೆಸಿದರು.

ಸೇನಾಪಡೆಯ ಘಟಕದ ಯೋಧರನ್ನು ರಾಜ್ಯ ಸರ್ಕಾರ ರಚಿಸಿರುವ ತನಿಖಾ ತಂಡ ತನಿಖೆಗೆ ಒಳಪಡಿಸಿರುವುದು ಇದೇ ಮೊದಲು.

ತನಿಖಾ ದಳದ 22 ಸದಸ್ಯರ ತಂಡವು ಅಸ್ಸಾಂನ ಜೊರ್ಹತ್‌ನಲ್ಲಿರುವ ರೈನ್ ಫಾರೆಸ್ಟ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಯೋಧರನ್ನು ವಿಚಾರಣೆಗೆ ಒಳಪಡಿಸಿತು.

ಅಧಿಸೂಚನೆಗೆ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ್ ಸುರ್ಜೆವಾಲಾ ಅವರು, ಶಾಂತಿಯುತವಾಗಿದ್ದ ಈಶಾನ್ಯ ರಾಜ್ಯವನ್ನು ಮೋದಿ ಸರ್ಕಾರ ಗಲಭೆಯ ಕೂಪಕ್ಕೆ ತಳ್ಳಿದೆ ಎಂದು ಟೀಕಿಸಿದ್ದಾರೆ.

ಮನೆಯಿಂದ ಹೊರಗೆ ಬನ್ನಿ: ಪ್ರಿಯಾಂಕಾ ವಿರುದ್ಧ ಶಾ ಹೇಳಿಕೆ


• ಸಂಜಯ್ ಪಾಂಡೆ

ಲಖನೌ: ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು 'ಬೆಹೆನ್ ಜೀ' ಎಂದು ಸಂಬೋಧಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಚುನಾವಣೆ ಸಮೀಪಿಸಿದೆ, ಮನೆಯಿಂದ ಹೊರಗೆ ಬನ್ನಿ ಎಂದು ಹೇಳಿದ್ದಾರೆ.

ಉತ್ತರ ಪ್ರದೇಶದ ಮೊರಾದಾಬಾದ್‌ನಲ್ಲಿ ಗುರುವಾರ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಮಿತ್ ಶಾ, ಅಖಿಲೇಶ್ ಯಾವದ್, ಮಾಯಾವತಿ ಹಾಗೂ ಪ್ರಿಯಾಂಕಾ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದರು.

ಪ್ರಿಯಾಂಕಾ ಗಾಂಧಿ ಅವರನ್ನು ಉದ್ದೇಶಿಸಿ ಮಾತನಾಡಿದ ಅಮಿತ್ ಶಾ, 'ಬೆಹೆನ್ ಜೀಗೆ ನೆಗಡಿ ಆದಂತಿದೆ... ಚುನಾವಣೆ ಸಮೀಪಿಸಿದೆ...ಮನೆಯಿಂದ ಹೊರಗೆ ಬನ್ನಿ' ಎಂದು ಹೇಳಿದ್ದಾರೆ.

'ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಿದವರು ಮತ್ತೆ ಅಧಿಕಾರಕ್ಕೆ ಬರಬೇಕು ಎಂದು ನೀವು ಅಂದುಕೊಂಡಿದ್ದರೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶದ


ಅಮಿತ್ ಶಾ

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಮತ ನೀಡಿ' ಎಂದು ಮನವಿ ಮಾಡಿದರು.

'ಹಿಂದಿನ ಸರ್ಕಾರಗಳು ಅಧಿಕಾರದಲ್ಲಿದ್ದಾಗ ದೇಶದಲ್ಲಿ ಭಯೋತ್ಪಾದನಾ ದಾಳಿ ನಡೆದಾಗ ಪಾಕಿಸ್ತಾನಕ್ಕೆ ತಕ್ಕ ಪ್ರತ್ಯುತ್ತರ ನೀಡುವ ಧೈರ್ಯ ಮಾಡಲಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಬಳಿಕ ಪರಿಸ್ಥಿತಿ ಬದಲಾಯಿತು. ಉರಿ ಹಾಗೂ ಪುಲ್ವಾಮಾ ದಾಳಿಯ ಬಳಿಕ ನಾವು ಪಾಕ್‌ಗೆ ನುಗ್ಗಿ ದಾಳಿ ನಡೆಸಿದೆವು' ಎಂದು ಹೇಳಿದರು.


'ಉತ್ತರ ಪ್ರದೇಶದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಅಖಿಲೇಶ್, ಮಾಯಾವತಿ ಮತ್ತು ಪ್ರಿಯಾಂಕಾ ಕೈಜೋಡಿಸಿಕೊಂಡರೂ ಬಿಜೆಪಿ ಗೆಲುವು ದಾಖಲಿಸಲಿದೆ. ಮೂರು ಪಕ್ಷಗಳು ಮೈತ್ರಿ ಮಾಡಿಕೊಂಡರೂ ಬಿಜೆಪಿಯನ್ನು ಸೋಲಿಸಲು ಸಾಧ್ಯವಿಲ್ಲ' ಎಂದು ಸವಾಲು ಹಾಕಿದರು.

ಪಂಜಾಬ್: ಆಶಾ ಕಾರ್ಯಕರ್ತೆಯರಿಗೆ ₹2,500 ಮಾಸಿಕ ಭತ್ಯೆ: ಸಿಎಂ ಚನ್ನಿ

ಚಂಡೀಗಡ: ಆಶಾ ಕಾರ್ಯಕರ್ತೆಯರಿಗೆ ₹2,500 ಮಾಸಿಕ ನಿಗದಿತ ಭತ್ಯೆಯನ್ನು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಗುರುವಾರ ಘೋಷಣೆ ಮಾಡಿದ್ದಾರೆ. ಮಧ್ಯಾಹ್ನದ ಬಿಸಿಯೂಟ ಕಾರ್ಯಕರ್ತೆಯರಿಗೆ ಮಾಸಿಕ ನಿಗದಿತ ಭತ್ಯೆಯಲ್ಲಿ ₹800 ಹೆಚ್ಚಿಸಲಾಗುವುದು ಎಂದು ತಿಳಿಸಿದ್ದಾರೆ.


ಚರಣ್‌ಜಿತ್ ಸಿಂಗ್ ಚನ್ನಿ

ಸ್ವಕ್ಷೇತ್ರ ಚಮಕೌರ್ ಸಾಹಿಬ್‌ನಲ್ಲಿ ಚುನಾವಣೆ ರ್‍ಯಾಲಿಯಲ್ಲಿ ಸಂದರ್ಭ ಸಿಎಂ ಚನ್ನಿ ಮಹತ್ವದ ಎರಡು ಘೋಷಣೆಗಳನ್ನು ಮಾಡಿದ್ದು, ಇದಕ್ಕಾಗಿ ₹124.25 ಕೋಟಿ ಮೀಸಲಿರಿಸುವುದಾಗಿ ತಿಳಿಸಿದ್ದಾರೆ.



ಸುಮಾರು 22,000 ಆಶಾ ಕಾರ್ಯಕರ್ತೆಯರು ಫಲಾನುಭವಿಗಳಾಗಲಿದ್ದಾರೆ. ನಿಗದಿತ ಭತ್ಯೆ ಜೊತೆಗೆ ₹5 ಲಕ್ಷ ವರೆಗೆ ಉಚಿತ ಆರೋಗ್ಯ ವಿಮೆಯೂ ಸಿಗಲಿದೆ. ಹಾಗೆಯೇ, 42,500 ಮಧ್ಯಾಹ್ನ ಬಿಸಿಯೂಟ ಕಾರ್ಯಕರ್ತೆಯರಿಗೆ ಮಾಸಿಕ ನಿಗದಿತ ಭತ್ಯೆ ₹2,200ರಿಂದ ₹3000ಕ್ಕೆ ಏರಿಕೆಯಾಗಲಿದೆ.

ಇತರ ಮಹಿಳಾ ಸರ್ಕಾರಿ ಉದ್ಯೋಗಿಗಳಂತೆ ಆಶಾ ಹಾಗೂ ಬಿಸಿಯೂಟ ಕಾರ್ಯಕರ್ತೆಯರಿಗೆ ಪೂರ್ಣ ಪ್ರಮಾಣದ ಮಾತೃತ್ವ ರಜೆ ನೀಡಲಾಗುವುದು. ನಿಗದಿತ ಭತ್ಯೆ ಹೆಚ್ಚಳವು ಜನವರಿ 1ರಿಂದ ಕಾರ್ಯರೂಪಕ್ಕೆ ಬರಲಿದೆ. ಈ ಹಿಂದೆ 10 ತಿಂಗಳು ನಿಗದಿತ ಭತ್ಯೆ ಸಿಗುತ್ತಿತ್ತು. ಮುಂದಿನ ದಿನಗಳಲ್ಲಿ ವರ್ಷದ 12 ತಿಂಗಳೂ ನಿಗದಿತ ಭತ್ಯೆ ಸಿಗಲಿದೆ ಎಂದು ಸಿಎಂ ಚನ್ನಿ ತಿಳಿಸಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ ಹೇಳಿಕೆ • ಉತ್ತರ ಪ್ರದೇಶದಲ್ಲಿ ನಿಗದಿತ ಅವಧಿಯಲ್ಲೇ ಚುನಾವಣೆ ನಡೆಸುವ ಸುಳಿವು

‘ಎಲ್ಲಾ ಪಕ್ಷಗಳು ಚುನಾವಣೆ ಬಯಸಿವೆ’

ಲಖನೌ (ಪಿಟಿಐ): ‘ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ನಿಗದಿತ ಅವಧಿಯಲ್ಲೇ ನಡೆಯಬೇಕು ಎಂದು ಎಲ್ಲಾ ರಾಜಕೀಯ ಪಕ್ಷಗಳು ಬಯಸಿವೆ’ ಎಂದು ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಅವರು ಹೇಳಿದ್ದಾರೆ.

ಕೋವಿಡ್‌ನ ಮೂರನೇ ಅಲೆ ಬರುವ ಅಪಾಯವಿರುವ ಕಾರಣ 2022ರ ಮಾರ್ಚ್‌ನಲ್ಲಿ ನಡೆಯಬೇಕಿರುವ ಚುನಾವಣೆಯನ್ನು ಮುಂದೂಡುವುದನ್ನು ಪರಿಗಣಿಸಿ ಎಂದು ಅಲಹಾಬಾದ್ ಹೈಕೋರ್ಟ್ ಇದೇ 23ರಂದು ಚುನಾವಣಾ ಆಯೋಗಕ್ಕೆ ಹೇಳಿತ್ತು. ಆದರೆ ಈಗ ಚುನಾವಣಾ ಆಯುಕ್ತರು, ‘ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಚುನಾವಣೆ ನಡೆಸಬೇಕು’ ಎಂದು ಹೇಳಿದ್ದಾರೆ. ಚುನಾವಣೆ ಮುಂದೂಡುವ ಸಾಧ್ಯತೆ ಇಲ್ಲ ಎಂಬ ಸೂಚನೆಯನ್ನು ಈ ಮೂಲಕ ಅವರು ನೀಡಿದ್ದಾರೆ.

ಸುಶೀಲ್ ಚಂದ್ರ ಅವರು ರಾಜಕೀಯ ಪಕ್ಷಗಳ ಜತೆಗೆ ಬುಧವಾರ ಸಭೆ ನಡೆಸಿದ್ದರು. ಸಭೆಯ ಮರುದಿನ ಈ ಬಗ್ಗೆ ಅವರು ವಿವರ ನೀಡಿದ್ದಾರೆ.

ಅಲ್ಲದೆ, ಚುನಾವಣೆ ನಡೆಯಬೇಕಿರುವುದರಿಂದ ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ ವೇಗ ನೀಡಿ ಎಂದು ಅವರು ಉತ್ತರ ಪ್ರದೇಶ ಸರ್ಕಾರಕ್ಕೆ ಹೇಳಿದ್ದಾರೆ.

‘ಪ್ರಚಾರ ರ‍್ಯಾಲಿಗಳಲ್ಲಿ ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಡೆಗಣಿಸುತ್ತಿರುವುದರ ಬಗ್ಗೆ ಮತ್ತು ದ್ವೇಷ ಭಾಷಣದ ಬಗ್ಗೆ ಕೆಲವು ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಆದರೆ ಕೋವಿಡ್ ನಿಯಂತ್ರಣ ಕ್ರಮಗಳನ್ನು ಅನುಸರಿಸುವಂತೆ ಎಚ್ಚರಿಕೆ ವಹಿಸಲಾಗುವುದು. ದ್ವೇಷ ಭಾಷಣ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಅವರು ಹೇಳಿದ್ದಾರೆ.

‘ಚುನಾವಣಾ ಅಕ್ರಮಗಳನ್ನು ತಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಆಯೋಗದ ಸಿವಿಜಿಲ್ ಆ್ಯಪ್ ಸಕ್ರಿಯವಾಗಲಿದೆ. ಚುನಾವಣಾ ಅಕ್ರಮಗಳ ಬಗ್ಗೆ ದೂರುದಾರರು ಈ ಆ್ಯಪ್ ಮೂಲಕ ದೂರು, ಚಿತ್ರ/ವಿಡಿಯೊ ಸಲ್ಲಿಸಬಹುದು. ಅದನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಅವರು ಹೇಳಿದ್ದಾರೆ.

‘ಕೆಲವು ಅಧಿಕಾರಿಗಳು ಆಡಳಿತ ಪಕ್ಷದ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಅಂತಹವರನ್ನು ಚುನಾವಣಾ ಕರ್ತವ್ಯದಿಂದ ದೂರ ಇಡುವಂತೆ ಹಲವು ಪಕ್ಷಗಳು ಮನವಿ ಸಲ್ಲಿಸಿವೆ. ಆ ಬೇಡಿಕೆಗಳನ್ನು ಪರಿಶೀಲಿಸಲಾಗುತ್ತದೆ. ಅಂತಹ ಅಧಿಕಾರಿಗಳಿಗೆ ಚುನಾವಣಾ ಕರ್ತವ್ಯದ ಹೊಣೆ ನೀಡುವುದಿಲ್ಲ’ ಎಂದು ಆಯುಕ್ತರು ಹೇಳಿದ್ದಾರೆ.

‘ಜನವರಿ 5ರಂದು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಚುನಾವಣೆಯ ಅಧಿಸೂಚನೆ ಬಂದು, ನಾಮಪತ್ರ ಸಲ್ಲಿಕೆ ಆರಂಭವಾಗುವವರೆಗೆ ಮತದಾರರ ಪಟ್ಟಿಗೆ ಆಕ್ಷೇಪ ಸಲ್ಲಿಸಲು ಅವಕಾಶವಿರಲಿದೆ. ರಾಜ್ಯದಲ್ಲಿ ಒಟ್ಟು 15 ಕೋಟಿಗೂ ಹೆಚ್ಚು ಅರ್ಹ ಮತದಾರರು ಇದ್ದಾರೆ. ಈ ಬಾರಿ 52.80 ಲಕ್ಷ ಹೊಸ ಮತದಾರರನ್ನು ಪಟ್ಟಿಗೆ ಸೇರಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ 5 ಮತಗಟ್ಟೆಗಳಲ್ಲಿನ ವಿವಿಪ್ಯಾಟ್‌ಗಳನ್ನು ಪರಸ್ಪರ ತಾಳೆ ಮಾಡಿ ನೋಡಲಾಗುತ್ತದೆ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಪಾಲಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಪ್ರಜಾ ಮತ — ಜನತಂತ್ರದ ಹಬ್ಬ



ಹಲ್ದ್ವಾನಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಯಾಣಿಸುತ್ತಿದ್ದ ವಾಹನದತ್ತ ಜನರು ಕೈಬೀಸಿದರು. ಈ ವೇಳೆ ಜನರು ಪರಸ್ಪರ ಅಂತರ ಕಾಯ್ದುಕೊಂಡಿರಲಿಲ್ಲ –ಪಿಟಿಐ ಚಿತ್ರ

ಕೋವಿಡ್ ನಿಯಂತ್ರಣಕ್ಕೆ ಕ್ರಮಗಳು

- ರಾಜ್ಯದಲ್ಲಿ ಲಸಿಕೆ ಪಡೆದುಕೊಳ್ಳಲು ಅರ್ಹರಾದ ಶೇ 86ರಷ್ಟು ಜನರಿಗೆ ಲಸಿಕೆಯ ಮೊದಲ ಡೋಸ್ ನಿಡಲಾಗಿದೆ. ಶೇ 49ರಷ್ಟು ಜನರಿಗೆ ಎರಡನೇ ಡೋಸ್ ನೀಡಲಾಗಿದೆ. ಮುಂದಿನ 15–20 ದಿನಗಳಲ್ಲಿ ಎಲ್ಲಾ ಅರ್ಹ ಜನರಿಗೆ ಮೊದಲ ಡೋಸ್ ನೀಡಲಾಗುತ್ತದೆ
- ರಾಜ್ಯದಲ್ಲಿ ಮತಗಟ್ಟೆಗಳ ಸಂಖ್ಯೆಯನ್ನು ಏರಿಸಲಾಗಿದೆ. ಮೊದಲು 1,500 ಜನರಿಗೆ ಒಂದು ಮತಗಟ್ಟೆ ಸ್ಥಾಪಿಸಲಾಗುತ್ತಿತ್ತು. ಈಗ 1,250 ಜನರಿಗೆ ಒಂದು ಮತಗಟ್ಟೆ ಸ್ಥಾಪಿಸಲಾಗುತ್ತದೆ. ಹೀಗಾಗಿ ಒಟ್ಟು ಮತಗಟ್ಟೆಗಳ ಸಂಖ್ಯೆಯನ್ನು 1,63,351ರಿಂದ 1,74,351ಕ್ಕೆ ಏರಿಸಲಾಗಿದೆ
- ನಕ್ಸಲ್ ಪೀಡಿತ ಪ್ರದೇಶದಲ್ಲಿರುವ ಮತಗಟ್ಟೆಗಳನ್ನು ಹೊರತುಪಡಿಸಿ, ಬೇರೆಡೆ ಇರುವ ಎಲ್ಲಾ ಮತಗಟ್ಟೆಗಳಲ್ಲಿ ಮತದಾನದ ಅವಧಿಯನ್ನು ಒಂದು ತಾಸು ವಿಸ್ತರಿಸಲಾಗಿದೆ
- ಚುನಾವಣೆ ಕರ್ತವ್ಯದಲ್ಲಿರುವ ಎಲ್ಲಾ ಅಧಿಕಾರಿಗಳು ಕನಿಷ್ಠ ಎರಡೂ ಡೋಸ್ ಹಾಕಿಸಿಕೊಳ್ಳಬೇಕು. ಅಗತ್ಯವಿದ್ದವರಿಗೆ ಮುನ್ನೆಚ್ಚರಿಕಾ ಡೋಸ್ ಅನ್ನು ಸಹ ನೀಡಲಾಗುತ್ತದೆ. ಈ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಸೂಚನೆ ನೀಡಲಾಗಿದೆ
- ಮತಗಟ್ಟೆಗಳಲ್ಲಿ ಥರ್ಮಲ್ ಸ್ಕ್ಯಾನರ್ ಮತ್ತು ಸ್ಯಾನಿಟೈಸರ್ ಇಡಲಾಗುತ್ತದೆ. ಅಂತರ ಕಾಯ್ದುಕೊಳ್ಳಲು ಒತ್ತು ನೀಡಲಾಗುತ್ತದೆ
- ಅಂಗವಿಕಲರು, 80 ವರ್ಷ ಮೇಲ್ಪಟ್ಟವರು ಮತ್ತು ಕೋವಿಡ್ ಪೀಡಿತರು ತಮ್ಮ ಮನೆಯಿಂದಲೇ ಅಂಚೆ ಮತದಾನ ಮಾಡಲು ಅವಕಾಶ ಮಾಡಿಕೊಡಲಾಗುತ್ತದೆ. ಅಂತಹ ಮತದಾರರ ವಿವರವನ್ನು ರಾಜಕೀಯ ಪಕ್ಷಗಳಿಗೂ ನೀಡಲಾಗುತ್ತದೆ. ಮತದಾನದ ವೇಳೆ ಪಕ್ಷಗಳ ಏಜೆಂಟರು ಉಪಸ್ಥಿತರಿರಲು ಮತ್ತು ಗೋಪ್ಯ ಮತದಾನ ನಡೆಸಲು ಒತ್ತು ನೀಡಲಾಗುತ್ತದೆ

ಚುನಾವಣಾ ಕಣದಲ್ಲಿ

- ಪಂಜಾಬ್‌ನಲ್ಲಿ ಈಚೆಗೆ ಬಿಜೆಪಿ ಸೇರಿದ್ದ ಶಿರೋಮಣಿ ಅಕಾಲಿ ದಳದ ಮಜಿಂದರ್ ಸಿಂಗ್ ಸಿರ್ಸಾ ಮತ್ತು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ರಾಣಾ ಗುರುಮಿತ್ ಸಿಂಗ್ ಸೋಧಿ ಅವರಿಗೆ ಕೇಂದ್ರ ಸರ್ಕಾರವು ಝಡ್ ಶ್ರೇಣಿಯ ಭದ್ರತೆ ನೀಡಿದೆ
- ಗೋವಾ: ‘ಪಕ್ಷವನ್ನು ತೊರೆದು, ಬೇರೆ ಪಕ್ಷವನ್ನು ಸೇರುವುದಿಲ್ಲ’ ಎಂಬ ಪ್ರಮಾಣ ಇರುವ ಪತ್ರಕ್ಕೆ ಸಹಿ ಮಾಡಲು ಎಎಪಿಯು ತನ್ನ ಎಲ್ಲಾ ಅಭ್ಯರ್ಥಿಗಳಿಗೆ ಸೂಚಿಸಿದೆ. ಚುನಾವಣೋತ್ತರ ಪಕ್ಷಾಂತರವನ್ನು ತಡೆಯಲು ಹೀಗೆ ಮಾಡಲಾಗುತ್ತಿದೆ ಎಂದು ಪಕ್ಷವು ಹೇಳಿದೆ
- ಉತ್ತರ ಪ್ರದೇಶ: ವಾಲ್ಮೀಕಿ ಜನಾಂಗವನ್ನು ಪ್ರತಿನಿಧಿಸುವ ಅಭ್ಯರ್ಥಿಗೆ ಟಿಕೆಟ್ ನೀಡಲಾಗುವುದು. ಸೂಕ್ತ ವ್ಯಕ್ತಿಯನ್ನು ಜನಾಂಗದ ಜನರೇ ಸೂಚಿಸಿ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಕರೆ ನೀಡಿದ್ದಾರೆ
- ಉತ್ತರ ಪ್ರದೇಶ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಯಾವುದೇ ಪಕ್ಷದ ಪರವಾಗಿ ಪ್ರಚಾರ ನಡೆಸಲು ಸಿದ್ಧನಿದ್ದೇನೆ ಎಂದು ಡಾ.ಕಫೀಲ್ ಖಾನ್ ಘೋಷಿಸಿದ್ದಾರೆ
- ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಜನರ ವಿಶ್ವಾಸ ಕಳೆದುಕೊಂಡಿದ್ದಾರೆ. ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಲಿ ಎಂದು ಅಕಾಲಿ ದಳದ ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ಸವಾಲು ಹಾಕಿದ್ದಾರೆ
- ಪಂಜಾಬ್ ವಿಧಾನಸಭಾ ಚುನಾವಣೆಗೆ ಆಮ್ ಆದ್ಮಿ ಪಕ್ಷ ಆರನೇ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದೆ. ಇದರಲ್ಲಿ ಎಂಟು ಅಭ್ಯರ್ಥಿಗಳನ್ನು ಹೆಸರಿಸಲಾಗಿದ್ದು, ಈವರೆಗೆ 96 ಅಭ್ಯರ್ಥಿಗಳನ್ನು ಅಖೈರುಗೊಳಿಸಿದೆ
- ಈಶಾನ್ಯ ರಾಜ್ಯಗಳಲ್ಲಿ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಬಂಡಾಯ, ಅಸ್ಥಿರತೆ ಹಾಗೂ ಅಸಮಾನತೆ ಇದ್ದವು. ಆದರೆ ಬಿಜೆಪಿಯು ಮೂಲಸೌಕರ್ಯ ಅಭಿವೃದ್ಧಿ, ಅನ್ವೇಷಣೆ ಹಾಗೂ ಸಮಗ್ರತೆ ತಂದಿದೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದ್ದಾರೆ

ಉತ್ತರಾಖಂಡ ಹಿಂದುಳಿಯಲು ಕಾಂಗ್ರೆಸ್ ಕಾರಣ: ಮೋದಿ ಟೀಕೆ

ಹಲ್ದ್ವಾನಿ/ಡೆಹ್ರಾಡೂನ್ (ಪಿಟಿಐ): ‘ಕೇಂದ್ರ ಮತ್ತು ಉತ್ತರಾಖಂಡದಲ್ಲಿ ಈ ಹಿಂದೆ ಆಡಳಿತ ನಡೆಸಿದ್ದ ಕಾಂಗ್ರೆಸ್ ದಶಕಗಳ ಕಾಲ ಅಭಿವೃದ್ಧಿ ಯೋಜನೆಗಳನ್ನು ಚುರುಕುಗೊಳಿಸಲಿಲ್ಲ. ಅದರಿಂದಾಗಿ ರಾಜ್ಯದ ಗ್ರಾಮೀಣ ಭಾಗದ ಜನರು ವಲಸೆ ಹೋಗಬೇಕಾಯಿತು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ದೂಷಿಸಿದರು.



ಹಲ್ದ್ವಾನಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಷಣ

ಉತ್ತರಾಖಂಡದ ಹಲ್ದ್ವಾನಿಯಲ್ಲಿ ನಡೆದ ರ‍್ಯಾಲಿಯಲ್ಲಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಉತ್ತರಾಖಂಡದ ಕಾಂಗ್ರೆಸ್ ಸರ್ಕಾರ ಲೂಟಿ ಮಾಡುವುದರಲ್ಲಿ ಮಾತ್ರ ಆಸಕ್ತಿ ತೋರಿತು ಎಂದರು.

ಇದೇ ವೇಳೆ, ₹5,747 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಲಖ್ವಾಡ್ ಜಲವಿದ್ಯುತ್ ಘಟಕವನ್ನು ಅವರು ಉದ್ಘಾಟಿಸಿದರು. ಅಲ್ಲದೆ, ₹12,000 ಕೋಟಿ ವೆಚ್ಚದ ವಿವಿಧ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದರು.

‘ಲಖ್ವಾಡ್ ಯೋಜನೆ ಕುರಿತು ಮಾತನಾಡಿದ ಅವರು, 1974ರಲ್ಲಿಯೇ ಈ ಯೋಜನೆ ರೂಪಿಸಲಾಗಿತ್ತು. ಆದರೆ ಅದು ಅನುಷ್ಠಾನಕ್ಕೆ ಬರಲು 46 ವರ್ಷಗಳು ಬೇಕಾದವು. ಲಖ್ವಾಡ್ ಯೋಜನೆ ಈ ಮೊದಲೇ ಜಾರಿ ಆಗಿದ್ದರೆ, ಉತ್ತರಾಖಂಡದಲ್ಲಿ ಕುಡಿಯುವ ನೀರು, ವಿದ್ಯುತ್, ನೀರಾವರಿ ಸಮಸ್ಯೆಗಳಿಗೆ ಪರಿಹಾರ ದೊರಕುತ್ತಿತ್ತು. ಇಂಥ ಯೋಜನೆಯನ್ನು ಇಷ್ಟು ವರ್ಷಗಳ ಕಾಲ ವಿಳಂಬ ಮಾಡಿದ್ದು ಈ ಹಿಂದೆ ಆಡಳಿತ ನಡೆಸಿದವರು ಮಾಡಿದ ಪಾಪ ಕೃತ್ಯವಲ್ಲವೇ. ನೀವು ಈ ಪಾಪ ಕೃತ್ಯವನ್ನು ಕ್ಷಮಿಸುತ್ತೀರಾ’ ಎಂದು ಅವರು ಜನರನ್ನು ಕೇಳಿದರು.

‘ಸಮರ್ಪಕ ರಸ್ತೆಗಳು ಮತ್ತು ಇತರ ಸೌಲಭ್ಯಗಳು ಇಲ್ಲವಾದ ಕಾರಣ ಉತ್ತರಾಖಂಡದ ಹಲವು ತಲೆಮಾರುಗಳು ತಮ್ಮ ಮನೆಗಳನ್ನು ತೊರೆಯಬೇಕಾಯಿತು. ನಾನು ಹೃದಯಪೂರ್ವಕ ಮತ್ತು ಆತ್ಮಪೂರ್ವಕವಾಗಿ ಉತ್ತರಾಖಂಡದ ಏಳಿಗೆಗಾಗಿ ಕೆಲಸ ಮಾಡುತ್ತಿದ್ದೇನೆ’ ಎಂದರು. ಈ ತಿಂಗಳಲ್ಲಿ ಮೋದಿ ಅವರು ಉತ್ತರಾಖಂಡಕ್ಕೆ ಭೇಟಿ ನೀಡುತ್ತಿರುವುದು ಇದು ಎರಡನೇ ಬಾರಿ.

ನುಡಿ-ಕಿಡಿ

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಅವಧಿಯಲ್ಲಿ ಬಾಹುಬಲಿಗಳು ಇಲ್ಲ, ಇರುವವರೆಲ್ಲರೂ ಬಜರಂಗಬಲಿಗಳೇ. ಎಸ್‌ಪಿ ಆಡಳಿತದಲ್ಲಿ ನಮ್ಮ ಹೆಣ್ಣುಮಕ್ಕಳು ಬಾಹುಬಲಿಗಳಿಂದ ದೌರ್ಜನ್ಯ ಅನುಭವಿಸಿದರು

ಅಮಿತ್ ಶಾ, ಕೇಂದ್ರ ಗೃಹಸಚಿವ

ಪಶ್ಚಿಮ ಬಂಗಾಳದಲ್ಲಿ ಎದುರಾದ ಹಿನ್ನಡೆಯ ಕಾರಣ, ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹಸಚಿವ ಅಮಿತ್ ಶಾ ಅವರು ಎಲ್ಲ ಕೆಲಸಗಳನ್ನು ಬಿಟ್ಟು ಉತ್ತರ ಪ್ರದೇಶ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ. ಆದರೆ ಅಲ್ಲಿ ಬಿಜೆಪಿ ಗೆಲುವಿನ ಸಾಧ್ಯತೆ ಕಡಿಮೆ

ಅಶೋಕ್ ಗೆಹಲೋತ್, ರಾಜಸ್ಥಾನ ಸಿಎಂ

ಸಭೆಗೆ ಅವಕಾಶ ನೀಡಿ: ಆಯೋಗಕ್ಕೆ ಕಾಂಗ್ರೆಸ್ ಪತ್ರ

ಲಖನೌ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತರ ಸಮ್ಮುಖದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ನಿಯೋಗವು ಅಧಿಕೃತವಾದ ನಿಯೋಗವಲ್ಲ. ಹಾಗಾಗಿ, ಮತ್ತೊಂದು ಸಭೆ ನಡೆಸಲು ಪಕ್ಷಕ್ಕೆ ಗುರುವಾರ ಅವಕಾಶ ನೀಡಬೇಕು ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಮನವಿ ಮಾಡಿದೆ.

ಉತ್ತರ ಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಅಜಯ್ ಕುಮಾರ್ ಲಲ್ಲು ಈ ಕುರಿತು ಚುನಾವಣಾ ಆಯೋಗಕ್ಕೆ ಬುಧವಾರ ಪತ್ರ ಬರೆದಿದ್ದಾರೆ. ‘ಕಾಂಗ್ರೆಸ್ ನಾಯಕರಾದ ಆರಾಧನಾ ಮಿಶ್ರಾ, ಪ್ರಮೋದ್ ತಿವಾರಿ ಮತ್ತು ನಸೀಮುದ್ದೀನ್ ಸಿದ್ದಿಖಿ ಅವರನ್ನೊಳಗೊಂಡ ಅಧಿಕೃತ ನಿಯೋಗಕ್ಕೆ ನಿಮ್ಮನ್ನು ಭೇಟಿ ಆಗಲು ಅವಕಾಶ ನೀಡಿ. ಚುನಾವಣೆಯನ್ನು ನಿರ್ದಿಷ್ಟ ಸಮಯದಲ್ಲಿ ಪಾರದರ್ಶಕವಾಗಿ ನಡೆಸಲು ಈ ನಿಯೋಗ ಸಲಹೆಗಳನ್ನು ನೀಡಲಿದೆ’ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ಈ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ, ‘ಕಾಂಗ್ರೆಸ್ ನೀಡಿದ್ದ ಪತ್ರದಲ್ಲಿ ಯಾವ ನಾಯಕರ ಹೆಸರುಗಳು ನಮೂದಾಗಿದ್ದವೋ ಅವರು ಸಭೆಯಲ್ಲಿ ಪಾಲ್ಗೊಂಡಿದ್ದರು’ ಎಂದರು.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಪೂರ್ವತಯಾರಿ ಪರಿಶೀಲಿಸಲು ಚುನಾವಣಾ ಆಯೋಗದ ಅಧಿಕಾರಿಗಳು ಲಖನೌಗೆ ಭೇಟಿ ನೀಡಿದ್ದರು. ಆ ವೇಳೆ ಹಲವು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜೊತೆ ಸರಣಿ ಸಭೆ ನಡೆಸಿದ್ದರು. ಕಾಂಗ್ರೆಸ್‌ನ ತ್ರಿಸದಸ್ಯ ನಿಯೋಗ ಕೂಡಾ ಆಯೋಗದ ಅಧಿಕಾರಿಗಳ ಜೊತೆ ಸಭೆ ನಡೆಸಿ ತಮ್ಮ ಬೇಡಿಕೆಗಳನ್ನು ಆಯೋಗದ ಎದುರು ಇರಿಸಿತ್ತು.

ಹಲ್ಲೆ: ದಲಿತ ಬಾಲಕಿಯ ಭೇಟಿ ಮಾಡಿದ ಪ್ರಿಯಾಂಕಾ

ಅಮೇಠಿ (ಪಿಟಿಐ): ಇಲ್ಲಿನ ಸಂಗ್ರಾಮಪುರದಲ್ಲಿ ಕಳ್ಳತನದ ಆರೋಪದಲ್ಲಿ ಹಲ್ಲೆಗೆ ಗುರಿಯಾಗಿದ್ದ ದಲಿತ ಬಾಲಕಿ ಮತ್ತು ಆಕೆಯ ಕುಟುಂಬದವರನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಗುರುವಾರ ಭೇಟಿಯಾಗಿದ್ದಾರೆ. ‘ಸಂತ್ರಸ್ತ ಬಾಲಕಿಗೆ ನ್ಯಾಯ ದೊರಕಿಸಲು ಅಗತ್ಯವಿರುವ ಎಲ್ಲಾ ರೀತಿಯ ನೆರವನ್ನು ಕಾಂಗ್ರೆಸ್ ನೀಡಲಿದೆ’ ಎಂದು ಅವರು ಹೇಳಿದ್ದಾರೆ.

ಸಂತ್ರಸ್ತ ಬಾಲಕಿಯನ್ನು ಮೂರು ಮಂದಿ ಪುರುಷರು ನೆಲಕ್ಕೆ ಅವುಚಿ ಹಿಡಿದು, ಆಕೆಯ ಪಾದಗಳಿಗೆ ದೊಣ್ಣೆಯಿಂದ ಹೊಡೆಯುತ್ತಿರುವ ವಿಡಿಯೊ ಬುಧವಾರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಆ ಮನೆಯ ಮಹಿಳೆಯರು ಸಹ ಕಳ್ಳತನದ ಬಗ್ಗೆ ಬಾಲಕಿಯನ್ನು ಬೈದು ಪ್ರಶ್ನಿಸುತ್ತಿರುವ ದೃಶ್ಯ ಆ ವಿಡಿಯೊದಲ್ಲಿ ಇತ್ತು.

ಘಟನೆ ನಡೆದು ಎರಡು ದಿನಗಳಾದರೂ ಕ್ರಮ ತೆಗೆದುಕೊಂಡಿಲ್ಲ ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ನೇತೃತ್ವದಲ್ಲಿ ಪ್ರತಿಭಟನೆ ನಡೆದಿತ್ತು. ಅವರನ್ನು ಪೊಲೀಸರು ಬಂಧಿಸಿದ್ದರು. ನಂತರ ವೈಯಕ್ತಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.


‘ತಪ್ಪಿತಸ್ಥರ ವಿರುದ್ಧ ಸರ್ಕಾರವು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು’ ಎಂದು ಪ್ರಿಯಾಂಕಾ ಅವರು ಟ್ವೀಟ್ ಮಾಡಿದ್ದರು. ಅದರ ಬೆನ್ನಲ್ಲೇ ಸಂತ್ರಸ್ತ ಬಾಲಕಿಯ ತಂದೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪೊಲೀಸರು ಗುರುವಾರ ಬೆಳಿಗ್ಗೆ ವೇಳೆಗೆ ಮೂವರು ಆರೋಪಿಗಳನ್ನು ಬಂಧಿಸಿದ್ದರು. ಮೂವರನ್ನೂ ನ್ಯಾಯಾಲಯದ ಎದುರು ಹಾಜರು ಮಾಡಲಾಗಿದೆ.

ಆರೋಪಿಗಳನ್ನು ಜೈಲಿಗೆ ಹಾಕಲಾಗಿದೆ. ಆನಂತರ ಪ್ರಿಯಾಂಕಾ ನೇತೃತ್ವದ ನಿಯೋಗವು ಸಂತ್ರಸ್ತ ಕುಟುಂಬವನ್ನು ಭೇಟಿ ಮಾಡಿದೆ.



ಪಂಜಾಬ್‌ನ ಭಟಿಂಡಾದಲ್ಲಿ ಗುರುವಾರ ನಡೆದ ಕಾಂಗ್ರೆಸ್‌ನ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಮತ್ತು ಶಾಸಕ ಗುರುಪ್ರೀತ್ ಸಿಂಗ್ ಕಂಗರ್ ಭಾಗಿಯಾಗಿದ್ದರು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,213
ಇಂದಿನ ಅಂತ್ಯ	17,203
▼	10
ದಿನದ ಕನಿಷ್ಠ	17,146

ವಿನಿಮಯ ದರ

$ ಡಾಲರ್	74.42
£ ಪೌಂಡ್	100.19
€ ಯುರೊ	84.14
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1192 (1200)
ಸೂರ್ಯಕಾಂತಿ (ರಿಫೈನ್ಡ್)	₹1260 (1260)
ಪಾಮೋಲಿನ್	₹1145 (1145)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹2800-3200
ಮಧ್ಯಮ	₹2000-2800
ಸಣ್ಣ	₹1000-2000


ಕೊಬ್ಬರಿ ಧಾರಣೆ

ಪುತ್ತೂರು	₹4500-11500
ತುಮಕೂರು	₹10200-12600
ತುರುವೇಕೆರೆ	₹18100-18200

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹20000-27000
2ನೇ ದರ್ಜೆ	₹10000-18000

ಕೆವೈಸಿ ಗಡುವು ಮಾರ್ಚ್ 31ರವರೆಗೆ ವಿಸ್ತರಣೆ: ಆರ್‌ಬಿಐ



ಮುಂಬೈ (ಪಿಟಿಐ): ಬ್ಯಾಂಕ್ ಖಾತೆಗೆ ಕೆವೈಸಿ (ನಿಮ್ಮ ಗ್ರಾಹಕರನ್ನು ಅರಿಯಿರಿ) ಮಾಹಿತಿಗಳನ್ನು ಅಪ್‌ಡೇಟ್ ಮಾಡಲು ಗ್ರಾಹಕರಿಗೆ ನೀಡಿದ್ದ ಗಡುವನ್ನು ಮಾರ್ಚ್ 31ರವರೆಗೆ ವಿಸ್ತರಣೆ ಮಾಡಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗುರುವಾರ ತಿಳಿಸಿದೆ.

ಕೆವೈಸಿ ಅಪ್‌ಡೇಟ್ ಮಾಡದೇ ಇರುವ ಗ್ರಾಹಕರ ವಿರುದ್ಧ ಮಾರ್ಚ್ 31ರವರೆಗೆ ಯಾವುದೇ ಕಠಿಣ ಕ್ರಮಗಳನ್ನು ತೆಗೆದುಕೊಳ್ಳದಂತೆ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಸಲಹೆ ನೀಡಿದೆ.

ಓಮೈಕ್ರಾನ್ ಸೃಷ್ಟಿಸಿರುವ ಅನಿಶ್ಚಿತ ವಾತಾವರಣದಿಂದಾಗಿ ಈ ನಿರ್ಧಾರ ಕೈಗೊಂಡಿರುವುದಾಗಿ ಅದು ಹೇಳಿದೆ.

ಕೊರೊನಾ ಸಾಂಕ್ರಾಮಿಕದ ಎರಡನೇ ಅಲೆಯ ಕಾರಣಕ್ಕಾಗಿ ಆರ್‌ಬಿಐ ಈ ಹಿಂದೆ ಮೇ ತಿಂಗಳಿನಲ್ಲಿ ಕೆವೈಸಿ ಅಪ್‌ಡೇಟ್ ಮಾಡುವ ಗಡುವನ್ನು ಡಿಸೆಂಬರ್ ತಿಂಗಳವರೆಗೂ ವಿಸ್ತರಣೆ ಮಾಡಿತ್ತು.

ಮುಂಬೈ ಧಾರಣೆ

ಶೇಂಗಾ

30-12-2021

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1145 (1150)
ಪಾಮ್ ವಾರದ ಡೆಲಿವರಿ	1143 (1143)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,550 (47,600)
ಬೆಳ್ಳಿ ಕೆ.ಜಿ	61,150 (61,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ


ತೆರಿಗೆ ವರಮಾನ ಸಂಗ್ರಹ ಹೆಚ್ಚಳ: ಇಂಡಿಯಾ ರೇಟಿಂಗ್ಸ್ ಸಂಸ್ಥೆ ವರದಿ

ವಿತ್ತೀಯ ಕೊರತೆ ಶೇ 6.6ಕ್ಕೆ ತಗ್ಗಲಿದೆ

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೆ ತೆರಿಗೆ ವರಮಾನ ಸಂಗ್ರಹವು ಉತ್ತಮ ಮಟ್ಟದಲ್ಲಿ ಇರುವುದು ಹಾಗೂ ಹಲವು ಸಚಿವಾಲಯಗಳು ನಿಗದಿಗಿಂತಲೂ ಕಡಿಮೆ ವೆಚ್ಚ ಮಾಡಿರುವುದರಿಂದ ವಿತ್ತೀಯ ಕೊರತೆಯು ಶೇ 6.6ಕ್ಕೆ ಇಳಿಕೆ ಆಗಲಿದೆ ಎಂದು ಇಂಡಿಯಾ ರೇಟಿಂಗ್ಸ್ ಸಂಸ್ಥೆಯು ಗುರುವಾರ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಪೂರಕ ಬೇಡಿಕೆಗಳಿಗೆ ₹3.73 ಲಕ್ಷ ಕೋಟಿ ಅನುದಾನ ಒದಗಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ವರಮಾನ ಹೆಚ್ಚಳ ಆಗುತ್ತಿರುವುದರಿಂದ ಇದನ್ನು ಸರಿದೂಗಿಸಬಹುದು ಎಂದು ಅದು ತನ್ನ ವರದಿಯಲ್ಲಿ ಅಭಿಪ್ರಾಯಪಟ್ಟಿದೆ.

ಕೇಂದ್ರ ಸರ್ಕಾರವು ಶೇ 6.8ರ ವಿತ್ತೀಯ ಕೊರತೆ ಗುರಿಯನ್ನು ತಲುಪಲು ಕಷ್ಟವಾಗಲಿದೆ ಎಂದು ಆರ್‌ಬಿಐ ಬುಧವಾರ ಬಿಡುಗಡೆ ಮಾಡಿದ್ದ ತನ್ನ ಆರ್ಥಿಕ ಸ್ಥಿರತೆ ವರದಿಯಲ್ಲಿ ಅಭಿಪ್ರಾಯ ಪಟ್ಟಿದೆ. ಆದರೆ, ವಿತ್ತೀಯ ಕೊರತೆ ಪ್ರಮಾಣ ಎಷ್ಟಿರಲಿದೆ ಎನ್ನುವುದನ್ನು ಆರ್‌ಬಿಐ ನಿಖರವಾಗಿ ಹೇಳಿಲ್ಲ. ಈ ಬೆನ್ನಲ್ಲೇ ಇಂಡಿಯಾ ರೇಟಿಂಗ್ಸ್ ಈ ವರದಿ ಬಿಡುಗಡೆ ಮಾಡಿದೆ.



ಆರ್ಥಿಕ ಬೆಳವಣಿಗೆ ಮತ್ತು ಹಣದುಬ್ಬರ ಎರಡರಿಂದಲೂ ಇದುವರೆಗೆ ಆಗಿರುವ ತೆರಿಗೆ ಸಂಗ್ರಹಗಳು ಭಾರಿ ಲಾಭ ಪಡೆದಿವೆ ಎನ್ನುವುದನ್ನು ಸರ್ಕಾರದ ಹಣಕಾಸು ಅಂಕಿ–ಅಂಶಗಳು ತೋರಿಸುತ್ತಿವೆ. ಹಿಂದಿನ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆಯು ನಕಾರಾತ್ಮಕ ಮಟ್ಟದಲ್ಲಿ ಇದ್ದಿದ್ದು ಈ ಬಾರಿ ಜಿಡಿಪಿ ಬೆಳವಣಿಗೆಗೆ ಅನುಕೂಲ ಮಾಡಿಕೊಡುತ್ತಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 9.7ರಷ್ಟು ಗರಿಷ್ಠ ಬೆಳವಣಿಗೆ ಕಂಡಿದೆ. ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಶೇ 8.4ರಷ್ಟಾಗಿದೆ.

ಸರಾಸರಿ ತರಿಗೆ ವರಮಾನ ಸಂಗ್ರಹವು ಈ ಹಣಕಾಸು ವರ್ಷದಲ್ಲಿ ₹ 5.9 ಲಕ್ಷ ಕೋಟಿಗಳಷ್ಟು ಆಗಲಿದ್ದು, ಬಜೆಟ್ ಅಂದಾಜಿಗಿಂತಲೂ ಗರಿಷ್ಠ ಮಟ್ಟದ್ದಾಗಿರಲಿದೆ. ಒಟ್ಟಾರೆ ತೆರಿಗೆ ಸಂಗ್ರಹದಲ್ಲಿ ಕಾರ್ಪೊರೇಟ್ ತೆರಿಗೆ ಶೇ 28.4ರಷ್ಟು, ಆದಾಯ ತೆರಿಗೆ ಶೇ 16.3, ಜಿಎಸ್‌ಟಿ ಶೇ 14.7, ಕಸ್ಟಮ್ಸ್ ಸುಂಕ ಶೇ 14.2, ಎಕ್ಸೈಸ್ ಸುಂಕ ಶೇ 2.4 ಮತ್ತು ಇತರೆ ತೆರಿಗೆ ಶೇ 3.9ರಷ್ಟು ಇರಲಿದೆ. ಸರಾಸರಿ ತೆರಿಗೆ ಸಂಗ್ರಹದಲ್ಲಿ ನೇರ ತೆರಿಗೆಯ ಪಾಲು ಶೇ 44.7ರಷ್ಟು ಮತ್ತು ನೇರ ತೆರಿಗೆಯ ಪಾಲು ಶೇ 55.3ರಷ್ಟು ಇರಲಿದೆ ಎಂದು ಹೇಳಿದೆ.

ತೆರಿಗೆಯೇತರ ವರಮಾನ ಸಂಗ್ರಹವೂ ಬಜೆಟ್ ಅಂದಾಜಿಗಿಂತಲೂ ಹೆಚ್ಚಿಗೆ ಇರಲಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ತೆರಿಗೆಯೇತರ ವರಮಾನ ₹ 2.4 ಲಕ್ಷ ಕೋಟಿಗಳಷ್ಟು ಸಂಗ್ರಹ ಆಗುವ ಅಂದಾಜು ಮಾಡಲಾಗಿದ್ದು, ₹ 3.1 ಲಕ್ಷ ಕೋಟಿಗಳಷ್ಟು ಸಂಗ್ರಹ ಆಗಲಿದೆ ಎಂದು ಸಂಸ್ಥೆಯು ಹೇಳಿದೆ.

ಸಂಸ್ಥೆಯ ಅಂದಾಜಿನ ಪ್ರಕಾರ, ಸರ್ಕಾರದ ವರಮಾನ ವೆಚ್ಚವು ₹ 2.8 ಲಕ್ಷ ಕೋಟಿಗಳಷ್ಟು ಆಗಲಿದೆ. ಇದು ಬಜೆಟ್‌ನಲ್ಲಿ ಅಂದಾಜು ಮಾಡಿರುವುದಕ್ಕಿಂತಲೂ ಗರಿಷ್ಠ ಮಟ್ಟದ್ದಾಗಿರಲಿದೆ. ಅಲ್ಲದೆ 2021–22ನೇ ಹಣಕಾಸು ವರ್ಷಕ್ಕೆ ಪ್ರಸ್ತಾಪಿತ ವರಮಾನ ವೆಚ್ಚಕ್ಕಿಂತಲೂ ₹ 21,600 ಕೋಟಿಗಳಷ್ಟು ಹೆಚ್ಚಿಗೆ ಇರಲಿದೆ ಎಂದು ತಿಳಿಸಿದೆ.

ಷೇರು ವಿಕ್ರಯಕ್ಕೆ ಹಿನ್ನಡೆ

ಪ್ರಸಕ್ತ ಹಣಕಾಸು ವರ್ಷದ ಮೊದಲ ಏಳು ತಿಂಗಳನ್ನು ಗಮನಿಸಿದರೆ ಷೇರು ವಿಕ್ರಯದ ಗುರಿಯನ್ನು ತಲುಪಲು ಕೇಂದ್ರ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ ಎಂದು ಅದು ತಿಳಿಸಿದೆ. ಒಟ್ಟಾರೆ ₹ 1.75 ಲಕ್ಷ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ. ಆದರೆ ಈವರೆಗೆ ಸಂಗ್ರಹ ಆಗಿರುವುದು ₹ 9,364 ಕೋಟಿ ಮಾತ್ರ ಎಂದು ಮಾಹಿತಿ ನೀಡಿದೆ.

ಜವಳಿ ಮೇಲಿನ ಜಿಎಸ್‌ಟಿ ಹೆಚ್ಚಿಸದಂತೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜವಳಿ ಮತ್ತು ಉಡುಪುಗಳ ಮೇಲಿನ ಜಿಎಸ್‌ಟಿ ದರವನ್ನು ಶೇ 5ರಿಂದ ಶೇ 12ಕ್ಕೆ ಹೆಚ್ಚಳ ಮಾಡುವ ಪ್ರಸ್ತಾವ ಕೈಬಿಡಬೇಕು’ ಎಂದು ಸಿಲ್ಕ್ ಅಸೋಸಿಯೇಷನ್ ಆಫ್ ಇಂಡಿಯಾ ಒತ್ತಾಯಿಸಿದೆ.

‘ಜವಳಿ ಮತ್ತು ಉಡುಪುಗಳ ಜಿಎಸ್‌ಟಿ ದರವನ್ನು ಜ.1ರಿಂದ ಹೆಚ್ಚಿಸಲು ಜಿಎಸ್‌ಟಿ ಮಂಡಳಿಯ 45ನೇ ಸಭೆಯಲ್ಲಿ ಶಿಫಾರಸು ಮಾಡಲಾಗಿದೆ. ಈ ನಿರ್ಧಾರವು ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳ ಕ್ಷೇತ್ರದಲ್ಲಿ ನಿರಾಸಕ್ತಿ ಮೂಡಿಸಿದೆ’ ಎಂದು ಅಸೋಸಿಯೇಷನ್ ಕಾರ್ಯದರ್ಶಿ ಎಂ. ರಾಮಚಂದ್ರಗೌಡ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಕೋವಿಡ್ ಸಾಂಕ್ರಾಮಿಕದ ಹೊಡೆತದಿಂದ ತತ್ತರಿಸಿ ಹೋಗಿರುವ ಉದ್ಯಮ ಎಚ್ಚೆತ್ತುಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ಜಿಎಸ್‌ಟಿ ದರ ಏರಿಕೆ ಮಾಡಿದರೆ ಕೈಗಾರಿಕೆಗಳು ಮತ್ತು ಮಾರಾಟ ಕೇಂದ್ರಗಳು ತಾನಾಗಿಯೇ ಮುಚ್ಚುತ್ತವೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಜಿಎಸ್‌ಟಿ ದರ ಏರಿಕೆಯಾದರೆ ಅದನ್ನು ಗ್ರಾಹಕರಿಗೆ ವರ್ಗಾಯಿಸುವ ಅನಿವಾರ್ಯತೆ ಇದೆ. ಬಿಪಿಎಲ್ ಕುಟುಂಬಗಳಿಗೆ ಅನ್ನ, ಬಟ್ಟೆ, ವಸತಿಯನ್ನು ಕೈಗೆಟಕುವ ದರದಲ್ಲಿ ಸರ್ಕಾರ ಕಲ್ಪಿಸಬೇಕಾಗುತ್ತದೆ. ಆಹಾರದ ನಂತರದ ಸ್ಥಾನದಲ್ಲಿ ಬಟ್ಟೆ ಇದೆ. ಅತೀ ಬಡವರೂ ತಮ್ಮ ಮೈಮುಚ್ಚಿಕೊಳ್ಳಲು ಬಟ್ಟೆ ಖರೀದಿ ಮಾಡಲೇಬೇಕು. ದರ ಏರಿಕೆಯಾದರೆ ಬಡವರು ಬಟ್ಟೆ ಖರೀದಿ ಮಾಡುವುದೇ ಕಷ್ಟವಾಗಲಿದೆ’ ಎಂದರು.

ಶೇ 65ಕ್ಕೂ ಹೆಚ್ಚು ನೇಕಾರರು ದೊಡ್ಡ ಉದ್ಯಮಿಗಳೊಂದಿಗೆ ಪೈಪೋಟಿ ನೀಡಲು ಸಾಧ್ಯವಾಗುತ್ತಿಲ್ಲ. ಇದರ ನಡುವೆ ಜಿಎಸ್‌ಟಿಯೂ ಹೊರೆಯಾದರೆ ನೇಕಾರ ಕುಟುಂಬಗಳಿಗೆ ನಿರುದ್ಯೋಗ ಸಮಸ್ಯೆ ಕಾಡಲಿದೆ ಎಂದು ಹೇಳಿದರು.

‘ಆದ್ದರಿಂದ ಜಿಎಸ್‌ಟಿ ದರವನ್ನು ಶೇ 5ರಲ್ಲೇ ಮುಂದುವರಿಸಬೇಕು. ಜಿಎಸ್‌ಟಿ ಅನ್ವಯವಾಗುವ ಮೊತ್ತವನ್ನು ₹40 ಲಕ್ಷದಿಂದ ₹2 ಕೋಟಿಗೆ ಹೆಚ್ಚಳ ಮಾಡಬೇಕು. ಅಂತರ ರಾಜ್ಯ ಸಾಗಾಣಿಕೆಗೆ ಅವಕಾಶ ಕಲ್ಪಿಸಬೇಕು’ ಎಂದು ಒತ್ತಾಯಿಸಿದರು.

ಜಿಎಸ್‌ಟಿ ವಾರ್ಷಿಕ ರಿಟರ್ನ್ಸ್ ಸಲ್ಲಿಕೆ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ವಾರ್ಷಿಕ ರಿಟರ್ನ್ಸ್ ಸಲ್ಲಿಸಲು ನೀಡಿದ್ದ ಗಡುವನ್ನು ಕೇಂದ್ರ ಸರ್ಕಾರವು 2022ರ ಫೆಬ್ರುವರಿ 28ರವರೆಗೆ ವಿಸ್ತರಣೆ ಮಾಡಿದೆ.

2020–21ನೇ ಹಣಕಾಸು ವರ್ಷಕ್ಕೆ ಜಿಎಸ್‌ಟಿ ವಾರ್ಷಿಕ ರಿಟರ್ನ್ಸ್ ಸಲ್ಲಿಸಲು 2021ರ ಡಿಸೆಂಬರ್ 31ರ ಗಡುವು ಇತ್ತು. ಅದನ್ನು 2022ರ ಫೆಬ್ರುವರಿ 28ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಬುಧವಾರ ತಡರಾತ್ರಿ ಟ್ವೀಟ್ ಮಾಡಿದೆ.

ಜಿಎಸ್‌ಟಿಆರ್‌-9 ಎಂಬುದು ವಾರ್ಷಿಕ ರಿಟರ್ನ್ಸ್ ಆಗಿದೆ. ಜಿಎಸ್‌ಟಿಆರ್‌–9 ಮತ್ತು ಲೆಕ್ಕಪರಿಶೋಧಿತ ವಾರ್ಷಿಕ ಹಣಕಾಸು ಮಾಹಿತಿಯ ಸಮನ್ವಯದ ಸ್ವರೂಪವೇ ಜಿಎಸ್‌ಟಿಆರ್‌–9ಸಿ.



ಜಿಎಸ್‌ಟಿ ಪಾವತಿಸುವವರ ವಾರ್ಷಿಕ ವಹಿವಾಟು ಮೊತ್ತವು ₹ 2 ಕೋಟಿಗಿಂತಲೂ ಹೆಚ್ಚಿಗೆ ಇದ್ದರೆ ಅಂತವರು ‘ಜಿಎಸ್‌ಟಿಆರ್‌-9’ ಸಲ್ಲಿಸುವುದು ಕಡ್ಡಾಯ. ವಾರ್ಷಿಕ ವಹಿವಾಟು ಮೊತ್ತವು ₹ 5 ಕೋಟಿಗಿಂತ ಹೆಚ್ಚಿಗೆ ಇರುವವರು ‘ಜಿಎಸ್‌ಟಿಆರ್‌–9ಸಿ ಸಲ್ಲಿಸಬೇಕು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	24009-41169
ಕೋಕ	18800-37160
ಹಳೆಚಾಲಿ	46609-49800
ಹೊಸಚಾಲಿ	36015-41699
ಕಾರ್ಕಳ	
ಹೊಸತು	40000-45000
ಹಳತು	46000-53000
ಪುತ್ತೂರು	
ಹೊಸತು	27500-45000
ಹಳತು	11000-26000
ಸಿದ್ದಾಪುರ	
ಬಿಳಿಗೋಟು	26099-38299
ಚಾಲಿ	47699-48599
ಕೋಕ	22699-36812
ಹೊಸಚಾಲಿ	35969-40599
ಕೆಂಪುಗೋಟು	30112-35789
ರಾಶಿ	45099-48699
ತಟ್ಟಿಬೆಟ್ಟೆ	37099-46099
ಶಿರಸಿ	
ಬೆಟ್ಟೆ	38409-46339
ಬಿಳಿಗೋಟು	27692-41269
ಚಾಲಿ	36002-49769
ರಾಶಿ	42109-48561
ಯಲ್ಲಾಪುರ	
ಬಿಳಿಗೋಟು	29629-40111
ಚಾಲಿ	40261-49479
ಕೋಕ	22899-33299
ಕೆಂಪುಗೋಟು	28699-36899
ರಾಶಿ	44512-54178
ತಟ್ಟಿಬೆಟ್ಟೆ	38699-44250
ರಾಮನಗರ ರೇಷ್ಮೆ	
ಮಿಶ್ರತಳಿ	400-610
ದ್ವಿತಳಿ	433-815

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15400	15450	228.90 ಸೆಂಟ್ಸ್
ಎಸಿ	---	6800	6700	
ಆರ್‌ಪಿ	---	6500	6400	ಲಂಡನ್
ಆರ್‌ಸಿ	---	4000	3900	2482 ಡಾಲರ್ಸ್

ಭಾರತ ತಂಡದ ವೇಗದ ಬೌಲಿಂಗ್ ಶಕ್ತಿಯ ವಿಜೃಂಭಣೆ: ವಿರಾಟ್ ಕೊಹ್ಲಿ ಬಳಗಕ್ಕೆ ಐತಿಹಾಸಿಕ ವಿಜಯ

ಸೆಂಚುರಿಯನ್‌ನಲ್ಲಿ 'ಪ್ರಥಮ' ಜಯಭೇರಿ

ಸೆಂಚುರಿಯನ್ (ಪಿಟಿಐ): ಈ ವರ್ಷದ ಆರಂಭದಲ್ಲಿ ಆಸ್ಟ್ರೇಲಿಯಾ ತಂಡವನ್ನು ಭಾರತ ತಂಡವು ಬ್ರಿಸ್ಬೇನ್‌ನ ಗಾಬಾ ಕ್ರೀಡಾಂಗಣದಲ್ಲಿ ಮೊದಲ ಬಾರಿಗೆ ಮಣಿಸಿತ್ತು. ಇದೀಗ ವರ್ಷಾಂತ್ಯದಲ್ಲಿ ದಕ್ಷಿಣ ಆಫ್ರಿಕಾದ ಸೆಂಚುರಿಯನ್ ಭದ್ರಕೋಟೆಯನ್ನು ಪುಡಿಗಟ್ಟಿತು.

ಸೂಪರ್‌ಸ್ಪೋರ್ಟ್ ಕ್ರೀಡಾಂಗಣದಲ್ಲಿ ಗುರುವಾರ ಮುಕ್ತಾಯವಾದ ಮೊದಲ ಟೆಸ್ಟ್‌ನಲ್ಲಿ ಭಾರತದ 'ತ್ರಿವಳಿ ವೇಗಿ' ಗಳಾದ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ ಮತ್ತು ಮೊಹಮ್ಮದ್ ಸಿರಾಜ್ ಅವರ ದಾಳಿಯ ಮುಂದೆ ಆತಿಥೇಯ ದಕ್ಷಿಣ ಆಫ್ರಿಕಾ ತಂಡವು 113 ರನ್‌ಗಳಿಂದ ಪರಾಭವಗೊಂಡಿತು. ಇದೇ ಮೊದಲ ಬಾರಿಗೆ ಭಾರತವು ಸೆಂಚುರಿಯನ್‌ನಲ್ಲಿ ವಿಜಯೋತ್ಸವ ಆಚರಿಸಿತು. ಮೂರು ಟೆಸ್ಟ್‌ಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು. ದಕ್ಷಿಣ ಆಫ್ರಿಕಾ ನೆಲದಲ್ಲಿ ಮೊದಲ ಬಾರಿ ಸರಣಿ ಗೆಲ್ಲುವ ಕನಸಿಗೆ ವಿರಾಟ್ ಕೊಹ್ಲಿ ಬಳಗವು ಮುನ್ನುಡಿ ಬರೆಯಿತು.ಆಸ್ಟ್ರೇಲಿಯಾದಲ್ಲಿ ಸರಣಿ ವಿಜಯ, ಇಂಗ್ಲೆಂಡ್‌ನಲ್ಲಿ ಸರಣಿಯಲ್ಲಿ ಮೇಲುಗೈ ಸಾಧಿಸಿದ ವರ್ಷದಲ್ಲಿ ವಿದೇಶಿ ಅಂಗಳದಲ್ಲಿ ಮತ್ತೊಂದು ಮಹತ್ವದ ಸಾಧನೆಯ ನಿರೀಕ್ಷೆ ಗರಿಗೆದರಿದೆ.


ವಿಕೆಟ್ ಗಳಿಸಿದ ಮೊಹಮ್ಮದ್ ಸಿರಾಜ್ ಸಂಭ್ರಮ —ಎಪಿ/ಪಿಟಿಐ ಚಿತ್ರ

305 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ತಂಡವು ಬುಧವಾರ ದಿನದಾಟದ ಮುಕ್ತಾಯಕ್ಕೆ 40.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 94 ರನ್ ಗಳಿಸಿತ್ತು. ಕ್ರೀಸ್‌ನಲ್ಲಿ ಅರ್ಧಶತಕ ಗಳಿಸಿದ್ದ ನಾಯಕ ಡೀನ್ ಎಲ್ಗರ್ ಇದ್ದರು. ಆದರೆ, ಕೊನೆಯ ದಿನದಾಟದಲ್ಲಿ ಆತಿಥೇಯ ತಂಡವು 191 ರನ್‌ಗಳಿಗೆ ಎಲ್ಲ ವಿಕೆಟ್‌ಗಳನ್ನೂ ಕಳೆದುಕೊಂಡಿತು. ಎರಡೂ ಇನಿಂಗ್ಸ್‌ಗಳಲ್ಲಿ ಆತಿಥೇಯ ತಂಡವು 200ರ ಗಡಿಯನ್ನೂ ದಾಟಲಿಲ್ಲ.

ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡವು ಗಳಿಸಿದ್ದ 327 ರನ್‌ಗಳಿಗೆ ಉತ್ತರವಾಗಿ ದಕ್ಷಿಣ ಆಫ್ರಿಕಾ 197 ರನ್ ಗಳಿಸಿತ್ತು. 130 ರನ್‌ಗಳ ಮುನ್ನಡೆ ಗಳಿಸಿದ್ದ ವಿರಾಟ್ ಬಳಗವು ಎರಡನೇ ಇನಿಂಗ್ಸ್‌ನಲ್ಲಿ 174 ರನ್ ಗಳಿಸಿತ್ತು.

ಗುರುವಾರ ಮಳೆ ಬರುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು. ಆದರೆ ಆತಿಥೇಯ ಬಳಗ ಸೋಲುವುದನ್ನು ತಪ್ಪಿಸಲು ಮಳೆ ಬರಲಿಲ್ಲ. ಊಟದ ವಿರಾಮದವರೆಗೂ ಬ್ಯಾಟರ್‌ಗಳು ತಂಡದ ಸೋಲು ತಪ್ಪಿಸಲು ಶ್ರಮಿಸಿದರು. ಆದರೆ, ಭಾರತದ ಬೌಲರ್‌ಗಳು ತಾಳ್ಮೆಗೆಡದೇ ತಮ್ಮ ಮೊನಚು ದಾಳಿಯನ್ನು ಮುಂದುವರಿಸಿದರು.

51ನೇ ಓವರ್‌ನಲ್ಲಿ ಬೂಮ್ರಾ ಆತಿಥೇಯ ನಾಯಕ ಡೀನ್ (77; 156ಎಸೆತ) ವಿಕೆಟ್ ಗಳಿಸಿದರು. ಆಗ ದಕ್ಷಿಣ ಆಫ್ರಿಕಾ ತಂಡದಲ್ಲಿ ಇದ್ದ ಅಲ್ಪಸ್ವಲ್ಪ ಆಸೆಯೂ ಕಮರಿತು. ತೆಂಬಾ ಬವುಮಾ (ಔಟಾಗದೆ 35; 80ಎ) ಮತ್ತು ಕ್ವಿಂಟನ್ ಡಿ ಕಾಕ್ (21; 28ಎ) ಬಿಟ್ಟರೆ ಉಳಿದವರು ಹೋರಾಟ ಮಾಡಲಿಲ್ಲ. ಕ್ವಿಂಟನ್ ವಿಕೆಟ್ ಪಡೆದ ಸಿರಾಜ್ ಸಂಭ್ರಮಿಸಿದರು. ಕೊನೆಯ ಎರಡು ವಿಕೆಟ್‌ಗಳನ್ನು ಗಳಿಸಿದ ಸ್ಪಿನ್ನರ್ ಅಶ್ವಿನ್ ಪಂದ್ಯಕ್ಕೆ ತೆರೆ ಎಳೆದರು.

ಈ ಪಂದ್ಯದಲ್ಲಿ ಭಾರತದ ಮಧ್ಯಮವೇಗಿಗಳು ಒಟ್ಟು 18 ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ ಕೆ.ಎಲ್. ರಾಹುಲ್ ಪಂದ್ಯಶ್ರೇಷ್ಠ ಗೌರವ ಗಳಿಸಿದರು.


ಪಂದ್ಯಶ್ರೇಷ್ಠ ಟ್ರೋಫಿಯೊಂದಿಗೆ ಕೆ.ಎಲ್. ರಾಹುಲ್ —ಎಎಫ್‌ಪಿ ಚಿತ್ರ



ಸೋಲು ಬೇಸರ ತರಿಸಿದೆ ನಿಜ. ಆದರೆ ನಮ್ಮ ಆತ್ಮವಿಶ್ವಾಸವನ್ನು ಕುಗ್ಗಿಸಿಲ್ಲ. ಜೋಹಾನ್ಸ್‌ಬರ್ಗ್‌ನಲ್ಲಿ ನಡೆಯುವ ಮುಂದಿನ ಪಂದ್ಯದಲ್ಲಿ ಪುಟಿದೇಳುವ ಸಾಮರ್ಥ್ಯ ಇದೆ.
ಡೀನ್ ಎಲ್ಗರ್ ದ. ಆಫ್ರಿಕಾ ನಾಯಕ

ಗಾಬಾದಿಂದ ಸೆಂಚುರಿಯನ್‌ವರೆಗಿನ ಭಾರತಕ್ಕೆ ಟೆಸ್ಟ್ ಕ್ರಿಕೆಟ್ ಪ್ರಯಾಣವು 2021ರ ವರ್ಷವನ್ನು ಅವಿಸ್ಮರಣೀಯಗೊಳಿಸಿದೆ. -ಕೆ.ಎಲ್. ರಾಹುಲ್ ಭಾರತ ತಂಡದ ಆಟಗಾರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ: 327 (105.3 ಓವರ್)
ದ.ಆಫ್ರಿಕಾ: 197 (62.3 ಓವರ್)
ಎರಡನೇ ಇನಿಂಗ್ಸ್
ಭಾರತ: 174 (50.3 ಓವರ್)
ದ.ಆಫ್ರಿಕಾ: 191 (68 ಓವರ್)
(ಬುಧವಾರ: 40.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 94)
ಎಲ್ಗರ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 77 (156ಎ, 4X12), ಬವುಮಾ ಔಟಾಗದೆ 35 (80ಎ, 4X4), ಡಿಕಾಕ್ ಬಿ ಸಿರಾಜ್ 21 (28ಎ, 4X2), ಮಲ್ದರ್ ಸಿ ಪಂತ್ ಬಿ ಶಮಿ 1(3ಎ), ಮಾರ್ಕೊ ಸಿ ಪಂತ್ ಬಿ ಶಮಿ 13 (14ಎ, 4X3), ರಬಾಡ ಸಿ ಶಮಿ ಬಿ ಅಶ್ವಿನ್ 0 (4ಎ), ಲುಂಗಿ ಸಿ ಪೂಜಾರ ಬಿ ಅಶ್ವಿನ್ 0 (1ಎ)
ಇತರೆ (ಲೆಗ್‌ಬೈ 2, ನೋಬಾಲ್ 5) 7
ವಿಕೆಟ್ ಪತನ: 5–130 (ಡೀನ್ ಎಲ್ಗರ್; 50.5), 6–161 (ಕ್ವಿಂಟನ್ ಡಿಕಾಕ್; 59.3), 7–164 (ವಿಯಾನ್ ಮಲ್ದರ್; 60.2), 8–190 (ಮಾರ್ಕೊ ಜಾನ್ಸನ್; 66.5), 9–191 (ಕಗಿಸೊ ರಬಾಡ; 67.5), 10–191 (ಲುಂಗಿ ಗಿಡಿ; 67.6)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 19–4–50–3, ಮೊಹಮ್ಮದ್ ಶಮಿ 17–3–63–3, ಮೊಹಮ್ಮದ್ ಸಿರಾಜ್ 18–5–47–2, ಶಾರ್ದೂಲ್ ಠಾಕೂರ್ 5–0–11–0, ಆರ್. ಅಶ್ವಿನ್ 9–2–18–2

ಫಲಿತಾಂಶ: ಭಾರತ ತಂಡಕ್ಕೆ 113 ರನ್‌ಗಳ ಜಯ; ಸರಣಿಯಲ್ಲಿ 1–0 ಮುನ್ನಡೆ
ಫಲಿತಾಂಶ: ಕೆ.ಎಲ್. ರಾಹುಲ್ (ಭಾರತ)
ಮುಂದಿನ ಪಂದ್ಯ: ಜ. 3 ರಿಂದ. ಸ್ಥಳ: ಜೋಹಾನ್ಸ್‌ಬರ್ಗ್

ವಿಶ್ವದ ಯಾವುದೇ ಕ್ರೀಡಾಂಗಣದಲ್ಲಿ ಟೆಸ್ಟ್ ಪಂದ್ಯದಲ್ಲಿ 20 ವಿಕೆಟ್ ಪಡೆಯುವ ಸಾಮರ್ಥ್ಯ ಭಾರತ ತಂಡಕ್ಕಿದೆ.
ಸಚಿನ್ ತೆಂಡೂಲ್ಕರ್ ಕ್ರಿಕೆಟಿಗ

ಬ್ರಿಸ್ಬೇನ್, ಓವಲ್, ಲಾರ್ಡ್ಸ್, ಈಗ ಸೆಂಚುರಿಯನ್. ಅಭಿನಂದನೆಗಳು ವಿರಾಟ್ ಕೊಹ್ಲಿ, ರಾಹುಲ್ ದ್ರಾವಿಡ್ ಮತ್ತು ತಂಡದ ಎಲ್ಲ ಆಟಗಾರರಿಗೆ.
ರವಿಶಾಸ್ತ್ರಿ
ಭಾರತ ತಂಡದ ಮಾಜಿ ಕೋಚ್

2021 ಭಾರತಕ್ಕೆ ಅಮೋಘ ವರ್ಷ. ಸೆಂಚುರಿಯನ್‌ನಲ್ಲಿ ಗೆದ್ದ ಏಷ್ಯಾದ ಮೊದಲ ತಂಡ. ಇದು ವಿಶೇಷ ತಂಡ ಮತ್ತು ಅದ್ಭುತ ಜಯ. ಶಮಿ ಅಮೋಘ ಬೌಲಿಂಗ್ ಮಾಡಿದರು. ಕೆ.ಎಲ್. ರಾಹುಲ್ ಆಟ ಮಾಸ್ಟರ್‌ಕ್ಲಾಸ್.
ವೆಂಕಟೇಶ್ ಪ್ರಸಾದ್ ಕ್ರಿಕೆಟಿಗ

ಪಂದ್ಯದಲ್ಲಿ ಒಂದು ದಿನ ಮಳೆಯಿಂದ ಆಟ ನಷ್ಟವಾಗಿತ್ತು. ಆದರೂ ಅಮೋಘವಾದ ಜಯವನ್ನು ಭಾರತ ತಂಡ ಗಳಿಸಿದೆ. ಸಫಲ ವರ್ಷ ಇದು. ಅಭಿನಂದನೆಗಳು
ಜಯ್ ಶಾ ಬಿಸಿಸಿಐ ಕಾರ್ಯದರ್ಶಿ

ಟೆಸ್ಟ್ ಕ್ರಿಕೆಟ್‌ನಲ್ಲಿ 2021ರಲ್ಲಿ ಭಾರತದ ಕನಸಿನ ಓಟ ಇದು. ಗಾಬಾ, ಲಾರ್ಡ್ಸ್, ಓವಲ್, ಸೆಂಚುರಿಯನ್ ಮತ್ತು ಸಿಡ್ನಿಯ ಅವಿಸ್ಮರಣೀಯ ಡ್ರಾ. ಬರುವ ಹೊಸ ವರ್ಷವು ಮತ್ತಷ್ಟು ಯಶಸ್ಸು ಕೊಡಲಿ.
ವೀರೇಂದ್ರ ಸೆಹ್ವಾಗ್ ಕ್ರಿಕೆಟಿಗ

ಕ್ವಿಂಟನ್ ನಿವೃತ್ತಿ

ಸೆಂಚುರಿಯನ್ (ಎಎಫ್‌ಪಿ): ಭಾರತದ ಎದುರಿನ ಸೋಲಿನ ಬೆನ್ನಲ್ಲೇ ದಕ್ಷಿಣ ಆಫ್ರಿಕಾದ ವಿಕೆಟ್ ಕೀಪರ್ ಬ್ಯಾಟರ್ ಕ್ವಿಂಟನ್ ಡಿ ಕಾಕ್ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ತಕ್ಷಣದಿಂದ ಜಾರಿಗೆ ಬರುವಂತೆ ನಿವೃತ್ತನಾಗುತ್ತಿರುವುದಾಗಿ ಅವರು ತಿಳಿಸಿದ್ದಾರೆ.

29 ವರ್ಷದ ಡಿ ಕಾಕ್ ಅವರ ಪತ್ನಿ ತುಂಬು ಗರ್ಭಿಣಿ. ಆದ್ದರಿಂದ ಭಾರತ ಎದುರಿನ ಎರಡನೇ ಮತ್ತು ಮೂರನೇ ಟೆಸ್ಟ್‌ಗೆ ಡಿ ಕಾಕ್ ಲಭ್ಯ ಇರುವುದಿಲ್ಲ ಎಂದು ಈಗಾಗಲೇ ತಿಳಿಸಲಾಗಿತ್ತು. ಎರಡು ಬಾರಿ ದಕ್ಷಿಣ ಆಫ್ರಿಕಾದ ಶ್ರೇಷ್ಠ ಕ್ರಿಕೆಟರ್ ಪ್ರಶಸ್ತಿಗೆ ಭಾಜನರಾಗಿದ್ದರು. ಟ್ವೆಂಟಿ20 ವಿಶ್ವಕಪ್ ಟೂರ್ನಿ ವೇಳೆ ಬ್ಲ್ಯಾಕ್ ಲಿವ್ಸ್ ಮ್ಯಾಟರ್ ಅಭಿಯಾನಕ್ಕೆ ಬೆಂಬಲ ಸೂಚಿಸದ ಕಾರಣ ವಿವಾದಕ್ಕೆ ಒಳಗಾಗಿದ್ದರು.


ಕ್ವಿಂಟನ್ ಡಿ ಕಾಕ್ —ಎಎಫ್‌ಪಿ ಚಿತ್ರ

54 ಟೆಸ್ಟ್ ಪಂದ್ಯಗಳಲ್ಲಿ 3300 ರನ್ ಕಲೆ ಹಾಕಿರುವ ಅವರು 221 ಕ್ಯಾಚ್ ಪಡೆದುಕೊಂಡಿದ್ದು 11 ಸ್ಟಂಪಿಂಗ್ ಮಾಡಿದ್ದಾರೆ. ನಾಲ್ಕು ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದಾರೆ.

ಕ್ರಿಕೆಟ್‌ಗೆ ಟೇಲರ್ ವಿದಾಯ

ವೆಲಿಂಗ್ಟನ್ (ಎಎಫ್‌ಪಿ/ಎಪಿ): ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಬ್ಯಾಟಿಂಗ್ ವಿಭಾಗದ ಆಧಾರಸ್ತಂಭಗಳಲ್ಲಿ ಒಬ್ಬರಾಗಿರುವ ರಾಸ್ ಟೇಲರ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಲು ನಿರ್ಧರಿಸಿದ್ದಾರೆ.

ಬಾಂಗ್ಲಾದೇಶದ ವಿರುದ್ಧ ನಡೆಯಲಿರುವ ಎರಡು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಅವರು ದೇಶದ ಪರ ಟೆಸ್ಟ್‌ನಲ್ಲಿ ಕೊನೆಯದಾಗಿ ಕಣಕ್ಕೆ ಇಳಿಯಲಿದ್ದಾರೆ. ಸರಣಿಯ ಮೊದಲ ಪಂದ್ಯ ಮೌಂಟ್ ಮಾಂಗನೂಯಿ ಬೇ ಓವಲ್‌ನಲ್ಲಿ ಜನವರಿ ಒಂದರಿಂದ ನಡೆಯಲಿದೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ಈಚೆಗೆ ಭಾರತ ವಿರುದ್ಧ ನಡೆದಿದ್ದ ಸರಣಿಯಲ್ಲಿ ಸೋತು ನಿರಾಸೆಗೊಂಡಿರುವ ನ್ಯೂಜಿಲೆಂಡ್‌ಗೆ ಬಾಂಗ್ಲಾ ಎದುರಿನ ಸರಣಿ ಪುನಶ್ಚೇತನಕ್ಕೆ ಹಾದಿಯಾಗಲಿದೆ. ಈ ಸರಣಿಯ ನಂತರ ಫೆಬ್ರುವರಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಏಕದಿನ ಸರಣಿಯಲ್ಲಿ ಅವರು ಆಡಲಿದ್ದಾರೆ. ಮಾರ್ಚ್‌ನಲ್ಲಿ ನೆದರ್ಲೆಂಡ್ಸ್ ವಿರುದ್ಧ ನಡೆಯಲಿರುವ ಏಕದಿನ ಸರಣಿಯಲ್ಲಿ ಟೇಲರ್ ವೃತ್ತಿಜೀವನದಲ್ಲಿ ಕೊನೆಯದಾಗಿ ಕ್ರೀಸ್‌ಗೆ ಇಳಿಯಲಿದ್ದಾರೆ. ಆ ಸರಣಿಯ ಕೊನೆಯ ಪಂದ್ಯ ಅವರ ತವರು ಹ್ಯಾಮಿಲ್ಟನ್‌ನಲ್ಲಿ ನಡೆಯಲಿದೆ.


ರಾಸ್ ಟೇಲರ್ —ಎಎಫ್‌ಪಿ ಚಿತ್ರ

ಬಾಂಗ್ಲಾದೇಶ ಎದುರಿನ ಎರಡೂ ಟೆಸ್ಟ್‌ಗಳಲ್ಲಿ ಆಡಿದರೆ ರಾಸ್ ಟೇಲರ್ 112 ಪಂದ್ಯ ಆಡಿದಂತಾಗುತ್ತದೆ. ನ್ಯೂಜಿಲೆಂಡ್ ಪರ ಅತಿಹೆಚ್ಚು, 112 ಪಂದ್ಯಗಳನ್ನು ಆಡಿದ ಡ್ಯಾನಿಯಲ್ ವೆಟೋರಿ ಅವರ ಸಾಧನೆ ಸರಿಗಟ್ಟಲು ಆ ಮೂಲಕ ಅವರಿಗೆ ಅವಕಾಶ ಸಿಗಲಿದೆ.

2008ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದ ಟೇಲರ್ 2006ರಲ್ಲಿ ವೆಸ್ಟ್ ಇಂಡೀಸ್ ಎದುರಿನ ಸರಣಿಯಲ್ಲಿ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಪ್ರೊ ಕಬಡ್ಡಿ: ಯು ಮುಂಬಾ ಜಯಭೇರಿ; ಗುಜರಾತ್ ಪಿಂಕ್ ಪ್ಯಾಂಥರ್ಸ್ ತಂಡಕ್ಕೆ ನಿರಾಶೆ

ಪವನ್ ಶೆರಾವತ್ ಆಟಕ್ಕೆ ಒಲಿದ 'ಹ್ಯಾಟ್ರಿಕ್'

ಬೆಂಗಳೂರು: ನಾಯಕ ಪವನ್ ಶೆರಾವತ್ ಮಿಂಚಿನ ದಾಳಿಯಿಂದಾಗಿ ಬೆಂಗಳೂರು ಬುಲ್ಸ್ ತಂಡವು ಜಯದ 'ಹ್ಯಾಟ್ರಿಕ್' ಸಾಧಿಸಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ರೇಡರ್ ಪವನ್ 22 ಅಂಕಗಳನ್ನು ಗಳಿಸಿದರು. ಬೆಂಗಳೂರು 42–28ರಿಂದ ಹರಿಯಾಣ ಸ್ಟೀಲರ್ಸ್ ವಿರುದ್ಧ ಜಯಭೇರಿ ಬಾರಿಸಿತು.

ಬೆಂಗಳೂರು ತಂಡಕ್ಕೆ ಇದು ಸತತ ಮೂರನೇ ಜಯ. ಮೊದಲ ಪಂದ್ಯದಲ್ಲಿ ತಂಡವು ಸೋಲನುಭವಿಸಿತ್ತು.

ಪವನ್ ಆರಂಭದಿಂದಲೇ ಪಾರಮ್ಯ ಮೆರೆದರು. ಇದರಿಂದಾಗಿ ಬೆಂಗಳೂರು ತಂಡವು ಅರ್ಧವಿರಾಮದ ವೇಳೆಗೆ ಬೆಂಗಳೂರು 19–13ರಿಂದ ಮುನ್ನಡೆ ಸಾಧಿಸಿತು. ಈ ಅವಧಿಯಲ್ಲಿ ಎರಡು ಬಾರಿ ಆಲೌಟ್ ಪಾಯಿಂಟ್ಸ್ ಪಡೆಯಿತು.

ನಂತರದ ಅವಧಿಯಲ್ಲಿಯೂ ಮುನ್ನಡೆ ಬಿಟ್ಟುಕೊಡಲಿಲ್ಲ. ಹರಿಯಾಣ ತಂಡದ ರಕ್ಷಣಾ ಕೋಟೆಯನ್ನು ಪವನ್ ಛಿದ್ರಗೊಳಿಸಿದರು. ಬುಲ್ಸ್ ಡಿಫೆಂಡರ್ ಮೊಹಿಂದರ್ ಸಿಂಗ್ (4) ಮತ್ತು ಅಮನ್ (3) ಮಿಂಚಿದರು. ಮೊಹಿಂದರ್ ಸಿಂಗ್ ಒಂದು ಬಾರಿ ಹಸಿರು ಕಾರ್ಡ್ ದರ್ಶನ ಕೂಡ ಮಾಡಬೇಕಾಯಿತು.

ಮುಂಬಾ ಜಯಭೇರಿ: ಅಭಿಷೇಕ್ ಸಿಂಗ್ ಮತ್ತು ವಿ. ಅಜಿತ್ ಅವರ ಅಮೋಘ ಆಟದ ನೆರವಿನಿಂದ ಯು ಮುಂಬಾ ತಂಡವು ಜೈಪುರ ಪಿಂಕ್ ಪ್ಯಾಂಥರ್ಸ್ ಎದುರು ಗೆದ್ದಿತು.

ದಿನದ ಮೊದಲ ಪಂದ್ಯದಲ್ಲಿ ಮುಂಬಾ ತಂಡವು 37–28 ರಿಂದ ಪಿಂಕ್ ಪ್ಯಾಂಥರ್ಸ್ ವಿರುದ್ಧ ಜಯಿಸಿತು.

ಚುರುಕಿನ ದಾಳಿ ನಡೆಸಿದ ಅಭಿಷೇಕ್ (10) ಮತ್ತು ಅಜಿತ್ (11) ತಂಡದ ಗೆಲುವಿನ ರೂವಾರಿಗಳಾದರು.

ಆರಂಭದಿಂದಲೇ ಮುಂಬಾ ಹಿಡಿತ ಸಾಧಿಸಿತು. ಪ್ರಥಮಾರ್ಧದ ವೇಳೆಗೆ 21–12ರಿಂದ ಮುನ್ನಡೆಯನ್ನೂ ಸಾಧಿಸಿತು. ವಿರಾಮದ ನಂತರ ಪ್ಯಾಂಥರ್ಸ್ ಕಠಿಣ ಪೈಪೋಟಿಯೊಡ್ಡಿತು.

ಇದರಿಂದಾಗಿ ಈ ಅವಧಿಯಲ್ಲಿ ಉಭಯ ತಂಡಗಳು 16–16ರಿಂದ ಸಮಬಲ ಸಾಧಿಸಿದವು. ಆದರೆ, ಮೊದಲ ಅವಧಿಯಲ್ಲಿ ಮುನ್ನಡೆ ಸಾಧಿಸಿದ್ದ ಮುಂಬಾ ಜಯಿಸಿತು. ಪ್ಯಾಂಥರ್ಸ್ ತಂಡದ ಅರ್ಜುನ್ ದೇಶ್ವಾಲ್ 14 ಅಂಕಗಳನ್ನು ಗಳಿಸಿದರು. ನಾಯಕ, ಆಲ್‌ರೌಂಡರ್ ದೀಪಕ್ ಹೂಡಾ ನಾಲ್ಕು ಅಂಕ ಗಳಿಸಿದರು.

ಟೂರ್ನಿಯಲ್ಲಿ ಮುಂಬಾ ತಂಡಕ್ಕೆ ಇದು ಎರಡನೇ ಜಯವಾಗಿದೆ. ಒಂದರಲ್ಲಿ ಸೋತು ಮತ್ತೊಂದರಲ್ಲಿ ಟೈ ಮಾಡಿಕೊಂಡಿದೆ.


ಹರಿಯಾಣ ಸ್ಟೀಲರ್ಸ್ ಆವರಣದಲ್ಲಿ ಪಾಯಿಂಟ್ ಗಳಿಸಿದ ಬೆಂಗಳೂರು ಬುಲ್ಸ್ ತಂಡದ ಪವನ್ ಶೆರಾವತ್

ಇಂದಿನ ಪಂದ್ಯ (ರಾತ್ರಿ)
ತಮಿಳ್ ತಲೈವಾಸ್ Vs ಪುಣೇರಿ ಪಲ್ಟನ್ 7.30
ಬೆಂಗಾಲ್ ವಾರಿಯರ್ಸ್ – ಪಟ್ನಾ ಪೈರೇಟ್ಸ್ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	4	3	-	1	18
ಬೆಂಗಳೂರು ಬುಲ್ಸ್	4	3	1	-	15
ಯು ಮುಂಬಾ	4	2	1	1	14
ಗುಜರಾತ್ ಜೈಂಟ್ಸ್	4	1	1	2	12
ಪಟ್ನಾ ಪೈರೇಟ್ಸ್	3	2	1	-	11
ಬೆಂಗಾಲ್ ವಾರಿಯರ್ಸ್	4	2	2	-	11
ಜೈಪುರ್ ಪಿಂಕ್ ಪ್ಯಾಂಥರ್ಸ್	4	2	2	-	11
ಯು. ಪಿ. ಯೋಧಾ	4	1	2	1	10
ಹರಿಯಾಣ ಸ್ಟೀಲರ್ಸ್	4	1	3	-	7
ತಮಿಳು ತಲೈವಾಸ್	3	-	1	2	6
ತೆಲುಗು ಟೈಟನ್ಸ್	3	-	2	1	5
ಪುಣೇರಿ ಪಲ್ಟನ್	3	1	2	-	5

(ಗುರುವಾರದ ಪಂದ್ಯಗಳ ಅಂತ್ಯಕ್ಕೆ)

ಲಿಫ್ಟ್‌ನಲ್ಲಿ ಬಂಧಿಯಾದ ಸ್ಟೀವ್ ಸ್ಮಿತ್; ಚಾಕೊಲೇಟ್ ಕೊಟ್ಟ ಮಾರ್ನಸ್

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ತಂಡದ ಬ್ಯಾಟರ್ ಸ್ಟೀವ್ ಸ್ಮಿತ್ ಹೋಟೆಲ್‌ನ ಲಿಫ್ಟ್‌ನಲ್ಲಿ ಸುಮಾರು ಒಂದು ತಾಸು ಬಂಧಿಯಾದ ಘಟನೆ ಗುರುವಾರ ನಡೆದಿದೆ. ಅವರನ್ನು ಬಂಧಮುಕ್ತಗೊಳಿಸಲು ಸಹ ಆಟಗಾರ ಮಾರ್ನಸ್ ಲಾಬುಷೇನ್ ಪ್ರಯತ್ನಿಸಿದರು.

ತಾವು ಬಂಧಿಯಾಗಿ ಲಿಫ್ಟ್‌ನಲ್ಲಿರುವುದನ್ನು ಸ್ಮಿತ್ ಅವರು ಅವರು ಇನ್ಸ್ಟಾಗ್ರಾಮ್ ನಲ್ಲಿ ಲೈವ್ ಮಾಡಿದರು. ಲಾಕ್ ಆಗಿದ್ದ ಲಿಫ್ಟ್ ಬಾಗಿಲನ್ನು ಕಬ್ಬಿಣದ ಸಲಾಕೆಯ ಮೂಲಕ ತೆರೆಯಲು ಯತ್ನಿ ಸಿದ ಲಾಬುಷೇನ್, ಸಣ್ಣ ಕಿಂಡಿಯ ಮೂಲಕ ಸ್ಮಿತ್‌ಗೆ ಚಾಕೊಲೆಟ್ ಕೂಡ ನೀಡಿದರು.


ಮಾರ್ನಸ್ ಲಾಬುಷೇನ್, ಸ್ಟೀವ್ ಸ್ಮಿತ್

ಹೋಟೆಲ್‌ನ ಲಿಫ್ಟ್ ಟೆಕ್ನಿಷಿ ಯನ್‌ಗಳು ಕೂಡ ಈ ಸಂದರ್ಭದಲ್ಲಿ ಬಾಗಿಲು ತೆರೆಯಲು ಪ್ರಯತ್ನಿಸಿದರು.

'ನನ್ನ ಕೋಣೆ ಇರುವ ಅಂತ ಸ್ತಿನಲ್ಲಿ ಇಳಿಯುವ ಹೊತ್ತಿಗೆ ಲಿಫ್ಟ್ ಬಾಗಿಲುಗಳು ತೆರೆಯಲಿಲ್ಲ. ನಾನು ಎಳೆದು ತೆಗೆಯಲು ಪ್ರಯತ್ನಿಸಿ ವಿಫಲ ನಾದೆ. ಆ ಬದಿಯಲ್ಲಿ ಹೊರಗಡೆ ಇದ್ದ ಮಾರ್ನಸ್ ಕೂಡ ಬಾಗಿಲು ತೆರೆಯಲು ಪ್ರಯತ್ನಿಸಿದರು. ಕೊನೆಗೂ ಸುರಕ್ಷಿತವಾಗಿ ಕೋಣೆಗೆ ಮರಳಿದೆ. ಸುಮಾರು 55 ನಿಮಿಷ ಲಿಫ್ಟ್‌ನಲ್ಲಿ ಬಂಧಿಯಾಗಿದ್ದು ವಿಭಿನ್ನ ಅನುಭವ' ಎಂದು ಸ್ಮಿತ್ ಹೇಳಿದ್ದಾರೆ.

ದಕ್ಷಿಣ ವಲ ಹಾಕಿ ಟೂರ್ನಿ: 4 ಗೋಲು ಗಳಿಸಿದ ವಸಂತ್

ಬೆಂಗಳೂರು ವಿವಿ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟ ಮುಂದುವರಿಸಿರುವ ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯ ತಂಡಗಳು ದಕ್ಷಿಣ ವಲಯ ಅಂತರ ವಿವಿ ಹಾಕಿ ಟೂರ್ನಿಯಲ್ಲಿ ಭರ್ಜರಿ ಗೆಲುವು ದಾಖಲಿಸಿದವು.

ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಭಾರತೀಯ ವಿಶ್ವವಿದ್ಯಾಲಯಗಳ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಗುರುವಾರ ನಡೆದ ಸೆಮಿಫೈನಲ್ ಲೀಗ್ ಪಂದ್ಯಗಳಲ್ಲಿ ಬೆಂಗಳೂರು ವಿವಿ 5–1ರಲ್ಲಿ ಚೆನ್ನೈನ ಎಸ್‌ಆರ್‌ಎಂ ವಿವಿಯನ್ನು ಮಣಿ ಸಿತು.

ಬೆಂಗಳೂರು ನಗರ ವಿವಿ ತಿರುನಲ್ವೇಲಿಯ ಮನೋನ್ಮಣಿಯಂ ಸುಂದರ್‌ನಾರ್ ವಿವಿ ವಿರುದ್ಧ 4–3ರಲ್ಲಿ ಜಯ ಗಳಿಸಿತು. ಬೆಳಿಗ್ಗೆ ನಡೆದ ಮೊದಲ ಲೀಗ್ ಪಂದ್ಯದಲ್ಲಿ ಬೆಂಗಳೂರು ವಿವಿ ಪರ ಚೇತನ್ ಎಂ.ಕೆ (26ನೇ ನಿ), ಸೋಮಣ್ಣ ಬಿ.ಪಿ (28ನೇ ನಿ), ಸೂರ್ಯ ಎನ್.ಎಂ (37ನೇ ನಿ), ಶಮಂತ್ ಸಿ.ಎಸ್ (53 ಮತ್ತು 56ನೇ ನಿ) ಗೋಲು ಗಳಿಸಿದರೆ ಎಸ್‌ಆರ್‌ಎಂಗಾಗಿ ಪರಮೇಶ್ವರ್ ಗೋವಿಂದ್ (11ನೇ ನಿ) ಏಕೈಕ ಗೋಲು ಗಳಿಸಿದರು.

ಎರಡನೇ ಲೀಗ್ ಪಂದ್ಯದಲ್ಲಿ ಬೆಂಗಳೂರು ನಗರ ವಿವಿಗಾಗಿ ಪ್ರಣಮ್ ಗೌಡ (13, 24ನೇ ನಿ), ವಸಂತ್ (53, 36ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರೆ ಮನೋನ್ಮಣಿಯಂ ವಿವಿಗಾಗಿ ಪುನೀತ್ (20, 39ನೇ ನಿ) ಮತ್ತು ಮಧು (54ನೇ ನಿ) ಯಶಸ್ಸು ಸಾಧಿಸಿದರು.

ಸಂಜೆ ನಡೆದ ಪಂದ್ಯದಲ್ಲಿ ಬೆಂಗಳೂರು ವಿವಿ 4–1ರಲ್ಲಿ ಮನೋನ್ಮಣಿಯಂ ವಿವಿಯನ್ನು ಮಣಿಸಿತು. ಸೋಮಣ್ಣ ಬಿ.ಪಿ (8ನೇ ನಿ), ಶಮಂತ್ (25ನೇ ನಿ), ಚೇತನ್ ಎಂ.ಕೆ (38ನೇ ನಿ) ಮತ್ತು ಫಹಾದ್ (44ನೇ ನಿ) ಬೆಂಗಳೂರು ವಿವಿ ಪರ, ದಿನೇಶ್ (11ನೇ ನಿ) ಮನೋನ್ಮಣಿಯಂ ಪರ ಗೋಲು ದಾಖಲಿಸಿದರು.

ವಸಂತ್ ಕುಮಾರ್ (7, 31, 33, 56ನೇ ನಿ) ಅವರ ಹ್ಯಾಟ್ರಿಕ್ ಬಲದಿಂದ ಬೆಂಗಳೂರು ನಗರ ವಿವಿ ಎಸ್‌ಆರ್‌ಎಂ ತಂಡವನ್ನು ಸೋಲಿಸಿತು.

ಮುಖ್ಯಾಂಶಗಳು
- ಉಭಯ ತಂಡಗಳಿಗೆ ತಲಾ ಎರಡು ಜಯ
- ಮಿಂಚಿದ ಶಮಂತ್ ಮತ್ತು ಪ್ರಣವ್ ಗೌಡ

ಸಂಕ್ಷಿಪ್ತ ಸುದ್ದಿ

ನೀರಜ್ ಚೋಪ್ರಾಗೆ 90 ಮೀಟರ್ಸ್ ಗುರಿ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡು ಇತಿಹಾಸ ಬರೆದಿರುವ ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಅವರು 90 ಮೀಟರ್ಸ್ ದೂರ ಎಸೆ ಯುವ ಗುರಿ ಹೊಂದಿದ್ದಾರೆ. ಈ ಸಾಧನೆ ಮಾಡುವ ಮೂಲಕ ಜಗತ್ತಿನ ಶ್ರೇಷ್ಠ ಜಾವೆಲಿನ್ ಥ್ರೋವರ್‌ಗಳ ಪಟ್ಟಿಯಲ್ಲಿ ಹೆಸರು ಗಳಿಸುವುದು ತಮ್ಮ ಉದ್ದೇಶ ಎಂದು ಅವರು ಹೇಳಿದ್ದಾರೆ. ಒಲಿಂಪಿಕ್ಸ್‌ನಲ್ಲಿ ನೀರಜ್ 87.58 ಮೀಟರ್ಸ್ ದೂರದ ಸಾಮರ್ಥ್ಯ ತೋರಿದ್ದರು. ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 88.07 ಮೀಟರ್ಸ್ ಆಗಿದೆ. 'ಪದಕ ಗೆದ್ದಿರುವುದು ಅತ್ಯಂತ ಖುಷಿಯ ವಿಷಯ. ಅದು ಒಂದು ಸಾಧನೆಯಾದರೆ, ಇನ್ನಷ್ಟು ದೂರದ ಸಾಮರ್ಥ್ಯ ತೋರುವುದು ಮತ್ತೊಂದು ಸಾಧನೆ. ಅದಕ್ಕಾಗಿ ಕಾಯುತ್ತಿದ್ದೇನೆ' ಎಂದು ಅವರು ಮಾಧ್ಯಮ ಸಂವಾದದಲ್ಲಿ ಹೇಳಿದರು.


ನೀರಜ್ – ಪಿಟಿಐ ಚಿತ್ರ

ರೂಪಾ ರಾಜೀನಾಮೆ

ಚೆನ್ನೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷ ಎನ್. ಶ್ರೀನಿವಾಸನ್ ಅವರ ಮಗಳು ರೂಪಾ ಗುರುನಾಥ್ ಅವರು ಗುರುವಾರ ತಮಿಳುನಾಡು ಕ್ರಿಕೆಟ್ ಸಂಸ್ಥೆ (ಟಿಎನ್‌ಸಿಎ) ಅಧ್ಯಕ್ಷೆಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

'ವೈಯಕ್ತಿಕ ಕಾರಣಗಳಿಗಾಗಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ' ಎಂದು ಅವರು ತಿಳಿಸಿದ್ದಾರೆ.

2019ರಲ್ಲಿ ಅವರು ಅಧಿಕಾರ ವಹಿಸಿಕೊಂಡಿದ್ದರು. ಕ್ರಿಕೆಟ್ ಸಂಸ್ಥೆಗೆ ಮೊದಲ ಮಹಿಳಾ ಅಧ್ಯಕ್ಷೆಯಾಗಿ ನೇಮಕವಾಗಿದ್ದರು.

ಫೈನಲ್‌ಗೆ ಭಾರತ

ಶಾರ್ಜಾ (ಪಿಟಿಐ): ಶೇಖ್ ರಶೀದ್ (ಅಜೇಯ 90; 108ಎಸೆತ, 4X3, 6X1) ಉತ್ತಮ ಬ್ಯಾಟಿಂಗ್ ನೆರವಿನಿಂದ ಭಾರತ 19 ವರ್ಷದೊಳಗಿನವರ ತಂಡವು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಗುರುವಾರ ಇಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಭಾರತ ತಂಡವು 109 ರನ್‌ಗಳಿಂದ ಬಾಂಗ್ಲಾದೇಶ ತಂಡದ ಎದುರು ಗೆದ್ದಿತು. ಶುಕ್ರವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತ ತಂಡವು ಶ್ರೀಲಂಕಾ ಎದುರು ಆಡಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 8ಕ್ಕೆ243 (ಶೇಖ್ ರಶೀದ್ ಔಟಾಗದೆ 90, ಯಶ್ ಧುಳ್ 26, ವಿಜಯ್ ಓಸ್ವಾಲ್ ಔಟಾಗದೆ 28, ರಕಿಬುಲ್ ಹಸನ್ 41ಕ್ಕೆ3), **ಬಾಂಗ್ಲಾದೇಶ:** 38.2 ಓವರ್‌ಗಳಲ್ಲಿ 140 (ರವಿ ಕುಮಾರ್ 22ಕ್ಕೆ2, ವಿಕಿ ಓಸ್ವಾಲ್ 25ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 109 ರನ್‌ಗಳ ಜಯ.

ಐಎಸ್‌ಎಲ್ ಟೂರ್ನಿ: ಚೆನ್ನೈಯಿನ್ ಎಫ್‌ಸಿಗೆ ಸೋಲು

ಬಿಎಫ್‌ಸಿಗೆ ಗೆಲುವು

ವಾಸ್ಕೊ (ಪಿಟಿಐ): ಪಂದ್ಯದ ಕೊನೆಯ ಘಟ್ಟದಲ್ಲಿ ತಿರುಗೇಟು ನೀಡಿದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಗುರುವಾರ ಭರ್ಜರಿ ಜಯ ಗಳಿಸಿತು. ಚೆನ್ನೈಯಿನ್ ಎಫ್‌ಸಿ ವಿರುದ್ಧ ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ರಾತ್ರಿ ನಡೆದ ಹಣಾಹಣಿಯಲ್ಲಿ ಬಿಎಫ್‌ಸಿ 4–2ರಲ್ಲಿ ಜಯಭೇರಿ ಮೊಳಗಿಸಿತು.

ನಾಲ್ಕನೇ ನಿಮಿಷದಲ್ಲಿ ಮುರ್ಜೇವ್ ಗಳಿಸಿದ ಗೋಲಿನೊಂದಿಗೆ ಚೆನ್ನೈಯಿನ್ ಮುನ್ನಡೆ ಗಳಿಸಿತು. 39ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಚೆಂಡನ್ನು ಗುರಿ ಮುಟ್ಟಿಸಿ ಕ್ಲೀಟನ್ ಸಿಲ್ವಾ ಸಮಬಲ ತಂದುಕೊಟ್ಟರು. 43ನೇ ನಿಮಿಷದಲ್ಲಿ ಅಲನ್ ಕೋಸ್ಟಾ ಗೋಲು ಗಳಿಸಿ ಬಿಎಫ್‌ಸಿ ಪಾಳಯದಲ್ಲಿ ನಿರೀಕ್ಷೆ ಮೂಡಿಸಿದರು. ಆದರೆ 49ನೇ ನಿಮಿಷದಲ್ಲಿ ರಹೀಂ ಮೂಲಕ ಚೆನ್ನೈಯಿನ್ ತಿರುಗೇಟು ನೀಡಿತು.

ನಂತರ ಜಿದ್ದಾಜಿದ್ದಿಯ ಹೋರಾಟ ಕಂಡುಬಂತು. 70 ಮತ್ತು 74ನೇ ನಿಮಿಷಗಳಲ್ಲಿ ಕ್ರಮವಾಗಿ ಉದಾಂತ ಸಿಂಗ್ ಮತ್ತು ಪ್ರತೀಕ್ ಚೆಂಡನ್ನು ಗುರಿ ಮುಟ್ಟಿಸಿ ಬಿಎಫ್‌ಸಿಗೆ ಜಯ ಗಳಿಸಿಕೊಟ್ಟರು.

ಇಂದು, ನಾಳೆ ಬಿಡುವು: ಎಂಟನೇ ಆವೃತ್ತಿಯ ಮೊದಲ ಘಟ್ಟದ ಪಂದ್ಯಗಳಿಗೆ ಇನ್ನು ಎರಡು ದಿನ ಬಿಡುವು. ಕ್ರಿಸ್‌ಮಸ್ ಹಬ್ಬದಂದು ಮೊದಲ ಬಾರಿ ಬಿಡುವು ನೀಡಲಾಗಿತ್ತು.


ಬಿಎಫ್‌ಸಿಯ ಕ್ಲೀಟನ್ ಸಿಲ್ವಾ ಅವರನ್ನು ಜಯೇಶ್ ರಾಣಾ ಮತ್ತು ಸುರೇಶ್ ಸಿಂಗ್ ವಾಂಗ್ಜಂ ಅಭಿನಂದಿಸಿದರು —ಐಎಸ್‌ಎಲ್ ಚಿತ್ರ

ಹೊಸ ವರ್ಷದ ಹಿನ್ನೆಲೆಯಲ್ಲಿ ಡಿಸೆಂಬರ್ 31 ಮತ್ತು 2022ರ ಜನವರಿ ಒಂದರಂದು ಪಂದ್ಯಗಳು ಇರುವುದಿಲ್ಲ.

ಜನವರಿ ಎರಡರ ಭಾನುವಾರ ದಂದು 'ಡಬಲ್ ಹೆಡರ್' ಇರಲಿದೆ. ತಿಲಕ್ ಮೈದಾನದಲ್ಲಿ ನಡೆಯಲಿರುವ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ಮತ್ತು ಎಫ್‌ಸಿ ಗೋವಾ ತಂಡಗಳು ಸೆಣಸಲಿವೆ. ಈ ಪಂದ್ಯ ರಾತ್ರಿ 7.30ಕ್ಕೆ ನಡೆಯಲಿದೆ. ಬ್ಯಾಂಬೊಲಿಮ್‌ನ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ 9.30ಕ್ಕೆ ನಡೆಯಲಿರುವ ಪಂದ್ಯದಲ್ಲಿ ಜೆಮ್ಷೆಡ್‌ಪುರ ಎಫ್‌ಸಿ ಮತ್ತು ಚೆನ್ನೈಯಿನ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಎಂಟು ಪಂದ್ಯಗಳಲ್ಲಿ ಐದು ಗೆಲುವು, ಒಂದು ಡ್ರಾ ಮತ್ತು ಎರಡು ಸೋಲಿನೊಂದಿಗೆ ಮುಂಬೈ ಸಿಟಿ ಎಫ್‌ಸಿ 16 ಪಾಯಿಂಟ್‌ಗಳೊಂದಿಗೆ ಪಟ್ಟಿಯ ಅಗ್ರ ಸ್ಥಾನದಲ್ಲಿದ್ದು ನಾಲ್ಕು ಜಯ, ಮೂರು ಡ್ರಾ ಮತ್ತು ಒಂದು ಸೋಲಿನೊಂದಿಗೆ 15 ಪಾಯಿಂಟ್ ಗಳಿಸಿರುವ ಹೈದರಾಬಾದ್ ಎಫ್‌ಸಿ ಎರಡನೇ ಸ್ಥಾನದಲ್ಲಿದೆ.

ಚೆಸ್: ಅಗ್ರ 2ರಲ್ಲಿ ಭಾರತದ ವೈಶಾಲಿ

ವಾರ್ಸೊ, ಪೋಲೆಂಡ್ (ಪಿಟಿಐ): ಅಮೋಘ ಆಟ ಮುಂದುವರಿಸಿರುವ ಭಾರತದ ಆರ್. ವೈಶಾಲಿ ಅವರು ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್‌ಷಿಪ್‌ನ ಎರಡನೇ ಸ್ಥಾನದಲ್ಲಿದ್ದಾರೆ. ಅನುಭವಿ ಆಟಗಾರ್ತಿ ಕೊನೆರು ಹಂಪಿ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

20 ವರ್ಷದ ವೈಶಾಲಿ 9ನೇ ಸುತ್ತಿನ ಕೊನೆಯಲ್ಲಿ 7.5 ಪಾಯಿಂಟ್‌ಗಳನ್ನು ಕಲೆ ಹಾಕಿದ್ದಾರೆ. ಉಕ್ರೇನ್‌ನ ಮರಿಯಾ ಮುಜಿಚುಕ್ ಮತ್ತು ರಷ್ಯಾದ ವ್ಯಾಲೆಂಟಿನಾ ಗುನಿನಾ ವಿರುದ್ಧ ಭರ್ಜರಿ ಜಯ ಗಳಿಸುವ ಮೂಲಕ ಅವರು ಮುನ್ನಡೆ ಸಾಧಿಸಿದರು. ಎಂಟು ಪಾಯಿಂಟ್‌ಗಳೊಂದಿಗೆ ಕಜಕಸ್ತಾನದ ಬಿಬಿಸಾರ ಅಸ್ಸಾಬಯೆವಾ ಅಗ್ರ ಸ್ಥಾನದಲ್ಲಿದ್ದಾರೆ.

ಭಾರತದ ಅಗ್ರ ಕ್ರಮಾಂಕದ ಆಟಗಾರ್ತಿ ಕೊನೆರು ಹಂಪಿ ಅವರು ರಷ್ಯಾದ ಅಲೆಕ್ಸಾಂಡ್ರ ಕೊಸ್ತೆನ್ಯುಕ್ ಜೊತೆ ಮೂರನೇ ಸ್ಥಾನ ಹಂಚಿಕೊಂಡಿದ್ದರೆ. ಟರ್ಕಿಯ ಎಕಟೇರಿನಾ ಅಟಾಲಿಕ್ ಮತ್ತು ಕಜಕಸ್ತಾನದ ಜಂಜಾಯ ಅಬ್ದುಮಲಿಕ್ ವಿರುದ್ಧ ಹಂಪಿ ಸೋತಿದ್ದರು. 9ನೇ ಸುತ್ತಿನಲ್ಲಿ ಅಲೆಕ್ಸಾಂಡ್ರ ಗೊರಿಚ್ಕಿನ ಅವರನ್ನು ಮಣಿಸಿದರು. ರ್‍ಯಾಪಿಡ್ ವಿಭಾಗದಲ್ಲಿ ಅವರು 6ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡಿದ್ದರು.

ಭಾರತದ ವಂತಿಕಾ ಅಗರವಾಲ್ ಮತ್ತು ಪದ್ಮಿನಿ ರಾವುತ್ ಕ್ರಮವಾಗಿ 32 ಮತ್ತು 57ನೇ ಸ್ಥಾನದಲ್ಲಿದ್ದಾರೆ.

ಕಾರ್ಲ್‌ಸನ್‌ಗೆ ನಿರಾಸೆ: ಮುಕ್ತ ವಿಭಾಗದಲ್ಲಿ ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ನಿರಾಸೆಗೊಂಡಿದ್ದಾರೆ. ಮೊದಲ ದಿನ ನಡೆದ ಮೂರು ಪಂದ್ಯಗಳಲ್ಲಿ ಅವರು ಸೋತಿದ್ದಾರೆ.